ಹೊಸ ಮನುಷ್ಯ

ಮಾರ್ಚ್ ೨೦೧೧
ರೂ. ೨೦

ಈಜಿಪ್ಟ್ ಜನ ಕ್ರಾಂತಿ:

ಜಗದ ಆಶಾಕಿರಣ

ಪದ್ಮಶ್ರೀ ಅಮಾಸ-
ಮಹಾದೇವರಿಗೆ
ಪ್ರಶಸ್ತಿ ಬಂದುದು!

ಸಂವಾದ

ಮಾಸ ಪತ್ರಿಕೆ

ಸಂಪುಟ ೯ ಸಂಚಿಕೆ ೫
ಮಾರ್ಚ್ ೨೦೧೧

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
Editorial: 9448048306
Circulation: 9945264687
080-23480278,
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೦೩
❑ ಹೊಸ ಪುಸ್ತಕ ೩೩
❑ ಸಂಪಾದಕರೊಂದಿಗೆ ಸಂವಾದ:
  ○ ಮಾಯಣ್ಣಸ್ವಾಮಿ .ಕೆ ೦೪
  ○ ವೈ. ಮರಿಸ್ವಾಮಿ ೦೬
  ○ ಎಸ್. ಬಿ. ಜೋಗುರ ೦೭
  ○ ಕಾಂಚ ಐಲಯ್ಯ ೦೯
❑ ಮಹಿಳಾ ಚಳವಳಿಯ ಮುಂದಿನ ಸವಾಲುಗಳು
  ○ ಮ. ಶ್ರೀ. ಮುರಳಿ ಕೃಷ್ಣ ೧೦
❑ ಪಶ್ಚಿಮ ಬಂಗಾಳ:
  ಅಂತಃಕಲಹ ಆರಂಭವಾಗಿರುವಂತಿದೆ
  ○ ತುಷಾ ಮಿತ್ತಲ್
  (ಅನು: ಸುರೇಶ್ ಭಟ್) ೧೨
❑ ಈಜಿಪ್ಟ್ ಜನಕ್ರಾಂತಿ:
  ಜಗದ ಆಶಾಕಿರಣ
  ○ ನಾ ದಿವಾಕರ ೧೪





❑ ಪದ್ಮಶ್ರೀ ಅಮಾಸ-
  ಮಹಾದೇವರಿಗೆ ಪ್ರಶಸ್ತಿ ಬಂದುದು!
  ○ ಪ್ರೊ. ರಾಜೇಂದ್ರ ಚೆನ್ನಿ ೨೦
❑ ಪ್ರತ್ಯೇಕ ಕೃಷಿ ಬಜೆಟ್
  ರೈತಾಪಿಯ ಕನವರಿಕೆಗೆ ಯಡ್ಡಿಯ ಬುಡಬುಡಿಕೆ
  ರೈತಸಂಘದ ಸಂಗಾತಿಗಳಿಗೊಂದು ಪತ್ರ!!
  ○ ಶಿವಸುಂದರ್ ೨೪
❑ ವಿಶ್ವ ಹಿಂದೂ ಪರಿಷತ್ ಮತ್ತು ಧಾರ್ಮಿಕ ಪ್ರಜ್ಞೆ
  ○ ಬಿ. ಎಚ್. ಸತ್ಯನಾರಾಯಣ ೨೮
❑ ಕುವೆಂಪು ತತ್ವ ಮತ್ತು ವರ್ತಮಾನದ ಬದುಕು
  ○ ಡಾ. ಬಿ. ಜಿ. ಚನ್ನೇಶ್ ಹೊನ್ನಾಳಿ ೩೪
❑ ಹೊಸ ಪಕ್ಷಿ ರಾಗ...೮
  ○ ಜ್ಯೋತಿ ಗುರುಪ್ರಸಾದ್ ೪೪

❑ ಕಾಲಮಾನ-೧೪
  ○ ಡಾ. ಮುಜಾಫ್ಫರ್ ಅಸ್ಸಾದಿ ೩೮
❑ ಹಾಗೆ ನೋಡಿದರೆ -೪
  ○ ಡಾ. ಬಂಜಗೆರೆ ಜಯಪ್ರಕಾಶ ೪೨
❑ ದಲಿತ್ ಡೈರಿ
  ○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
❑ ಬುದ್ಧಾಯಣ
  ○ ಸಿ. ಎಚ್ ರಾಜಶೇಖರ್ ೫೦

ಕವನಗಳು : ❑ ದೇವರ ಹೆಣಗಳ ಚರಮ ಗೀತೆ ೧೯ ❑ನಾನು ಸಾಯುವ ಹೊತ್ತಲ್ಲಿ ೨೭

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಧರ್ಮದ ಹೆಸರಲ್ಲಿ ಸಂಘಟನೆಗಳು ಬೇಕೆ?

ಪ್ರಿಯ ಸಂಪಾದಕರೇ,

'ಹಾಗೆ ನೋಡಿದರೆ' ಅಂಕಣದಲ್ಲಿ ಪ್ರಕಟವಾದ ಬಂಜಗೆರೆ ಜಯಪ್ರಕಾಶ ಅವರ 'ಭಯೋತ್ಪಾದನೆಯ ಬೇರುಗಳು' ಲೇಖನ ವೈಚಾರಿಕ ಚಿಂತನೆಗೆ ಅವಕಾಶ ಮಾಡಿಕೊಟ್ಟಿದೆ.

ಸ್ವತಂತ್ರ್ಯ ಪೂರ್ವ ಹಾಗೂ ಸ್ವತಂತ್ರ್ಯ ನಂತರದ ಇತ್ತೀಚಿನ ದಿನಗಳವರೆಗೆ ಭಾರತದಲ್ಲಿ ಭಯೋತ್ಪಾದನೆಯ ಕರಿನೆರಳು ಕಾಡುತ್ತಲೇ ಇದೆ. ಅಮಾಯಕರ ಬಲಿ ಆಗುತ್ತಲೇ ಇದೆ. ಈ ಬಲಿ ನ್ಯಾಯವಾ? ನಾಗರೀಕನ ಬದುಕು ಕಸಿದುಕೊಳ್ಳುವ ಪೈಶಾಚಿಕ ಪಟ್ಟಭದ್ರ ಹಿತಾಸಕ್ತಿಗಳಾದರೂ ಯಾವುವು? ಎಂಬಿತ್ಯಾದಿ ಪ್ರಶ್ನೆಗಳು ನಮ್ಮನ್ನು ಕಾಡುತ್ತಿವೆ.

ವಿಶ್ವದ ಇತರ ರಾಷ್ಟ್ರಗಳಿಗಿಂತ ಭಾರತ ಭಯೋತ್ಪಾದನೆಯ ವಿಷಯದಲ್ಲಿ ಸಾಕಷ್ಟು ಸವಾಲುಗಳನ್ನು ಎದುರಿಸಿದೆ. ಎದುರಿಸುತ್ತಲಿದೆ. ಜಾಗೃತಿಯನ್ನು ಮೂಡಿಸುತ್ತಿದೆ. ಆದರೂ ಭಯೋತ್ಪಾದಕ ಕೃತ್ಯಗಳು ನಿಂತಿಲ್ಲ. ಜನಸಾಮಾನ್ಯರು ಭಯದ ನೆರಳಲ್ಲಿ ಬದುಕುವಂತಾಗಿದೆ.

ಭಾರತ ಪ್ರಜಾಪ್ರಭುತ್ವ ರಾಷ್ಟ್ರ. ಆದರೆ ಭಾರತದೊಳಗೆ ಭಯೋತ್ಪದನೆಯ ಬೀಜಗಳಿವೆ. ಇದು ನಿಷ್ಠೂರ ವೆನಿಸಿದರೂ ಸತ್ಯ. ನಮ್ಮ ದೇಶದೊಳಗಿರುವ ಕೆಲವು ಕೋಮುವಾದಿ ಸಂಘಟನೆಗಳು ಮಾನವನ ಆಂತರಿಕ ಒಗ್ಗೂಡಿಕೆಯನ್ನು ವಿಘಟಿಸುತ್ತಲೇ ಬಂದಿದೆ. ಅದು ದೇವರ ಹೆಸರಲ್ಲಿ ಧರ್ಮದ ಹೆಸರಲ್ಲಿ, ಜಾತಿಯ ಹೆಸರಲ್ಲಿ ಇರಬಹುದು.

ತಮ್ಮ ಅಸಿತ್ವಕ್ಕಾಗಿ ಜನರ ಸಹಬಾಳ್ವೆಯನ್ನು ಛಿದ್ರೀಕರಿಸುತ್ತಲೇ ಮುಸ್ಲಿಮರು ಉಗ್ರವಾದಿಗಳೆಂಬ ಹಣೆಪಟ್ಟಿ ಕಟ್ಟಲಾಗುತ್ತಿದೆ. ದುರದೃಷ್ಟವಶಾತ್ ಸಿಕ್ಕಿಬೀಳುತ್ತಿರುವ ಅಪರಾಧಿಗಳು ಮುಸ್ಲಿಮರೆ.

ಆದರೆ ಭಾರತದಲ್ಲಿರುವ ಕೆಲವು ಹಿಂದೂವಾದಿ ಸಂಘಟನೆಗಳು ಯಾವ ಉಗ್ರವಾದಿ ಸಂಘಟನೆಗೂ ಕಡಿಮೆ ಇಲ್ಲದಂತೆ ಕಾರ್ಯನಿರ್ವಹಿಸುತ್ತಿವೆ. ನನಗೆ ಸ್ಪಷ್ಟವಾಗಿ ಅರ್ಥವಾಗುತ್ತಿಲ್ಲ. ಯಾರು ಹಿಂದೂಗಳು. ಯಾವುದು ಹಿಂದೂವಾದ? ಇವರೇನು ಹಿಂದೂ ಧರ್ಮದ ಗುತ್ತಿಗೆದಾರರೆ? ಇವರನ್ನು ಸಂಘಗಳನ್ನು ಕಟ್ಟಿ ಎಂದು ಮನವಿ ಮಾಡಿಕೊಂಡವರ್‍ಯಾರು?

ಪತ್ರಗಳು

ಬಂಜಗೆರೆಯವರು ಹೆಸರಿಸುವ ಆರ್‌ಎಸ್‌ಎಸ್ ನಂಥ ಸಂಸ್ಥೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಭಯೋತ್ಪಾದನೆಯನ್ನು ಪ್ರೇರೆಪಿಸುತ್ತಿದೆ. ಈ ರೀತಿಯ ಪ್ರೇರೇಪಣೆಯ ಮೂಲಕ ದೇಶದ ಕಾನೂನು ಸುವ್ಯವಸ್ಥೆಗಳನ್ನು ಹಾಳುಗೆಡವುವ ಪ್ರಯತ್ನ ಮಾಡುತ್ತಲೇ ಬರುತ್ತಿದೆ. ಇದರ ಜೊತೆಗೆ ಮಹಾರಾಷ್ಟ್ರದ ಶಿವಸೇನೆ, ಕರ್ನಾಟಕದ ಶ್ರೀರಾಮಸೇನೆ ಒಂದಿಲ್ಲೊಂದು ರೀತಿಯ ಭಯಗ್ರಸ್ತ ವಾತಾವರಣಕ್ಕೆ ಪುಷ್ಟಿ ನೀಡುತ್ತಿವೆ.

ಇಂಥ ಸಂಘಟನೆಗಳು ಕಾನೂನಿನ ಕಣ್ಣಿಗೆ ಮಣ್ಣೆರಚುವ ನಿಟ್ಟಿನಲ್ಲಿ ಯಶಸ್ವಿಯಾಗಿವೆ. ತಾವು ಮಾಡುವ ತಪ್ಪುಗಳನ್ನ ಬೇರೊಬ್ಬರ ಧರ್ಮಕ್ಕೆ ತಲುಪಿಸುವ ಕೆಲಸವನ್ನು ಬಹಳ ಪ್ರೀತಿಯಿಂದ ಮಾಡುತ್ತಿವೆ. ಇದನ್ನೇ ಹಿಂದೂವಾದವೆಂದು. ನಾವು ಹಿಂದೂ ಧರ್ಮದ ರಕ್ಷಕರೆಂದು ಕರೆದುಕೊಳ್ಳುತ್ತಿದ್ದಾರೆ. ಈ ಪರಿ ದುಷ್ಟ ಸಿದ್ಧಾಂತಗಳನ್ನು ಇಟ್ಟುಕೊಂಡ ಸಂಘಟನೆಗಳು ನಗರ ಪಟ್ಟಣಗಳಲ್ಲಿ ನಾಯಿಕೊಡೆಗಳಂತೆ ತಲೆ ಎತ್ತಿವೆ. ಈ ಮೂಲಕ ಯುವ ಜನತೆಗೆ ಧರ್ಮದ ಅಫೀಮನ್ನು ಸರಬರಾಜು ಮಾಡುವ ಕಾರ್ಯದಲ್ಲಿವೆ.

ಮಹಾರಾಷ್ಟ್ರದ ಶಿವಸೇನೆ ಮುಖಂಡ ಬಾಳಾಠಾಕ್ರೆ ಯಾರು? ಎಂಬ ಪ್ರಶ್ನೆ ಕೆಲವರಿಗಾದರೂ ಕಾಡುತ್ತದೆ. ಯಾಕೆಂದರೆ ಈತ ಸ್ವಾತಂತ್ರ್ಯಕ್ಕೆ ಹೋರಾಡಿದ ಗಾಂಧಿಯಾ ಅಲ್ಲ, ಭಗತ್‌ಸಿಂಗ್ ಸಹ ಅಲ್ಲ, ದೇಶದ ಕೀರ್ತಿಯನ್ನು ವಿಶ್ವ ಮಟ್ಟಕ್ಕೆ ಏರಿಸಿದ ಸಚಿನ್ ತೆಂಡೂಲ್ಕರ್ ಅಲ್ಲ, ಮದರ್ ತರೇಸಾರಂತೆ ಬದುಕು ಕಳೆದುಕೊಂಡವರಿಗೆ ಬದುಕು ಕಟ್ಟಿದ ಅವರ ಸೇವೆಗೆ ಜೀವನಪೂರ್ತಿ ದುಡಿದ ಕಾರುಣ್ಯ ಜ್ಯೋತಿಯಾ ಅಲ್ಲ.

ಇಂಥವರು ಭಾರತದ ಭವಿಷ್ಯಕ್ಕೆ, ಅಭಿವೃದ್ಧಿಗೆ ಪ್ರೇರಕ ಶಕ್ತಿಯಾಗಿರಲು ಸಾಧ್ಯವಿಲ್ಲ ಆರ್‌ಎಸ್‌ಎಸ್ ಭಾರತಕ್ಕೆ ನೀಡಿದ ಕೊಡುಗೆ ಏನು? ಭಾರತದಲ್ಲಿ ಧರ್ಮದ ಹೆಸರಲ್ಲಿ ಸಂಘಟನೆಗಳು ಬೇಕಾ? ಬೇಡವಾ? ಎಂಬ ಪ್ರಶ್ನೆಗಳು ಸಹಜವಾಗಿ ಮೂಡುತ್ತವೆ. ಸ್ವಧರ್ಮ ರಕ್ಷಣೆಯ ಹೆಸರಲ್ಲಿ ಮಗದೊಂದು ಧರ್ಮಕ್ಕೆ ಅಪಚಾರವೆಸಗುತ್ತಿರುವ ಇತ್ತೀಚಿನ ದಿನಗಳಲ್ಲಿ ಮನುಷ್ಯ ಕಟ್ಟಿಕೊಂಡಿರುವ ಧರ್ಮಗಳನ್ನು ಬಿಟ್ಟು ಬದುಕಲು ಸಾಧ್ಯವಿಲ್ಲವೇ? ಮಾನವ ಧರ್ಮದಲ್ಲಿ ನಮಗ್ಯಾಕೆ ನಂಬಿಕೆ ಇಲ್ಲ? ಆಗೊಮ್ಮೆ ಕೃತಕ ಧರ್ಮಗಳೊಂದಿಗೆ ನಾವು ಜೀವಿಸುವುದಾದರೆ, ಸಂಘಟನೆಗಳು ಬದುಕುತ್ತವೆ. ಉಗ್ರವಾದ ಮತ್ತಷ್ಟು ಮಾನವ ಬಲಿಯನ್ನು ಪಡೆಯುತ್ತದೆ. ಮಾನವ ಕುಲ ಅಂತ್ಯವಾಗುತ್ತದೆ.

ಹಳ್ಳಿ ವೆಂಕಟೇಶ್,
ಜತ್ತೇನಹಳ್ಳಿ.

ಚಿಮೂ ಒಳಾರ್ಥವೇನು?

ಪ್ರಿಯ ಸಂಪಾದಕರೇ,

'ತಾನು ಎಂದಿಗೂ ಚರ್ಚ್‌ಮೇಲಿನ ದಾಳಿಗಳನ್ನು ಸಮರ್ಥಿಸಿಕೊಂಡಿಲ್ಲ. ಆದರೆ ಮತಾಂತರ ನಡೆಯುತ್ತಿದ್ದು ಅದರ ನಿಯಂತ್ರಣಕ್ಕೆ ಕಾನೂನು ರೂಪಿಸಬೇಕು' ಎನ್ನುತ್ತಾ ಸಂಘಪರಿವಾರದ ಕೃತ್ಯಗಳನ್ನು ಪರೋಕ್ಷವಾಗಿ ಸಮರ್ಥಿಸಿಕೊಳ್ಳುವ ಚಿಮೂರವರ ಈ ಭಾಷೆ ಸಾಮಾನ್ಯ ಜನರಿಗೆ ಖಂಡಿತಾ ಅರ್ಥವಾಗುವುದಿಲ್ಲ.

ಮತಾಂತರ ಹೊಂದುವುದು ವ್ಯಕ್ತಿಯ ವೈಯುಕ್ತಿಕ ನಿರ್ಧಾರ. ಅದನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ. ಚಿಮೂ ವಿರೋಧವಿರುವುದು ಮತಾಂತರಕ್ಕೋ ಅಥವಾ ಬಲಾತ್ಕಾರದ ಮತಾಂತರಕ್ಕೋ ಎಂಬುದರ ಬಗ್ಗೆ ಸ್ಪಷ್ಟೀಕರಣ ಅತ್ಯವಶ್ಯ. ಏಕೆಂದರೆ ಮತಾಂತರದ ಹಕ್ಕನ್ನು ನೀಡಿರುವ ಸಂವಿಧಾನ ಹೇಳಿರುವುದು ಬಲಾತ್ಕಾರದ ಮತಾಂತರ ಸಲ್ಲದು ಎಂದು. ಇದನ್ನು ಸಮಸ್ತರೂ ಅರ್ಥ ಮಾಡಿಕೊಂಡಿದ್ದಾರೆ ಮತ್ತು ಒಪ್ಪುತ್ತಾರೆ. ಚಿಮೂ ಉವಾಚದ ಒಳಾರ್ಥವನ್ನು ಅವರೇ ಬಿಡಿಸಿ ಹೇಳಬೇಕು.

ಪರಿಪೂರ್ಣ ವ್ಯಕ್ತಿತ್ವದ ಆಧಾರದ ಮೇಲೆ ನೀಡಲಾಗುತ್ತದೆ ಎನ್ನಲಾಗುವ ಗೌರವ ಡಾಕ್ಟರೇಟ್ ಪದವಿಗೆ ಅರ್ಹನಾಗಬೇಕಾದರೆ ಆ ವ್ಯಕ್ತಿತ್ವದಲ್ಲಿ ಮಾನವೀಯತೆಯ ಗುಣಗಳನ್ನೂ ಗುರುತಿಸಬೇಕಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಚಿಮೂ ತನ್ನ ಅಲ್ಪಸಂಖ್ಯಾತರ ಬಗೆಗಿನ ದ್ವೇಷವನ್ನು ಮುಚ್ಚಿಟ್ಟುಕೊಂಡವರಲ್ಲ. ಅವರ ನಿಲುವುಗಳು ಸಂಘಪರಿವಾರದ ಮಾನವತಾ ವಿರೋಧಿ ಕೋಮುವಾದಿ ನಿಲುವುಗಳ ಪ್ರತಿಬಿಂಬದಂತಿವೆ. ಗಾಂಧಿ ಹತ್ಯೆ, ಕೋಮುದಂಗೆ, ಬಾಂಬ್ ಸ್ಫೋಟಗಳಂತಹ ಅಲ್ಪಸಂಖ್ಯಾತ ಮತ್ತು ದೇಶ ವಿರೋಧಿ ಭಯೋತ್ಪಾದಕ ಕೃತ್ಯಗಳ ಆರೋಪ ಹೊತ್ತಿರುವ ಹಾಗೂ ಹುಟ್ಟಿನಿಂದಲೂ ಈ ದೇಶದ ಅಂಗೀಕೃತ ಸಂವಿಧಾನಕ್ಕೆ ಎಂದೂ ಬದ್ಧತೆ ತೋರದಿರುವಂತಹ ಸಂಘಪರಿವಾರವನ್ನು ಬೆಂಬಲಿಸುವವರನ್ನು ಸಂವಿಧಾನ ವಿರೋಧಿಗಳೆಂದೇ ಭಾವಿಸಬೇಕಾಗುತ್ತದೆ.

ಮತಾಂತರ ಕುರಿತಂತೆ ಚಿಮೂ ಅಭಿಪ್ರಾಯವೂ ಸಂಘಪರಿವಾರದ ಆದರ್ಶ ಪುರುಷ ಸಾವರ್ಕರ್‌ರ ಅಭಿಪ್ರಾಯವೂ ಒಂದೇ ಆಗಿರುವುದು ಕಾಕತಾಳೀಯವೇ? ದಲಿತರು ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳಿಗೆ ಮತಾಂತರಗೊಳ್ಳುವುದರಿಂದ ಹಿಂದೂಗಳ ಜನಸಂಖ್ಯೆ ಕಡಿಮೆಯಾಗುವುದೆಂಬ ಭೀತಿ ಮೂಡಿಸಿ, ಮತಾಂತರದ ಗುಮ್ಮವನ್ನು ಸೃಷ್ಟಿಸುವ ಮೂಲಕ ಸಂಘಪರಿವಾರದ ಭವಿಷ್ಯದ ಕಾರ್ಯಾಚರಣೆಗಳ ರೂಪುರೇಷೆಗಳನ್ನು ನಿರ್ಧರಿಸಿದಾತ ಇದೇ ಸಾವರ್ಕರ್ ಎಂಬುದನ್ನು ನೆನಪಿನಲ್ಲಿಡಬೇಕು.

ನಮ್ಮಂಥಾ ಪಾಮರರಿಗೆ ಸಹಜವಾಗಿಯೆ ತುಂಬಾ ವಿಷಾದದ ವಿಷಯವೆಂದರೆ ಇಂತಹ ಅಪರಿಪೂರ್ಣ ವ್ಯಕ್ತಿತ್ವದ ಚಿಮೂ ಬೆಂಬಲಕ್ಕೆ ಅನಂತ ಮೂರ್ತಿ, ಬರಗೂರುರಂತಹ ಉದ್ದಾಮ ಸಾಹಿತಿಗಳೂ ಧಾವಿಸಿರುವುದು!

ಸುರೇಶ್ ಭಟ್, ಬಾಕ್ರಬೈಲು.

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ

ರೂ.೨೦೦/- ರೂ.೫೦೦/- ರೂ.೮೦೦/-

ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ

ರೂ.೨೫೦/- ರೂ.೬೦೦/- ರೂ.೧೦೦೦

ವಿಶೇಷ ಹಿತೈಷಿ ಚಂದದಾರರಿಗೆ

ರೂ.೫೦೦/- ರೂ.೧೫೦೦/- ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-

ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ಸಂಪಾದಕರೊಡನೆ ಸಂವಾದ

ಬಾಯಿ ಚಟದ ಸಮಾಜವಾದಿಗಳು, ಸೋಗಲಾಡಿ ಕಮ್ಯುನಿಸ್ಟರು...

ಮಾಯಣ್ಣ ಸ್ವಾಮಿ. ಕೆ

ಮಾನ್ಯ ಸಂಪಾದಕರೇ,

ಜನವರಿ 2011ರ ಸಂಚಿಕೆಯಲ್ಲಿ ಪ್ರಕಟವಾದ ಎರಡು ಲೇಖನಗಳ ಬಗ್ಗೆ ನನ್ನ ಅಭಿಪ್ರಾಯಗಳನ್ನು ತಿಳಿಸಲು ಬಯಸುತ್ತೇನೆ.

ಮೊದಲಿಗೆ ದಲಿತ್ ಡೈರಿಯ ಚಂದ್ರಭಾನ್ ಪ್ರಸಾದ್‌ರ "ದಲಿತರು ಎಡಪಕ್ಷಗಳನ್ನು ಯಾಕೆ ನಂಬುವುದಿಲ್ಲ" ಎಂಬುದನ್ನು ಕುರಿತು ಮಾತನಾಡುತ್ತೇನೆ.

ಅಂಬೇಡ್ಕರರು ಭಾರತದ ಜಾತಿ ಪದ್ಧತಿಯನ್ನು ಕುರಿತು ಹೀಗೆ ಹೇಳುತ್ತಾರೆ; ಭಾರತದ ಜಾತಿ ಶ್ರಮವನ್ನಷ್ಟೇ ವಿಭಜಿಸುವುದಿಲ್ಲ ಶ್ರಮಿಕನನ್ನೂ ವಿಭಜಿಸುತ್ತದೆ ಎನ್ನುವ ಮಾತುಗಳು ಈ ಸಂದರ್ಭದಲ್ಲಿ ಅರ್ಥಪೂರ್ಣ. ಒಂದು ಪ್ರಗತಿಪರ ನಾಗರಿಕ ಸಮಾಜಕ್ಕೆ ಒಂದು ಶ್ರಮ ವಿಭಜನಾ ಪದ್ಧತಿಯ ಅಗತ್ಯ ಎಷ್ಟೆಂಬುದನ್ನು ಯಾರೂ ಹೇಳಿಕೊಡ ಬೇಕಾಗಿಲ್ಲ. ಆದರೆ ಭಾರತೀಯ ಸಮಾಜದ ಈ ಶ್ರಮ ವಿಭಜನೆಯ ಪದ್ಧತಿ ಮತ್ತಾವ ಸಮಾಜದಲ್ಲೂ ಇಷ್ಟು ಅವಾಸ್ತವವಾಗಿ, ಇಷ್ಟು ಖಂಡ–ತುಂಡಾಗಿ ಶ್ರಮಜೀವಿಗಳನ್ನು ವಿಂಗಡಿಸುವಂಥ ನೀಚ ಪದ್ಧತಿ ಇಲ್ಲವೆಂಬುದು ತೀರಾ ಸಾಮಾನ್ಯ ವಿವೇಕಿಗೂ ತಿಳಿದಿರುವಂತಹುದು. ಶ್ರಮ ವಿಭಜನೆಗೂ ಜಾತಿ ಪದ್ಧತಿಯ ಇನ್ನೊಂದು ಹೆಸರೆಂದು ಹೇಳಿಕೊಳ್ಳುವ ಈ ಶ್ರಮ ವಿಭಜನೆಗೂ ಅಪಾರ ಅಂತರವಿದೆ.

ಹೀಗೆ ಶ್ರಮಜೀವಿಗಳನ್ನು ಇಷ್ಟು ಅನ್ಯಾಯವಾಗಿ ವಿಂಗಡಿಸುವಂಥ ಪದ್ಧತಿ ಪ್ರಪಂಚದಲ್ಲಿ ಎಲ್ಲಿಯಾದರೂ ಉಂಟು ಎಂದರೆ ಅದು ಇಂಡಿಯಾ ದೇಶದಲ್ಲಿ ಮಾತ್ರ. ಈ ಪದ್ಧತಿಯನ್ನು ಖಂಡಿಸುವಂಥ ಮತ್ತೊಂದು ಅಂಶವೆಂದರೆ ಈ ವಿಭಜನೆ ವ್ಯಕ್ತಿಯ ಬೌದ್ಧಿಕ ಸಾಮರ್ಥ್ಯವನ್ನು ಆಧರಿಸಿಲ್ಲ. ಸಾಮಾಜಿಕ ಮತ್ತು ಬೌದ್ಧಿಕ ಮಂಚೂಣಿತನ ನಮ್ಮ ಸ್ವಂತ ಜೀವನದಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳಸಿಕೊಳ್ಳಲು ನಮ್ಮನ್ನೂ ಪ್ರೇರೇಪಿಸುತ್ತದೆ. ಆದರೆ ಭಾರತದ ಈ ಪದ್ಧತಿಯಲ್ಲಿ ಆ ಸಿದ್ಧಾಂತದ ಕಗ್ಗೊಲೆಯೇ ಆಗಿಬಿಟ್ಟಿದೆ. ವ್ಯಕ್ತಿಯನ್ನು ವೃತ್ತಿಗೆ ಆಯ್ಕೆ ಮಾಡುವುದು ಅವನ ಅಪ್ಪ ತಾತಂದಿರ ಸಾಮಾಜಿಕ ಅಂತಸ್ತಿನ ಆಧಾರದ ಮೇಲೆಯೇ ಹೊರತು–ಅವನ ಕಾರ್ಯಕ್ಷಮತೆಯ ಆಧಾರದ ಮೇಲಲ್ಲವೆಂದು ಇದರಲ್ಲಿ ಸ್ಪಷ್ಟವಿದೆ.

ಜಾತಿ ಪದ್ಧತಿಯಿಂದ ಇಳಿದು ಬಂದಿರುವ ಹಿಂದೂ ಶ್ರಮ ವಿಭಜನೆಯ ಸಿದ್ಧಾಂತ ವ್ಯಕ್ತಿಗೆ ತನ್ನ ವೃತ್ತಿಯನ್ನು ತಾನೇ ಆಯ್ಕೆ ಮಾಡಿಕೊಳ್ಳುವಂಥ ಸ್ವಾತಂತ್ರ್ಯವನ್ನು ಅದು ಕೊಟ್ಟಿಲ್ಲ. ವ್ಯಕ್ತಿಗತ ಬುದ್ಧಿಶಕ್ತಿಗೆ ಇದರಲ್ಲಿ ಅವಕಾಶವೇ ಇಲ್ಲ. "ನನ್ನ ಪೂರ್ವ ಜನ್ಮದ ಕರ್ಮ" ಎನ್ನುವ ಮರಳಿನ ಅಸ್ತಿಭಾರವನ್ನೇ ಈ ಪದ್ಧತಿ ಇಂದಿಗೂ ಆಧರಿಸಿ ನಿಂತಿರುವುದು ಸ್ಪಷ್ಟವಿದೆ. ಕೈಗಾರಿಕಾ ಪದ್ಧತಿಯಲ್ಲಿ ಸಾಮಾಜಿಕ ಘನತೆಗೆ ಅಪಾರ ಪ್ರಾಶಸ್ತ್ಯ ಕೊಟ್ಟಿರುವ ನಾವು ಇಂದು ನರಳುತ್ತಿರುವುದು ಬಡತನದಿಂದಲ್ಲ. ಈ ನೋವನ್ನು ಹುಟ್ಟಿಸುತ್ತಿರುವ ಜನತೆಯ ಮನೋನಡತೆಯೇ ಇಂದಿನ ನಮ್ಮ ಬಡತನಕ್ಕೆ ಮೊದಲ ಕಾರಣ. ಅನೇಕ ರೀತಿಯ ಜನರಿರುವ ಭಾರತದಲ್ಲಿ ಕೆಲ ವೃತ್ತಿಗಳನ್ನು ಕೀಳದರ್ಜೆಯವೆಂದು ಪರಿಗಣಿಸಿರುವ ಹಿಂದೂಗಳು ಆ ವೃತ್ತಿ ಮಾಡುವವರಲ್ಲಿ ಮತ್ತೆ ಮತ್ತೆ ವೈರತ್ವ ಕಾರಲು ಕಾರಣರಾಗಿದ್ದಾರೆ.

> **ಅಂಬೇಡ್ಕರರು ಭಾರತದ ಜಾತಿ ಪದ್ಧತಿಯನ್ನು ಕುರಿತು ಹೀಗೆ ಹೇಳುತ್ತಾರೆ. ಭಾರತದ ಜಾತಿ ಶ್ರಮವನ್ನಷ್ಟೇ ವಿಭಜಿಸುವುದಿಲ್ಲ ಶ್ರಮಿಕನನ್ನೂ ವಿಭಜಿಸುತ್ತದೆ ಎನ್ನುವ ಮಾತುಗಳು ಈ ಸಂದರ್ಭದಲ್ಲಿ ಅರ್ಥಪೂರ್ಣ. ಒಂದು ಪ್ರಗತಿಪರ ನಾಗರಿಕ ಸಮಾಜಕ್ಕೆ ಒಂದು ಶ್ರಮ ವಿಭಜನಾ ಪದ್ಧತಿಯ ಅಗತ್ಯ ಎಷ್ಟೆಂಬುದನ್ನು ಯಾರೂ ಹೇಳಿಕೊಡಬೇಕಾಗಿಲ್ಲ. ಆದರೆ ಭಾರತೀಯ ಸಮಾಜದ ಈ ಶ್ರಮ ವಿಭಜನೆಯ ಪದ್ಧತಿ ಮತ್ತಾವ ಸಮಾಜದಲ್ಲೂ ಇಷ್ಟು ಅವಾಸ್ತವವಾಗಿ, ಇಷ್ಟು ಖಂಡ–ತುಂಡಾಗಿ ಶ್ರಮಜೀವಿಗಳನ್ನು ವಿಂಗಡಿಸುವಂಥ ನೀಚ ಪದ್ಧತಿ ಇಲ್ಲವೆಂಬುದು ತೀರಾ ಸಾಮಾನ್ಯ ವಿವೇಕಿಗೂ ತಿಳಿದಿರುವಂತಹುದು. ಶ್ರಮ ವಿಭಜನೆಗೂ ಜಾತಿ ಪದ್ಧತಿಯ ಇನ್ನೊಂದು ಹೆಸರೆಂದು ಹೇಳಿಕೊಳ್ಳುವ ಈ ಶ್ರಮ ವಿಭಜನೆಗೂ ಅಪಾರ ಅಂತರವಿದೆ. ಹೀಗೆ ಶ್ರಮಜೀವಿಗಳನ್ನು ಇಷ್ಟು ಅನ್ಯಾಯವಾಗಿ ವಿಂಗಡಿಸುವಂಥ ಪದ್ಧತಿ ಪ್ರಪಂಚದಲ್ಲಿ ಎಲ್ಲಿಯಾದರೂ ಉಂಟು ಎಂದರೆ ಅದು ಭಾರತ ದೇಶದಲ್ಲಿ ಮಾತ್ರ. ಈ ಪದ್ಧತಿಯನ್ನು ಖಂಡಿಸುವಂಥ ಮತ್ತೊಂದು ಅಂಶವೆಂದರೆ ಈ ವಿಭಜನೆ ವ್ಯಕ್ತಿಯ ಬೌದ್ಧಿಕ ಸಾಮರ್ಥ್ಯವನ್ನು ಆಧರಿಸಿಲ್ಲ.**

ಭಾರತದ ಸಮಾಜವಾದ ಕುರಿತು ಅಂಬೇಡ್ಕರ್ ಹೀಗೆ ಅರ್ಥೈಸುತ್ತಾರೆ. ಸಮಾಜವಾದಿ ಎನಿಸಿಕೊಂಡವನಿಗೆ ಎಲ್ಲ ವರ್ಗದವರನ್ನು ನಡತೆಯಲ್ಲಿ ಸಮಾನವಾಗಿ ನಡೆಸಿಕೊಳ್ಳುವಂಥ ನಿಚ್ಚಳವಾದ ಸಮಾನತೆ ಇರಬೇಕು ಅನ್ನುವಷ್ಟು ತಿಳುವಳಿಕೆ ಮಾತ್ರ ಇದ್ದರೆ ಸಾಕೆ? ಅಷ್ಟಕ್ಕಿಂತ ಇನ್ನೇನು ಬೇಕು ಎಂದು ಅವರು ಅಂದುಕೊಂಡರೆ ಬಹುಶಃ ಅದರಂಥ ದುರಂತ ಇನ್ನೊಂದು ಇಲ್ಲ. ಇಂಥ ಸಿದ್ಧಾಂತಗಳನ್ನೂ ಹೇಳುವ ಸಮಾಜವಾದಿಗಳ ಸಮಾಜವಾದಿ ಸಿದ್ಧಾಂತ ಯಾವ ಅಡಿಪಾಯದ ಮೇಲೆ ನಿಂತಿದೆಯೆಂಬುದನ್ನು ಸುಲಭವಾಗಿಯೇ ಊಹಿಸಿಕೊಳ್ಳಬಹುದಾಗಿದೆ. ಸಮಾಜವಾದಿಯಾದವನು ಕೇವಲ ಓರ್ವ ಸಮಾಜವಾದಿಯಾಗಿರದೆ ಅವನೊಬ್ಬ ಪ್ರಾಮಾಣಿಕ ಕಾರ್ಯಾಗಾರನಾದಾಗ ಸಮಾನತೆಯ ಸಿದ್ಧಾಂತದಲ್ಲಿ ಅವನಿಗೆ ನಂಬಿಕೆ ಇದೆಯೇ, ಇಲ್ಲವೇ ಎಂಬ ನಂಬಿಕೆ ಮೇಲೇಳುವುದಿಲ್ಲ. ಹಾಗಲ್ಲದೆ ಅದೊಂದು ತಾತ್ವಿಕ ಪದ್ಧತಿಯಿಂದಷ್ಟೇ ಲವನು ತಿಳಿದಾಗ, ಒಂದು ವರ್ಗ ಇನ್ನೊಂದು ವರ್ಗವನ್ನು ನಡೆಸಿಕೊಳ್ಳುವಂಥ ಅಮಾನುಷವಾದ ರೀತಿಯನ್ನು ಖಂಡಿಸಿ; ಆ ಬಲಾತ್ಕಾರ – ತುಳಿತವನ್ನು ಮುಂದುವರೆಸದಂತೆ ಹೇಗೆ ಎಚ್ಚರಿಸಬೇಕೆಂಬುದೇ ಅವನಿಗೆ ಅರ್ಥವಾಗಿರುವುದಿಲ್ಲ.

ಭಾರತದ ಸಮಾಜವಾದ ಯಾವ ಯಾವುದರ ಮೇಲೆ ನಿಂತಿದೆಯೆಂಬುದನ್ನು ಈಗ ಸ್ವಲ್ಪ ವಿಶದವಾಗಿ ಚರ್ಚಿಸುವ. ಎಲ್ಲಿಯವರೆಗೆ ಅಧಿಕಾರವನ್ನು ಸ್ವಾಧೀನ ಪಡಿಸಿಕೊಳ್ಳುವಂಥ ಒಂದು ಅರ್ಥಪೂರ್ಣವಾದ ಆಂದೋಲನ ಆಗುವುದಿಲ್ಲವೋ ಅಲ್ಲಿಯವರೆಗೆ ಆರ್ಥಿಕ ಸುಧಾರಣೆಯ ಸಿದ್ಧಾಂತ ತೀರಾ ನಿರರ್ಥಕವಾದಂದು ಈ ಅಧಿಕಾರ ಸ್ವಾಧೀನ ಆಂದೋಲನ ಕಾರ್ಮಿಕ ವರ್ಗದಿಂದಲೇ ಆಗಬೇಕು. ಇಲ್ಲಿ ನನ್ನ ಮೊಟ್ಟ ಮೊದಲನೆಯ ಸಂದೇಹವೆಂದರೆ, ಭಾರತದ ಕಾರ್ಮಿಕರೆಲ್ಲಾ ಒಂದಾಗಿ ಅಂಥ ಅರ್ಥಪೂರ್ಣ ಆಂದೋಲನಕ್ಕೆ ಅಣಿಯಾಗಬಲ್ಲರೇ? ಅಂಥ ಒಂದು ದೃಢವಾದ ಬೌದ್ಧಿಕ ಸಂಯಮ ಅವರಲ್ಲಿದೆಯೇ? ಈ ವ್ಯವಸ್ಥೆಯಲ್ಲಿ ವ್ಯಕ್ತಿಯನ್ನು ಅಂಥ ಒಂದು ಕ್ರಿಯೆಗೆ ಕೊಂಡೊಯ್ಯುವಂಥ ಶಕ್ತಿ ಯಾವುದಿದೆಯೆಂದು ಯೋಚಿಸಿದಾಗ, ಉಳಿದೆಲ್ಲಾ ವಿಷಯಗಳಲ್ಲೂ ವ್ಯಕ್ತಿ ಸಮನಾಗಿದ್ದರೂ – ಅವರು ಯಾರ ಕಡೆಯಿಂದಲೂ ನ್ಯಾಯಸಮ್ಮತನಾದ ತನ್ನ ಸ್ವಾತಂತ್ರ್ಯ ಸಮತೆಯನ್ನು ಕೇಳಿ ಪಡೆಯುವುದರ ಬದಲು, ಎಳೆದು ಹಿಡಿದು ನಿಲ್ಲಿಸಿಕೊಳ್ಳುವಂಥ ಒಂದು ವ್ಯಗ್ರ ಹೋರಾಟಕ್ಕೆ ಮಾನಸಿಕವಾಗಿ ಎಂದಿಗೆ ಅವನು ಸಿದ್ಧವಾಗುವನೋ ಅಂದಿಗೆ ಮಾತ್ರ ಅವನು ಅಂಥ ಕ್ರಿಯೆಯಲ್ಲಿ ತಂತಾನೆ ಉದ್ಯುಕ್ತನಾಗಬಲ್ಲ.

ಅಂದರೆ ಸಂಪತ್ತಿನ ಸಮ ಹಂಚಿಕೆಯ ಹೋರಾಟದಲ್ಲಿ ಜಯಶೀಲರಾಗಿ, ಜಾತಿ, ಕುಲ ಮುಂತಾದ ಕ್ಷುಲ್ಲಕ ಭಾವನೆ ಅದರಲ್ಲಿ ಕಿಂಚಿತ್ತೂ ಇಲ್ಲವೆಂದು ಎಂದಿಗೆ ಅವನಿಗೆ ಖಾತ್ರಿಯಾಗುವುದೋ ಅಂದಿಗೆ ಮಾತ್ರ ಅವನು ಅಂಥ ಆಂದೋಲನಕ್ಕೆ ಎಲ್ಲರಿಗಿಂತಲೂ ಮೊದಲು ಧುಮುಕಬಲ್ಲ. ಅಂಥ ಆಂದೋಲನಗಳ ನಾಯಕತ್ವ ವಹಿ

ಸುವ ಸಮಾಜವಾದಿ ನಾಯಕರು ಜಾತಿ ಪದ್ಧತಿಯನ್ನು ಸರ್ವತಾ ನಂಬುವುದಿಲ್ಲವೆಂಬುದನ್ನೂ ಅವನ ಆದರ್ಶ ವಾದ ಕ್ರಿಯೆಯ ಮೂಲಕ ಸಾದರಪಡಿಸಿಕೊಂಡಿರಬೇಕು. ಇಂಥ ಯೋಗ್ಯತೆಯನ್ನು ತುಂಬುವವನು ಬಹುಶಃ ಒಬ್ಬನೂ ಇರಲಿಕ್ಕಿಲ್ಲ. ಏಕೆಂದರೆ ಆ ನಾಯಕ ಯಾವ ನಂಬಿಕೆಯನ್ನು ಹಾಗೆ ಸಾದರ ಪಡಿಸಿಕೊಂಡಿ ರುವನೋ, ಆ ನಂಬಿಕೆಯೇ ಸ್ವಾತಂತ್ರ್ಯ ಮತ್ತು ಸಮತೆ ಎಂಬುದು ಆ ಸ್ವದೇಶಿಯನ ನಡತೆಯ ಅಂತಃಕರಣದ ಆಳದಿಂದ ಬಂದಿರಬೇಕು.

ಭಾರತದ ಕಾರ್ಮಿಕ ವರ್ಗದಲ್ಲಿ ಬಡವ ಬಲ್ಲಿದ ನೆಂಬ ಎರಡು ವರ್ಗಗಳನ್ನು ಬಿಟರೆ ಬೇರೆ ಯಾವ ವ್ಯತ್ಯಾಸವೂ ಇಲ್ಲವೆಂದು ಹೇಳಲು ಸಾಧ್ಯವೇ ಇಲ್ಲ. ಅಥವಾ ಭಾರತದ ಓರ್ವ ಬಡ ಕಾರ್ಮಿಕನ ಮನಸ್ಸಿನಲ್ಲಿ ತಾನು ಬಡವನೂ ಅಲ್ಲ ಬಲ್ಲಿದನೂ ಅಲ್ಲ. ಅಥವಾ ಮೇಲೂ ಅಲ್ಲ ಕೀಳು ಅಲ್ಲ ಎನ್ನುವಂಥ ಭಾವನೆಯಾದರೂ ಇರಲು ಸಾಧ್ಯವೇ. ಹಾಗಿಲ್ಲದಿದ್ದ ಮೇಲೆ ಭಾರತೀಯ ಕಾರ್ಮಿಕ ವರ್ಗದಿಂದ ಎಂಥ ಸಂಘಟನೆಯನ್ನು ನಿರೀಕ್ಷಿಸಬಹುದು. ಕಾರ್ಮಿಕರೆಲ್ಲ ಹಾಗೆ ಸಂಘಟಿತರಾಗಿ ಒಟ್ಟಾಗಿ ಎದ್ದು ನಿಲ್ಲದೆ ಯಾವ ಆಂದೋಲನ ತಾನೆ ಸಾಧ್ಯ ವಾದೀತು?

ಈಗ ಒಂದು ಉದಾಹರಣೆ: ಯಾವುದೋ ಒಂದು ಸಂದರ್ಭದಲ್ಲಿ ಕಾರ್ಮಿಕ ಆಂದೋಲನ ಜಯಗಳಿಸಿ, ಸಮಾಜವಾದಿ ಪಕ್ಷ ಅಧಿಕಾರಕ್ಕೆ ಬಂತೆನ್ನಿ ಆಗ ಅವರು ಭಾರತದ ಜಾತಿಪದ್ಧತಿಯನ್ನು ಹೇಗೆ ನಡೆಸಿಕೊಳ್ಳಬಹುದು? ತುಂಬಾ ಗಮನಾರ್ಹ ಪ್ರಶ್ನೆ ಇದು.

ಏಕೆಂದರೆ ಭಾರತದ ಜನತೆಯನ್ನು ಶುದ್ಧ-ಅಶುದ್ಧ, ಮೇಲು-ಕೀಳು ಎಂದು ಮುಂತಾಗಿ ಯಾವ ನೀಚ ಪದ್ಧತಿ ಹೀಗೆ ವಿಂಗಡಿಸಿದೆಯೋ ಆ ಪದ್ಧತಿಯ ನಾಳದಿಂದಲೇ ಉಸಿರಾಡುತ್ತಿರುವ ದೇಶದಲ್ಲಿ ಒಂದು ಸಮಾಜವಾದಿ ಸರಕಾರ ಎಷ್ಟರ ಮಟ್ಟಿಗೆ ಇಂಥ ವಿರಾಟ್ ಕಾರ್ಯದಲ್ಲಿ ತೊಡಗಲು ಸಾಧ್ಯವೋ ನನಗಂತೂ ತಿಳಿಯದಾಗಿದೆ. ಭಾರತದ ಸಮಾಜವಾದಿಗಳು ನಿಜವಾದ ಸಮಾಜವಾದಿಗಳಾಗಬೇಕಾದರೆ. ಈ ಖಂಡನೆ, ವರ್ಣನೆ ಮುಂತಾದ ಬಾಯಿ ಚಟಗಳನ್ನು ಬಿಡಬೇಕು.

ಸಮಾಜವಾದ ನಿಜವಾಗಿಯೂ ಒಂದು ಅರ್ಥಪೂರ್ಣ ಸಿದ್ಧಾಂತ ಆಗಬೇಕೆಂಬ ಆಕಾಂಕ್ಷೆ ಅವರದಾಗಿದ್ದರೆ, ಮೂಲಭೂತವಾದ ಸಾಮಾಜಿಕ ಸುಧಾರಣೆಯಿಲ್ಲದೆ ಆರ್ಥಿಕ ಸುಧಾರಣೆ ಸಾಧ್ಯವಿಲ್ಲ. ಈ ಸಿದ್ಧಾಂತವನ್ನು ಒಮ್ಮೆ ಒಪ್ಪಿಕೊಂಡಮೇಲೆ ಮತ್ತೊಮ್ಮೆ ಅದರಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಬಾರದು. ಅಂದರೆ ಸಮಾಜವಾದಿ ಅನ್ನಿಸಿಕೊಂಡಂಥ ವ್ಯಕ್ತಿ ಭಾರತೀಯ ಸಮಾಜದಲ್ಲಿ ಬುಸುಗುಟ್ಟುತ್ತಿರುವ ಜಾತಿಪದ್ಧತಿಯ ರೂಪುರೇಷೆಗಳನ್ನೂ ಸರಿಯಾಗಿ ಅರ್ಥೈಸಿಕೊಂಡಿರಬೇಕು. ಇದು ಅವನ ಮೊದಲ ಕರ್ತವ್ಯ.

ಹಾಗೆ ಮಾಡದಿದ್ದಾಗ ಆ ಆಂದೋಲನದಲ್ಲಿ ಅವನು ಖಂಡಿತ ಗೆಲ್ಲಲಾರ. ಅಕಸ್ಮಾತ್ ಗೆದ್ದನೆನ್ನಿ, ಆಗಲಾದರೂ ಆ ಸಮಸ್ಯೆಯನ್ನು ತನ್ಮೂಲಕ ನೈಜ ಸಮಾಜವಾದಿ ಸಿದ್ಧಾಂತವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವ ಪ್ರಯತ್ನವನ್ನೂ ಅವನು ಮಾಡದೇ ಹೋದಲ್ಲಿ ತನ್ನ ಪರಿಸರದಲ್ಲಿಯೇ ವಿಪರೀತ ಫಜೀತಿಗೆ ಸಿಕ್ಕಿಕೊಳ್ಳಬೇಕಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಇದೀಗ ವಿವಾದಾಸ್ಪದವಾದುದು. ಏಕೆಂದರೆ, ಆಂದೋಲನಕ್ಕೆ ಮುಂಚೆಯೇ ಈ ಜಾತಿ ಸಮಸ್ಯೆಯನ್ನು ಸರಿಯಾಗಿ ಬಿಡಿಸಿಕೊಂಡಿರದಿದ್ದರೆ, ಆಂದೋಲನದ ನಂತರವಾದರೂ ಅದನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕಾದುದು ತೀರಾ ಅವಶ್ಯಕ. ಆದ್ದರಿಂದ ನನ್ನ ವಿಚಾರದ ದೃಷ್ಟಿಯನ್ನೂ ನೀವು ಒಪ್ಪುವುದಾದರೆ ನಿಮ್ಮ ಅಂಥ ಪ್ರಯತ್ನದ ಹಾದಿಯಲ್ಲಿ ಜಾತೀಯತೆ ಒಂದು ಅನಿಷ್ಟದ ಅಡ್ಡಗಲ್ಲು. ಈ ಅನಿಷ್ಟವನ್ನು ತೊಡೆದು ಹಾಕುವವರೆಗೂ ರಾಜಕೀಯ ಸುಧಾರಣೆ ನಿಮ್ಮಿಂದ ಸಾಧ್ಯವೇ ಇಲ್ಲವೆಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ: ಇವು ಎಡಪಂಥಿಯರನ್ನು ಕುರಿತು ಡಾ॥ ಅಂಬೇಡ್ಕರ್ ಹೇಳಿದ ಮಾತುಗಳು. ಇಂದಿಗೂ ಸಹ ಎಡ ಪಕ್ಷಗಳು ಭಾರತದ ಆರ್ಥಿಕ ವ್ಯವಸ್ಥೆಯ ಬಗ್ಗೆ ಮಾತ್ರ ದನಿಯೆತ್ತುತ್ತವೆ. ಆದರೆ ಅದರೊಳಗಿನ ಜಾತಿ ವ್ಯವಸ್ಥೆಯ ಸಂವೇದನೆಗಳ ಬಗ್ಗೆ ಇಂದಿಗೂ ದನಿಯೆತ್ತುವುದಿಲ್ಲ. ಜಾತಿ ಅಸ್ತಿತ್ವವನ್ನೇ ನಿರಾಕರಿಸುತ್ತವೆ ಸಾಮಾಜಿಕ ಅವ್ಯವಸ್ಥೆಯ ಬಗ್ಗೆ ಚಕಾರವೆತ್ತುವುದಿಲ್ಲ.

ಒಂದು ಮಾತು ನಿಜ; ಇತ್ತೀಚೆಗೆ ತಮಿಳುನಾಡಿನಲ್ಲಿ ಮಧುರೈ ಜಿಲ್ಲೆಯ ಉತ್ತಪುರಂ ಗ್ರಾಮದಲ್ಲಿ ಅಸ್ಪೃಶ್ಯರು ಮತ್ತು ಸವರ್ಣೀಯರ ಬೀದಿಗಳ ನಡುವೆ ಗೋಡೆ ಕಟ್ಟಲಾಗಿತ್ತು. ಗೋಡೆ ಕೆಡವಲು ಬೇಕಾದಷ್ಟು ವಾದ ವಿವಾದಗಳು ನಡೆದವು. ಚರ್ಚೆಗಳು ಆದವು. ಈ ವಿಚಾರದಲ್ಲಿ ಎಡಪಕ್ಷಗಳು (ಸಿಪಿಐ(ಎಂ) ಪ್ರಾಮಾಣಿಕವಾಗಿ ದನಿಯೆತ್ತಿದವು. ಇದೊಂದನ್ನು ಹೊರತು ಪಡಿಸಿದರೆ ಸಾಮಾಜಿಕ ಅವ್ಯವಸ್ಥೆಯ ಬಗ್ಗೆ ಎಡಪಕ್ಷಗಳು ದನಿ ಎತ್ತಿದ ನಿದರ್ಶನಗಳು ಇಲ್ಲ. ಈ ಹಿನ್ನಲೆಯಲ್ಲಿ ಎಡಪಕ್ಷಗಳನ್ನು ಅವಲೋಕಿಸುವಾಗ ಅಂಬೇಡ್ಕರ್ ಅಭಿಪ್ರಾಯಗಳು, ದಲಿತ್ ಡೈರಿಯ ಚಂದ್ರಭಾನ್ ಪ್ರಾಸಾದ್‌ರ ಲೇಖನ ಮಹತ್ವ ಪಡೆದು ಕೊಳ್ಳುತ್ತದೆ.

ಎರಡನೆಯದಾಗಿ, ಡಾ. ಬಂಜಗೆರೆ ಜಯಪ್ರಕಾಶರ ಮಾಜಿ ಮುಖ್ಯಮಂತ್ರಿ ಎಸ್, ನಿಜಲಿಂಗಪ್ಪನವರನ್ನು ಕುರಿತದ್ದು. ನಿಜಲಿಂಗಪ್ಪನವರು ಇಂದಿರಾಗಾಂಧಿಯವರೊ ಡನೆ ಮನಸ್ತಾಪ ಮಾಡಿಕೊಂಡು ಕಾಂಗ್ರೆಸ್ ತೊರೆದರು ಎನ್ನುವ ಮಾತುಗಳು ಮುಖ್ಯವಾಗುತ್ತವೆ. ಒಂದೆರಡು ವರ್ಷಗಳ ಹಿಂದೆ ಹೊನ್ನಾರು ಮಾಸ ಪತ್ರಿಕೆಯಲ್ಲಿ ಎಂ. ಪಿ. ಉಮೇಶ್‌ಚಂದ್ರ (ಮಂಗಳೂರು ವಿಶ್ವವಿದ್ಯಾಲಯ) ಒಂದು ಲೇಖನ ಬರೆದಿದ್ದರು. (ನನಗೆ ದಿನಾಂಕ ನೆನಪಾಗುತ್ತಿಲ್ಲ.) ಅದೇನೆಂದರೆ ಬಾಬು ಜಗಜೀವನರಾಂರವರು ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು. ನಿಜಲಿಂಗಪ್ಪನವರು ಬಾಬೂಜಿಯವರನ್ನೂ ಅಧ್ಯಕ್ಷಗಿರಿಯಿಂದ ತೆಗೆಯಬೇಕೆಂದು ಇಂದಿರಾಗಾಂಧಿಯವರ ಮೇಲೆ ಒತ್ತಡ ತಂದಿದ್ದರಂತೆ, ಜನನಾಯಕರಾದ ಜಗಜೀವನರಾಂರವರನ್ನೂ ಅಧ್ಯಕ್ಷಗಿರಿಯಿಂದ ತೆಗೆಯುವುದು ಸಾಧ್ಯವಿಲ್ಲವೆಂದು ಇಂದಿರಾಗಾಂಧೀಯವರು ನಿಜಲಿಂಗಪ್ಪನವರ ಬೇಡಿಕೆಯನ್ನು ನಿರಾಕರಿಸಿದರಂತೆ ಆ ಕಾರಣದಿಂದಾಗಿ ನಿಜಲಿಂಗಪ್ಪನ ವರು ಕಾಂಗ್ರೆಸ್ ತೊರೆದು ಸಂಸ್ಥಾ ಕಾಂಗ್ರೆಸ್ ಕಟ್ಟಿ ಕೊಂಡದ್ದು.

ಇಲ್ಲಿ ಮುಖ್ಯವಾಗುವುದು ಏನೆಂದರೆ ಜಾತಿಯ ಪ್ರಶ್ನೆ. ತಾನು ಒಂದು ಪ್ರತಿಷ್ಠಿತ ಮೇಲು ಜಾಯವನಾಗಿದ್ದು, ಕೆಳ ಜಾತಿಯ ಅದರಲ್ಲೂ ಚಮ್ಮಾರನ ಮುಂದೆ ಅಹವಾಲು ಹೇಳಿಕೊಳ್ಳಬೇಕಾಗಿ ಬಂದುದು ನಿಜಲಿಂಗಪ್ಪನವರಿಗೆ ಸಹಿ ಸಲಸಾಧ್ಯವಾಗಿತ್ತು. ಈ ಪ್ರತಿಷ್ಠೆಯನ್ನೇ ನೆಪವಾಗಿಟ್ಟು ಕಾಂಗ್ರೆಸ್ ತೊರೆದರು ಎನ್ನುವುದು ಗಮನಿಸಬೇಕಾದ ಅಂಶ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ ೨ ಪ್ರತಿಗಳನ್ನು
ಕಳುಹಿಸಿಕೊಡಬೇಕಾಗಿ
ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೧
ದೂರವಾಣಿ : ೦೮೦ ೭೮೪೩/೪೪೪೮೦೪೪೩೦೬

ಸಂಘಪರಿವಾರಕ್ಕೆ ಕ್ಲೀನ್‌ಚಿಟ್ ನೀಡಿದ ಆಯೋಗ

ಸಂಪಾದಕರೊಡನೆ ಸಂವಾದ

ವೈ. ಮರಿಸ್ವಾಮಿ

ಮಾನ್ಯ ಸಂಪಾದಕರೇ,

ರಾಜ್ಯದಲ್ಲಿ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರದ ಗದ್ದುಗೆ ಏರಿದ ನಂತರ ಸಂಘಪರಿವಾರದ ಕೋಮುವಾದಿ ಕಾರ್ಯಸೂಚಿ ಬಿರುಸು ಪಡೆಯ ತೊಡಗಿತು. ಅದರ ಪರಿಣಾಮವಾಗಿ ಮುಸ್ಲಿಮ್ – ಕ್ರೈಸ್ತ ಸಮುದಾಯಗಳ ವಿರುದ್ಧ ಅಪಪ್ರಚಾರ, ಅವಹೇಳನ, ದೈಹಿಕ ಮತ್ತು ಸಾಂಸ್ಕೃತಿಕ ದೌರ್ಜನ್ಯಗಳು ವ್ಯವಸ್ಥಿತ ರೀತಿಯಲ್ಲಿ, ಪೊಲೀಸರ ಕಣ್ಗಾವಲಿನಲ್ಲಿ ನಡೆಯಲಾರಂಭಿಸಿದವು. ಇವುಗಳಲ್ಲಿ ಬಹಳ ಪ್ರಮುಖವಾದ ಪ್ರಕರಣ ರಾಜ್ಯಾದ್ಯಂತ ಏಕಕಾಲಕ್ಕೆ ಚರ್ಚ್‌ಗಳ ಮೇಲೆ ನಡೆದ ದಾಳಿ.

ರಾಜ್ಯದಲ್ಲಿ ಶೇ.3ಕ್ಕಿಂತಲೂ ಕಡಿಮೆಯಿರುವ ಕ್ರೈಸ್ತ ಸಮುದಾಯ ಈ ಕೇಸರಿ ಪಡೆಯ ಭಯೋತ್ಪಾದನೆಯಿಂದ ಕನಲಿ ಹೋಗಿತ್ತು. ಮತ್ತೊಂದು ಕಡೆ ಭಜರಂಗ ದಳ, ವಿಎಚ್‌ಪಿ, ಶ್ರೀರಾಮ ಸೇನೆಯಂಥ ಸಂಘಪರಿವಾರದ ಪುಂಡ ಸಂಘಟನೆಗಳು ದಾಳಿಯನ್ನು ಸಮರ್ಥಿಸಿಕೊಂಡಿದ್ದವು. ಕ್ರೈಸ್ತರು ಬಲವಂತದ ಮತಾಂತರದಲ್ಲಿ ತೊಡಗಿರುವುದರಿಂದ ಎಚ್ಚೆತ್ತ ಸ್ವಾಭಿಮಾನಿ ಹಿಂದೂಗಳು ಈ ರೀತಿ ಪ್ರತಿಕ್ರಿಯಿಸಿದ್ದಾರೆಂದು ಅಂದಿನ ಭಜರಂಗದಳದ ರಾಜ್ಯ ಸಂಚಾಲಕ ಮಹೇಂದ್ರಕುಮಾರ್ ಬಹಿರಂಗ ಹೇಳಿಕೆ ನೀಡಿದ್ದರು.

ಕ್ರೈಸ್ತರ ಧಾರ್ಮಿಕ ಸಂಕೇತಗಳನ್ನು ಛೀದ್ರಗೊಳಿಸಿ, ಅವರನ್ನು ಮಾನಸಿಕವಾಗಿ ಘಾಸಿಗೊಳಿಸಿದ ಈ ದೌರ್ಜನ್ಯಗಳನ್ನು ನಡೆಸಲು ಸಂಘಪರಿವಾರ ಮಹೇಂದ್ರಕುಮಾರ್ ಒಳಗೊಂಡಂತೆ ಶೂದ್ರ ಸಮುದಾಯದ ಯುವಕರನ್ನು ಬಳಸಿಕೊಂಡಿತ್ತು. ಶೋಷಿತ ಸಮುದಾಯಗಳಿಗೆ ಶಿಕ್ಷಣ, ವೈದ್ಯಕೀಯ ಸೇವೆ, ಸಾಮಾಜಿಕ ಹಾಗೂ ಆರ್ಥಿಕ ಸಬಲೀಕರಣದಲ್ಲಿ ತನ್ನದೇ ಆದ ಮಹತ್ವದ ಕೊಡುಗೆ ನೀಡಿರುವ ಕ್ರೈಸ್ತ ಸಮುದಾಯದ ಮೇಲಿನ ಆಕ್ರಮಣವನ್ನು ಇಡೀ ಮಾನವ ಕುಲದ ಮೇಲಿನ ಆಕ್ರಮಣವೆಂದು ಪರಿಗಣಿಸಿದ ದಲಿತ, ರೈತ, ಹಿಂದುಳಿದ ಮತ್ತು ಎಡಪಂಥೀಯ ಸಂಘಟನೆಗಳು ರಾಜ್ಯಾದ್ಯಾಂತ ಬೀದಿಗಿಳಿದು ಆಕ್ರೋಶ ವ್ಯಕ್ತಪಡಿಸಿದವು.

ಸರ್ಕಾರ ಮತ್ತು ಸಂಘಪರಿವಾರದ ಊಹೆಗೂ ಮೀರಿದ ಪ್ರತಿಭಟನೆಯಿಂದ, ಚರ್ಚ್‌ಗಳ ಮೇಲಿನ ದಾಳಿ ಪ್ರಕರಣ ರಾಷ್ಟ್ರಿಯ ಸುದ್ದಿಯಾಯಿತು. ರಾಜ್ಯ ಮಾನವ ಹಕ್ಕುಗಳ ಆಯೋಗ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗಗಳು ದಾಳಿ ನಡೆದ ಸ್ಥಳಗಳಿಗೆ ಭೇಟಿಯಿತ್ತು ಖುದ್ದಾಗಿ ಪರಿಶೀಲನೆ ನಡೆಸಿದವು. ಅನೇಕ ಜನಪರ ಸಂಘಟನೆಗಳ ಸದಸ್ಯರು ಮತ್ತು ಮಾನವ ಹಕ್ಕುಗಳ ಕಾರ್ಯಕರ್ತರು ಸತ್ಯಶೋಧನಾ ಸಮಿತಿಗಳನ್ನು ರಚಿಸಿಕೊಂಡು, ಚರ್ಚ್‌ಗಳ ಮೇಲಿನ ದಾಳಿಯಲ್ಲಿ ಸಂಘಪರಿವಾರದ ಪಾತ್ರವಿರುವುದನ್ನು ಸಾಕ್ಷಾಧಾರಗಳ ಸಮೇತ ಅನಾವರಣಗೊಳಿಸಿದರು. ರಾಜ್ಯ ಸರ್ಕಾರದ ಕೃಪಾಕಟಾಕ್ಷದಿಂದಲೇ ಈ ದಾಳಿಗಳು ನಡೆದಿರುವುದರಿಂದ, ರಾಜ್ಯ ಸರ್ಕಾರವನ್ನು ವಜಾಗೊಳಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೆಚ್ಚಾಯಿತು.

ಬೀಸೋ ದೊಣ್ಣೆಯಿಂದ ತಪ್ಪಿಸಿಕೊಳ್ಳಲೆಂಬಂತೆ ರಾಜ್ಯ ಸರ್ಕಾರ ಚರ್ಚ್‌ಗಳ ಮೇಲಿನ ದಾಳಿಯ ಪ್ರಕರಣದ ತನಿಖೆಯನ್ನು ನ್ಯಾಯಮೂರ್ತಿ ಸೋಮಶೇಖರ್ ಆಯೋಗಕ್ಕೆ ವಹಿಸಿತು. ಈ ಸಮಿತಿಯ ಅಧ್ಯಕ್ಷರಿಂದ ಹಿಡಿದು ಸದಸ್ಯರವರೆಗೆ ಎಲ್ಲರೂ ಒಂದಲ್ಲಾ ಒಂದು ರೀತಿಯಲ್ಲಿ ಸಂಘಪರಿವಾರದ ಹಿತೈಷಿಗಳಾಗಿದ್ದವರು. ಆಯೋಗದ ವಿಚಾರಣೆಯ ಸಂದರ್ಭದಲ್ಲಿ ಹಿಂದು ಸಂಘಟನೆಗಳ ಪರವಾಗಿ ವಾದ ಮಂಡಿಸಿದ ವಕೀಲರುಗಳು ಕೂಡ ಹಿಂದುತ್ವವಾದಿಗಳೇ. ವಿಚಾರಣೆಯ ಸಂದರ್ಭದಲ್ಲಿ ಸಭ್ಯತೆ ಮೀರಿ, ತೀರಾ ಕೀಳುಮಟ್ಟದ ಪ್ರಶ್ನೆ ಮತ್ತು ಕುತರ್ಕಗಳಿಂದ ಈ ವಕೀಲರು ಅಕ್ಷರಶಃ ಆಯೋಗದ ಕಟಕಟೆಯಲ್ಲಿ ಕ್ರೈಸ್ತ ಸಮುದಾಯದ ಸಾಕ್ಷಿಗಳ ಮೇಲೆ ಮುಗಿಬಿದ್ದು, ಅಮಾನುಷವಾಗಿ ನಡೆದುಕೊಂಡರು. ಇದ್ಯಾವುದಕ್ಕೂ ಜಗ್ಗದ ಕ್ರೈಸ್ತ ಸಮುದಾಯದ ಪ್ರತಿನಿಧಿಗಳು ಮತ್ತು ಅವರ ಪರ ವಾದ ಮಂಡಿಸಿದ ವಕೀಲರುಗಳು ಸಾಕ್ಷ್ಯಾಧಾರಗಳ ಸಮೇತ ಸಮರ್ಥವಾಗಿ ತಮ್ಮ ಅಭಿಪ್ರಾಯ ಮಂಡಿಸಿದರು. ಅದರ ಪರಿಣಾಮವಾಗಿ, ಆಯೋಗ ಸಲ್ಲಿಸಿದ ಮಧ್ಯಂತರ ವರದಿಯಲ್ಲಿ, ಅನಿವಾರ್ಯವಾಗಿ ಚರ್ಚ್‌ಗಳ ಮೇಲಿನ ದಾಳಿಯಲ್ಲಿ ಸಂಘಪರಿವಾರದ ಕೈವಾಡವಿರುವುದನ್ನು ಒಪ್ಪಿಕೊಳ್ಳಲಾಗಿತ್ತು.

ಆಗ ಗೃಹಸಚಿವರಾಗಿದ್ದ ವಿ.ಎಸ್. ಆಚಾರ್ಯರವರು, ಆಯೋಗದ ಮಧ್ಯಂತರ ವರದಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಲ್ಲದೇ, ಆಯೋಗ ತನ್ನ ವರದಿಯ ಮುಖ್ಯಾಂಶಗಳನ್ನು ಸರ್ಕಾರದ ಗಮನಕ್ಕೆ ತಂದನಂತರವೇ ಮಾಧ್ಯಮದ ಮುಂದೆ ಹೋಗಬೇಕೆಂದು ತಾಕೀತು ಮಾಡಿದರು. ಅದಾಗಲೇ ರಾಜ್ಯದ ಪ್ರಜ್ಞಾವಂತ ಜನತೆಗೆ ಈ ಆಯೋಗದ ಅಂತಿಮ ವರದಿ ಹೇಗಿರಬಹುದೆನ್ನುವ ಸ್ಪಷ್ಟ ಸುಳಿವು ಸಿಕ್ಕಿತ್ತು. ಅದೀಗ ನೂರಕ್ಕೆ ನೂರರಷ್ಟು ಸತ್ಯವಾಗಿದ್ದು, ಸರ್ಕಾರ ಮತ್ತು ಸಂಘಪರಿವಾರಕ್ಕೆ 'ಕ್ಲೀನ್ ಚಿಟ್, ನೀಡಲಾಗಿದೆ. ಸಂಘಪರಿವಾರದ ಏಜೆಂಟರಂತೆ ವರ್ತಿಸಿದ ಪೊಲೀಸರಿಗೆ ಶಾಂತಿ ಸುವ್ಯವಸ್ಥೆ ಕಾಪಾಡಿದಕ್ಕೆ ಶಹಭಾಷ್‌ಗಿರಿ ನೀಡಿ ಬೆನ್ನು ತಟ್ಟಲಾಗಿದೆ.

ನ್ಯಾಯಮೂರ್ತಿ ಸೋಮಶೇಖರ್ ಆಯೋಗದ ಅಂತಿಮ ವರದಿಯು ಚರ್ಚ್‌ಗಳ ಮೇಲಿನ ದಾಳಿ ಪ್ರಕರಣಗಳಿಂದ ಸಂಘಪರಿವಾರವನ್ನು ಖುಲಾಸೆಗೊಳಿಸಿರುವುದು, ಮುಂಬರುವ ದಿನಗಳಲ್ಲಿ ಸಂಘಪರಿವಾರದ ತುಕಡಿಗಳು ಮತ್ತಷ್ಟು Aggressive ಆಗಿ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ದಾಳಿ ನಡೆಸಲು ಮುಕ್ತ ಪರವಾನಿಗೆ ಕೊಟ್ಟಂತಾಗಿದೆ. ಈ ಬೆಳವಣಿಗೆ ಈಗಾಗಲೇ ಪ್ರಾರಂಭವಾಗಿದೆ. ಈ ಹಿಂದೆ ಭಜರಂಗದಳದ ರಾಜ್ಯ ಸಂಚಾಲಕರಾಗಿದ್ದ ಮಹೇಂದ್ರಕುಮಾರ್‌ರವರು ಬಿಜೆಪಿ ಮತ್ತು ಸಂಘಪರಿವಾರದ ಅವಕಾಶವಾದಿತನದ ವಿರುದ್ಧ ತಿರುಗಿಬಿದ್ದಿರುವುದರಿಂದ, ಚರ್ಚ್‌ಗಳ ಮೇಲಿನ ದಾಳಿಯ ಪ್ರಕರಣಗಳಿಗೆ ಅವರೊಬ್ಬರನ್ನು ಮಾತ್ರ ಹೊಣೆಗಾರರನ್ನಾಗಿಸಿ, ಅವರ ವಿರುದ್ಧ ಸೂಕ್ತ ಕಾನೂನಿನ ಕ್ರಮ ಕೈಗೊಳ್ಳುವಂತೆ ವರದಿಯಲ್ಲಿ ಸೂಚಿಸಿರುವುದು, ಈ ಆಯೋಗದ ಪೂರ್ವಗ್ರಹಪೀಡಿತ ಮನೋಭಾವಕ್ಕೆ ಸಾಕ್ಷಿಯಾಗಿದೆ!

ನ್ಯಾಯಮೂರ್ತಿ ಸೋಮಶೇಖರ್ ಆಯೋಗದ ಅಂತಿಮ ವರದಿಯಿಂದ ಸಹಜವಾಗಿ ವಿಶ್ವೇಶ್ವರತೀರ್ಥ ಸ್ವಾಮೀಜಿ ಮತ್ತು ಚಿದಾನಂದಮೂರ್ತಿಗಳು ಸಂತುಷ್ಟರಾಗಿದ್ದಾರೆ. ಸಂಘಪರಿವಾರ ಯಾವತ್ತೂ ಹಿಂಸಾಚಾರಕ್ಕಿಳಿಯುವುದಿಲ್ಲ ಎಂದು ಸರ್ಟಿಫೀಕೇಟ್ ನೀಡಿ, ಸರ್ಕಾರ ಮತಾಂತರವನ್ನು ನಿಷೇಧಿಸಿ ಕಾಯಿದೆ ರೂಪಿಸಬೇಕೆಂದು ಆಗ್ರಹಿಸಿದ್ದಾರೆ. ಚರ್ಚ್‌ಗಳ ಮೇಲಿನ ದಾಳಿಯನ್ನು ನಾನು ವಿರೋಧಿಸುತ್ತೇನೆ, ಆದರೆ ಮತಾಂತರವನ್ನು ಸಹಿಸುವುದಿಲ್ಲ ಎಂದು ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಮಾತನಾಡುತ್ತಿರುವ ಚಿದಾನಂದಮೂರ್ತಿಯವರು, ಇದಕ್ಕೆ ಪೂರಕವಾಗಿ ಮತ್ತಷ್ಟು ಕೋಮುಧಾರೆಯ 'ಸಂಶೋಧನೆ'ಗಳಲ್ಲಿ ಮುಳುಗಿದ್ದಾರೆ!

ಚರ್ಚ್‌ಗಳ ಮೇಲಿನ ದಾಳಿಗೆ ಬಲವಂತದ ಅಥವಾ ಆಮಿಷದ ಮತಾಂತರವೇ ಕಾರಣ ಎನ್ನುವ ಸುಳ್ಳನ್ನು ಸತ್ಯವೆಂದು ಅಧಿಕೃತವಾಗಿ ಪ್ರತಿಷ್ಠಾಪಿಸುವ ಹುನ್ನಾರವನ್ನು ರಾಜ್ಯ ಸರ್ಕಾರ ಮತ್ತು ಸಂಘಪರಿವಾರ, ಈ ಆಯೋಗದ ಮುಖೇನ ನಡೆಸಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ಈ ಆಯೋಗದ ರಚನೆಯೇ, ಈ ದೇಶದ ಬಹುಸಂಖ್ಯಾತ ಶೂದ್ರ ಮತ್ತು ಪಂಚಮ ಜನ ಸಮುದಾಯಗಳನ್ನು ವೈದಿಕ (ಹಿಂದು) ಸಾಮಾಜಿಕ ವ್ಯವಸ್ಥೆಯಲ್ಲಿ ಅದುಮಿಡುವ ಮನು ಪ್ರಣೀತ ತಾರತಮ್ಯವನ್ನು ಎತ್ತಿಹಿಡಿಯುವ ಧ್ಯೇಯೋದ್ದೇಶ ಹೊಂದಿದ್ದು, ಧರ್ಮದ ಹೆಸರಿನಲ್ಲಿ ಸಮಾಜವನ್ನು ಛಿದ್ರಗೊಳಿಸಿ ಸಾಮಾಜಿಕ ಸೌಹಾರ್ಧತೆಗೆ ಭಂಗ ತರುವ ಕೋಮುವಾದಿ ರಾಜಕಾರಣದ ಭಾಗವಾಗಿ, ಈ ಆಯೋಗ ಕಾರ್ಯ ನಿರ್ವಹಿಸಿದೆ. ಇದರ ವರದಿ ವಿಧಾನಸೌಧದಲ್ಲಿ ಸಿದ್ಧಪಡಿಸಿಲ್ಲ ಎನ್ನುವ ವಿಷಯವನ್ನು ಹೊರತುಪಡಿಸಿ, ಇದರಲ್ಲಿ ಅಡಕವಾಗಿರುವ ಹೂರಣವೆಲ್ಲಾ ವಿಧಾನಸೌಧದಿಂದ ರವಾನಿಸಲ್ಪಟ್ಟಿದೆ. ಈ ಆಯೋಗದ ವರದಿ ಕೇವಲ ಕಣ್ಣೊರೆಸುವ ತಂತ್ರವಾಗಿದ್ದು, ರದ್ದಿ ಅಂಗಡಿಗೆ ಹಾಕಲು ಸೂಕ್ತವಾಗಿದೆ.

ಚರ್ಚ್‌ಗಳ ಮೇಲಿನ ದಾಳಿಯ ಹಿಂದಿರುವ ಸಿದ್ಧಾಂತ ಮತ್ತು ವಿಧ್ವಂಸಕ ಶಕ್ತಿಗಳ ಕುರಿತು ತನಿಖೆ ನಡೆಸಲು ಯಾವುದೇ ಆಯೋಗದ ತನಿಖೆ ಅಗತ್ಯವಿಲ್ಲ. ದಲಿತ, ಆದಿವಾಸಿ, ರೈತ, ಹಿಂದುಳಿದ ಮತ್ತು ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಗಳ ವಿಸ್ತೃತ ಹೋರಾಟದಿಂದ ಮಾತ್ರ ಈ ಕೋಮುವಾದಿ ಸಿದ್ಧಾಂತ, ಸರ್ಕಾರ ಹಾಗೂ ವಿಧ್ವಂಸಕ ಕೃತ್ಯಗಳನ್ನು ಹಿಮ್ಮೆಟ್ಟಿಸಲು ಸಾಧ್ಯ. □

ಸಂಪಾದಕರೊಡನೆ ಸಂವಾದ

ಪ್ರಜಾಪ್ರಭುತ್ವದ ಶನಿ ಸಂತಾನ..

ಎಸ್. ಬಿ. ಜೋಗುರ

ಮಾನ್ಯ ಸಂಪಾದಕರೇ,

ವಿಶ್ವದ ಬಹುದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಸಮಾನತೆಗಳು.. ಅಂತರಗಳು..ತರತಮಗಳು.. ಅನ್ಯಾಯಗಳು ತೀರಾ ಸಹಜವೇ ಎನ್ನುವ ಹಾಗೆ ನಡೆಯುವದು, ನಡೆಯುತ್ತಿರುವದು ನಾಗರಿಕ ಸಮಾಜ ಎನ್ನುವ ಹಣೆಪಟ್ಟಿಗೆ ಕಳಂಕವಾಗಿ ಪರಿಣಮಿಸುತ್ತದೆ. ನಿನ್ನೆ ಮೊನ್ನೆಯವರೆಗೂ ಮನುಷ್ಯರನ್ನು ಮನುಷ್ಯರ ಹಾಗೆ ನಡೆಯಿಸಿಕೊಳ್ಳುವಲ್ಲಿ ನಾವು ಸೋಲುತ್ತಿದ್ದೇವೆ ಎನ್ನುವದೇ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಬಹುದೊಡ್ಡ ಅಣಕ. ಸಾಮಾಜಿಕ ಸ್ತರಗಳಲ್ಲಿ ಕೆಳಗಿನ ಪದರು ಎನ್ನುವ ಕಾರಣಕ್ಕಾಗಿಯೇ ಅವರು ಅನ್ಯಾಯ ಅಕ್ರಮಗಳನ್ನು ಸಹಿಸಿಕೊಳ್ಳಬೇಕು ಎನ್ನುವದೇ ಬಹುದೊಡ್ಡ ವಿಷಾದ. ಹುಟ್ಟಿನೊಂದಿಗೆ ಜೈವಿಕವಾಗಿ ಬರುವ ನಮ್ಮ ಶರೀರದ ಬಣ್ಣ ಕೂಡಾ ಅಂತಸ್ತುಗಳನ್ನು ಗಿಟ್ಟಿಸಿ ಕೊಳ್ಳುವಲ್ಲಿ ಇಡೀ ವಿಶ್ವದ ಬಹುತೇಕ ಕಡೆಗಳಲ್ಲಿ ಮುಂಚೂಣಿಯಲ್ಲಿ ನಿಲ್ಲುತ್ತದೆ ಎನ್ನುವ ಬಗ್ಗೆ ಕೊಲಂಬಿಯಾದ ಆಂಗ್ಲ ಭಾಷಾ ಪ್ರಾಧ್ಯಾಪಕ ಚಿಂತಕ ಎಡ್ವರ್ಡ್ ಸೈದ್ ಹೇಳುವದನ್ನು ನೋಡಿದರೆ ಹೌದು ಎನಿಸದೇ ಇರದು. 2005ರ ಸಂದರ್ಭದಲ್ಲಿ ಆಫ್ರಿಕಾದ ಪುಟ್ಟ ಪೋರನೊಬ್ಬ ತನ್ನ ಮೈಬಣ್ಣದ ಬಗ್ಗೆ ಒಂದು ಪದ್ಯವನ್ನು ಬರೆದ ಅದು ಆ ವರ್ಷದ ಅತ್ಯುತ್ತಮ ಕವಿತೆ ಎಂದು ಗುರುತಿಸಲ್ಪಟ್ಟಿದೆ.

'ನಾನು ಹುಟ್ಟಿದಾಗ ಕಪ್ಪು
ಬೆಳೆಯುತ್ತಿದ್ದಂತೆಯೂ ಕಪ್ಪು
ಬಿಸಿಲಿಗೆ ಬಿದ್ದಾಗಲೂ ಕಪ್ಪು
ಭಯಭೀತನಾದಾಗಲೂ ಕಪ್ಪು
ರೋಗಬಾಧಿತನಾದಾಗಲೂ ಕಪ್ಪು
ಅಷ್ಟೇ ಏಕೆ..? ಸತ್ತ ಮೇಲೆಯೂ ಕಪ್ಪು
ಅಯ್ಯಾ ಬಿಳಿಯರೇ..
ನೀವು ಹುಟ್ಟಿದಾಗ ಗುಲಾಬಿ
ಬೆಳೆಯುತ್ತಿದ್ದಂತೆ ಬಿಳಿಯ ಬಣ್ಣ
ಬಿಸಿಲಿಗೆ ಬಿದ್ದರೆ ಕೆಂಪು
ನೀವು ಕೂಲ್ ಆಗಿದ್ದರೆ ನೀಲಿ ಬಣ್ಣ
ಹೆದರಿಕೊಂಡರೆ ಹಳದೀ ಬಣ್ಣ
ಜಡ್ಡು ಬಿದ್ದರೆ ಹಸಿರು
ಸತ್ತ ನಂತರ ಬೂದು ಬಣ್ಣ

ಬರೀ ಮೈಬಣ್ಣ ಮತ್ತು ಜಾತಿಯನ್ನು ಬಳಸಿಕೊಂಡು ಬದುಕುವ ಅದೆಷ್ಟೋ ಊಸರವಳ್ಳಿಗಳು ನಮ್ಮ ಮಧ್ಯೆ ಇದ್ದಾರೆ. ನಮ್ಮ ಮತ ಯಾರಿಗೆ ಎನ್ನುವದರಿಂದ ಹಿಡಿದು ಆ ಊರಲ್ಲಿ ನಾವು ಬದುಕುವ ರೀತಿಯನ್ನು ನಿರ್ಧರಿಸುವ ಇವರು ಇವತ್ತಿಗೂ ಪ್ರಜಾಪ್ರಭುತ್ವದ ಶನಿಗಳಾಗಿ ಅಂಟಿಕೊಂಡಿದ್ದಾರೆ. ಇವರ ಮಾತನ್ನು ಮೀರಿ ನೀವು ಮತ ಚಲಾಯಿಸಿದರೆ ನಿಮಗೆ ಕುಡಿಯಲು ನೀರಿಲ್ಲ.. ಉಳಿಯಲು ಜಾಗವಿಲ್ಲ. ಇಂಥಾ ದರ್ಪಿಷ್ಟ ಸಂತಾನ ಈಗಲೂ ನಮ್ಮಲ್ಲಿದೆ ಎಂದರೆ ನೀವು ನಂಬಲೇಬೇಕು.

ಹೀಗಿರಲು ನನ್ನನ್ನೇ ಬಣ್ಣ ಹಿಡಿದು ಕರೆಯುವಿರಲ್ಲ..?

ನಿಜ. ಬರೀ ಮೈಬಣ್ಣ ಮತ್ತು ಜಾತಿಯನ್ನು ಬಳಸಿಕೊಂಡು ಬದುಕುವ ಅದೆಷ್ಟೋ ಊಸರವಳ್ಳಿಗಳು ನಮ್ಮ ಮಧ್ಯೆ ಇದ್ದಾರೆ. ನಮ್ಮ ಮತ ಯಾರಿಗೆ ಎನ್ನುವದರಿಂದ ಹಿಡಿದು ಆ ಊರಲ್ಲಿ ನಾವು ಬದುಕುವ ರೀತಿಯನ್ನು ನಿರ್ಧರಿಸುವ ಇವರು ಇವತ್ತಿಗೂ ಪ್ರಜಾಪ್ರಭುತ್ವದ ಶನಿಗಳಾಗಿ ಅಂಟಿಕೊಂಡಿದ್ದಾರೆ. ಇವರ ಮಾತನ್ನು ಮೀರಿ ನೀವು ಮತ ಚಲಾಯಿಸಿದರೆ ನಿಮಗೆ ಕುಡಿಯಲು ನೀರಿಲ್ಲ.. ಉಳಿಯಲು ಜಾಗವಿಲ್ಲ. ಇಂಥಾ ದರ್ಪಿಷ್ಟ ಸಂತಾನ ಈಗಲೂ ನಮ್ಮಲ್ಲಿದೆ ಎಂದರೆ ನೀವು ನಂಬಲೇಬೇಕು.

ಇತ್ತೀಚೆಗೆ ಪ್ರತಿಷ್ಠಿತ ಆಂಗ್ಲಪತ್ರಿಕೆಯೊಂದು ದಲಿತರ ಮೇಲೆ, ಆದಿವಾಸಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳ ಬಗ್ಗೆ ಒಂದು ವರದಿಯನ್ನು ಹೊರಹಾಕಿತ್ತು. ಕಳೆದ ನವಂಬರ್ 2009ರಿಂದ ಅಗಷ್ಟ 2010ರವರೆಗೆ ಸುಮಾರು 17 ಮಹಿಳೆಯರನ್ನು ಸಾರ್ವಜನಿಕವಾಗಿ ಅತ್ಯಂತ ತುಚ್ಚವಾಗಿ ಪರೇಡ್ ಮಾಡಲಾಗಿದೆ ಎನ್ನುವದನ್ನು ಅದು ವರದಿ ಮಾಡಿದೆ. ಪೊಲೀಸ್ ಸ್ಟೇಷನ್ ಒಂದರಲ್ಲಿ 30 ವರ್ಷದ ಮಹಿಳೆಯನ್ನು ಆಕೆಯ ಸಣ್ಣ ಮಗುವಿನ ಕಣ್ಣೆದುರಲ್ಲಿಯೇ ಅತ್ಯಂತ ಹೇಯವಾಗಿ ನಡೆಯಿಸಿಕೊಳ್ಳಲಾದ ಬಗ್ಗೆಯೂ ಅದು ವರದಿ ಮಾಡಿದೆ. ಹೀಗೆ ಅಮಾಯಕ ಮಹಿಳೆಯರ ಮೇಲೆ ದೌರ್ಜನ್ಯ ಮಾಡುವ ಕ್ರಮ ನಮಗೆ ಹೊಸದಂತೂ ಅಲ್ಲ. ಬಿಹಾರ ಪಶ್ಚಿಮ ಬಂಗಾಲದ ಕಡೆಗಳಲ್ಲಿ ಆದಿವಾಸಿ ಮತ್ತು ದಲಿತ ಮಹಿಳೆಯ ಮೇಲಿನ ದೌರ್ಜನ್ಯಗಳಿಗೆ ಮಿತಿಯಿಲ್ಲ.

ಆ ಹುಡುಗಿಯ ಹೆಸರು ಸುನಿತಾ ಮುರ್ಮು. ವಯಸ್ಸು 16. ಪಶ್ಚಿಮ ಬಂಗಾಲದ ಬರ್ಬಮ್ ಎನ್ನುವ ಹಳ್ಳಿಯವಳು. ಆಕೆ ತನ್ನ ಹಳ್ಳಿಯ ಒಬ್ಬ ಮುಸ್ಲಿಮ್ ಹುಡುಗನನ್ನು ಪ್ರೀತಿಸಿದ್ದಳು. ಬರೀ ಅವನೊಂದಿಗೆ ಮಾತನಾಡುವದನ್ನು ಸಹಿಸದ ಆ ಊರ ಜನತೆ, ಅವಳನ್ನು ಹುಟ್ಟು ಬೆತ್ತಲೆಯ ಸ್ಥಿತಿಯಲ್ಲಿ ಊರಲ್ಲಿ ಮೆರವಣಿಗೆ ಮಾಡಿದರು. ಈ ಬಗೆಯ ಹೇಯ ಚಟುವಟಿಕೆ ಬೇಡ ಎಂದು ಆಕೆ ಪರಿಪರಿಯಾಗಿ ಕೇಳಿಕೊಂಡರೂ ಆ ಊರ ಜನ ಕೇಳಲಿಲ್ಲ. ಬದಲಾಗಿ ಆ ಹುಡುಗಿಯ ಶರೀರವನ್ನು ತಮ್ಮ ಕ್ಯಾಮೆರಾದಲ್ಲಿ ಕ್ಲಿಕ್ ಮಾಡಿದರು. ಆ ಹುಡುಗಿ ಮಾಡಿದ ಪ್ರಮಾದವಾದರೂ ಏನು..? ಒಬ್ಬ ಮುಸ್ಲಿಂ ಹುಡುಗನ ಜೊತೆಗೆ ಮಾತನಾಡಿದ್ದೇ ದೊಡ್ಡ ಪ್ರಮಾದವೇ.? ವಿಷಯ ಇಲ್ಲಿಗೇ ಬಗೆಹರಿಯಲಿಲ್ಲ. ಆ ಸುನಿತಾ ದಿಟ್ಟತನದಿಂದ ಇಲ್ಲಿಯವರೆಗೂ ತನ್ನ ಹಳ್ಳಿಯಲ್ಲಿ ಯಾರೂ ಮಾಡಲಾಗದ ಕೆಲಸವನ್ನು ತಾನು ಮಾಡಿ ತೋರಿಸಿದಳು. ತನ್ನನ್ನು ಈ ಬಗೆಯಾಗಿ ನಡೆಯಿಸಿಕೊಂಡವರ ಮೇಲೆ ಕೇಸು ದಾಖಲಿಸಿದಳು. ಜನವರಿ 22-2011ರಂದು ಪ್ರಧಾನಿ ಮನಮೋಹನಸಿಂಗ್ ಅವರಿಂದ ಸುನಿತಾ ರಾಷ್ಟ್ರೀಯ ಶೌರ್ಯ ಪ್ರಶಸ್ತಿಯನ್ನು ಆಕೆ ಸ್ವೀಕರಿಸಿದಳು.

ನಮ್ಮಲ್ಲಿ ಇಂದಿಗೂ ಗ್ರಾಮೀಣ ಭಾಗಗಳಲ್ಲಿ ಪರಿಸ್ಥಿತಿ ನಾವು ಯೋಚಿಸುವ ಮತ್ತು ಬರೆಯುವ ವೇಗದಲ್ಲಿ ಬದಲಾವಣೆಗಳಾಗಿಲ್ಲ. ನಮ್ಮ ಆಲೋಚನಾ ಕ್ರಮದಲ್ಲಿ ಒಂದು ಹೊಸ ಬಗೆಯ ಜಿಗುಟುತನ.. ಜುಗ್ಗುತನ ಆರಂಭವಾಗಿದೆ. ಎಲ್ಲ ಆಲೋಚನೆಗಳನ್ನು ಮೀರಿ ಕೊನೆಯ ಪಕ್ಷ ಮನುಷ್ಯ ಮನುಷ್ಯನನ್ನು ತನ್ನಂತೆ ಕಾಣುವ ಒಂದು ಸಹಜ ಗುಣ ಕೂಡಾ ಮಾಯವಾಗುತ್ತಿದೆ. ಕೆಲ ಹಿತಾಸಕ್ತಿಗಳು ಆ ಬಗೆಯ ಗಡಸು ಸಮಾಜದ ಸ್ಥಾಪನೆಯ ಹುನ್ನಾರದಲ್ಲಿ ತೊಡಗಿವೆ. ಇವರ ಮನಃಸ್ಥಿತಿಯನ್ನು ಅರಿಯುವ.. ಅರಿಯುವಂತೆ ಮಾಡುವ ಕೆಲಸ ಪ್ರಾಜ್ಞರಾದವರು ಯಾವದೇ ವಲಯದಲ್ಲಿರಲಿ ಮಾಡಬೇಕಿದೆ. □

ನನ್ನ ಹೆಣ್ತನ

ರಕ್ತ ಕೋಶಗಳಲ್ಲಿ
ನನ್ನ ಹೆಣ್ತನ
ಗೋಪುರವೂ ಅಲ್ಲ, ಗರ್ಭಗುಡಿಯೂ ಅಲ್ಲ
ಅದರ ಬೇರಿರುವುದು
ಈ ಕೆಂಪು ಮಣ್ಣಿನ ಮಾಂಸದಲ್ಲಿ
ಅದರ ಬೇರಿರುವುದು
ಆಕಾಶದ ಉತ್ಕಟ ಮಜ್ಜೆಗಳಲ್ಲಿ
ಭವ್ಯ ತಾಳ್ಮೆಯದು
ಹರಿಯುವುದು ಬೆಳಕು ಕೂಡ ತೋರದ
ಅಸಹಾಯಕತೆಯನ್ನು

○ ಸರಸ್ವತಿ. ಕೆ.ಬಿ

ದಲಿತರ ಆತ್ಮಸಾಕ್ಷಿಗೆ ಧಕ್ಕೆ

ಸಂಪಾದಕರೊಡನೆ ಸಂವಾದ

ಕಾಂಚ ಐಲಯ್ಯ

ಇಂದು ದಲಿತ-ಬಹುಜನ ಸಮುದಾಯಕ್ಕೆ ಅಂಬೇಡ್ಕರ್-ಜಗಜೀವನ ರಾಂ ಒಂದು ಮಾದರಿಯಾಗಿ ಕಂಡರೆ, ಪೆರಿಯಾರ್‌ವಾದಿ ಪಾರ್ಟಿಯಿಂದ ರಾಜಕಾರಣ ವನ್ನು ಪ್ರಾರಂಭಿಸಿದ ಎ. ರಾಜಾ ಇನ್ನೊಂದು ಮಾದರಿ ಯಾಗಿ ನಿಂತಿದ್ದಾರೆ. ಬುದ್ಧ, ಫುಲೆ, ಅಂಬೇಡ್ಕರ್, ಪೆರಿ ಯಾರ್ ನೀಡಿದ ನೈತಿಕ ಸಾಂಸ್ಕೃತಿಕತೆಯ ತಳಹದಿ ಯನ್ನು ನಾವು ಇಂದು ಕಳೆದುಕೊಂಡಿದ್ದೇವೆ.

ಮಾನ್ಯ ಸಂಪಾದಕರೇ,

ಭಾರತವು ಆರ್ಥಿಕವಾಗಿ, ನೈತಿಕವಾಗಿ ಮತ್ತು ತಾತ್ವಿಕವಾಗಿ ಭ್ರಷ್ಟಾಚಾರದ ಸುಳಿಯಲ್ಲಿ ಸಿಲುಕಿದೆ. 2-ಜಿ ಸ್ಪೆಕ್ಟ್ರಂ ತರಂಗಾಂತರ ಹಂಚಿಕೆಯ ಭ್ರಷ್ಟಾಚಾರದ ಆರೋಪ ಹೊತ್ತಿರುವ ಮಾಜಿ ಕೇಂದ್ರ ಟೆಲಿಕಾಂ ಮಂತ್ರಿ ಎ. ರಾಜಾ ಪ್ರಕರಣವು ಕೇವಲ ಯು.ಪಿ.ಎ. ಸರ್ಕಾರ, ಡಿ.ಎಂ.ಕೆ. ಪಕ್ಷಗಳ ರಾಜಕೀಯ ಅನೈತಿಕತೆಗಷ್ಟೇ ಅಲ್ಲದೆ ದಲಿತರ ಆತ್ಮಸಾಕ್ಷಿಯನ್ನು ನಡುಗಿಸುತ್ತಿದೆ.

ರಾಜಾ ಜಾತಿಯಿಂದ ದಲಿತ ಮಾತ್ರವಲ್ಲದೇ ತಮಿಳುನಾಡಿನ ಡಿ.ಎಂ.ಕೆ. ರಾಜಕೀಯದ ಚೌಕಟ್ಟಿನಲ್ಲಿ ಬೆಳೆದು ಬಂದಾತ. ಈತ ಈ ರೀತಿಯ ರಾಜಕೀಯದಲ್ಲಿ ನಿರತನಾಗಿದ್ದೇಕೆ? ಈತ ಇಂಥ ಬೃಹತ್ ಹಗರಣದಲ್ಲಿ ಡಿ.ಎಂ.ಕೆ. ಆಣತಿಯಂತೆ ಭಾಗಿಯಾಗಿಲ್ಲದೆ ಕೇವಲ ತನ್ನ ಸ್ವಂತ ನಿರ್ಧಾರದಿಂದ ತೊಡಗುವ ಧೈರ್ಯವನ್ನು ತೋರಿದ ಎಂಬುದನ್ನು ನಂಬುವುದು ಸಾಧ್ಯವಿಲ್ಲ.

ಪೆರಿಯಾರ್ ಅವರ ಸಾಮಾಜಿಕ ಮತ್ತು ರಾಜಕೀಯ ತಳಹದಿಯನ್ನು ಹೊಂದಿ ಜನ್ಮತಾಳಿದ ಡಿ.ಎಂ.ಕೆ. ಪಕ್ಷವು ಇಂದು ತನ್ನ ಮೂಲ ತತ್ವಗಳಿಂದ ಬಹುದೂರಸಾಗಿ ಹೋಗಿರುವುದನ್ನು ಎಲ್ಲರೂ ಬಲ್ಲರು. ಇದುವರೆಗೆ ನಮ್ಮನ್ನು ಕೇವಲ ಮುಲಾಯಂ ಸಿಂಗ್ ಯಾದವ್, ಲಾಲೂಪ್ರಸಾದ್ ಯಾದವ್ ಹಾಗೂ ಮಾಯಾವತಿ ಅವರ ಭ್ರಷ್ಟ ಕೃತ್ಯಗಳಷ್ಟೇ ಕಾಡಿದ್ದವು; ಆದರೆ ಇವರುಗಳನ್ನು ಅನೇಕ ಇತರರು ಅನುಸರಿಸುತ್ತಿರುವ ಎಲ್ಲ ಲಕ್ಷಣಗಳೂ ಈಗ ಬಯಲಾಗುತ್ತಿವೆ. ಎ. ರಾಜಾ ಅವರದು ಇತ್ತೀಚಿನ ತಾಜಾ ಹಗರಣ. ಇವುಗಳು ಕೇವಲ ಅಪವಾದಗಳು ಎಂದು ವಾದಿಸುವುದು ನಮ್ಮ ತಾತ್ವಿಕ ದೃಷ್ಟಿಕೋನಕ್ಕೆ ಮಸಿಯನ್ನು ಅಂಟಿಸಿಕೊಳ್ಳುವ ಪ್ರಯತ್ನವಾದೀತು. ದಲಿತ-ಬಹುಜನ ನೇತಾರರು ನಡೆಸುತ್ತಾ ಬಂದಿರುವ ಇಂಥ ಹಗರಣಗಳ ಬಗ್ಗೆ ಸ್ಪಷ್ಟ ನಿಲುವನ್ನು ಸಾರ್ವಜನಿಕವಾಗಿ ತಾಳದೇ ಹೋದರೆ ತಲೆ ತಲಾಂತರದಿಂದ ಬ್ರಾಹ್ಮಣವಾದಿ ಶಕ್ತಿಗಳು ನಡೆಸಿಕೊಂಡು ಬಂದಿರುವ ದುಷ್ಟನಡೆಯನ್ನು ಖಂಡಿಸುವ ನೈತಿಕತೆ ನಮ್ಮಲ್ಲಿ ಉಳಿಯುವುದಿಲ್ಲ.

ಪ್ರತಿಯೊಬ್ಬರ ಸ್ವತ್ತೂ ಅವರವರ ಪರಿಶ್ರಮದಿಂದ ಸಂಪಾದಿಸಿದ್ದಾಗಿರಬೇಕು ಮತ್ತು ಅದು ಇತರರಿಗೆ ಉಪಯುಕ್ತವಾಗುವಂತೆ ಹೂಡಿಕೆಯಾಗಬೇಕು ಎಂಬುದನ್ನು ಗೌತಮ ಬುದ್ಧ ನಮಗೆ ನೈತಿಕತೆಯನ್ನು ನೀಡಿದ್ದಾನೆ. ಬುದ್ಧನು ಸಂಪೂರ್ಣವಾಗಿ ಖಾಸಗಿ ಆಸ್ತಿಗಳಿಕೆಯನ್ನು ವಿರೋಧಿಸಲಿಲ್ಲವಾದರೂ, ಬೇರೆಯವರ ಬೆವರಿನ ಪ್ರತಿಫಲವನ್ನು ದೋಚುವ, ಬೇರೆಯವರಿಗೆ ಮೋಸ ಮಾಡುವ ಮತ್ತು ಬೇರೆಯವರನ್ನು ಹಿಂಸಿಸುವ ಮೂಲಕ ಆಸ್ತಿ ಸಂಗ್ರಹಣೆಯನ್ನು ಸ್ಪಷ್ಟವಾಗಿ ವಿರೋಧಿಸಿದ. ಪೆರಿಯಾರ್, ಜ್ಯೋತಿಬಾಫುಲೆ ಮತ್ತು ಅಂಬೇಡ್ಕರ್ ಎಲ್ಲರೂ ನಮಗೆ ಮಾನ್ಯರು. ಇವರೆಲ್ಲರೂ ಬುದ್ಧನ ತಾತ್ವಿಕತೆಯ ಪರಿಪಾಲಕರು. ಡಿ.ಎಂ.ಕೆ. ಮತ್ತು ಬಿ.ಎಸ್. ಪಿ. ಪಕ್ಷಗಳು ಈ ನಾಯಕರ ಭಾವ-ಭಂಗಿಗಳೇ ಆಗಿವೆ ಎನ್ನುವುದಾದರೆ ಈ ಪಕ್ಷಗಳ ನೇತಾರರು ಅಧಿಕಾರಕ್ಕೆ ಬಂದಾಗ ಯಾವ ಸಾಮಾಜಿಕ, ಆರ್ಥಿಕ, ನೈತಿಕ, ತಾತ್ವಿಕ ನೀತಿ ಅನುಸರಿಸಿದರು ಎಂಬುದನ್ನು ಒರೆಗೆ ಹಚ್ಚಬೇಕಾಗುತ್ತದೆ.

ಒಬ್ಬ ವ್ಯಕ್ತಿಯ ಆಸ್ತಿಯು ಅವರ ಕುಟುಂಬದ ಶ್ರಮಶಕ್ತಿಗೆ ಅನು ಗುಣವಾಗಿರಬೇಕು ಎಂದು ಕಾರ್ಲ್ ಮಾರ್ಕ್ಸ್ ಕೂಡ ಹೇಳಿದ್ದಾನೆ. ಕುಟುಂಬದ ಹೊರಗಿನ ವ್ಯಕ್ತಿಯ ಶ್ರಮದಿಂದ ಅಥವಾ ಕುಟುಂಬದ ಶ್ರಮಶಕ್ತಿಗಿಂತ ಹೆಚ್ಚಿನ ಪ್ರಮಾಣದ ಆಸ್ತಿಯನ್ನು ಒಂದು ಕುಟುಂಬ ಹೊಂದಿದರೆ ಅದು ಶೋಷಣೆಯಲ್ಲದೇ ಬೇರೇನೂ ಅಲ್ಲ ಎಂದಿದ್ದಾನೆ. ಮಾರ್ಕ್ಸ್ ಪ್ರಕಾರ, ಇತ್ತೀಚಿನ ಭ್ರಷ್ಟಾಚಾರ ಹಗರಣಗಳಿಗೆ ಹೆಸರುವಾಸಿ ಯಾಗಿರುವ ಎ. ರಾಜಾ, ಸುರೇಶ್ ಕಲ್ಮಾಡಿ, ಅಶೋಕ್ ಚೌಹಾಣ್, ಯಡಿಯೂರಪ್ಪ ಮುಂತಾಗಿ ಎಲ್ಲರೂ ಈ ರಾಷ್ಟ್ರದ ಬೃಹತ್ ಶ್ರಮಿಕ ವರ್ಗಕ್ಕೆ ಸೇರಿದ್ದ ರಾಷ್ಟ್ರೀಯ ಸಂಪತ್ತನ್ನು ಕೊಳ್ಳೆ ಹೊಡೆದಿದ್ದಾರೆ.

ಭಾರಿ ಮೊತ್ತದ ಆರ್ಥಿಕ ಭ್ರಷ್ಟಾಚಾರದಲ್ಲಿ ಆರೋಪಿಗಳಾಗಿರುವ ವರಿಗೆ ವಿನಾಯ್ತಿ ನೀಡುವುದು ಅಥವಾ ಅತಿ ಕಡಿಮೆ ಶಿಕ್ಷೆ ನೀಡುವುದಕ್ಕೆ ನಮ್ಮ ಚಾರಿತ್ರಿಕ ಸಂಸ್ಕೃತಿಯಲ್ಲೇ ಕಾರಣವಿದೆ. ಆದರೆ ಅದನ್ನು ಬದಲಾಯಿಸುವ ಕಾಲ ಬಂದಿಲ್ಲವೇ? ಅಧಿಕಾರದಲ್ಲಿರುವ ಮೇಲುಜಾತಿಯವರು ಭ್ರಷ್ಟಾಚಾರ ನಡೆಸಿದರೆ ಅವರು ಕಠಿಣ ಶಿಕ್ಷೆಗೆ ಗುರಿಯಾಗಬೇಕು ಎಂಬುದು ಸರಿಯೆ. ಆದರೆ, ದಲಿತ-ಬಹುಜನರು ಅಧಿಕಾರಕ್ಕೆ ಬಂದಿರುವುದು ತಮ್ಮ ಸ್ವಾರ್ಥ ಸಾಧನೆಗಾಗಿ ಅಲ್ಲದೇ ದಲಿತ-ಬಹುಜನರ ಅಭ್ಯುದಯದ ಸಾಧನೆಗೆ ಎಂಬುದು ಸಾರ್ವಜನಿಕವಾಗಿ ಘೋಷಿತ ನೀತಿಯಾಗಿರುವ ಕಾರಣ, ಅವರು ಭ್ರಷ್ಟಾಚಾರ ನಡೆಸಿದರೆ ಅವರನ್ನು ಡಬಲ್ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು; ಎಂದು ಬಿ.ಎಸ್.ಪಿ. ಸಂಸ್ಥಾ ಪಕ ಕಾನ್ಷೀರಾಂ ಅವರು ಹೇಳುತ್ತಿದ್ದುದು ಈಗ ನೆನಪಿಗೆ ಬರುತ್ತದೆ.

ಪ್ರಸ್ತುತ, ಮಾರುಕಟ್ಟೆ ಆಧಾರಿತ ಆರ್ಥಿಕ ನೀತಿಯು ಸಮಾಜದ ಎಲ್ಲರನ್ನೂ ಭ್ರಷ್ಟಾಚಾರದ ಕೂಪದಲ್ಲಿ ದೂಡುತ್ತಿದೆ ಮತ್ತು ಖಾಸಗಿ ಆಸ್ತಿಯನ್ನು ಮಾಡಿಕೊಳ್ಳುವಂತೆ ಕುಮ್ಮಕ್ಕು ನೀಡುತ್ತಿದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ರಾಜಕಾರಣದಲ್ಲಿರುವ ಜನರ ಸಾಮಾನ್ಯ ಬದುಕಿನಲ್ಲಿ ಭ್ರಷ್ಟಾಚಾರ ಎಂಬುದು ಒಂದು ಅನಿವಾರ್ಯ ಭಾಗವಾಗಿ ಬಿಟ್ಟಿದೆ. ನಮ್ಮ ಪ್ರಜಾಪ್ರಭುತ್ವವು ದುರ್ಬಲವಾಗಿದೆ ಅಷ್ಟೇ ಅಲ್ಲ, ಅದರ ಮೂಲಾಧಾರ ಭ್ರಷ್ಟಾಚಾರವಾಗಿದೆ. ಆದರೂ ಈ ಮಾತನ್ನು ಹೇಳುವ ಮೂಲಕ ಡಿ.ಎಂ.ಕೆ.ಯಂಥ ಪಕ್ಷದ ಒಬ್ಬ ದಲಿತ ರಾಜಕಾರಣಿಯ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಕ್ಷಣಕಾಲ ಕೂಡ ಕ್ಷಮಿಸಲಾಗದು.

ಭಾರತದಲ್ಲಿ ಭ್ರಷ್ಟಾಚಾರಕ ಮೂಲಬಿಂದು, 'ದಕ್ಷಿಣೆ' ಮಾತ್ರದಿಂದಲೇ ಗೌರವಾನ್ವಿತರೆನಿಸಿಕೊಂಡ ಬ್ರಾಹ್ಮಣವಾದಿ ಬೌದ್ಧಿಕತೆ ಎಂಬುದು ಡಾ.ಬಿ.ಆರ್. ಅಂಬೇಡ್ಕರ್ ಅವರ ಅಭಿಮತ. ಅದನ್ನು ಮುಂದುವರೆಸಿಕೊಂಡು ಬಂದವರೂ ಮೊದಲು ಬ್ರಾಹ್ಮಣವಾಗಿ ಮೌಲ್ಯಗಳನ್ನು ಎತ್ತಿ ಹಿಡಿದುಕೊಂಡು ಬಂದ ಬ್ರಾಹ್ಮಣರೇ. ಉತ್ಪಾದಕ ಸಮುದಾಯಗಳಿಂದ ಬಂದು ರಾಜಕಾರಣವನ್ನು ಪ್ರವೇಶಿಸಿರುವವರೂ, 'ಮಾರ್ಗ ಯಾವುದೇ ಇರಲಿ, ಹೆಚ್ಚು ಗಳಿಸಿದಷ್ಟೂ ಹೆಚ್ಚು ಗೌರವವನ್ನು ಪಡೆಯಬಹುದು' ಎಂಬ ಬ್ರಾಹ್ಮಣವಾದಿ ಬೋಧನೆಯನ್ನು ಪಡೆದವರೇ ಆಗಿರುವುದು ಕಾಕತಾಳೀಯವೇನಲ್ಲ.

ಇಂದು ದಲಿತ-ಬಹುಜನ ಸಮುದಾಯಕ್ಕೆ ಅಂಬೇಡ್ಕರ್-ಜಗಜೀವನ ರಾಂ ಒಂದು ಮಾದರಿಯಾಗಿ ಕಂಡರೆ, ಪೆರಿಯಾರ್‌ವಾದಿ ಪಾರ್ಟಿಯಿಂದ ರಾಜಕಾರಣವನ್ನು ಪ್ರಾರಂಭಿಸಿದ ಎ. ರಾಜಾ ಇನ್ನೊಂದು ಮಾದರಿಯಾಗಿ ನಿಂತಿದ್ದಾರೆ. ಬುದ್ಧ, ಫುಲೆ, ಅಂಬೇಡ್ಕರ್, ಪೆರಿಯಾರ್ ನೀಡಿದ ನೈತಿಕ ಸಾಂಸ್ಕೃತಿಕತೆಯ ತಳಹದಿಯನ್ನು ನಾವು ಇಂದು ಕಳೆದುಕೊಂಡಿದ್ದೇವೆ. ರಾಜಕಾರಣದ ರೂಪ, ಗುಣಲಕ್ಷಣ ಮತ್ತು ಅದರ ಬಳಕೆ ಹಾಗೂ ನೈತಿಕ ಸಾಂಸ್ಕೃತಿಕತೆಯ ನಡುವಣ ಅನುರೂಪವಾದ ಬೆಸುಗೆಯನ್ನು ಸಾಧಿಸುವ ಮರುಚಿಂತನೆಗೆ ಚಾಲನೆ ನೀಡಬೇಕಿದೆ. ಕಮ್ಯುನಿಸ್ಟರೂ ಸೇರಿದಂತೆ ಎಲ್ಲಾ ರಾಜಕಾರಣಿಗಳು ಭ್ರಷ್ಟಗೊಳ್ಳದಿರುವ ಸಾಂಸ್ಕೃತಿಕ ನೀತಿತತ್ವವನ್ನು ಪಾಲಿಸದೇ ಹೋದರೆ, ಈ ದೇಶ ಇನ್ನಷ್ಟು ಅಧ:ಪತನಗೊಂಡೀತು?

□

'ಸ್ಫೂರ್ತಿಧಾಮ' ಕೊಡಮಾಡುವ 'ಬೋಧಿ ವೃಕ್ಷ' ಮತ್ತು 'ಬೋಧಿ ವರ್ಧನ' ಪ್ರಶಸ್ತಿಗಳು

'ಸ್ಫೂರ್ತಿಧಾಮ'ವನ್ನು ನಿರ್ವಹಿಸುತ್ತಿರುವ 'ಅಂಬೇಡ್ಕರ್ ಶತಮಾನೋತ್ಸವ ಸಮಿತಿ ಟ್ರಸ್ಟ್' ಏಪ್ರಿಲ್ ೧೪, ೨೦೧೧ ರಂದು ನಡೆಯಲಿರುವ 'ಅಂಬೇಡ್ಕರ್ ಹಬ್ಬ'ದಲ್ಲಿ ನೀಡಲಾಗುವ ಒಂದು ಲಕ್ಷ ರೂ. ಮೌಲ್ಯದ ಒಂದು 'ಬೋಧಿ ವೃಕ್ಷ' ಮತ್ತು ತಲಾ ೨೫ ಸಾವಿರ ರೂ. ಮೌಲ್ಯದ ಐದು 'ಬೋಧಿ ವರ್ಧನ' ಪ್ರಶಸ್ತಿಗಳಿಗಾಗಿ ಅರ್ಹ ವ್ಯಕ್ತಿಗಳ ಆಯ್ಕೆಗೆ ಸೂಕ್ತ ಪ್ರಸ್ತಾವನೆ (Proposal)ಗಳನ್ನು ಆಹ್ವಾನಿಸುತ್ತಿದೆ.

ಈ ಪ್ರಶಸ್ತಿಗಳು ಹಲವು ಕಾರಣಗಳಿಗಾಗಿ ವಿಭಿನ್ನವಾದವೂ ಹೌದು, ವಿಶಿಷ್ಟವಾದವೂ ಹೌದು. ನಮ್ಮಲ್ಲಿ ರಾಷ್ಟ್ರ ಮತ್ತು ರಾಜ್ಯಮಟ್ಟದ ಸರ್ಕಾರಿ, ಅರೆಸರ್ಕಾರಿ, ಪ್ರತಿಷ್ಠಿತ ಅಕಾಡೆಮಿಗಳು, ಸಂಘ-ಸಂಸ್ಥೆಗಳು ಕೊಡುವ ಅನೇಕ ಪ್ರಶಸ್ತಿಗಳಿವೆ. ಆದರೆ, ಆರ್ಥಿಕ, ಸಾಮಾಜಿಕ, ರಾಜಕೀಯ ಅಥವ ಶೈಕ್ಷಣಿಕ ಬಂಡವಾಳವಿಲ್ಲದೆ ತಳಸ್ತರದವರ ಬದುಕನ್ನು ಗುಣಾತ್ಮಕವಾಗಿ ವಿಸ್ತರಿಸುವ ಕಾರ್ಯದಲ್ಲಿ ತೊಡಗಿ ಕೊಂಡಿರುವವರನ್ನು ಗೌರವಿಸುವ ಪ್ರಶಸ್ತಿಗಳು ನಮ್ಮಲಿಲ್ಲ. "A great man is different from an eminent one, in that he is ready to be a servant of the soceity" ಎಂದು ಅಂಬೇಡ್ಕರ್ ಹೇಳಿದ ಈ ಮಾತುಗಳು ತಳಸ್ತರದವರ ಚಲನೆಗೆ ತಳಪಾಯವಾಗಬೇಕಾದ ಸೇವೆಯ ಮೌಲ್ಯವನ್ನು ಎತ್ತಿ ಹಿಡಿಯುತ್ತದೆ.

೨೦೧೦ರ 'ಅಂಬೇಡ್ಕರ್ ಹಬ್ಬ'ದಲ್ಲಿ ಬೆಂಗಳೂರಿನ 'ಮಹಾಬೋಧಿ ಸೊಸೈಟಿ' ಸ್ಥಾಪಕರಾದ ಬೌದ್ಧ ಬಿಕ್ಕು ಆಚರಿಯ ಬುದ್ಧರಕ್ಖಿತ ಹಾಗೂ ೨೦೧೦ರಲ್ಲಿ ಖ್ಯಾತ ಅಂಕಣಕಾರ ಚಂದ್ರಭಾನ್ ಪ್ರಸಾದ್ ಅವರು 'ಬೋಧಿವೃಕ್ಷ' ಪ್ರಶಸ್ತಿಯನ್ನು ಪಡೆದುಕೊಂಡರು. ಕಾಗೋಡು ಹೋರಾಟದ ರೂವಾರಿ ಸಾಗರದ ಗಣಪತಿಯಪ್ಪ, ಜಲ ತಜ್ಞ ಕೋಲಾರದ ಕೆ. ನಾರಾಯಣ ಸ್ವಾಮಿ, ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ತಳಸಮುದಾಯದ ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡಿದ ಕನಕಪುರದ ಶ್ರೀ ಶ್ರೀನಿವಾಸಯ್ಯನವರು ಹಾಗೂ ಸ್ವತಃ ದೇವದಾಸಿಯಾಗಿದ್ದರೂ, ದೇವದಾಸಿ ಪದ್ಧತಿಯ ವಿರುದ್ಧ ಹೋರಾಡಿದ ಬಿಜಾಪುರದ ಶ್ರೀಮತಿ ಮಹಾದೇವಮ್ಮ ಅವರು 'ಬೋಧಿವರ್ಧನ' ಪ್ರಶಸ್ತಿಯನ್ನು ಪಡೆದುಕೊಂಡ ಕೆಲವರು.

ಬುದ್ಧ, ಮೋಕ್ಷವನ್ನು ಹುಡುಕುತ್ತಾ ಸಮುದಾಯದ ಪ್ರೀತಿಯ ಬಂಧನದಲ್ಲಿ ಅದನ್ನು ಕಂಡುಕೊಂಡ. ನಮ್ಮ ಕಾಲಘಟ್ಟವೂ ಒಂದು ಆಧ್ಯಾತ್ಮಿಕ ಪಯಣಕ್ಕೆ ಹಾತೊರೆಯುತ್ತಿದೆ. ಈ ಆಧ್ಯಾತ್ಮಿಕ ಪಯಣ ಆರಂಭವಾಗುವುದೇ ಈ ನೆಲದ ಬದುಕಿನೊಟ್ಟಿಗಿನ ಸಾವಯವ ಸಂಬಂಧದೊಂದಿಗೆ.

ಈ ಸಾವಯವ ಸಂಬಂಧವನ್ನು ಸ್ಥಾಪಿಸಿಕೊಂಡವರನ್ನು ಸನ್ಮಾನಿಸುವ ಮೂಲಕ 'ಸ್ಫೂರ್ತಿಧಾಮ' ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳಬಯಸುತ್ತದೆ. ಇಂಥವರು ನಿಮಗೆ ತಿಳಿದಿದ್ದರೆ, ದಯವಿಟ್ಟು ನಮಗೆ ಅವರ ಬಗ್ಗೆ ಪೂರ್ಣಮಾಹಿತಿಯನ್ನು ನೀಡಿ. ಅಥವಾ ನೀವೇ ಅಂಥವರಾಗಿದ್ದರೆ, ದಯವಿಟ್ಟು ನಮ್ಮನ್ನು ಸಂಪರ್ಕಿಸಿ.

ಪ್ರಸ್ತಾವನೆಗಳನ್ನು ಕಳುಹಿಸಲು ಕಡೇ ದಿನಾಂಕ 31.03.2011

ವಿಳಾಸ: 'ಸ್ಫೂರ್ತಿಧಾಮ', ಅಂಜನಾನಗರ,
ಮಾಗಡಿ ರಸ್ತೆ, ವಿಶ್ವನೀಡಂ ಅಂಚೆ,
ಬೆಂಗಳೂರು-೫೬೦ ೦೯೧
ದೂರವಾಣಿ: ೦೮೦-೨೩೪೮೦೨೬೮



ಬೋಧಿವೃಕ್ಷ



ಬೋಧಿವರ್ಧನ

ಮಹಿಳಾ ಚಳವಳಿಯ ಮುಂದಿನ ಸವಾಲುಗಳು

ಮ. ಶ್ರೀ. ಮುರಳಿ ಕೃಷ್ಣ

ನಮ್ಮ ರಾಷ್ಟ್ರದಲ್ಲಿ ಮಹಿಳೆಯರು ಅನೇಕ ರಂಗಗಳಲ್ಲಿ ದುಡಿಯುತ್ತಿದ್ದಾರೆ. ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು, ಶಿಕ್ಷಣ ತಜ್ಞೆಯರು, ವಿಜ್ಞಾನಿಗಳು, ವಿತ್ತ ಕ್ಷೇತ್ರದಲ್ಲಿ ದಳ್ಳಾಳಿಗಳು, ಬಯೋಕೆಮಿಸ್ಟ್‌ಗಳು, ಮ್ಯಾನೇಜರು, ವಿಮಾನ ಚಾಲಕಿಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮ ಛಾಪನ್ನೂ ಒತ್ತಿದ್ದಾರೆ. ಕೆಲವು ದಶಕಗಳ ಹಿಂದೆ, ದಿನದ ಪಾಳಿಯಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯರು ಕಳೆದ ಕೆಲವು ವರ್ಷಗಳಿಂದ ರಾತ್ರಿ ಪಾಳಿಯಲ್ಲೂ ಕಾರ್ಯ ಮಾಡುತ್ತಿದ್ದಾರೆ. ರಾಜಕೀಯ ಕ್ಷೇತ್ರದಲ್ಲೂ 'ಸೈ' ಎನಿಸಿಕೊಂಡಿದ್ದಾರೆ. ನಮ್ಮ ರಾಷ್ಟ್ರದ ಪ್ರಥಮ ಪ್ರಜೆಯೇ ಮಹಿಳೆಯಾಗಿದ್ದಾರೆ. ಪಂಚಾಯತಿಗಳಲ್ಲಿ ಅವರ ಪ್ರತಿನಿಧಿತ್ವ ಶೆ.೩೩ರಷ್ಟು ಇರಲೇಬೇಕೆಂದು ನಿಗದಿಪಡಿಸಲಾಗಿದೆ. ಮೈಕ್ರೊ ಕ್ರೆಡಿಟ್ ಕ್ಷೇತ್ರದಲ್ಲಿ ಅವರ ಪಾತ್ರ ಗಮನೀಯ.

ಕಳೆದ ಒಂದು ದಶಕದಲ್ಲಿ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದಂತೆ ಹಲವು ವಿಷಯಗಳು ಚರ್ಚೆಗೆ ಒಳಗಾಗಿವೆ; ವಿಶ್ಲೇಷಣೆಗೂ ಪಕ್ಕಾಗಿವೆ. ಭಾರತ ಸರ್ಕಾರ 2001ನೇ ವರ್ಷವನ್ನು ಮಹಿಳಾ ಸಬಲೀಕರಣದ (ಸ್ವಶಕ್ತಿ) ವರ್ಷವೆಂದು ಘೋಷಿಸಿತು. ಹಾಗೆಯೇ ಅದೇ ವರ್ಷ ಮಹಿಳಾ ಸಬಲೀಕರಣದ ಬಗೆಗೆ ಒಂದು ರಾಷ್ಟ್ರೀಯ ನೀತಿಯನ್ನು ಜಾರಿ ಮಾಡಿತು.

ಪ್ರಸ್ತುತ ನಮ್ಮ ರಾಷ್ಟ್ರದಲ್ಲಿ ಮಹಿಳೆಯರು ಅನೇಕ ರಂಗಗಳಲ್ಲಿ ದುಡಿಯುತ್ತಿದ್ದಾರೆ. ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು, ಶಿಕ್ಷಣ ತಜ್ಞೆಯರು, ವಿಜ್ಞಾನಿಗಳು, ವಿತ್ತ ಕ್ಷೇತ್ರದಲ್ಲಿ ದಳ್ಳಾಳಿಗಳು, ಬಯೋಕೆಮಿಸ್ಟ್‌ಗಳು, ಮ್ಯಾನೇಜರು, ವಿಮಾನ ಚಾಲಕಿಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮ ಛಾಪನ್ನೂ ಒತ್ತಿದ್ದಾರೆ. ಕೆಲವು ದಶಕಗಳ ಹಿಂದೆ, ದಿನದ ಪಾಳಿಯಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯರು ಕಳೆದ ಕೆಲವು ವರ್ಷಗಳಿಂದ ರಾತ್ರಿ ಪಾಳಿಯಲ್ಲೂ ಕಾರ್ಯ ಮಾಡುತ್ತಿದ್ದಾರೆ. ರಾಜಕೀಯ ಕ್ಷೇತ್ರದಲ್ಲೂ 'ಸೈ' ಎನಿಸಿಕೊಂಡಿದ್ದಾರೆ. ನಮ್ಮ ರಾಷ್ಟ್ರದ ಪ್ರಥಮ ಪ್ರಜೆಯೇ ಮಹಿಳೆಯಾಗಿದ್ದಾರೆ. ಪಂಚಾಯತಿಗಳಲ್ಲಿ ಅವರ ಪ್ರತಿನಿಧಿತ್ವ ಶೆ.33ರಷ್ಟು ಇರಲೇಬೇಕೆಂದು ನಿಗದಿಪಡಿಸಲಾಗಿದೆ. ಮೈಕ್ರೊ ಕ್ರೆಡಿಟ್ (ಸಣ್ಣ ಸಾಲಗಳು) ಕ್ಷೇತ್ರದಲ್ಲಿ ಅವರ ಪಾತ್ರ ಗಮನೀಯ.

ಇದೊಂದು ನೈಜ ಚಿತ್ರಣವೆ? ಅಥವಾ ಇದಕ್ಕೆ ವಿರುದ್ಧವಾಗಿ ಮತ್ತೊಂದು ಮುಖ ಇದೆಯೆ? ಈ ಮುಖ ಭಾರತ ಯುಎನ್‌ಡಿಪಿಯ ಮಾನವ ಅಭಿವೃದ್ಧಿಯ ಸೂಚ್ಯಂಕದಲ್ಲಿ 177 ದೇಶಗಳ ಪೈಕಿ 128ನೇ ಸ್ಥಾನ ಪಡೆಯಲು ಕಾರಣವಾಗಿದೆಯೆ?

ನಮ್ಮ ರಾಷ್ಟ್ರದ ಸಂವಿಧಾನದಲ್ಲಿ ಎಲ್ಲ ಮಹಿಳೆಯರಿಗೆ ಸಮಾನತೆಯನ್ನು ಖಾತರಿ ಮಾಡಲಾಗಿದೆ (ಅನುಚ್ಛೇದ 14), ಹಾಗೆಯೆ ಪ್ರಭುತ್ವದಿಂದ ತಾರತಮ್ಯ ರಹಿತ ಧೋರಣೆ [ಅನುಚ್ಛೇದ 15(1)] ಅವಕಾಶಗಳಲ್ಲಿ ಸಮಾನತೆ (ಅನುಚ್ಛೇದ 16), ಸಮಾನ ಕೆಲಸಕ್ಕೆ ಸಮಾನ ವೇತನ [ಅನುಚ್ಛೇದ 39(ಡಿ)], ಮಹಿಳೆಯರು ಮತ್ತು ಮಕ್ಕಳ ವಿಷಯದಲ್ಲಿ ಮಾಡಬಹುದಾದ ವಿಶೇಷ ಉಪಬಂಧಗಳು (Pronsns) ಮತ್ತು ಮಹಿಳೆಯರ ಗೌರವದ ಬಗೆಗೆ ಅಪಮಾನ ಮಾಡುವಂಥ ಪದ್ಧತಿಗಳ ನಿರಾಕರಣೆ [ಅನುಚ್ಛೇದ 15(3)] ಕೆಲಸದ ಸಂದರ್ಭದಲ್ಲಿ ನ್ಯಾಯಯುತ ಮತ್ತು ಮಾನವೀಯ ಸ್ಥಿತಿ ಮತ್ತು ಪ್ರಸೂತಿ ಪರಿಹಾರಗಳು [ಅನು ಚ್ಛೇದ42] ಮುಂತಾದ ಮಹಿಳಾ ಪರವಾದ ಅಂಶಗಳನ್ನು ಸೇರಿಸಲಾಗಿದೆ.

ಚಾಲ್ತಿಯಲ್ಲಿರುವ ಶಾಸನಗಳಿಗೆ ತಿದ್ದುಪಡಿ ಮಾಡುವ ಮೂಲಕ ಮತ್ತು ಕೆಲವು ನೂತನ ಶಾಸನಗಳನ್ನು ಮಂಡಿಸುವ ಮೂಲಕ ಮಹಿಳಾ ಹಕ್ಕುಗಳನ್ನು ಎತ್ತಿಹಿಡಿಯುವಂಥ ವಾತಾವರಣ ಸೃಷ್ಟಿಯಾಗಿರುವುದು ಮಹಿಳಾ ಸಂಘಟನೆಗಳ ಮತ್ತಿತರ ಪುರೋಗಾಮಿ ರಾಜಕೀಯ ಪಕ್ಷಗಳು ಮತ್ತು ಗುಂಪುಗಳ ಕೊಡುಗೆಗಳು. ಆದರೆ ಆಂತರಿಕ ಹಿಂಸಾ ಕಾಯಿದೆ (The Domentli Voilence Act)ಯಂಥ ಸಾಧನವಿದ್ದರೂ ವೈಯಕ್ತಿಕ ಮತ್ತು ಸಾರ್ವಜನಿಕ ನೆಲೆಯಲ್ಲಿ ಮಹಿಳೆಯರ ಮೇಲಿನ ಹಿಂಸಾ ಕೃತ್ಯಗಳು ಕಡಿಮೆಯಾಗಿಲ್ಲ. 'ಇವು ಸಂವಿಧಾನದತ್ತ ಮಹಿಳಾ ಹಕ್ಕುಗಳಿಗೆ ಚ್ಯುತಿ' ತರುತ್ತಿದೆ. ಇದೊಂದು ದುರಂತದ ವಿಷಯವೇ ಸರಿ.

ನಮ್ಮ ಸಂವಿಧಾನ ಜಾರಿಯಾದಾಗ, ಅದರಲ್ಲಿ ಸಮಾನತೆಗೆ ಸಂಬಂಧಿಸಿದಂತೆ ಅನೇಕ ವಾಗ್ದಾನಗಳಿದ್ದವು. ಆದುದರಿಂದ ಭಾರತ ಸ್ವಾತಂತ್ರ್ಯಗಳಿಸಿದ ಶೈಶವದಲ್ಲಿ, ಮಹಿಳಾ ಸಂಘಟನೆಗಳು/ಗುಂಪುಗಳು ಸಮಾನತೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಿಲ್ಲ. 1961ರಲ್ಲಿ ವರದಕ್ಷಿಣೆಯನ್ನು ಕಾನೂನುಬಾಹಿರವೆಂದು ಘೋಷಿಸಿದರೂ ಮಹಿಳಾಪರವಾದ ಕ್ರಿಯಾಶೀಲತೆ ಸಕ್ರಿಯವಾದದ್ದು 1970ರ ದಶಕದ ಕೊನೆಯ ವರ್ಷಗಳಲ್ಲಿ. ಒಂದು ರಾಷ್ಟ್ರಮಟ್ಟದ ವಿಷಯವಾಗಿ ಮಹಿಳಾ ಸಂಘಟನೆಗಳು/ಗುಂಪುಗಳನ್ನು ಒಗ್ಗೂಡಿಸಿದ್ದು ಮಥುರಾ ರೇಪ್ ಪ್ರಕರಣ. ಪೋಲಿಸ್ ಠಾಣೆಯೊಂದರಲ್ಲಿ ಯುವತಿಯೋರ್ವಳ ಮೇಲೆ ಅತ್ಯಾಚಾರ ಜರುಗಿತು. ಇದಕ್ಕೆ ಸಂಬಂಧಪಟ್ಟಂಥ ಅಪಾದಿತರನ್ನು ಖುಲಾಸೆ ಮಾಡಲಾಯಿತು. ಇದು 1970–80ರಲ್ಲಿ ವ್ಯಾಪಕ ಪ್ರತಿಭಟನೆಗಳಿಗೆ ಕಾರಣವಾಯಿತು.

ಮಾಧ್ಯಮಗಳೂ ಸೂಕ್ತವಾಗಿ ಪ್ರತಿಕ್ರಿಯಿಸಿದವು. ಅಂದಿನ ಕೇಂದ್ರ ಸರ್ಕಾರ ಒತ್ತಡಗಳಿಗೆ ಮಣಿದು ಸಾಕ್ಷ್ಯಾಧಾರಗಳ ಕಾಯಿದೆ (ಸಾಕ್ಷ್ಯ ಅಧಿನಿಯಮ) (The Evidence Act)ದಂಡ ಪ್ರಕ್ರಿಯೆಯ ಕಾನೂನು (The criminal Procedure code) ಮತ್ತು ಭಾರತ ದಂಡ ಸಂಹಿತೆ(The Indian Pinal Code)ಗಳಿಗೆ ತಿದ್ದುಪಡಿಗಳನ್ನು ಮಾಡಿತು. ತರುವಾಯ, ಹೆಣ್ಣು ಶಿಶುಹತ್ಯೆ, ಲಿಂಗ ತಾರತಮ್ಯ, ಮಹಿಳಾ ಆರೋಗ್ಯ ಮತ್ತು ಮಹಿಳಾ ಸಾಕ್ಷರತೆಯಂಥ ಗಹನ ವಿಷಯ

ಗಳ ಬಗೆಗೆ ದನಿ ಎತ್ತುವ ಮತ್ತು ಕ್ರಿಯಾಶೀಲವಾಗುವ ನಿಟ್ಟಿನಲ್ಲಿ ಸ್ವಾಯತ್ತ ಮಹಿಳಾ ಸಂಘಟನೆಗಳು/ ಗುಂಪುಗಳು ಒಂದುಗೂಡಿದವು. ಷರಿಯತ್ ಕಾನೂನಿನಲ್ಲಿರುವ ಮಹಿಳಾ ಹಕ್ಕುಗಳು, ಮತ್ತು ತಲಾಖ್ ಪದ್ಧತಿಯ ಕುರಿತು ಇದ್ದ/ಇರುವ ಮೂಲಭೂತವಾದಿ ವ್ಯಾಖ್ಯಾನಗಳನ್ನು ಪ್ರಶ್ನೆ ಮಾಡಿದವು.

ಇದಕ್ಕೆ ಸಂಬಂಧಿಸಿದಂತೆ ಒಂದು ದೃಷ್ಟಾಂತವನ್ನು ನೀಡಬಹುದು. 2006ರಲ್ಲಿ ಇಮ್ರಾನ ಎಂಬ ಮುಸ್ಲಿಂ ತರುಣಿ ಆಕೆಯ ಮಾವನಿಂದ ಅತ್ಯಾಚಾರಕ್ಕೆ ಒಳಗಾದಳು. ಕೆಲವು ಮುಸಲ್ಮಾನ ಧರ್ಮಗುರುಗಳು ಆಕೆ ತನ್ನ ಮಾವನನ್ನು ವಿವಾಹವಾಗಬೇಕೆಂದು ಅಣತಿ ನೀಡಿದರು. ಇದರ ವಿರುದ್ಧ ಪ್ರತಿಭಟನೆಗಳು ಜರುಗಿದವು. ಕೊನೆಯಲ್ಲಿ, ತಪ್ಪಿತಸ್ಥ ಮಾವನಿಗೆ 10 ವರ್ಷಗಳ ಕಾರಾಗೃಹ ವಾಸದ ದಂಡನೆ ವಿಧಿಸಲ್ಪಟ್ಟಿತು.

ಇದನ್ನು ಅನೇಕ ಮಹಿಳಾಪರ ಸಂಘಟನೆಗಳು ಮತ್ತು ಅಖಿಲ ಭಾರತ ಮುಸಲ್ಮಾನ ವೈಯಕ್ತಿಕ ಕಾನೂನು ಮಂಡಲಿಯಂತ ಸಂಸ್ಥೆಗಳು ಸ್ವಾಗತಿಸಿದವು. ಆದರೆ ಪರಿಚ್ಛೇದ 498ಎ ಅನ್ವಯ ಎಷ್ಟು ರೇಪ್ ಪ್ರಕರಣಗಳಲ್ಲಿ ಅಪರಾಧ ಸ್ಥಾಪನೆಗೊಂಡಿದೆ ಎಂಬುದು ಯೋಚನಾರ್ಹ ವಿಷಯ. ರಾಷ್ಟ್ರೀಯ ಅಪರಾಧ ದಾಖಲೆಗಳ ವಿಭಾಗದ ವರದಿಯೊಂದರ ಅನ್ವಯ ನಮ್ಮ ರಾಷ್ಟ್ರದಲ್ಲಿ ಮಹಿಳೆಯರ ಮೇಲೆ ಜರಗುವ ಅಪರಾಧಗಳು ವರ್ಷದಿಂದ ವರ್ಷಕ್ಕೆ ಶೇ.15 ವೃದ್ಧಿಸುತ್ತಿವೆ. ಇದು ನಿಜಕ್ಕೂ ಅತಂಕಕಾರಿ ಬೆಳವಣಿಗೆ. ಇನ್ನೊಂದೆಡೆ ಮಹಿಳೆ ಎದುರಿಸುತ್ತಿರುವ ಹಿಂಸೆ ಕುಟುಂಬದ ಖಾಸಗಿ ವಿಷಯವಾಗಿ ಮಾತ್ರ ಉಳಿದಿಲ್ಲ. ಇಂದು ವೈವಾಹಿಕ ಅತ್ಯಾಚಾರವನ್ನು ಅಪರಾಧವೆಂದು ಪರಿಗಣಿಸಲ್ಪಡುತ್ತಿದೆ ಎಂಬ ವಿಷಯವನ್ನು ನಾವು ಗಮನಿಸಬೇಕು.

1980ರ ದಶಕದಲ್ಲಿ ಭಾರತ ಸರ್ಕಾರ ಮಹಿಳೆಯರು ಕಲ್ಯಾಣ ಯೋಜನೆಗಳ ಫಲಾನುಭವಿಗಳೆಂದು ಮಾತ್ರ ಪರಿಗಣಿಸದೆ, ಅವರು ಅಭಿವೃದ್ಧಿ ಪ್ರಕ್ರಿಯೆಯ ಪ್ರಮುಖ ಪಾತ್ರಧಾರಿಗಳೆಂದು ಗುರುತಿಸಿತು. ಇದರ ಪರಿಣಾಮವಾಗಿ ಮಹಿಳಾ ಕಲ್ಯಾಣ ವಿಭಾಗವನ್ನು 'ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ'ಯೆಂದು ಪುನರ್ ನಾಮಕರಣ ಮಾಡಿತು. ಮಹಿಳೆಯರಿಗೆ ಆರ್ಥಿಕ ಅವಕಾಶಗಳನ್ನು ಒದಗಿಸುವ ನಿಟ್ಟಿನಲ್ಲಿ ಹೊಸ ಕಾರ್ಯಕ್ರಮಗಳನ್ನು ಜಾರಿಮಾಡಿತು. ಅನೇಕ ರಾಜ್ಯಗಳು ಸ್ಥಳೀಯ ಸರ್ಕಾರದ ಮಟ್ಟದಲ್ಲಿ ಮಹಿಳೆಯರಿಗಾಗಿ ಮೀಸಲಾತಿ ನೀಡುವಂತ ಪ್ರಯೋಗಗಳಿಗೆ ಮುಂದಾದವು. ಇದು ರಾಷ್ಟ್ರೀಯ ರಾಜಕೀಯ ಮಟ್ಟದಲ್ಲಿ ಮಹಿಳಾ ಪ್ರಾತಿನಿಧ್ಯಕ್ಕೆ ಸೂಕ್ತ ಮೀಸಲಾತಿ ವ್ಯವಸ್ಥೆಯನ್ನು ಜಾರಿ ಮಾಡುವ ದಿಶೆಯಲ್ಲಿ ಚಳುವಳಿ ಮಾಡಲು ಚಾಲನೆ ನೀಡಿತು. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಮಹಿಳಾ ಮೀಸಲಾತಿಗೆ ಸೂಕ್ತ ಸಾಂವಿಧಾನಿಕ ತಿದ್ದುಪಡಿಗಳನ್ನು ತರುವಂಥ ವಿಷಯದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಒಮ್ಮತ ವ್ಯಕ್ತಪಡಿಸಿದವು.

ಆದರೆ ಸಂಸತ್ ಮಟ್ಟದಲ್ಲಿ ಈ ಪ್ರಕ್ರಿಯೆಯನ್ನು ವಿಸ್ತರಿಸುವ ವಿಷಯದಲ್ಲಿ ಅವು ವ್ಯತಿರಿಕ್ತ ನಿಲುವು ತಳೆದಿವೆ. ಇದೊಂದು ಅತ್ಯಂತ ನಕಾರಾತ್ಮಕ ನಿಲುವೆಂದು ಅನೇಕ ಮಹಿಳಾ ಸಂಘಟನೆಗಳು ಮತ್ತು ಇತರ ಪುರೋಗಾಮಿ ಚಳವಳಿಗಳು ಬೆಟ್ಟುಮಾಡಿ ತೋರಿಸುತ್ತಿವೆ.

ನಮ್ಮಂಥ ಪಿತೃಪ್ರಧಾನ ಸಮಾಜಗಳಲ್ಲಿ ಮಹಿಳೆಯರ ಮೇಲಿನ ಕೆಲಸದ ಒತ್ತಡ ಅಧಿಕ ಉದ್ಯೋಗಗಳಲ್ಲಿ ನಿರತರಾಗಿರುವ ಮಹಿಳೆಯರು ತಮ್ಮ ಮನೆಗಳಲ್ಲಿ ದುಡಿದು ಹೊರಗೂ ಕಾರ್ಯ ನಿರ್ವಹಿಸಬೇಕು. ಕೆಲಸಕ್ಕೆ ಹೋಗದ ಆದರೆ ಸಂಸಾರಗಳನ್ನು ನಿಭಾಯಿಸುವ ಮಹಿಳೆಯರ ಶ್ರಮವನ್ನು ಗುರುತಿಸುವ ಯಾವುದೇ ಪ್ರಕ್ರಿಯೆ ನಮ್ಮಲ್ಲಿಲ್ಲ. ಒಟ್ಟು ಆರ್ಥಿಕತೆಗೆ, ಆರ್ಥಿಕ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ಅವರ ಪಾಲು ಸಂದಾಯವಾಗುವುದಿಲ್ಲವೆ? ಎಂಬುದು ಮಹಿಳಾ ಸಂಘಟನೆಗಳು ಎತ್ತುತ್ತ ಬಂದಿರುವ ಪ್ರಶ್ನೆ. ನಮ್ಮ ರಾಷ್ಟ್ರದ ಯೋಜನಾ ತಜ್ಞರು ಮತ್ತು ನೀತಿಗಳನ್ನು ರೂಪಿಸುವವರು ಆರೋಗ್ಯಕರ GDP ಬೆಳವಣಿಗೆಯಲ್ಲಿ ಮುಖ್ಯ ಪಾತ್ರ ವಹಿಸುವ ಮಹಿಳಾ ಆರ್ಥಿಕ ಮತ್ತು ಉತ್ಪಾದನಾ ಶಕ್ತಿಯನ್ನು ಗುರುತಿಸುತ್ತಾರೆ. ಆದರೆ ಆಯವ್ಯಯದ ವಿಷಯಕ್ಕೆ ಬಂದಾಗ, ಮಹಿಳೆಯರ ಅಭ್ಯುದಯಕ್ಕಾಗಿ ನ್ಯಾಯಯುತ ಪಾಲು ಸಿಗುತ್ತಿಲ್ಲ ಎಂಬುದು ಗಮನಿಸಬೇಕಾದ ಸಂಗತಿ.

ಇಂದು ನಗರ ಪ್ರದೇಶಗಳಲ್ಲಿ ಜೀವನ ಶೈಲಿ ಕುರಿತು ಜನರಲ್ಲಿ ಅನೇಕ ಆಸೆಗಳಿವೆ, ಆಶೋತ್ತರಗಳಿವೆ. ಅವರು ಅನೇಕ ಆಮಿಷಗಳಿಗೆ ಬಲಿಯಾಗುತ್ತಿದ್ದಾರೆ. ಈ ಬೆಳವಣಿಗೆಯಲ್ಲಿ ಜಾಗತೀಕರಣದ ಪಾತ್ರ ನಗಣ್ಯವಾದದ್ದಲ್ಲ, ಇದೇ ಸಂದರ್ಭದಲ್ಲಿ ಮಹಿಳೆಯರ ಮೇಲಿನ ಹಿಂಸಾಚಾರವೂ ಅಧಿಕವಾಗಿದೆ.

ಇತ್ತೀಚಿನ ದಶಕಗಳಲ್ಲಿ ನಮ್ಮ ರಾಷ್ಟ್ರ ಅನೇಕ ರಂಗಗಳಲ್ಲಿ ಪ್ರಗತಿಯನ್ನು ಸಾಧಿಸಿದೆ. ಇದರ ಜೊತೆಗೆ ಗಂಡು ಮತ್ತು ಹೆಣ್ಣು ಶಿಶುಗಳ ನಡುವಿನ ಅನುಪಾತ ಹೆಚ್ಚಾಗುತ್ತಿರುವಂಥ ಕಳವಳಕಾರಿ ಅಂಶವನ್ನು ಮರೆಯಬಾರದು ಅನೇಕ ಹೆಣ್ಣು ಮಕ್ಕಳು/ಶಿಶುಗಳು ಹೇಳಹೆಸರಿಲ್ಲದಂತೆ ಕಳೆದುಹೋಗುತ್ತಿದ್ದಾರೆ. ಈ ಪಟ್ಟಿಯಲ್ಲಿ ಆರ್ಥಿಕವಾಗಿ ಮುಂದುವರೆದಿರುವ ಪಂಜಾಬ್‌ನಂಥ ರಾಜ್ಯವಿರುವುದು ಅಚ್ಚರಿಯ ವಿಷಯ. ಇಂದು ನಗರ ಪ್ರದೇಶಗಳಲ್ಲಿ ಜೀವನ ಶೈಲಿ ಕುರಿತು ಜನರಲ್ಲಿ ಅನೇಕ ಆಸೆಗಳಿವೆ, ಆಶೋತ್ತರಗಳಿವೆ. ಅವರು ಅನೇಕ ಆಮಿಷಗಳಿಗೆ ಬಲಿಯಾಗುತ್ತಿದ್ದಾರೆ ಈ ಬೆಳವಣಿಗೆಯಲ್ಲಿ ಜಾಗತೀಕರಣದ ಪಾತ್ರ ನಗಣ್ಯವಾದದ್ದಲ್ಲ, ಇದೇ ಸಂದರ್ಭದಲ್ಲಿ ಮಹಿಳೆಯರ ಮೇಲಿನ ಹಿಂಸಾಚಾರವೂ ಅಧಿಕವಾಗಿದೆ.

ಸಿನಿಮಾ ಕ್ಷೇತ್ರದಲ್ಲಿ ಕಾರ್ಪೊರೇಟ್ ಅಧಿಪತ್ಯದ ಜೊತೆ ಮಾಫಿಯ ಮತ್ತು ರಿಯಲ್ ಎಸ್ಟೇಟ್ ಶಕ್ತಿಗಳು ವಿಜೃಂಭಿಸುತ್ತಿವೆ. ಬಾಲಿವುಡ್ ಜೊತೆ ಇತರ ಎಲ್ಲ ವುಡ್‌ಗಳಲ್ಲೂ ಸ್ತ್ರೀ ಸರಕೀಕರಣಕ್ಕೆ ಒಳಗಾಗಿದ್ದಾಳೆ. ಸಿನಿಮಾ ತಾರೆಯರು ಐಟಂ ಹುಡುಗಿಯರಾಗಿ ಮಾತ್ರವಲ್ಲದೆ ನಾಯಕಿ ಪಟ್ಟಕ್ಕೆ ಏರಿದರೂ, ಅವರಿಗೆ ನಾಯಕರಿಗೆ ಸಿಗುವ ಸಮ್ಮಾನ ದೊರಕುತ್ತಿಲ್ಲ. ಗ್ಲಾಮರ್ ಎನ್ನುವುದು ವಿಮೋಚನೆ ಜೊತೆ ತಳಕು ಹಾಕಿಕೊಂಡಿರುವುದು ಚೋದ್ಯದ ವಿಷಯ ಕಾರ್ಪೊರೇಟ್ ಕಂಪನಿಗಳು ಚಲನಚಿತ್ರ ರಂಗದಲ್ಲಿ ಮಾತ್ರ ಇಮೇಜುಗಳನ್ನು ಸೃಷ್ಟಿಸುತ್ತಿಲ್ಲ. ಅಸಂಖ್ಯಾತ ಮಹಿಳೆಯರ ದೈನಂದಿನ ಜೀವನದ ಮೇಲೂ ಅಡ್ಡ ಪರಿಣಾಮಗಳನ್ನು ಬಿರುತ್ತಿವೆ. ಮಾರುಕಟ್ಟೆ-ಆಧಾರಿತ ಶಕ್ತಿಗಳಿಗೆ ಬಲಿಯಾಗುತ್ತಿವೆ. ಕೃಷಿ ಮತ್ತು ಅದರ ಪೂರಕ ಚಟುವಟಿಕೆಗಳು, ವಿಶೇಷ ಆರ್ಥಿಕ ವಲಯಗಳು ಮತ್ತಿತರ ದೊಡ್ಡ ಅಭಿವೃದ್ಧಿ ಯೋಜನೆಗಳು ಕೃಷಿ ಭೂಮಿಯನ್ನು ಕಬಳಿಸುತ್ತಿವೆ. ಇವುಗಳಿಂದಲೂ ಮಹಿಳೆಯರು ಅನೇಕ ತೊಂದರೆಗಳಿಗೆ ಸಿಲುಕಿದ್ದಾರೆ. ಉತ್ಪಾದಕರಾಗಿದ್ದ ಅವರು ಕ್ರಮೇಣ ಗ್ರಾಹಕರಾಗಿ ಮಾರ್ಪಾಟಾಗುತ್ತಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಭಾರತ ಸರ್ಕಾರ ಸೇರಿಕೊಂಡಂತೆ ಇತರ ದೇಶಗಳ ಸರ್ಕಾರಗಳು ಮತ್ತು ಜಾಗತೀಕ ಮಟ್ಟದ ಕೆಲವು ಸಂಸ್ಥೆಗಳು ಮಹಿಳೆಯರ ಹಕ್ಕುಗಳು ಹಾಗೂ ಅದಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ನೂತನಾಡುತ್ತಿವೆ; ತಂತ್ರಗಳನ್ನು ರೂಪಿಸುತ್ತಿವೆ. ಆದರೆ ಅವುಗಳ ಹಿಂದೆ ಸ್ಪಷ್ಟ ಅಜೆಂಡಗಳಿರುವುದನ್ನೂ ಮನಗಾಣಬೇಕು. ಅಂತರರಾಷ್ಟ್ರೀಯ ಮಹಿಳಾ ದಿನ (ಮಾರ್ಚ್ 8) ಮಹಿಳಾ ವಿಮೋಚನೆಯ ಒಂದು ಸಂಕೇತ. ಇಂಥಾ ಸಂಕೇತಗಳನ್ನು ಅವು ವಶಪಡಿಸಿಕೊಳ್ಳುತ್ತಿವೆ. ಇದರಿಂದ ಧಕ್ಕೆಗೆ ಒಳಗಾಗುವುದು ಅದರ ರಾಜಕೀಯ ಮಹತ್ವ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು.

ಜಗತ್ತಿನ ಎಲ್ಲ ಮಹಿಳೆಯರು ಒಕ್ಕೊರಲಿನಿಂದ "ನಾವು ಇನ್ನೊಂದು ಅನ್ಯಾಯವನ್ನು ಸಹಿಸುವುದಿಲ್ಲ" ಎಂದು ದೃಢವಾಗಿ ಸಾರುವುದೇ ಈ ದಿನದ ವಿಶೇಷತೆ. ಆದರೆ ಇತ್ತೀಚಿನ ವರ್ಷಗಳಲ್ಲಿ ನಾವು ಕಾಣುತ್ತಿರುವುದೇನು? ಆ ದಿನದಂದು ಕೆಲವು ಕ್ರೀಡಾ ಸ್ಪರ್ಧೆಗಳನ್ನೋ ಅಥವಾ ಅಂತ್ಯಾಕ್ಷರಿಯಂಥ ಕಾರ್ಯಕ್ರಮಗಳನ್ನೋ ಹಮ್ಮಿಕೊಳ್ಳಲಾಗುತ್ತದೆ. ಇವುಗಳಿಗೆ ಪ್ರಾಯೋಜನೆ (Sponorship) ನೀಡಲು ದೊಡ್ಡ ಪ್ರಸಾಧನ ಕಂಪನಿಗಳು ಮತ್ತು ಇತರ ಕಾರ್ಪೊರೇಟ್ ಶಕ್ತಿಗಳು ಮುಂದಾಗುತ್ತವೆ. ಹೀಗೆ ಮಾಡುವ ಮೂಲಕ ಅವು ತಾವು ಮಹಿಳಾ ಹಕ್ಕುಗಳ ಪರವಾಗಿವೆಯೆಂದು ತೋರ್ಪಡಿಸಿಕೊಳ್ಳುತ್ತವೆ!

ಈ ಪರಿಯ ಪ್ರಲೋಭನೆಗಳನ್ನು ಗಮನಕ್ಕೆ ತೆಗೆದುಕೊಂಡು, ಮಹಿಳಾ ಸಂಘಟನೆಗಳು/ಗುಂಪುಗಳು ವಿಸ್ತೃತವಾದ ನೆಲೆಯಲ್ಲಿ ಬೆಳೆಯಬೇಕು. ಭಾರತದ ಮಹಿಳಾ ಕ್ರಿಯಾಶೀಲತೆಗೆ (Activprn) ದೀರ್ಘ ಪರಂಪರೆಯಿದೆ. ಚರಿತ್ರೆಯೂ ಇದೆ. ನಮ್ಮ ರಾಷ್ಟ್ರದ ವಿಮೋಚನಾ ಹೋರಾಟದಲ್ಲಿ ಅನೇಕ ಮಹಿಳೆಯರು ಪುರುಷರ ಜೊತೆ ಸಮಾನಸ್ಕಂದರಾಗಿ ಹೋರಾಟ ಮಾಡಿದ್ದಾರೆ, ಅನೇಕ ತ್ಯಾಗ, ಬಲಿದಾನಗಳನ್ನು ಮಾಡಿದ್ದಾರೆ. ವಾಸ್ತವವಾಗಿ 1857ರಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟದ ಪ್ರಥಮ ಕಿಡಿ ಹೊತ್ತಿಸಿದ್ದು ಒಬ್ಬ ಮಹಿಳೆ. ಅವಳು ಝಾನ್ಸಿ ರಾಣಿ ಲಕ್ಷ್ಮೀಬಾಯಿ.

ಪ್ರಸ್ತುತ ಮಹಿಳಾ ಸಂಘಟನೆಗಳು/ಚಳವಳಿಗಳು ತಮ್ಮ ಹೋರಾಟಗಳಲ್ಲಿ ಜನಪ್ರಿಯವಲ್ಲದ ಕೆಲವು ವಿಷಯಗಳನ್ನು ಅಳವಡಿಸಿಕೊಂಡಿರುವುದು ಇತ್ಯಾತ್ಮಕ ಬೆಳವಣಿಗೆ. ಅವೆಂದರೆ-ಜನಸಂಖ್ಯೆ ನಿಯಂತ್ರಣಕ್ಕೆ ವಿರೋಧ, ವೇಶ್ಯಾವೃತ್ತಿಯಲ್ಲಿ ತೊಡಗಿರುವ ಮಹಿಳೆಯರ ಹಕ್ಕುಗಳು, ಬಾರ್‌ಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಸಂಬಂಧಿಸಿದ ವಿಚಾರಗಳು, ಸಲಿಂಗಕಾಮ ಇತ್ಯಾದಿ. ಇಂಥ ಕೆಲವು ಗಂಭೀರ ಆದರೆ ನಿರ್ಲಕ್ಷಿತ ವಿಷಯಗಳ ಬಗೆಗೆ ಸಮಾಜ ಪುನರ್‌ವ್ಯಾಖ್ಯಾನಿಸುವ ಸನ್ನಿವೇಶವನ್ನೂ ಉಂಟುಮಾಡುವ ದಿಶೆಯತ್ತ ಮಹಿಳಾ ಸಂಘಟನೆಗಳು ಸಾಗುತ್ತಿರುವುದು ಶುಭಸೂಚಕ ವಿಚಾರ. □

ಪಶ್ಚಿಮ ಬಂಗಾಳ: ಅಂತಃಕಲಹ ಆರಂಭವಾಗಿರುವಂತಿದೆ

ತುಷಾ ಮಿತ್ತಲ್
(ಅನು: ಸುರೇಶ್ ಭಟ್)

ಬಂಗಾಳ ಇಂದು ಅನೇಕ ವಿಧಗಳಲ್ಲಿ ರಾಜಕೀಯ ಸ್ಥಿತ್ಯಂತರದ ಸನ್ನಿವೇಶವೊಂದರ ನಡುವಿನಲ್ಲಿ ಸಿಲುಕಿದೆ. ಅಲ್ಲೊಂದು ವಿಪ್ಲವವೆ ನಡೆಯುತ್ತಿದೆ. ಒಂದೆಡೆ ೩೪ ವರುಷಗಳ ಕಾಲ ಹೆಚ್ಚುಕಮ್ಮಿ ಅವಿರೋಧವಾಗಿ, ಭದ್ರವಾಗಿ ತಳವೂರಿ ಅಧಿಕಾರ ಮದದಿಂದ ಕೂಡಿರುವ ಒಂದು ಪ್ರಭುತ್ವವಿದೆ. ಅದಕ್ಕೆದುರಾಗಿರುವುದು ತಾನು ಯಾವ ವಿಧದ ಅಧಿಕಾರ ವಾಗಬೇಕು ಎಂಬುದರ ಬಗ್ಗೆ ಖಚಿತಾ ಭಿಪ್ರಾಯವಿಲ್ಲದ ಇನ್ನೊಂದು ಗುಂಪು. ಪ್ರಭುತ್ವದ ಈ ರಾಚನಿಕ ಬದಲಾವಣೆಯ ಪರಿಸ್ಥಿತಿಯಲ್ಲಿ ರಾಜಕೀಯ ಮತ್ತು ಖಾಸಗಿ ಕೃತ್ಯಗಳನ್ನು ಪ್ರತ್ಯೇಕಿಸುವುದು ಅಸಾಧ್ಯವಾಗಿ ಪರಿಣಮಿಸುತ್ತಿದೆ.

ಪಶ್ಚಿಮ ಬಂಗಾಳವನ್ನು ಜಯಿಸುವುದಕ್ಕಾಗಿರುವ ಮಹಾ ಸಂಗ್ರಾಮವೊಂದರ ಅಂತಿಮ ಹಾಗೂ ಪ್ರಾಯಶಃ ಅತ್ಯಂತ ಬರ್ಬರ ಮಜಲು ಇಂದು ನಮ್ಮ ಮುಂದಿದೆ. ಈ ಸಂಘರ್ಷ ಇದುವರೆಗೆ ಸಾಕಷ್ಟು ಸಾವುನೋವುಗಳನ್ನು ಕಂಡಿದೆಯಾದರೂ ಅದರ ನಿಖರ ಅಂಕಿಸಂಖ್ಯೆಗಳು ಲಭ್ಯವಿಲ್ಲ. ಮೃತಪಟ್ಟವರಲ್ಲಿ ಕೆಲವು ಮಂದಿಯನ್ನು ನಿರ್ದಿಷ್ಟವಾಗಿ ಗುರಿಯಿಟ್ಟು ಕೊಲ್ಲಲಾಗಿದ್ದರೆ ಉಳಿದವರೆಲ್ಲ ಅಪ್ರಧಾನ ವ್ಯಕ್ತಿಗಳು. ಹತರಾದವರಲ್ಲಿ ಕಾಂಗ್ರೆಸ್ ಪಕ್ಷದೊಂದಿಗೆ ಗುರುತಿಸಿಕೊಂಡವರೂ ಇದ್ದಾರೆ, ಸಿಪಿಐ(ಎಂ) ಬೆಂಬಲಿಗರೂ ಇದ್ದಾರೆ, ತೃಣಮೂಲ ಕಾಂಗ್ರೆಸ್ ಜೊತೆ ಸೇರಿಕೊಂಡವರೂ ಇದ್ದಾರೆ. ಇನ್ನಿತರ ಕೆಲವು ಮಂದಿಯ ಪಕ್ಷನಿಷ್ಠೆ ಬಗ್ಗೆ ಸ್ಪಷ್ಟ ಮಾಹಿತಿಗಳಿಲ್ಲ. ಹಲವರು ಪ್ರಾಣ ಉಳಿಸಿಕೊಳ್ಳುವುದಕ್ಕೋಸ್ಕರ ಯಾವುದಾದರೊಂದು ಪಕ್ಷವನ್ನು ಸೇರಿದ್ದರೆ ಇತರ ಕೆಲವರು ಪಕ್ಷವೊಂದನ್ನು ಬೆಂಬಲಿಸಿದ್ದ ಕಾರಣಕ್ಕಾಗಿ ಪ್ರಾಣ ತೆರಬೇಕಾಗಿ ಬಂದಿದೆ.

ಮಾಜಿ ಭೂಸುಧಾರಣಾ ಆಯುಕ್ತರೂ ಕೇಂದ್ರ ಸರಕಾರದ ಮಾಜಿ ಕಾರ್ಯದರ್ಶಿಯೂ ಆದ ಡಿ. ಬಂದೋಪಾಧ್ಯಾಯ ಲೆಕ್ಕ ಹಾಕುವಂತೆ ಪಶ್ಚಿಮ ಬಂಗಾಳದಲ್ಲಿ 1977–2010ರ ಅವಧಿಯಲ್ಲಿ 55,408 ರಾಜಕೀಯ ಹತ್ಯೆಗಳು ನಡೆದಿವೆ. ಎಪಿಸಿಆರ್‌ನ ಸುಜಾತೊ ಭದ್ರೊ ಪ್ರಕಾರ ಕನಿಷ್ಠ 10,000 ಮಂದಿ ವಿರೋಧಿಗಳನ್ನು ಕೊಂದು ಹಾಕಿರುವ ಸಿಪಿಐ(ಎಂ) ಸುಮಾರು 2500 ಕಾರ್ಯಕರ್ತರನ್ನೂ ಕಳೆದುಕೊಂಡಿದೆ. ರಾಜ್ಯದಲ್ಲಿ ಪ್ರಸಕ್ತವಾಗಿ ಕನಿಷ್ಠ 2500 ರಾಜಕೀಯ ಕೈದಿಗಳಿದ್ದಾರೆ ಎನ್ನುತ್ತಿದೆ ಬಂದಿ ಮುಕ್ತಿ ಮೋರ್ಚಾ.

ಶಸ್ತ್ರಸಜ್ಜಿತ ಪಡೆಗಳ ಅಟ್ಟಹಾಸ

ಲಾಲ್‌ಗಡದ ನೇತೈ ಗ್ರಾಮ ಇತ್ತೀಚಿನ ಉರಿಬಿಂದು. ಅಲ್ಲಿನ ಎರಡು ಮಹಡಿಗಳ ಕಟ್ಟಡವೊಂದು ಕ್ಷೇತ್ರದ ಸಿಪಿಐ(ಎಂ) ನಾಯಕ ರತಿನ್ ದಂಡಪತ್‌ಗೆ ಸೇರಿದ್ದು, ಆತ ಆರು ತಿಂಗಳ ಹಿಂದೆ ಊರು ಬಿಟ್ಟು ಪಲಾಯನ ಮಾಡಿದ್ದಾನೆ. ಸ್ಥಳೀಯರ ಪ್ರಕಾರ "ಕಳೆದೊಂದು ತಿಂಗಳಿಂದ ಆ ಕಟ್ಟಡ ಸಿಪಿಐ(ಎಂ)ನ ಶಿಬಿರವಾಗಿದೆ. ಸಿಪಿಐ(ಎಂ)ನ ಸಶಸ್ತ್ರ ಕಾರ್ಯಕರ್ತರ ಪಡೆಯಾದ 'ಹರ್ಮದ್ ವಾಹಿನಿ'ಯ 30 ಸದಸ್ಯರು ಅಲ್ಲಿ ಬೀಡುಬಿಟ್ಟಿದ್ದರು: ಅವರು ಬಂದೂಕು ತೋರಿಸಿ ಸಿಪಿಐ(ಎಂ)ನ ಮೆರವಣಿಗೆಗಳಲ್ಲಿ ಭಾಗವಹಿಸುವಂತೆ ಬೆದರಿಸುತ್ತಾರೆ. ನಮ್ಮ ಕೈಲಿ ಅಡುಗೆ ಮಾಡಿಸಲಾಗುತ್ತದೆ; ರಾತ್ರಿ ವೇಳೆ ಶಿಬಿರವನ್ನು ಮಾವೊವಾದಿಗಳಿಂದ ರಕ್ಷಿಸುವುದಕ್ಕಾಗಿ ನಮ್ಮನ್ನು ಪಹರೆಗೆ ನಿಲ್ಲಿಸಲಾಗುತ್ತದೆ. ಅವರ ಬಳಿ ಹಳ್ಳಿಗರ ಪಟ್ಟಿಯಿದೆ. ಅದರಲ್ಲಿ ಯಾರಿಗೆ ಯಾವ ಕೆಲಸ ವಹಿಸಲಾಗಿದೆಯೆಂದು ಬರೆಯಲಾಗಿದೆ. ಸದರಿ ಕಾರ್ಯಕರ್ತರು ಒಂದು ವಾರದ ಕೆಳಗೆ ಹೊಸದೊಂದು ಘೋಷಣೆ ಹೊರಡಿಸಿದರು. ಪ್ರತಿಯೊಂದು ಮನೆಯಲ್ಲಿರುವ ಪುರುಷರನ್ನು ಶಸ್ತ್ರಾಸ್ತ್ರ ತರಬೇತಿಗಾಗಿ ಕಳುಹಿಸಬೇಕೆಂದು ಆಗ್ರಹಿಸಿದರು.

'ನಾವು ಸದಾ ಇಲ್ಲಿರುವುದಿಲ್ಲ. ಹೀಗಾಗಿ ಮಾವೊವಾದಿಗಳಿಂದ ನಿಮ್ಮ, ನಿಮ್ಮ ಹಳ್ಳಿಗಳನ್ನು ರಕ್ಷಿಸಿಕೊಳ್ಳಲು ನಿಮ್ಮನ್ನು ಸನ್ನದ್ಧರಾಗಿಸುತ್ತಿದ್ದೇವೆ' ಎಂದರು." ಜನವರಿ 6ರ ಅಪರಾಹ್ನ 3 ಗಂಟೆಗೆ ಫುಟ್‌ಬಾಲ್ ಮೈದಾನವೊಂದರಲ್ಲಿ ನೆರೆದ 500 ಜನರ ಪೈಕಿ 62 ಜನರನ್ನು ಆರಿಸಲಾಯಿತು. ರಂಜಿತ್ ಪಾತ್ರೊ ಎಂಬಾತನ ಮಗ ಅರೂಪ್ ತರಬೇತಿ ಶಿಬಿರಕ್ಕೆ ಹಾಜರಾಗಿರಲಿಲ್ಲ. ಮರುದಿನ ಮುಂಜಾನೆ ರಂಜಿತ್ ಪಾತ್ರೊ ಗುಡಿಸಲಿನ ಹೊರಗೆ ಇಬ್ಬರು ಬಂದೂಕುಧಾರಿಗಳು ಪ್ರತ್ಯಕ್ಷರಾದರು. ಇಂದು ಕೂಡಾ ಮಕ್ಕಳನ್ನು ಕಳುಹಿಸದಿದ್ದರೆ ಅವರೆಲ್ಲರ ಗುಡಿಸಲುಗಳನ್ನು ಸುಟ್ಟು ಹಾಕಲಾಗುವುದೆಂದು ಎಚ್ಚರಿಕೆ ಕೊಟ್ಟರು. ಆ ದಿನ ಗ್ರಾಮಸ್ಥರೆಲ್ಲರೂ ಒಟ್ಟಾಗಿ ಪ್ರತಿಭಟಿಸಲು ನಿರ್ಧರಿಸಿದರು. ಸಿಪಿಐ(ಎಂ)ನ ಶಿಬಿರದ ಹೊರಗೆ 1000ಕ್ಕೂ ಮೇಲ್ಪಟ್ಟು ಜನ ನೆರೆದರು.

ಶಿಬಿರದೊಳಗಿದ್ದ ಸ್ಥಳೀಯ ನಾಯಕ ಅಬಾನಿ ಸಿಂಗ್ ಹೊರಬಂದು ಐದು ಜನರನ್ನು ಮಾತುಕತೆಗಾಗಿ ಆಹ್ವಾನಿಸಿದ. ಹಾಗೆ ಒಳಗೆ ಹೋದವರಲ್ಲಿ ಹಿರಿಯನಾದ ಕೃಷ್ಣಗೋಪಾಲ್ ರಾಯ್ "ನಾವು ಸಾಮಾನ್ಯ ಹಳ್ಳಿಗರು. ನಮಗೆ ಶಸ್ತ್ರಾಸ್ತ್ರ ಕೈಗೆತ್ತಿಕೊಳ್ಳುವುದು ಬೇಕಾಗಿಲ್ಲ. ನಾವು ಶಾಂತಿಯಿಂದ ಬದುಕಲಿಚ್ಛಿಸುತ್ತೇವೆ" ಎಂದು ತಿಳಿಸಿದ. ಸಿಂಗ್ ಮೊದಲು ಛಾವಣಿ ಮೇಲಿದ್ದ ಕಾರ್ಯಕರ್ತರಿಗೆ ಸನ್ನೆ ಮಾಡಿದ. ನಂತರ, ಈ ವಿಷಯವನ್ನು ತನ್ನ ನಾಯಕರೊಂದಿಗೆ ಚರ್ಚಿಸುವೆನೆಂದು ಉತ್ತರಿಸಿದ. ಆಗ ಇದ್ದಕ್ಕಿದ್ದಂತೆ ಸಿಪಿಐ(ಎಂ) ಸದಸ್ಯರ ಇನ್ನೊಂದು ತಂಡ ಗಾಳಿಯಲ್ಲಿ ಗುಂಡು ಹಾರಿಸುತ್ತ ಹಳ್ಳಿ ಯತ್ತ ಬರುತ್ತಿರುವುದನ್ನು ಗಮನಿಸಿದೆನೆಂದು 'ತೆಹೆಲ್ಕಾ' ಗೆ ತಿಳಿಸಿದ ರಾಯ್ "ಅವರು ಪಕ್ಕದ ಹರ್ಮದ್ ಶಿಬಿರಗಳಿಂದ ಬಂದಿದ್ದ ಹೆಚ್ಚುವರಿ ಪಡೆಗಳಾಗಿದ್ದರು.

ಆ ತಂಡ ಆಗಮಿಸುತ್ತಲೆ ಛಾವಣಿ ಮೇಲಿಂದ ಗುಂಡು ಹಾರಾಟ ಶುರುವಾಯಿತು" ಎಂದು ಹೇಳಿದ. ಗುಂಡು ಹಾರಿಸಿದ್ದು ಮಾವೊವಾದಿಗಳೆಂಬ ಪೊಲೀಸರ ಹೇಳಿಕೆಗೆ ಎದಿರೇಟು ನೀಡುವ ರಾಯ್‌ನ ಈ ಸಾಕ್ಷ್ಯದ ಪ್ರಕಾರ ಎರಡು ದಿಕ್ಕುಗಳಿಂದಲೂ ಗುಂಡು ಹಾರಿಸಿದವರು ಸಿಪಿಐ(ಎಂ) ಕಾರ್ಯಕರ್ತರು. ಜನ ಒಬ್ಬೊಬ್ಬರಾಗಿ ನೆಲಕ್ಕುರುಳಲಾರಂಭಿಸಿದಾಗ ಮಿಕ್ಕವರು ಅಲ್ಲಿಂದ ಓಡಿ ಹೋದರು. ಘಟನೆ ಸಂಭವಿಸಿ ಸುಮಾರು 20 ಗಂಟೆಗಳ ನಂತರ ಅಲ್ಲಿಗೆ ತಲುಪಿದ 'ತೆಹೆಲ್ಕಾ' ವರದಿಗಾರರು ಅಳಿದುಳಿದ ಪುರಾವೆಗಳನ್ನು ಸಂರಕ್ಷಿಸುವ ಕೆಲಸ ಆಗದಿರುವುದನ್ನು ಗಮನಿಸಿದರು. ಕೆಲವು ಗಂಟೆಗಳ ನಂತರ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಸ್ಥಳಕ್ಕಾಗಮಿಸಿ ಮಾತನಾಡಲಾರಂಭಿಸಿದಾಗ ಪುರಾವೆಗಳೆಲ್ಲವೂ ಜನ ಜಂಗುಳಿಯ ಕಾಲ್ತುಳಿತಕ್ಕೆ ಸಿಕ್ಕು ನಾಶವಾದವು.

ಇಲ್ಲಿ ಬಹಳಷ್ಟು ಮಹತ್ವದ ವಿಚಾರವೊಂದಿದೆ. ಸಿಪಿಐ(ಎಂ) ತನ್ನ ಕಾರ್ಯಕರ್ತರಿಗೆ ಶಸ್ತ್ರಾಸ್ತ್ರಗಳನ್ನು ಒದಗಿಸಿದೆ; 'ಹರ್ಮದ್ ವಾಹಿನಿ'ಯ ಕ್ಯಾಂಪ್‌ಗಳು ಅಸ್ತಿತ್ವದಲ್ಲಿವೆ; ಛತ್ತೀಸ್‌ಗಡದ ಕುಖ್ಯಾತ 'ಸಲ್ವಾ ಜುಡುಂ' ಮಾದರಿಯ ಪಡೆಯೊಂದನ್ನು ಬಂಗಾಳದಲ್ಲಿಯೂ ಸಜ್ಜುಗೊಳಿಸಲಾಗುತ್ತಿದೆ ಎಂಬುದಕ್ಕೆ ನೇತೈನ ಹತ್ಯೆಗಳೆ ಸಾಕ್ಷಿ.

ಅಂತರ್ಯುದ್ಧದ ಲಕ್ಷಣಗಳು

ಬಂಗಾಳ ಇಂದು ಅನೇಕ ವಿಧಗಳಲ್ಲಿ ರಾಜಕೀಯ ಸ್ಥಿತ್ಯಂತರದ ಸನ್ನಿವೇಶವೊಂದರ ನಡುವಿನಲ್ಲಿ ಸಿಲುಕಿದೆ. ಅಲ್ಲೊಂದು ವಿಪ್ಲವವೆ ನಡೆಯುತ್ತಿದೆ. ಒಂದೆಡೆ 34 ವರುಷಗಳ ಕಾಲ ಹೆಚ್ಚುಕಮ್ಮಿ ಅವಿರೋಧವಾಗಿ, ಭದ್ರವಾಗಿ ತಳವೂರಿ ಅಧಿಕಾರ ಮದದಿಂದ ಕೂಡಿರುವ ಒಂದು ಪ್ರಭುತ್ವವಿದೆ. ಅದಕ್ಕೆದುರಾಗಿರುವುದು ತಾನು ಯಾವ ವಿಧದ ಅಧಿಕಾರವಾಗಬೇಕು ಎಂಬುದರ ಬಗ್ಗೆ ಖಚಿತಾ ಭಿಪ್ರಾಯವಿಲ್ಲದ ಇನ್ನೊಂದು ಗುಂಪು. ಪ್ರಭುತ್ವದ ಈ ರಾಚನಿಕ ಬದಲಾವಣೆಯ ಪರಿಸ್ಥಿತಿಯಲ್ಲಿ ರಾಜಕೀಯ ಮತ್ತು ಖಾಸಗಿ ಕೃತ್ಯಗಳನ್ನು ಪ್ರತ್ಯೇಕಿಸುವುದು ಅಸಾಧ್ಯವಾಗಿ ಪರಿಣಮಿಸುತ್ತಿದೆ. ಇಲ್ಲಿ ಅಬ್ರಹಾಂ ಲಿಂಕನ್–ಸ್ಪಾನ್ಲಿ ಆಶೆನ್ ಬ್ರೆನರ್ ಹೇಳುವ ಅಂತರ್ಯುದ್ಧದ ಲಕ್ಷಣಗಳು ಗೋಚರಿಸುತ್ತಿವೆ.

ಕೇತುಗ್ರಾಮದಲ್ಲಿ ಹತರಾದ ಅಮೃತೊ ಮತ್ತು ತಪಸ್ ಸಹಾ ಎಂಬ ಸೋದರರು ಸಾವಿಗೆ ಮುನ್ನ ಟಿಎಂಸಿ ಸದಸ್ಯರಾಗಿದ್ದರೇ ಇಲ್ಲವೇ ಎಂಬುದರ ಬಗ್ಗೆ ಅಸ್ಪಷ್ಟತೆಯಿದೆ. ಆದರೆ ಇಬ್ಬರೂ ಟಿಎಂಸಿಯನ್ನು ಉತ್ಕಟವಾಗಿ ಬೆಂಬಲಿಸುತ್ತಿದ್ದವರೆಂದು ಅವರ ಮರಣಾ ನಂತರದಲ್ಲಿ ಸಾರಲಾಗಿದೆ. ಅವರನ್ನು ಕೊಲೆ ಮಾಡಿದಾತ ನೆರೆಕರೆಯ ಸಿಪಿಐ(ಎಂ) ಬೆಂಬಲಿಗ ಕೈಲಾಸ್ ಎಂದು ಕುಟುಂಬ ಹೇಳುತ್ತಿದೆ. ಟಿಎಂಸಿ ಪಕ್ಷವೂ ಇದನ್ನೇ ಹೇಳುತ್ತಿದೆ. ಅತ್ತ, ಅವರು ತನ್ನ ಬೆಂಬಲಿಗರಾಗಿದ್ದರೆನ್ನುತ್ತಿದೆ ಕಾಂಗ್ರೆಸ್.

2009ರ ಮಹಾಚುನಾವಣೆಗಳಲ್ಲಿ ಆರಾಂಬಾಗ್ ಉಪಕ್ಷೇತ್ರವೊಂದನ್ನು ಹೊರತುಪಡಿಸಿ ಮಿಕ್ಕೆಲ್ಲ ಕಡೆ ತೃಣ ಮೂಲ ಕಾಂಗ್ರೆಸ್ (ಟಿಎಂಸಿ) ಜಯಭೇರಿ ಬಾರಿಸಿತ್ತು. ಆರಾಂಬಾಗ್ ಸಿಪಿಐ(ಎಂ) ಪಾಲಿಗೆ ಹೋಗಿದ್ದರೂ ಬಹುಮತ ಮಾತ್ರ ಮೂರು ಲಕ್ಷದಿಂದ ಅರ್ಧ ಲಕ್ಷಕ್ಕಿಳಿದಿತ್ತು. ಚುನಾವಣೋತ್ತರ ಕಾಲದ ಮೊತ್ತಮೊದಲಿನ ಬಲಿಯನ್ನು ಪಡೆದುಕೊಂಡಿರುವುದು ಇದೇ ಆರಾಂಬಾಗ್ ಕ್ಷೇತ್ರ. ಸುಮಾರು 100ರಷ್ಟಿದ್ದ ಸಿಪಿಐ(ಎಂ) ಕಾರ್ಯಕರ್ತರ ತಂಡವೊಂದು ಟಿಎಂಸಿಯ ಯುಧಿಷ್ಠಿರ ದೊಲೊಯ್ ಎಂಬಾತನನ್ನು ಆತನ ಕುಟುಂಬದ ಎದುರಲ್ಲೇ ಕೊಚ್ಚಿ ಹಾಕಿತು. ಈತನ ನಂತರದಲ್ಲಿ ಇನ್ನೂ ಹತ್ತು ಜನ ಮೃತಪಟ್ಟಿದ್ದಾರೆ. ಕೆಲವು ಉದಾಹರಣೆಗಳು:

ಕಮರ್ ನವಬಾದ್ ಗ್ರಾಮದ ಮೊಹಮ್ಮದ್ ಸಾದೆಕ್‌ನ ತಂಗಿ ಶಬಾನಾ ಖಾತೂನ್ ಸಶಸ್ತ್ರ ಕಾರ್ಯಕರ್ತರಿಂದ ಅತ್ಯಾಚಾರಕ್ಕೆ ಒಳಗಾಗುವುದರಿಂದ ಸ್ವಲ್ಪದರಲ್ಲೆ ಪಾರಾದಳು. ಸಾದೆಕ್‌ಅಲಿ ಟಿಎಂಸಿ ಬೆಂಬಲಿಗ. ಕಾಂಗ್ರೆಸ್ ಕಾರ್ಯಕರ್ತನಾಗಿದ್ದ ಈತನ ತಂದೆ ಮೊಹಮ್ಮದ್ ನೂರ್ ಅಲಿ ವರ್ಷಗಳ ಹಿಂದೆಯೆ ಕೊಲೆಯಾಗಿದ್ದ.

ಕಳೆದ ಡಿಸೆಂಬರ್‌ನಲ್ಲಿ ಕಾಲೇಜು ಚುನಾವಣೆಗೆ ಹೆಸರು ನೋಂದಾಯಿಸಿ ಹೊರಬರುತ್ತಿದ್ದ ಎಸ್‌ಎಫ್‌ಐ ಸದಸ್ಯ ಸ್ವಪನ್ ಕೋಲೆಯನ್ನು ತೃಣಮೂಲ ಛಾತ್ರ ಪರಿಷದ್‌ನ ಸುಮಾರು 30 ಪುಂಡರು ಅಟ್ಟಾಡಿಸಿ ಕೊಂದು ಹಾಕಿದರು.

ಅದೇ ದಿನ ಕೋಲ್ಕತ್ತದ ಕಾಲೇಜೊಂದರಲ್ಲಿ ಎಸ್‌ಎಫ್‌ಐ ಮತ್ತು ತೃಣಮೂಲ ಛಾತ್ರ ಪರಿಷದ್‌ನ ವಿದ್ಯಾರ್ಥಿ ಗುಂಪುಗಳ ನಡುವೆ ನಡೆದ ಹೊಡೆದಾಟದಲ್ಲಿ ಎಸ್‌ಎಫ್‌ಐ ಬೆಂಬಲಿಗ ಸೌವಿಕ್ ಹಜ್ರಾ ಒಂದು ಕಣ್ಣನ್ನು ಕಳೆದುಕೊಂಡ.

ಕೆಲವು ತಿಂಗಳ ಹಿಂದೆ ಸಸಾನ್ ಗ್ರಾಮದ ದುಗ್ದಿಯಾ ಹೈಸ್ಕೂಲಿನ ಸಮಿತಿಗೆ ಚುನಾವಣೆಗಳು ನಡೆಯುತ್ತಿದ್ದ ವೇಳೆ 'ಹರ್ಮದ್ ವಾಹಿನಿ'ಯವರು ಗುಂಡು ಹಾರಿಸಿದ್ದರು.

ತೆಗಾರಿಯಾ ಗ್ರಾಮದ ಕೃಷಿ ಕಾರ್ಮಿಕನಾದ ಸುಸಾಂತ ಮೊಂಡಲ್ ಕಾಂಗ್ರೆಸ್ ಕಾರ್ಯಕರ್ತ. ಈತನ ವಿರುದ್ಧ ಮಾದಕ ದ್ರವ್ಯದ ಆರೋಪ ಹೊರಿಸಿ ಜೈಲಿಗೆ ತಳ್ಳಲಾಯಿತು. ಕೊನೆಗೆ ಟಿಎಂಸಿ ಪಕ್ಷದ ಸಹಾಯದಿಂದ ಬಿಡುಗಡೆಗೊಂಡಿರುವ ಸುಸಾಂತ ಈಗ ಸಿಪಿಐ(ಎಂ) ಪುಂಡರ ಭೀತಿಯಲ್ಲಿ ಜೀವಿಸುತ್ತಿದ್ದಾನೆ.

ಜ್ಯೋತ್ಸಾಡಿ ಗ್ರಾಮದಲ್ಲಿ ಟಿಎಂಸಿ ಮತ್ತು ಸಿಪಿಐ(ಎಂ) ಕಾರ್ಯಕರ್ತರ ಮಧ್ಯೆ ಕಾಳಗ ಭುಗಿಲೆದ್ದಾಗ ಕಾಜಲ್ ಮೊಲ್ಲಾ ಎಂಬ 28ರ ಹರೆಯದ ರೈತ ಸಮವಸ್ತ್ರಧಾರಿಗಳ ಗುಂಡೇಟಿಗೆ ಬಲಿಯಾದ.

ಪೂರ್ವ ಮಿಡ್ನಾಪುರದ ನಂದಿಗ್ರಾಮದಲ್ಲಿ ಪೊಲೀಸರ ಗುಂಡೇಟಿಗೆ 14 ಮಂದಿ ಗ್ರಾಮಸ್ಥರು ಬಲಿಯಾದಾಗಲೆ ಅಂತರ್ಯುದ್ಧದ ಮೊದಲ ಸೂಚನೆಗಳು ಬಂದಿದ್ದವು. ವಾಸ್ತವದಲ್ಲಿ ಭೂಮಿಗಾಗಿ ನಡೆದ ಕಲಹವೊಂದಕ್ಕೆ ರಾಜಕೀಯ ಸ್ವರೂಪ ನೀಡಲಾಯಿತು. ಬಾವುಟಧಾರಿ, ಸಶಸ್ತ್ರ ಬೈಕ್ ಸವಾರರು ಹಳ್ಳಿ ಹಳ್ಳಿಗಳಲ್ಲಿ ಸಂಚರಿಸಿ ಗ್ರಾಮಸ್ಥರನ್ನು ಪರಸ್ಪರರ ವಿರುದ್ಧ ಎತ್ತಿಕಟ್ಟಿದರು. ಟಿಎಂಸಿ ಪಕ್ಷ ಸಿಪಿಐ(ಎಂ)ನ್ನು ನಂದಿಗ್ರಾಮದಿಂದ ಹೊರತಳ್ಳಿತು. ಸಿಪಿಐ(ಎಂ) ಕಾರ್ಯಕರ್ತರ ಪಡೆ ಪಕ್ಕದ ಖೆಜೂರಿಯನ್ನು ಆಕ್ರಮಿಸಿಕೊಂಡಿತು. ಇದಾಗಿ 3ವರ್ಷಗಳು ಕಳೆದಿವೆಯಾದರೂ ಖೆಜೂರಿಯ ಕಲಹ ಮಾತ್ರ ಇನ್ನೂ ಮುಂದುವರಿದಿದೆ.

ಇಂದು ರಾಜ್ಯದಾದ್ಯಂತ ಇದೇ ತೆರನಾದ ವಾತಾವರಣವಿದೆ. ಎಲ್ಲ 18 ಜಿಲ್ಲೆಗಳಲ್ಲೂ ಚೂರುಪಾರು ಹಿಂಸಾಚಾರದ ಘಟನೆಗಳು ಸಂಭವಿಸಿವೆ. ಆದರೆ ಅತ್ಯಂತ ಚಂಚಲ ಪರಿಸ್ಥಿತಿ ಇರುವುದು ಟಿಎಂಸಿ ಕಳೆದೆರಡು ವರ್ಷಗಳಲ್ಲಿ ಗಣನೀಯ ಪ್ರಗತಿ ಸಾಧಿಸಿರುವ ಪೂರ್ವ ಮಿಡ್ನಾಪುರ, ಉತ್ತರ 24 ಪರಗಣ, ದಕ್ಷಿಣ 24 ಪರ ಗಣ, ಹೂಗ್ಲಿ ಜಿಲ್ಲೆ ಮತ್ತು ಸಿಪಿಐ(ಎಂ) ಭದ್ರಕೋಟೆ ಯಾದ ಬರ್ದ್ವಾನ್‌ನ ಕೆಲವು ಪ್ರದೇಶಗಳಲ್ಲಿ. ಇಲ್ಲೆಲ್ಲಾ ಯಾವ ಕ್ಷಣದಲ್ಲೂ ಹಿಂಸಾಚಾರ ಭುಗಿಲೇಳುವಂತಿದೆ. ಸಿಪಿಐ(ಎಂ) ಈ ಕ್ಷೇತ್ರಗಳನ್ನು ಮರುವಶಪಡಿಸಿಕೊಳ್ಳಲು ಅಥವಾ ಹಿಡಿತದಲ್ಲಿಟ್ಟುಕೊಳ್ಳಲು ಹೆಣಗಾಡುತ್ತಿದೆ. ಇನ್ನು ಪಶ್ಚಿಮ ಮಿಡ್ನಾಪುರದ ಪರಿಸ್ಥಿತಿ ಇನ್ನಷ್ಟು ಕ್ಲಿಷ್ಟಕರವಾಗಿದೆ. ಅಲ್ಲಿ ಮಾವೊವಾದಿಗಳೂ, ಅವರನ್ನು ಮಟ್ಟಹಾಕಲೆಂದು ನಿಯೋಜಿಸಲಾಗಿರುವ ಭದ್ರತಾ ಪಡೆಗಳೂ ಇರುವುದರಿಂದ ಆರೋಪ, ಪ್ರತ್ಯಾರೋಪಗಳು ದಟ್ಟವಾಗಿವೆ. ಟಿಎಂಸಿ ಮಾವೊವಾದಿಗಳ ಪರವಿದೆಯೆಂದು ಸಿಪಿಐ(ಎಂ) ದೂರುತ್ತಿದೆ. ಸಿಪಿಐ(ಎಂ) ಭದ್ರತಾ ಪಡೆಗಳನ್ನು ಬಳಸಿಕೊಳ್ಳುತ್ತಿದೆಯೆಂದು ಟಿಎಂಸಿ ಆರೋಪಿಸುತ್ತಿದೆ.

2007ರಲ್ಲಿ ಪೂರ್ವ ಮಿಡ್ನಾಪುರದ ನಂದಿಗ್ರಾಮದಲ್ಲಿ ಪೊಲೀಸರ ಗುಂಡೇಟಿಗೆ 14 ಮಂದಿ ಗ್ರಾಮಸ್ಥರು ಬಲಿಯಾದಾಗಲೆ ಅಂತರ್ಯುದ್ಧದ ಮೊದಲ ಸೂಚನೆಗಳು ಬಂದಿದ್ದವು. ವಾಸ್ತವದಲ್ಲಿ ಭೂಮಿಗಾಗಿ ನಡೆದ ಕಲಹವೊಂದಕ್ಕೆ ರಾಜಕೀಯ ಸ್ವರೂಪ ನೀಡ ಲಾಯಿತು. ಬಾವುಟಧಾರಿ, ಸಶಸ್ತ್ರ ಬೈಕ್ ಸವಾರರು ಹಳ್ಳಿ ಹಳ್ಳಿಗಳಲ್ಲಿ ಸಂಚರಿಸಿ ಗ್ರಾಮಸ್ಥರನ್ನು ಪರಸ್ಪರರ ವಿರುದ್ಧ ಎತ್ತಿಕಟ್ಟಿದರು. ಟಿಎಂಸಿ ಪಕ್ಷ ಸಿಪಿಐ(ಎಂ)ನ್ನು ನಂದಿ ಗ್ರಾಮದಿಂದ ಹೊರತಳ್ಳಿತು. ಸಿಪಿಐ(ಎಂ) ಕಾರ್ಯಕರ್ತರ ಪಡೆ ಪಕ್ಕದ ಖೆಜೂರಿಯನ್ನು ಆಕ್ರಮಿಸಿ ಕೊಂಡಿತು. ಇದಾಗಿ 3 ವರ್ಷಗಳು ಕಳೆದಿವೆಯಾದರೂ ಖೆಜೂರಿಯ ಕಲಹ ಮಾತ್ರ ಇನ್ನೂ ಮುಂದುವರಿದಿದೆ.

ಅಗೋಚರ ಹಿಂಸೆ

ಇದೆಲ್ಲ ಕಣ್ಣಿಗೆ ಕಾಣುವ ಹಿಂಸಾಚಾರವಾದರೆ ಒಳಗಿಂದೊಳಗೆ ಇನ್ನೊಂದು ತೆರನಾದ ಅಗೋಚರ ಹಿಂಸೆಯೂ ನಡೆಯುತ್ತಿದೆ. ಸಿಪಿಐ(ಎಂ) ಕಳೆದ 34 ವರ್ಷಗಳ ಅವಧಿಯಲ್ಲಿ ಶಿಕ್ಷಣ, ಕಲೆ, ಕ್ರೀಡೆ ಮುಂತಾದ ಕ್ಷೇತ್ರಗಳನ್ನು ಪ್ರವೇಶಿಸಿದೆ. ಹೀಗಾಗಿ ಮಧ್ಯಮ ವರ್ಗದ ದೊಡ್ಡ ವಿಭಾಗವೊಂದಕ್ಕೆ ತನ್ನ ಉಳಿವಿಗಾಗಿ ಸಿಪಿಐ(ಎಂ)ನ್ನು ಆಶ್ರಯಿಸದೆ ಉಪಾಯವಿರಲಿಲ್ಲ. ತಟಸ್ಥರಾಗಿರಲು ಬಯಸುವ ನಾಗರಿಕರ ಪಾಲಿಗೆ ಅವಕಾಶ ಬಹಳ ಕಿರಿದಾಗಿದೆ. ಇದ್ದಕ್ಕಿದ್ದಂತೆ ಜಲಮೂಲಗಳು, ಸಿಂಗೂರ್‌ನ ನ್ಯಾನೊ ಕಾರ್ಖಾನೆ, ವಿಶ್ವವಿದ್ಯಾನಿಲಯ ಶಿಕ್ಷಣ, ನಾಗರಿಕ ಹಕ್ಕು ಚಳುವಳಿಗಳೆಲ್ಲವೂ ಕೆಂಪು ಅಥವಾ ಹಸಿರು ಬಣ್ಣ ತಳೆದಿವೆ.

ಕಲಾವಿದರು, ಆರ್ಥಿಕ ತಜ್ಞರು, ಲೇಖಕರು, ಸಂಗೀತಗಾರರನ್ನೊಳಗೊಂಡಂತೆ ಪ್ರತಿಯೊಬ್ಬನೂ ತನ್ನ ಬಣ್ಣವನ್ನು ಆಯ್ಕೆ ಮಾಡಿಕೊಂಡು ಅದಕ್ಕೆ ವಿಧೇಯನಾಗಿ ನಡೆದುಕೊಳ್ಳಬೇಕಾಗಿದೆ. ನಂದಿಗ್ರಾಮದ ಘಟನೆಯ ಬಳಿಕ ಸಿಪಿಐ(ಎಂ)ನ್ನು ಟೀಕಿಸಿದ್ದ ಬಂಗಾಳದ ಹಲವು ಕಲಾವಿದರಿಗೆ ಸಮಸ್ಯೆಗಳು ಎದುರಾಗಿವೆ. ಹಠಾತ್ತಾಗಿ ಕೆಲವು ನಿರ್ದೇಶಕರ ನಾಟಕ ಪ್ರದರ್ಶನಗಳನ್ನು ರದ್ದುಗೊಳಿಸುವ ಪ್ರಕ್ರಿಯೆ ಆರಂಭವಾಯಿತು. ಟೀಕಾಪ್ರಹಾರವನ್ನು ಮುಂದುವರಿಸಿದವರು ಟಿಎಂಸಿ ಜೊತೆ ಸೇರಬೇಕಾಯಿತು.

ಬದಲಾವಣೆಯ ಕ್ಷಣಗಣನೆ ಆರಂಭ?

ನೇತೃ ಘಟನೆ ಏನನ್ನು ಸೂಚಿಸುತ್ತದೆ? ಅಧಿಕಾರದ ಕೊನೆಕ್ಷಣಗಳನ್ನು ಎದುರಿಸುತ್ತಿರುವ ಪ್ರಭುತ್ವವೊಂದರ ಹತಾಶೆ ಹದ್ದು ಮೀರುತ್ತಿದೆ ಎಂಬುದನ್ನು. ನಿಯಂತ್ರಣ ಕಳೆದುಕೊಂಡ ಆಡಳಿತ ವ್ಯವಸ್ಥೆ ತನಗೆ ತಾನೇ ಪರ ಮಶತ್ರುವಾಗಿ ಪರಿಣಮಿಸಿದೆ ಎಂಬುದನ್ನು. ಹರ್ಮದ್ ಶಿಬಿರಗಳ ಬಗ್ಗೆ ಹಾಗೂ ಸಿಪಿಐ(ಎಂ) ಕಚೇರಿ, ಪಂಚಾಯತು ಕಚೇರಿ, ಶಾಲೆಗಳಲ್ಲಿ ಎಕೆ–47, ಗ್ರೇನೆಡು ಇತ್ಯಾದಿ ಆಯುಧಗಳನ್ನು ಸಂಗ್ರಹಿಸಿಟ್ಟಿರುವ ಬಗ್ಗೆ ಗುಪ್ತದಳ ಆಗಸ್ಟ್ 2010ರಲ್ಲೆ ವರದಿ ಮಾಡಿತ್ತು. ಅದರ ಪ್ರತಿ 'ತೆಹಲ್ಕಾ'ಗೆ ದೊರೆತಿತ್ತು. ಅಂದು ಹಳ್ಳಿಗಳನ್ನು ಬಲಾತ್ಕಾರ ಪೂರ್ವಕವಾಗಿ ಮರುವಶಪಡಿಸಿಕೊಳ್ಳಲಾಗುತ್ತಿತ್ತು. "ಶರಣಾಗಿ ಇಲ್ಲಾ ಪರಿಣಾಮ ಎದುರಿಸಿ" ಎಂದು ಹೇಳಲಾಗುತ್ತಿತ್ತು. ಬಂಗಾಳದಲ್ಲೂ 'ಸಲ್ವಾ ಜುಡುಂ' ಶೈಲಿಯ ಕಾರ್ಯಾಚರಣೆ ನಡೆಯಲಿದೆ ಎಂಬುದರ ಮೊದಲ ಸೂಚನೆ ಅದಾಗಿತ್ತು.

ಅದು ಬಂಗಾಳ ಯಾದವೀ ಕಲಹದತ್ತ ಸಾಗುವ ಸಾಧ್ಯತೆಯತ್ತ ಬೆಟ್ಟುಮಾಡಿತ್ತು. ಸಪ್ಟಂಬರ್ ಗಾಗುವಾಗ ಹರ್ಮದ್ ಶಿಬಿರಗಳು ರಾಜ್ಯದಾದ್ಯಂತ ಹರಡಿಕೊಂಡಿರುವುದು ಸ್ಪಷ್ಟವಾಗಿತ್ತು. ಒಂದು ವಾರದಲ್ಲಿ 25 ರಾಜಕೀಯ ಹತ್ಯೆಗಳಾಗಿರುವುದನ್ನು, ಸಿಪಿಐ(ಎಂ) ಲಾಲ್‌ಗಡವನ್ನು ಮರುವಶಪಡಿಸಿಕೊಳ್ಳಲು ಸನ್ನದ್ಧವಾಗಿರುವುದನ್ನು 'ತೆಹಲ್ಕಾ' ವರದಿ ಮಾಡಿದ ಬೆನ್ನಲ್ಲಿ ಸಿಪಿಐ(ಎಂ) ಅದನ್ನು ಸಾಧಿಸಿದೆ. ಈಗ ಜನವರಿ 2011ರಕ್ಕಾಗುವಾಗ ಇನ್ನೂ ಅನೇಕ ಹಳ್ಳಿಗಳಲ್ಲಿ ಸ್ಮಶಾನ ಮೌನ ನೆಲಸಿದೆ; ನಿರಾಶ್ರಿತರು ಕೋಳಿ ಫಾರ್ಮ್‌ಗಳಲ್ಲಿ ಬದುಕುತ್ತಿದ್ದಾರೆ; ತಾಯಂದಿರು ತಮ್ಮನ್ನಗಲಿದ ಮಕ್ಕಳಿಗಾಗಿ ಗೋಳಾಡುತ್ತಿದ್ದಾರೆ. ಒಟ್ಟಾರೆಯಾಗಿ ಅಂತರ್ಯುದ್ಧ ಈಗಾಗಲೆ ಆರಂಭವಾಗಿರುವಂತೆ ತೋರುತ್ತಿದೆ. □

ಕೃಪೆ: 'ತೆಹಲ್ಕಾ', ಜನವರಿ 22, 2011

ಈಜಿಪ್ಟ್ ಜನ ಕ್ರಾಂತಿ: ಜಗದ ಆಶಾಕಿರಣ

ನಾ ದಿವಾಕರ

ಸಾಮ್ರಾಜ್ಯಶಾಹಿಗಳ ಬೆಂಬಲದಿಂದ ತಮ್ಮದೇ ಆದ ಲೋಕವನ್ನು ಸೃಷ್ಟಿಸಿಕೊಂಡಿದ್ದ ಮುಬಾರಕ್ ಅವರಂತಹ ಬಂಡವಾಳಶಾಹಿಗಳ ನವ ಉದಾರವಾದಿ ನೀತಿಗಳ ವಿರುದ್ಧ ಈಜಿಪ್ಟ್‌ನ ಜನಸಾಮಾನ್ಯರು ಸಿಡಿದೆದ್ದು ಕ್ರಾಂತಿಕಾರಿ ವಿಜಯ ಸಾಧಿಸಿದ್ದಾರೆ. ತನ್ನ ಏಳು ಸಾವಿರ ವರ್ಷಗಳ ಇತಿಹಾಸದಲ್ಲಿ ಒಮ್ಮೆಯೂ ಪ್ರಜಾತಂತ್ರದ ನೆರಳನ್ನೂ ಕಾಣದ ಈಜಿಪ್ಟ್ ಈಗ ಪ್ರಜಾಸ ತ್ತಾತ್ಮಕ ವ್ಯವಸ್ಥೆಯತ್ತ ದಾಪುಗಾಲು ಹಾಕುತ್ತಿದೆ. ಈ ಯಶಸ್ಸಿಗೆ ಕಾರಣ ಈಜಿಪ್ಟಿನ ಯುವ ಜನತೆಯ ಪ್ರಜಾಸತ್ತೆಯ ಕನಸು ಮತ್ತು ಅವಿರತ ಶ್ರಮದ ಹೋರಾಟ.

ಜಾಗತಿಕ ಇತಿಹಾಸದಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆ ಸ್ಥಾಪಿತವಾಗಿ ಶತಮಾನಗಳೇ ಸವೆದರೂ, 21ನೆಯ ಶತಮಾನದ ಆಧುನಿಕ ನಾಗರಿಕತೆಯೂ ಸಹ ಸರ್ವಾಧಿಕಾರಿಗಳನ್ನು ಸಹಿಸಿಕೊಂಡು ಬಾಳುತ್ತಿರುವುದು ಆಧುನಿಕ ಮಾನವ ಪ್ರಜ್ಞೆಯ ವಿಡಂಬನೆ. ಪ್ರಜಾತಂತ್ರ ವ್ಯವಸ್ಥೆಯ ಬಗ್ಗೆ, ಮಾನವನ ಮೂಲಭೂತ ಹಕ್ಕುಗಳ ಬಗ್ಗೆ, ಪ್ರಜೆಗಳ ಆಳುವ ಹಕ್ಕುಗಳ ಬಗ್ಗೆ ಜಾಗತಿಕ ಮಟ್ಟದಲ್ಲಿ ಎಷ್ಟೇ ಜಾಗೃತಿ ಮೂಡಿದ್ದರೂ ಎಲ್ಲೋ ಒಂದೆಡೆ ಆಳುವ ವರ್ಗಗಳು ತಮ್ಮದೇ ಆದ ಸರ್ವಾಧಿಕಾರಿ ಮನೋವೃತ್ತಿಯನ್ನು ಜನಸಾಮಾನ್ಯರ ಮೇಲೆ ಹೇರಿರುವುದನ್ನು ಕಾಣಬಹುದು. ಕೆಲವು ರಾಷ್ಟ್ರಗಳಲ್ಲಿ ಈ ಧೋರಣೆ ಪ್ರತ್ಯಕ್ಷ ಆಳ್ವಿಕೆಯಲ್ಲೇ ಕಂಡುಬಂದರೆ ಇನ್ನು ಕೆಲವು ರಾಷ್ಟ್ರಗಳಲ್ಲಿ ಪ್ರಜಾತಂತ್ರದ ಸೋಗಿನಲ್ಲಿ ಮಿಲಿಟರಿ ಆಡಳಿತ ನಡೆಸುತ್ತಿರುವುದೂ ಈ ಸಂದರ್ಭದಲ್ಲಿ ಉಲ್ಲೇಖನಾರ್ಹ. ಈ ಎರಡೂ ವಿದ್ಯಮಾನಗಳ ನಡುವೆ ಕಂಡುಬರುವ ಮತ್ತೊಂದು ವೈಶಿಷ್ಟ್ಯವೆಂದರೆ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನೇ ಪಾಲಿಸುವ ರಾಷ್ಟ್ರಗಳಲ್ಲೂ ಪ್ರಜೆಗಳ ಸಾರ್ವಭೌಮತೆ ಮತ್ತು ಹಕ್ಕುಗಳ ಉಲ್ಲಂಘನೆಯಾಗುತ್ತಿರುವುದು.

ಈ ಮೂರು ವಿದ್ಯಮಾನಗಳ ಹಿನ್ನೆಲೆಯಲ್ಲಿ ಗ್ರಹಿಸಬೇಕಾದ ಅಂಶವೆಂದರೆ, ಆಳ್ವಿಕರು ತಮ್ಮ ರಾಷ್ಟ್ರದ ಪರಿಕಲ್ಪನೆಯ ಭೌಗೋಳಿಕ ಚೌಕಟ್ಟಿನಲ್ಲಿ ಆಳ್ವಿಕೆ ನಡೆಸಲು ಅಪೇಕ್ಷಿಸುವುದು ಆಯಾ ಭೌಗೋಳಿಕ ಪ್ರದೇಶದ ವ್ಯಾಪ್ತಿಯಲ್ಲಿರುವ ಸಂಪನ್ಮೂಲಗಳ ಒಡೆತನ ಮತ್ತು ಉತ್ಪಾದನಾ ಸಂಬಂಧಗಳ ಒಡೆತನ, ತನ್ಮೂಲಕ ಉತ್ಪಾದಕೀಯ ಶಕ್ತಿಗಳ ಮೇಲಿನ ನಿಯಂತ್ರಣ. ಈ ನಿಟ್ಟಿನಲ್ಲಿ ಪ್ರಜಾತಂತ್ರ ಮೌಲ್ಯಗಳು ಹಲವಾರು ಸಂದರ್ಭಗಳಲ್ಲಿ ಮುಖವಾಡವಾಗಿ ಕಾರ್ಯ ನಿರ್ವಹಿಸಿರುವುದನ್ನು ಅನೇಕ ದೇಶಗಳ ಚರಿತ್ರೆಯಲ್ಲಿ ಕಾಣಬಹುದು. ತಮ್ಮ ದೇಶದ ಸಂಪತ್ತು ಮತ್ತು ಸಂಪನ್ಮೂಲಗಳ ಒಡೆತನವನ್ನು ತಾವೇ ಹೊಂದುವ ಪ್ರಜೆಗಳ ಅಪೇಕ್ಷೆಯನ್ನು ಸಾಕಾರಗೊಳಿಸುವ ಪ್ರಜಾತಂತ್ರ ವ್ಯವಸ್ಥೆಯನ್ನು ಅದೇ ಪ್ರಜೆಗಳ ಹೆಸರಿನಲ್ಲಿ ತಮ್ಮ ಉದ್ಯಮಶೀಲತೆಯ ಸೋಗಿನಲ್ಲಿ ಆಕ್ರಮಿಸಿಕೊಳ್ಳುವ ಆಳ್ವಿಕರ ಹುನ್ನಾರಕ್ಕೆ ಸೂಕ್ತ ವೇದಿಕೆ ನಿರ್ಮಿಸಿದ್ದು ನವ ಉದಾರವಾದ ಪ್ರಕ್ರಿಯೆ. ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣಗಳ ನೀತಿಗಳು.

1990ರಲ್ಲಿ ನವ ಉದಾರವಾದಿ ನೀತಿಗಳು ವಿಶ್ವದಾದ್ಯಂತ ಜಾರಿಗೊಂಡಾಗ ಬಂಡವಾಳ ರಾಷ್ಟ್ರಗಳಿಂದ ಮೂಡಿಬಂದ ಒಕ್ಕೊರಲ ದನಿ ಒಂದೇ. "ಇಡೀ ಜಗತ್ತೇ ಒಂದು ಪುಟ್ಟ ಗ್ರಾಮವಾಗುತ್ತದೆ, ದೇಶದೇಶಗಳ ನಡುವಿನ ಗಡಿ ಮರೆಯಾಗುತ್ತದೆ, ವಿಶ್ವದ ಪ್ರಜೆಗಳು ಸರ್ವಸ್ವಾತಂತ್ರ್ಯ ಅನುಭವಿಸುತ್ತಾರೆ" ಇತ್ಯಾದಿ ಇತ್ಯಾದಿ. ಬಂಡವಾಳದ ಹರಿವಿಗೆ ತಡೆಗೋಡೆಗಳಾಗಿದ್ದ ರಾಷ್ಟ್ರಗಳ ಸ್ವಾವಲಂಬನಾ ನೀತಿಯನ್ನು ಕೊನೆಗಾಣಿಸುತ್ತಲೇ, ಬಂಡವಾಳ ಹೂಡಿಕೆಯಿಂದಲೇ ಜನಸಾಮಾನ್ಯರ ಬಡತನವನ್ನು ನೀಗಿಸುವ ಉದಾರವಾದದ ಅಭಿವೃದ್ಧಿ ಧೋರಣೆ ಸೃಷ್ಟಿಸಿದ್ದು ಐಷಾರಾಮಿ ಶ್ರೀಮಂತಿಕೆಯ ದ್ವೀಪಗಳನ್ನು. ದೇಶಗಳ ಆಂತರ್ಯದಲ್ಲೇ ಸೃಷ್ಟಿಯಾದ ಈ ದ್ವೀಪಗಳು ಬಂಡವಾಳ ವ್ಯವಸ್ಥೆಯ ಸಂಕೋಲೆಗಳನ್ನು ಬಿಗಿಗೊಳಿಸಿದವೇ ಹೊರತು ಆರ್ಥಿಕ ಅಸಮಾನತೆಯನ್ನಾಗಲಿ ಸಾಮಾಜಿಕ ಜಡತ್ವವನ್ನಾಗಲೀ ನೀಗಿಸಲಿಲ್ಲ.

ತಮ್ಮ ಶ್ರಮದ ದುಡಿಮೆ ಮತ್ತು ತಮ್ಮ ಸ್ವಾಭಾವಿಕ ಒಡೆತನದ ಸಂಪನ್ಮೂಲಗಳು ಅನ್ಯರ ಪಾಲಾಗುವುದನ್ನು ನೋಡುತ್ತಾ, ಬಡವ–ಶ್ರೀಮಂತರ ನಡುವಿನ ಕಂದರ ಹೆಚ್ಚಾಗುವುದನ್ನು ನೋಡುತ್ತಾ, ಉದಾರವಾದದ ಭ್ರಮಾಲೋಕದಲ್ಲಿ ವಿಹರಿಸುತ್ತಿದ್ದ ನವಪೀಳಿಗೆಯ ಯುವ ಜನತೆಗೆ ಜ್ಞಾನೋದಯವಾಗಲು ಎರಡು ದಶಕಗಳೇ ಬೇಕಾಯಿತು.

ಈಜಿಪ್ಟ್‌ನಲ್ಲಿ ಪ್ರಜಾತಂತ್ರದ ಸ್ಥಾಪನೆಗಾಗಿ ಅಧ್ಯಕ್ಷ ಹೋಸ್ನಿ ಮುಬಾರಕ್ ಅವರ ಸರ್ವಾಧಿಕಾರದ ವಿರುದ್ಧ ಕ್ರಾಂತಿಕಾರಿ ಹೋರಾಟದಲ್ಲಿ ತೊಡಗಿರುವ ಜನತೆ.

ಹೊಸ್ನಿ ಮುಬಾರಕ್

ಈ ಜ್ಞಾನೋದಯದ ಸಂಕೇತವಾಗಿಯೇ ಈಜಿಪ್ಟ್‌ನಲ್ಲಿ ನಡೆಯುತ್ತಿರುವ ಪ್ರಜಾಂದೋಲನವನ್ನು ವಿಶ್ಲೇಷಿಸಬೇಕಾಗುತ್ತದೆ. ಮಾಧ್ಯಮಗಳಲ್ಲಿ ಬಿಂಬಿಸುವಂತೆ ಈಜಿಪ್ಟ್‌ನಲ್ಲಿ ವ್ಯಕ್ತವಾಗುತ್ತಿರುವ ಅಭೂತಪೂರ್ವ ಪ್ರತಿಭಟನೆಗಳು ಅಧ್ಯಕ್ಷ ಹೊಸ್ನಿ ಮುಬಾರಕ್ ಅವರ ಸರ್ವಾಧಿಕಾರದ ವಿರುದ್ಧ ಮಾತ್ರವಲ್ಲ. ತೈಲೋತ್ಪನ್ನಗಳ ಅಮೂಲ್ಯ ಸಂಪತ್ತಿನ ಮೇಲೆ ತಮ್ಮ ಒಡೆತನವನ್ನು ಸ್ಥಾಪಿಸಲು, ಸಾಮ್ರಾಜ್ಯಶಾಹಿಗಳ ಬೆಂಬಲದಿಂದ ತಮ್ಮದೇ ಆದ ಲೋಕವನ್ನು ಸೃಷ್ಟಿಸಿಕೊಂಡಿದ್ದ ಮುಬಾ ರಕ್ ಅವರಂತಹ ಬಂಡವಾಳಶಾಹಿಗಳ ನವ ಉದಾರ ವಾದಿ ನೀತಿಗಳ ವಿರುದ್ಧ ಈಜಿಪ್ಟ್‌ನ ಜನಸಾಮಾನ್ಯರು ಸಿಡಿದೆದ್ದು ಕ್ರಾಂತಿಕಾರಿ ವಿಜಯ ಸಾಧಿಸಿದ್ದಾರೆ. ತನ್ನ ಏಳು ಸಾವಿರ ವರ್ಷಗಳ ಇತಿಹಾಸದಲ್ಲಿ ಒಮ್ಮೆಯೂ ಪ್ರಜಾತಂತ್ರದ ನೆರಳನ್ನೂ ಕಾಣದ ಈಜಿಪ್ಟ್ ಈಗ ಪ್ರಜಾಸತ್ತಾತ್ಮಕ ವ್ಯವಸ್ಥೆಯತ್ತ ದಾಪುಗಾಲು ಹಾಕುತ್ತಿದೆ. ಈ ಯಶಸ್ಸಿಗೆ ಕಾರಣ ಈಜಿಪ್ಟಿನ ಯುವ ಜನತೆಯ ಪ್ರಜಾ ಸತ್ತೆಯ ಕನಸು ಮತ್ತು ಅವಿರತ ಶ್ರಮದ ಹೋರಾಟ.

ಈಜಿಪ್ಟ್‌ನ ಇತಿಹಾಸ

ಆರೂವರೆ ಸಾವಿರ ಕಿಲೋಮೀಟರ್ ಕ್ರಮಿಸುವ ನೈಲ್ ನದಿ ಹಲವಾರು ದೇಶಗಳಲ್ಲಿ ಹರಿದು ಸಂಚರಿಸಿದರೂ ನೈಲ್ ನದಿಯ ನಾಗರಿಕತೆಯಾಗಿ ರೂಪುಗೊಂಡಿದ್ದು ಈಜಿಪ್ಟ್ ಎಂಬ ರಾಷ್ಟ್ರ. ಏಳು ಸಹಸ್ರಮಾನಗಳನ್ನು ಕಂಡಿರುವ ಈಜಿಪ್ಟ್ ರಾಷ್ಟ್ರವನ್ನು ಆಳಿರುವ ಅರಸೊತ್ತಿಗೆಗಳು ಹತ್ತು ಹಲವಾರು. ಅಲೆಗ್ಸಾಂಡರ್ ನಂತರ ಈಜಿಪ್ಟನ್ನು ಆಕ್ರಮಿಸಿ ನೂರಾರು ವರ್ಷಗಳ ಕಾಲ ಆಳ್ವಿಕೆ ನಡೆಸಿದ ರೋಮನ್ನರು ಕ್ರೈಸ್ತ ಮತವನ್ನೂ ಸ್ಥಾಪಿಸುವುದರಲ್ಲಿ ಯಶಸ್ವಿಯಾಗಿದ್ದರು. ಆದರೆ ನಂತರದಲ್ಲಿ ಈ ದೇಶವನ್ನು ಆಕ್ರಮಿಸಿದ ಪರ್ಷಿಯ, ಅರಬ್ ಮತ್ತು ಟರ್ಕಿಯ ದೊರೆಗಳು ಇಲ್ಲಿ ಇಸ್ಲಾಂ ಧರ್ಮವನ್ನು ನೆಲೆಯೂರುವಂತೆ ಮಾಡಿದ್ದರು. ಅರಬ್ಬರಿಂದ ನೆಪೋಲಿಯನ್‌ಗೆ, ನಂತರ ಬ್ರಿಟೀಷರ ಕೈಗೆ ಸಿಲುಕಿದ ಈಜಿಪ್ಟ್ 1922ರಲ್ಲಿ ಪ್ರಜಾಕ್ರಾಂತಿಯ ಮೂಲಕ ಆಂಗ್ಲರ ಆಳ್ವಿಕೆಯಿಂದ ಮುಕ್ತಿ ಪಡೆದರೂ ಮತ್ತೊಮ್ಮೆ ಅರಸೊತ್ತಿಗೆಯ

ಈಜಿಪ್ಟಿನ ಜನತೆ ಪ್ರಜಾತಂತ್ರಕ್ಕಾಗಿ ಲಕ್ಷೋಪಯಾದಿಯಾಗಿ ಹೋರಾಟದ ಕಣಕ್ಕೆ ಧುಮುಕಿದ್ದರೆ ಈ ಹಪಹಪಿಯ ಹಿಂದೆ ಎರಡು ಪ್ರಬಲ ಕಾರಣಗಳಿವೆ. ಮೊದಲನೆಯದು ಹಲವು ಪೀಳಿಗೆಗಳಿಂದ ಪ್ರಜಾಸತ್ತಾತ್ಮಕ ಮೌಲ್ಯಗಳಿಂದ ಮತ್ತು ಮುಕ್ತ ಸ್ವಾತಂತ್ರ್ಯದಿಂದ ವಂಚಿತರಾಗಿರುವ ಜನಸಮುದಾಯಗಳು. ಎರಡನೆಯದು ಆಳ್ವಿಕರ ಸರ್ವಾಧಿಕಾರಿ ಧೋರಣೆಗೆ ಪುಷ್ಟಿ ನೀಡುವುದೇ ಅಲ್ಲದೆ ತಮ್ಮ ಶ್ರಮದ ಫಲವನ್ನು ಸ್ವತಃ ಅನುಭವಿಸಲಾಗದೆ ಉದಾರವಾದದ ದುಷ್ಪರಿಣಾಮಗಳನ್ನು ಎದುರಿಸುತ್ತಿರುವ ಸಾಮಾನ್ಯ ಜನತೆ. ತನ್ನ ಆಳ್ವಿಕೆಯಲ್ಲಿ ಈಜಿಪ್ಟ್ ಸುಭೀಕ್ಷವಾಗಿದ್ದು ಇಸ್ಲಾಂ ಉಗ್ರವಾದದ ವಿರುದ್ಧ ಸೆಟೆದು ನಿಂತಿದೆ ಎಂದು ಮೂರು ದಶಕಗಳಿಂದಲೂ ಈಜಿಪ್ಟಿನ ಜನತೆಯನ್ನು ಮತ್ತು ವಿಶ್ವದ ಇತರ ರಾಷ್ಟ್ರಗಳನ್ನು ನಂಬಿಸುತ್ತಾ ಬಂದಿರುವ ಮುಬಾರಕ್ ಸರ್ಕಾರ ಇದೇ ಕಾರಣಕ್ಕಾಗಿಯೇ ತನ್ನೆಲ್ಲಾ ಸರ್ವಾಧಿಕಾರಿ ಧೋರಣೆಯನ್ನೂ ಸಮರ್ಥಿಸಿಕೊಳ್ಳುತ್ತಾ ಬಂದಿದೆ.

ಪರಂಪರೆಗೇ ಸಿಲುಕಿ, ಸರ್ವಾಧಿಕಾರಿ ದೊರೆ ಫಾದ್‌ನ ಆಳ್ವಿಕೆಗೆ ಒಳಪಟ್ಟಿತ್ತು. 30 ವರ್ಷಗಳ ಕಾಲ ಅಧಿಕಾರ ನಡೆಸಿದ ಈ ಅರಸೊತ್ತಿಗೆ ಅಂತ್ಯಗೊಳ್ಳಲು 1952ರಲ್ಲಿ ಈಜಿಪ್ಟ್ ಮತ್ತೊಂದು ಕ್ರಾಂತಿ ಕಾಣಬೇಕಾಯಿತು.

ಆದರೆ ಈ ಕ್ರಾಂತಿಯ ಮೂಲಕ ಅಧಿಕಾರಕ್ಕೆ ಬಂದ ಸೇನಾ ದಂಡನಾಯಕ ನಾಸೆರ್ ಈಜಿಪ್ಟನ್ನು ಗಣರಾಜ್ಯವೆಂದು ಘೋಷಿಸಿದರೂ ರಾಜಕೀಯ ಪಕ್ಷಗಳು ಮಾತ್ರ ನಿಷಿದ್ಧವಾಗಿದ್ದವು. ಸರ್ವಾಧಿಕಾರಿಯಾದರೂ ದೇಶದ ಅಭಿವೃದ್ಧಿಯೆಡೆಗೆ ಹೆಚ್ಚಿನ ಗಮನ ನೀಡಿದ ನಾಸೆರ್ ಜನಪ್ರಿಯ ನಾಯಕರಾಗಿಯೇ ಬೆಳೆದರು. ಅನ್ಯ ರಾಷ್ಟ್ರಗಳೊಡನೆ ಉತ್ತಮ ಬಾಂಧವ್ಯ ಸಾಧಿಸಿ, ಅಲಿಪ್ತ ಚಳುವಳಿಗೆ ಪ್ರೋತ್ಸಾಹ ನೀಡುವ ಮೂಲಕ ನೆಹರೂ ಅವರಿಗೂ ಆಪ್ತರಾಗಿದ್ದರು. ಇದೇ ಅವಧಿಯಲ್ಲಿ ಬೆಂಕಿಯ ಕುಂಡವಾಗಿದ್ದ ಮಧ್ಯಪ್ರಾಚ್ಯದಲ್ಲಿ ಶಾಂತಿ ಸ್ಥಾಪಿಸುವ ಉದ್ದೇಶದಿಂದ ನಾಸೆರ್ ಇಸ್ರೇಲಿನೊಡನೆ ಮಾತುಕತೆಗೆ ಮುಂದಾಗಿದ್ದು ಸಾವಿಗೆ ನೀಡಿದ ಆಹ್ವಾನವಾಗಿ ಪರಿಣಮಿಸಿತ್ತು. 1970ರಲ್ಲಿ ನಾಸೆರ್ ಸಾವಿನ ನಂತರ ಅಧಿಕಾರ ಗ್ರಹಣ ಮಾಡಿದ ಅನ್ವರ್ ಸಾದತ್ ಭಿನ್ನ ಮಾರ್ಗವನ್ನೇನೂ ಕ್ರಮಿಸಲಿಲ್ಲ. ಇಸ್ರೇಲ್‌ನೊಡನೆ ಸಂಬಂಧ ಬೆಳೆಸುವ ಸಾದತ್ ಅವರ ನೀತಿ ಅವರಿಗೂ ಅಂತಿಮ ಪಯಣದ ಪರವಾನಗಿಯಾಗಿ ಪರಿಣಮಿಸಿತ್ತು. ಈ ಇಬ್ಬರು ನಾಯಕರೂ ಅರಬ್ ರಾಷ್ಟ್ರಗಳ ಕೆಂಗಣ್ಣಿಗೆ ಗುರಿಯಾಗಿ ಇಸ್ಲಾಂ ಮೂಲಭೂತವಾದಿಗಳ ಗುಂಡೇಟಿಗೆ ಬಲಿಯಾದ ನಂತರ ಅಧಿಕಾರಕ್ಕೆ ಬಂದವರೇ ಈಗಿನ ಅಧ್ಯಕ್ಷ ಹೊಸ್ನಿ ಮುಬಾರಕ್.

ಅನ್ವರ್ ಸಾದತ್, ನಾಸೆರ್ ಅವರಂತೆಯೇ ನಿರಂಕುಶ ಪ್ರಭುತ್ವವನ್ನೇ ಮುಂದುವರೆಸಿದ ಮುಬಾರಕ್ ವಿದೇಶಾಂಗ ನೀತಿಯನ್ನೂ ಮುಂದುವರೆಸಿದ್ದು ವೈಶಿಷ್ಟ್ಯ. ಮಧ್ಯಪ್ರಾಚ್ಯದಲ್ಲಿ ಶಾಂತಿಗಾಗಿ ಸತತ ಪ್ರಯತ್ನ ನಡೆಸಿದ ಮುಬಾರಕ್ ಈಜಿಪ್ಟಿನಲ್ಲಿ ಮಾತ್ರ ಜನತೆಗೆ ಮುಕ್ತ ಸ್ವಾತಂತ್ರ್ಯದ ವಾತಾವರಣ ಸೃಷ್ಟಿಸಲಿಲ್ಲ. ಮುಬಾರಕ್ ಅವರ ಈ ನೀತಿಗೆ ಪ್ರಜಾತಂತ್ರದ ಪರಿವ್ರಾಜಕರಂತೆ ವರ್ತಿಸುವ ಅಮೆರಿಕದ ಸಂಪೂರ್ಣ ಬೆಂಬಲ ಇತ್ತೆಂದು ಹೇಳಬೇಕಿಲ್ಲ. ಇಸ್ರೇಲಿಗೆ ಬೆಂಬಲ ಸೂಚಿಸುವ ಏಕೈಕ ಕಾರಣಕ್ಕಾಗಿ ಅಮೆರಿಕ ಈಜಿಪ್ಟಿನ ಆಳ್ವಿಕರ ಬೆನ್ನೆಲುಬಾಗಿರುವುದೂ ಅಷ್ಟೇ ಸತ್ಯ. ಈಜಿಪ್ಟಿನ 15 ಲಕ್ಷ ಸಂಖ್ಯೆಯ ಬೃಹತ್ ಸೇನೆಗೆ ಅಗತ್ಯವಾದ ಹಣ ಒದಗಿಸುವುದೇ ಅಮೆರಿಕ ಸರ್ಕಾರ. ಈ ಸಂಬಂಧ ಅಮೆರಿಕಾ ಈಜಿಪ್ಟಿಗೆ ಪ್ರತಿ ವರ್ಷ 1.5 ದಶಕೋಟಿ ಡಾಲರ್ ಒದಗಿಸುತ್ತದೆ.

ಇಸ್ರೇಲ್ ನೀತಿಯ ಪರಿಣಾಮವಾಗಿ ಇಸ್ಲಾಂ ಮೂಲಭೂತವಾದಿಗಳು, ಜಿಹಾದಿಗಳು ಈಜಿಪ್ಟನ್ನು ವಿರೋಧಿಸುತ್ತಿದ್ದಾರೆ ಎಂದು ಹುಯಿಲೆಬ್ಬಿಸುವ ಮೂಲಕ ತನ್ನ ಸರ್ವಾಧಿಕಾರವನ್ನು ಸಮರ್ಥಿಸಿಕೊಳ್ಳುತ್ತಿದ್ದ ಮುಬಾರಕ್ ಸರ್ಕಾರ 1998ರಲ್ಲಿ ನಡೆದ ಭಯೋತ್ಪಾದಕ ದಾಳಿಯ ಹಿನ್ನೆಲೆಯಲ್ಲಿ 20 ಸಾವಿರಕ್ಕೂ ಹೆಚ್ಚು ಉಗ್ರರನ್ನು ಬಂಧಿಸಿತ್ತು. ಅಂದಿನಿಂದಲೂ ಈಜಿಪ್ಟ್ ವಿರುದ್ಧ ಹಗೆ ಸಾಧಿಸುತ್ತಿರುವ ಇಸ್ಲಾಂ ಮೂಲಭೂತವಾದಿಗಳು ಮುಬಾರಕ್ ಪದಚ್ಯುತಿಗಾಗಿ ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲೇ 80 ವರ್ಷದ ಹಿಂದೆ ಸ್ಥಾಪಿತವಾಗಿದ್ದ ಮುಸ್ಲಿಂ ಬ್ರದರ್‌ಹುಡ್ ಸಂಘಟನೆ ಪುನಶ್ಚೇತನ ಪಡೆದಿದೆ. ಆದರೆ ಯಾವುದೇ ರಾಜಕೀಯ ಪಕ್ಷಗಳಿಗೆ ಮಾನ್ಯತೆ ನೀಡದ ಮುಬಾರಕ್‌ನ ನಿರಂಕುಶ ಪ್ರಭುತ್ವ ಈ ಸಂಘಟನೆಯನ್ನೂ ನಿಷೇಧಿಸಿದ್ದು, ಈಜಿಪ್ಟಿನಲ್ಲಿ ಅಘೋಷಿತ ತುರ್ತುಪರಿಸ್ಥಿತಿಯನ್ನು ಕಾಪಾಡಿಕೊಂಡೇ ಬಂದಿದೆ.

ಉದಾರವಾದದ ಕರಿನೆರಳು

ಇಂದು ಈಜಿಪ್ಟಿನ ಜನತೆ ಪ್ರಜಾತಂತ್ರಕ್ಕಾಗಿ ಲಕ್ಷೋಪಯಾದಿಯಾಗಿ ಹೋರಾಟದ ಕಣಕ್ಕೆ ಧುಮುಕಿದ್ದರೆ ಈ ಹಪಹಪಿಯ ಹಿಂದೆ ಎರಡು ಪ್ರಬಲ ಕಾರಣಗಳಿವೆ. ಮೊದಲನೆಯದು ಹಲವು ಪೀಳಿಗೆಗಳಿಂದ ಪ್ರಜಾಸತ್ತಾತ್ಮಕ ಮೌಲ್ಯಗಳಿಂದ ಮತ್ತು ಮುಕ್ತ ಸ್ವಾತಂತ್ರ್ಯದಿಂದ ವಂಚಿತರಾಗಿರುವ ಜನಸಮುದಾಯಗಳು. ಎರಡನೆಯದು ಆಳ್ವಿಕರ ಸರ್ವಾಧಿಕಾರಿ ಧೋರಣೆಗೆ ಪುಷ್ಟಿ ನೀಡುವುದೇ ಅಲ್ಲದೆ ತಮ್ಮ ಶ್ರಮದ ಫಲವನ್ನು ಸ್ವತಃ ಅನುಭವಿಸಲಾಗದೆ ಉದಾರವಾದದ ದುಷ್ಪರಿಣಾಮಗಳನ್ನು ಎದುರಿಸುತ್ತಿರುವ ಸಾಮಾನ್ಯ ಜನತೆ.

ತನ್ನ ಆಳ್ವಿಕೆಯಲ್ಲಿ ಈಜಿಪ್ಟ್ ಸುಭೀಕ್ಷವಾಗಿದ್ದು ಇಸ್ಲಾಂ ಉಗ್ರವಾದದ ವಿರುದ್ಧ ಸೆಟೆದು ನಿಂತಿದೆ ಎಂದು ಮೂರು ದಶಕಗಳಿಂದಲೂ ಈಜಿಪ್ಟಿನ ಜನತೆಯನ್ನು ಮತ್ತು ವಿಶ್ವದ ಇತರ ರಾಷ್ಟ್ರಗಳನ್ನು ನಂಬಿಸುತ್ತಾ ಬಂದಿರುವ ಮುಬಾರಕ್ ಸರ್ಕಾರ ಇದೇ ಕಾರಣಕ್ಕಾಗಿಯೇ ತನ್ನೆಲ್ಲಾ ಸರ್ವಾಧಿಕಾರಿ ಧೋರಣೆಯನ್ನೂ ಸಮರ್ಥಿಸಿಕೊಳ್ಳುತ್ತಾ ಬಂದಿದೆ. ಅಮೆರಿಕ ನೇತೃತ್ವದ ನ್ಯಾಟೋ

ನಿರಂಕುಶ ಆಳ್ವಿಕೆಯ ವಿರುದ್ಧ ಕ್ರಾಂತಿಕಹಳೆ ಮೊಳಗಿಸಿ ಸಫಲರಾದ ಈಜಿಪ್ಟ್ ಮಹಿಳೆಯರು.

ಸಮೂಹವೂ ಈ ನಿಲುವಿಗೆ ಪುಷ್ಟಿ ನೀಡುತ್ತಲೇ ಬಂದಿದೆ. ಆದರೆ ಕಳೆದ ಹಲವು ದಿನಗಳಿಂದ ದೇಶಾದ್ಯಂತ ಭುಗಿಲೆದ್ದಿರುವ ಜನಾಂದೋಲನದಲ್ಲಿ ಇಸ್ಲಾಂ ಮೂಲಭೂತವಾದಿಗಳ, ಅಥವಾ ಮುಸ್ಲಿಂ ಬ್ರದರ್‌ಹುಡ್ ಸಂಘಟನೆಯ ಯಾವುದೇ ದನಿ ಕೇಳಿಬರುತ್ತಿಲ್ಲ. ಏಕೆಂದರೆ ತಹ್ರೀರ್ ಚೌಕದಲ್ಲಿ ನೆರೆದಿರುವ ಪ್ರತಿಭಟನಾಕಾರಿಗೆ ಪ್ರಜಾತಂತ್ರವೊಂದೇ ಮೂಲ ಮಂತ್ರವಲ್ಲ. ಇಸ್ಲಾಮಿಕ್ ಉಗ್ರವಾದ ಮತ್ತು ದೇಶದ ಸುಸ್ಥಿರತೆಯ ನಡುವಿನ ಸಂಘರ್ಷವಾಗಿ ಈ ಹೋರಾಟ ರೂಪುಗೊಳ್ಳದಿರುವುದು ಪಶ್ಚಿಮ ರಾಷ್ಟ್ರಗಳಿಗೂ ತಕ್ಕ ಪಾಠ ಕಲಿಸಿದೆ.

ಮುಬಾರಕ್ ಪದಚ್ಯುತಿ ಒಂದೇ ಪ್ರತಿಭಟನಾಕಾರರ ಗುರಿ ಎಂದು ಮಾಧ್ಯಮಗಳಲ್ಲಿ ಬಿಂಬಿಸುತ್ತಿರುವುದು ಮಿಥ್ಯಾರೋಪವಷ್ಟೆ. ರಾಷ್ಟ್ರದ ಸಮಸ್ತ ಜನತೆ ತಮ್ಮ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಅಸ್ಮಿತೆಗಳನ್ನು ಬದಿಗಿಟ್ಟು ಐಕಮತ್ಯ ಸಾಧಿಸಿರುವುದು ಮುಬಾರಕ್ ಪ್ರಭುತ್ವದ ತುರ್ತುಪರಿಸ್ಥಿತಿ ಶಾಸನಗಳ ವಿರುದ್ಧ, ಜನತೆಯ ಮೂಲಭೂತ ಹಕ್ಕುಗಳಿಗಾಗಿ, ವಾಕ್ ಸ್ವಾತಂತ್ರ್ಯಕ್ಕಾಗಿ, ಸಂಘಟನಾ ಹಕ್ಕಿಗಾಗಿ, ಮಾನವ ಹಕ್ಕುಗಳ ರಕ್ಷಣೆಗಾಗಿ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ. ಇದರೊಂದಿಗೇ ಜನತೆಯ ಪ್ರಮುಖ ಬೇಡಿಕೆಗಳೆಂದರೆ ಭ್ರಷ್ಟಾಚಾರದಲ್ಲಿ ವಿಶ್ವದಲ್ಲೇ ಪ್ರಥಮ ಸ್ಥಾನ ಪಡೆದಿರುವ ದೇಶದಲ್ಲಿ ಭ್ರಷ್ಟಾಚಾರ ನಿರ್ಮೂಲ ಮಾಡುವುದು ಮತ್ತು ಉದಾರವಾದಿ ಆರ್ಥಿಕ ನೀತಿಗಳನ್ನು ಕೈಬಿಟ್ಟು ಜನಪರ ನೀತಿಗಳನ್ನು ಜಾರಿಗೊಳಿಸುವುದು.

1990ರ ದಶಕದಲ್ಲಿ ವಿಶ್ವದ ಇತರ ರಾಷ್ಟ್ರಗಳಂತೆ ವಿಶ್ವಬ್ಯಾಂಕ್-ಐಎಂಎಫ್ ಪ್ರೇರಿತ ನವ ಉದಾರವಾದಿ ನೀತಿಯನ್ನು ಜಾರಿಗೊಳಿಸಿದ ಮುಬಾರಕ್ ಪ್ರಭುತ್ವ ಈಜಿಪ್ಟಿನ ಜನತೆಗೆ ನೀಡಿದ್ದು ಕಷ್ಟ ಕಾರ್ಪಣ್ಯಗಳ ದಿನಗಳನ್ನೇ. ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸಲಾಯಿತು. ಹಣಕಾಸು ಸಂಸ್ಥೆಗಳು ಖಾಸಗಿ ವಶವಾಯಿತು. ವಿದೇಶಿ ಬಂಡವಾಳವನ್ನು ಹಣಕಾಸು, ಬ್ಯಾಂಕಿಂಗ್ ಮತ್ತು ವಿಮಾ ಕ್ಷೇತ್ರದಲ್ಲಿ ಮುಕ್ತಗೊಳಿಸಲಾಯಿತು. ಈ ಎಲ್ಲ ಕ್ರಮಗಳಿಂದ 2007ರಲ್ಲಿ ಈಜಿಪ್ಟಿಗೆ ಐಎಂಎಫ್ ವತಿಯಿಂದ ಪ್ರಶಸ್ತಿಯೂ ಲಭ್ಯವಾಗಿತ್ತು. ಅತ್ಯಂತ ಪ್ರಭಾವಶಾಲಿ ಸುಧಾರಣೆಗಳನ್ನು ಜಾರಿಗೊಳಿಸಿದ್ದಕ್ಕಾಗಿ. ಆದರೆ ಈ ನೀತಿಗಳ ಪರಿಣಾಮ ಪ್ರಸ್ತುತ ಈಜಿಪ್ಟ್‌ನಲ್ಲಿ ನಿರುದ್ಯೋಗದ ಪ್ರಮಾಣ ಶೇ.20ರಷ್ಟಾಗಿದೆ. ಯುವಕರಲ್ಲಿ ಶೇ. 50ರಷ್ಟು ನಿರುದ್ಯೋಗಿಗಳಿದ್ದಾರೆ. ಶೇ.20ರಷ್ಟು ಜನತೆ ಕಡು ಬಡತನದಲ್ಲಿದ್ದಾರೆ.

ಶೇ. 40ರಷ್ಟು ಜನಸಂಖ್ಯೆ ದಿನಕ್ಕೆ ಎರಡು ಡಾಲರ್ ಆದಾಯದಲ್ಲಿ ಬಾಳು ಸವೆಸುತ್ತಿದ್ದಾರೆ. ದೇಶದ ಉತ್ಪನ್ನದ ಬಹುಪಾಲು ಮಿಲಿಟರಿ ವೆಚ್ಚಕ್ಕೆ ಮೀಸಲಾಗುತ್ತಿದೆ. ವಿಶ್ವದಲ್ಲೇ ಅತಿ ದೊಡ್ಡ ಸೈನ್ಯವನ್ನು ಹೊಂದಿರುವ ಈಜಿಪ್ಟ್ ತನ್ನ 8 ಕೋಟಿ ಜನತೆಯ ರಕ್ಷಣೆಗೆ 15ಲಕ್ಷ ಜನರ ಸೈನ್ಯವನ್ನು ಈಜಿಪ್ಟ್ ಸರ್ಕಾರ ಸಲಹುತ್ತಿದೆ. ವಿಶ್ವದ ಶ್ರೀಮಂತ ರಾಷ್ಟ್ರಗಳಲ್ಲಿ ಒಂದಾದ ಈಜಿಪ್ಟ್ ತನ್ನ ಯುವ ಪೀಳಿಗೆಗೆ ಉದ್ಯೋಗ ಒದಗಿಸುವಲ್ಲಿ ವಿಫಲವಾಗಿದೆ. ಈಜಿಪ್ಟಿನ ಜಿಡಿಪಿ ದರ ಕೇವಲ ಶೇ. 2–3ರಷ್ಟಿದ್ದು ಹಣದುಬ್ಬರ ಶೇ. 10ರಷ್ಟಿದೆ. ಆರ್ಥಿಕ ಅಸಮಾನತೆ ಹೆಚ್ಚಾಗುತ್ತಿದ್ದಂತೆಲ್ಲಾ ಜನತೆಯ ನಿತ್ಯ ಜೀವನವೂ ದುಸ್ತರವಾಗುತ್ತಿದೆ. ಪ್ರಜಾತಂತ್ರ ಮತ್ತು ಮುಕ್ತ ರಾಜಕೀಯ ವಾತಾವರಣಕ್ಕಾಗಿ ಹಾತೊರೆಯುತ್ತಿರುವ ಈಜಿಪ್ಟಿನ ಜನತೆಗೆ ಉದಾರವಾದದ ಕರಾಳ ದರ್ಶನವಾಗಿರುವುದು ಪ್ರಸ್ತುತ ಪ್ರತಿಭಟನೆಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ. ಇದರ ನೇರ ಪರಿಣಾಮವನ್ನು ಪ್ರಸಕ್ತ ಕ್ರಾಂತಿಕಾರಿ ಹೋರಾಟದಲ್ಲಿ ಕಾಣಬಹುದಾಗಿದೆ.

ಕ್ರಾಂತಿಯ ರಣಕಹಳೆ

ಫೆಬ್ರವರಿ 11, 2011 ಈಜಿಪ್ಟಿನ ಇತಿಹಾಸದ ಸುವರ್ಣಾಕ್ಷರಗಳ ದಿನ. ಹೊಸ್ನಿ ಮುಬಾರಕ್‌ನ 30 ವರ್ಷದ ನಿರಂಕುಶ ಆಳ್ವಿಕೆಯ ವಿರುದ್ಧ, ಪ್ರಭುತ್ವದ ಪ್ರಜಾತಂತ್ರ ವಿರೋಧಿ ನೀತಿಗಳ ವಿರುದ್ಧ, ಉದಾರವಾದಿ ಆರ್ಥಿಕ ನೀತಿಗಳ ವಿರುದ್ಧ ಕ್ರಾಂತಿಯ ಕಹಳೆ ಮೊಳಗಿಸಿರುವ ಈಜಿಪ್ಟಿನ ಜನತೆ ತಂಡೋಪತಂಡವಾಗಿ ರಾಜಧಾನಿ ಕೈರೋದಲ್ಲಿರುವ ತಹ್ರೀರ್ ಚೌಕದಲ್ಲಿ ಸಂಘಟಿತರಾದ ಸಂದರ್ಭದಲ್ಲಿ ಪ್ರಭುತ್ವದ ಸೇನಾಬಲವನ್ನು ಎದುರಿಸಬೇಕಾಗಿತ್ತು. ಪೊಲೀಸರ ಲಾಠಿ ಏಟು, ಅಶ್ರುವಾಯು, ವಾಟರ್ ಕ್ಯಾನನ್‌ಗಳು, ಪ್ರಭುತ್ವ ಪ್ರೇರಿತ ಪಾತಕಿಗಳ ಆಕ್ರಮಣ, ಸೇನೆಯ ಬಂದೂಕಿನ ಗುರಿ ಇವೆಲ್ಲವನ್ನೂ ದಿಟ್ಟವಾಗಿ ಎದುರಿಸಿ ರಾಜಧಾನಿಗೆ ಆಗಮಿಸಿದ ಲಕ್ಷಾಂತರ ಯುವಕ, ಯುವತಿಯರ ಧ್ಯೇಯ ಒಂದೇ, ಈಜಿಪ್ಟಿನಲ್ಲಿ ಪ್ರಜಾತಂತ್ರದ ಸ್ಥಾಪನೆ. ಈ ಧ್ಯೇಯವನ್ನು ಸಾಕಾರಗೊಳಿಸುವಲ್ಲಿ ಈಜಿಪ್ಟಿನ ಜನತೆ ಸಫಲವಾಗಿದ್ದಾರೆ.

ಈ ಉತ್ಸಾಹಭರಿತ ದಂಗೆಯ ಹಿಂದೆ ಕೇವಲ ಉನ್ಮತ್ತತೆಯಿಂದ ಹೋರಾಡುವ ಯುವಕರು ಮಾತ್ರ ಇಲ್ಲ. ದೇಶದ ಅತ್ಯುನ್ನತ ಬುದ್ಧಿಜೀವಿಗಳು, ನೊಬೆಲ್ ಪ್ರಶಸ್ತಿ ವಿಜೇತರು, ವಿಜ್ಞಾನಿಗಳು, ತಂತ್ರಜ್ಞರು, ಕಲಾವಿದರು, ಚಲನಚಿತ್ರ ಕಲಾವಿದರು, ಹೊಸ ಪೀಳಿಗೆಯ ರಾಜಕಾರಣಿಗಳು, ಮಾನವ ಹಕ್ಕು ಹೋರಾಟಗಾರರು ಹೀಗೆ ಸಮಾಜದ ಸಮಸ್ತ ಕ್ಷೇತ್ರಗಳನ್ನು ಪ್ರತಿನಿಧಿಸುವ ಪ್ರಜೆಗಳು ಪ್ರಭುತ್ವದ ವಿರುದ್ಧ ದಂಗೆ ಎದ್ದಿದ್ದಾರೆ. ಈ ವೈವಿಧ್ಯತೆಯೇ ಇಡೀ ಚಳುವಳಿಗೆ ಹೊಸ ಆಯಾಮವನ್ನು ನೀಡಿದ್ದು, ಮುಸ್ಲಿಂ ಬ್ರದರ್‌ಹುಡ್‌ನಂತಹ ಮೂಲಭೂತವಾದಿ ಸಂಘಟನೆಗಳು ಬೇಷರತ್ತಾಗಿ ಪ್ರತಿಭಟನೆಯಲ್ಲಿ

ಫೆಬ್ರವರಿ 11, 2011 ಈಜಿಪ್ಟಿನ ಇತಿಹಾಸದ ಸುವರ್ಣಾಕ್ಷರಗಳ ದಿನ. ಹೊಸ್ನಿ ಮುಬಾರಕ್‌ನ 30 ವರ್ಷದ ನಿರಂಕುಶ ಆಳ್ವಿಕೆಯ ವಿರುದ್ಧ, ಪ್ರಭುತ್ವದ ಪ್ರಜಾತಂತ್ರ ವಿರೋಧಿ ನೀತಿಗಳ ವಿರುದ್ಧ, ಉದಾರವಾದಿ ಆರ್ಥಿಕ ನೀತಿಗಳ ವಿರುದ್ಧ ಕ್ರಾಂತಿಯ ಕಹಳೆ ಮೊಳಗಿಸಿರುವ ಈಜಿಪ್ಟಿನ ಜನತೆ ತಂಡೋಪತಂಡವಾಗಿ ರಾಜಧಾನಿ ಕೈರೋದಲ್ಲಿರುವ ತಹ್ರೀರ್ ಚೌಕದಲ್ಲಿ ಸಂಘಟಿತರಾದ ಸಂದರ್ಭದಲ್ಲಿ ಪ್ರಭುತ್ವದ ಸೇನಾಬಲವನ್ನು ಎದುರಿಸಬೇಕಾಗಿತ್ತು. ಪೊಲೀಸರ ಲಾಠಿ ಏಟು, ಅಶ್ರುವಾಯು, ವಾಟರ್ ಕ್ಯಾನನ್‌ಗಳು, ಪ್ರಭುತ್ವ ಪ್ರೇರಿತ ಪಾತಕಿಗಳ ಆಕ್ರಮಣ, ಸೇನೆಯ ಬಂದೂಕಿನ ಗುರಿ ಇವೆಲ್ಲವನ್ನೂ ದಿಟ್ಟವಾಗಿ ಎದುರಿಸಿ ರಾಜಧಾನಿಗೆ ಆಗಮಿಸಿದ ಲಕ್ಷಾಂತರ ಯುವಕ, ಯುವತಿಯರ ಧ್ಯೇಯ ಒಂದೇ, ಈಜಿಪ್ಟಿನಲ್ಲಿ ಪ್ರಜಾತಂತ್ರದ ಸ್ಥಾಪನೆ. ಈ ಧ್ಯೇಯವನ್ನು ಸಾಕಾರಗೊಳಿಸುವಲ್ಲಿ ಈಜಿಪ್ಟಿನ ಜನತೆ ಸಫಲವಾಗಿದ್ದಾರೆ. ಈ ಉತ್ಸಾಹಭರಿತ ದಂಗೆಯ ಹಿಂದೆ ದೇಶದ ಅತ್ಯುನ್ನತ ಬುದ್ಧಿಜೀವಿಗಳು, ವಿಜ್ಞಾನಿಗಳು, ಕಲಾವಿದರು ಕೈ ಜೋಡಿಸಿದ್ದಾರೆ.

ಪಾಲ್ಗೊಳ್ಳುವಂತೆ ಮಾಡಿದೆ. ಈಜಿಪ್ಟಿನ ರಾಜಕಾರಣದಲ್ಲಿ ಅತಿ ದೊಡ್ಡ ವಿರೋಧ ಪಕ್ಷವಾಗಿರುವ ಮುಸ್ಲಿಂ ಬ್ರದರ್ ಹುಡ್ ಹೋರಾಟದಲ್ಲಿ ಪಾಲ್ಗೊಳ್ಳುವ ವೇಳೆಗೆ ಪ್ರಜಾದಂಗೆ ಒಂದು ನಿರ್ದಿಷ್ಟ ಸ್ವರೂಪ ಪಡೆದುಕೊಂಡಿದ್ದುದು ನೈಜ ಕ್ರಾಂತಿಯ ಪ್ರತೀಕವಾಗಿದೆ. ಈ ಸಂಘಟನೆಯ ಹೊರತಾಗಿಯೇ ರೂಪುಗೊಂಡಿರುವ ಯುವ ಪೀಳಿಗೆಯ ನೇತೃತ್ವದ ಹೊಸ ನಾಯಕತ್ವ ಹೊಸ್ನಿ ಮುಬಾರಕ್ ಸರ್ಕಾರವನ್ನೂ ಕಂಗೆಡಿಸಿದೆ.

ಏಕೆಂದರೆ ಮುಸ್ಲಿಂ ಬ್ರದರ್‌ಹುಡ್ ಸಂಘಟನೆ ಇಸ್ಲಾಮಿಕ್ ಜಿಹಾದಿ ಸಂಘಟನೆಯಾಗಿದ್ದು, ಈ ಸಂಘಟನೆಯ ಏಳಿಗೆಗೆ ಅವಕಾಶ ನೀಡದಿರುವುದೇ ತನ್ನ ಹೆಗ್ಗಳಿಕೆ ಎಂದು ಬೀಗುತ್ತಿದ್ದ ಮುಬಾರಕ್‌ಗೆ, ಜಿಹಾದಿ ಗಳಿಂದ ಈಜಿಪ್ಟ್‌ಗೆ ಅಪಾಯವಿದೆ ಎಂದು ಆಪಾದಿಸಲು ಯಾವುದೇ ಆಧಾರವಿಲ್ಲದಂತಾಗಿದೆ. ಬದಲಾಗಿ ವಿರೋಧಿ ಗುಂಪುಗಳು ತಮ್ಮದೇ ಆದ ಪ್ರಜಾಸತ್ತಾತ್ಮಕ, ಜನಪರ ಧ್ಯೇಯೋದ್ದೇಶಗಳೊಡನೆ ಮುನ್ನಡೆಯುತ್ತಿದೆ. ಚಳುವಳಿ ಮುಂದುವರೆಯುತ್ತಿದ್ದಂತೆ ಪ್ರಜೆಗಳ ಮುಂದಿದ್ದುದು ಪ್ರಜಾತಂತ್ರ ಮತ್ತು ಸರ್ವಾಧಿಕಾರದ ನಡುವಿನ ಆಯ್ಕೆಯೇ ಹೊರತು ಇಸ್ಲಾಂ ಭಯೋತ್ಪಾದನೆ ಮತ್ತು ಸುಸ್ಥಿರತೆಯ ನಡುವೆಯಲ್ಲ. ಮುಬಾರಕ್ ಆಳ್ವಿಕೆಯಲ್ಲಿ ಪ್ರಥಮ ಬಾರಿಗೆ ದೇಶದ ಜನಸಾಮಾನ್ಯರು ನಾಗರಿಕ ಹಕ್ಕುಗಳ ಪರವಾಗಿ, ಪೊಲೀಸ್ ದೌರ್ಜನ್ಯದ ವಿರುದ್ಧ, ಪಕ್ಷಪಾತಿ ಬಂಡವಾಳ ವ್ಯವಸ್ಥೆಯ ವಿರುದ್ಧ, ನವ ಉದಾರವಾದದ ವಿರುದ್ಧ ದನಿ ಎತ್ತಿರುವುದು ಇಡೀ ಚಳುವಳಿಯ ವೈಶಿಷ್ಟ್ಯ.

ಈ ಪ್ರಜಾದಂಗೆಯ ಮತ್ತೊಂದು ವೈಶಿಷ್ಟ್ಯವೆಂದರೆ ಇದು ರೂಪುಗೊಂಡಿದ್ದು ಸೆಮಿನಾರ್ ಹಾಲ್‌ಗಳಲ್ಲಿ, ಬಹಿರಂಗ ಸಭೆಗಳಲ್ಲಿ ಅಲ್ಲ. ಮುಬಾರಕ್ ಆಳ್ವಿಕೆಯಿಂದ ಬೇಸತ್ತ ಯುವ ಜನತೆ ಅಂತರ್ಜಾಲದ ಫೇಸ್‌ಬುಕ್‌ನ ಮೂಲಕ. ದೀರ್ಘಕಾಲಿಕ ಅಸಮಾನತೆ, ಅಸಮಾಧಾನ ಮತ್ತು ಹತಾಶೆಗಳಿಗೆ ಒಂದು ಹೋರಾಟದ ಸ್ವರೂಪ ನೀಡುವಲ್ಲಿ ಈ ತಂತ್ರಜ್ಞಾನದ ಬಳಕೆಯಾಗಲು ಕಾರಣ ಈಜಿಪ್ಟ್‌ನಲ್ಲಿ ರಾಜಕೀಯ ಪಕ್ಷಗಳ ಮೇಲಿದ್ದ ನಿಷೇಧ. ಈ ಹೊಸ ಪೀಳಿಗೆಯ ನವೀನ ಹೋರಾಟದ ಕರೆಗೆ ಸ್ಪಂದಿಸಿದವರಲ್ಲಿ ಶಿಕ್ಷಣ ತಜ್ಞರು, ವಿದ್ಯಾರ್ಥಿಗಳು, ಅಧ್ಯಾಪಕರು, ವಿಜ್ಞಾನಿಗಳು, ವಕೀಲರು, ವೈದ್ಯರು, ಪತ್ರಕರ್ತರು, ದುಡಿಯುವ ವರ್ಗಗಳು, ಕಾರ್ಮಿಕರು ಹೀಗೆ ಸಮಾಜದ ಎಲ್ಲ ಕ್ಷೇತ್ರಗಳನ್ನು ಪ್ರತಿನಿಧಿಸುವವರಿದ್ದರು.

ಈ ಚಳುವಳಿಯಲ್ಲಿ ಏಪ್ರಿಲ್ 6ರ ಯುವ ಆಂದೋಲನದ ಭೂಮಿಕೆ ಮಹತ್ವದ್ದಾಗಿದೆ. 2008ರ ಏಪ್ರಿಲ್‌ನಲ್ಲಿ ಅಹಮದ್ ಮಹೇರ್ ಮತ್ತು ಅಹಮದ್ ಸಲಾಹ್ ಎಂಬ ಯುವಕರು ಫೇಸ್‌ಬುಕ್‌ನಲ್ಲಿ ಆರಂಭಿಸಿದ ಜನಾಭಿಪ್ರಾಯ ಸಂಗ್ರಹಣೆ ಈ ಬೃಹತ್ ಚಳುವಳಿಗೆ ನಾಂದಿ ಹಾಡಿತ್ತು. ಏಪ್ರಿಲ್ 2009ರಲ್ಲಿ ಎಲ್ ಮಹಲ್ಲ–ಎಲ್ ಖಬ್ರ ಎಂಬ ನೈಲ್ ನದಿತೀರದ ನಗರದಲ್ಲಿ ನಡೆದ ಕಾರ್ಮಿಕರ ಮುಷ್ಕರ ಕ್ರಾಂತಿಯ ಪ್ರಥಮ ಸೋಪಾನವಾಗಿತ್ತು. ಈ ಮುಷ್ಕರದ ಸಂಘಟಕರು ಫೇಸ್ ಬುಕ್, ಟ್ವಿಟರ್ ಮತ್ತಿತರ ಅಂತರ್ಜಾಲ ಸೌಲಭ್ಯಗಳ ಮೂಲಕವೇ ಸಮಾಜದ ಎಲ್ಲಾ ವರ್ಗದ ಜನರನ್ನು ಒಟ್ಟು ಗೂಡಿಸಿ ಇಡೀ ಚಳುವಳಿಗೆ ಒಂದು ತಾತ್ವಿಕ ಸ್ವರೂಪ ನೀಡುವುದರಲ್ಲಿ ಯಶಸ್ವಿಯಾಗಿದ್ದರು.

ಈ ಹಿನ್ನೆಲೆಯಲ್ಲಿ ಆರಂಭಗೊಂಡ ಆಂದೋಲನಕ್ಕೆ ಮುಖ್ಯ ತಿರುವು ನೀಡಿದ್ದು, ಈಜಿಪ್ಟ್ ಕ್ರಾಂತಿಯ

ಈಜಿಪ್ಟ್ ಜನತೆಯ ಅಹಿಂಸಾತ್ಮಕ ಹೋರಾಟಕ್ಕೆ ತಲೆಬಾಗಿದ ಸೇನೆ.

ಈಜಿಪ್ಟಿನ ಕ್ರಾಂತಿಯ ಕಿಡಿ ಹೊತ್ತಿಸಿದ ಘಟನೆ ಎಂದರೆ ಖಾಲಿದ್ ಸಯಿದ್ ಎಂಬ ಯುವಕ ಪೊಲೀಸ್ ಲಾಕಪ್‌ನಲ್ಲಿ ಮೃತನಾದದ್ದು. ಅಲೆಕ್ಸಾಂಡ್ರಿಯಾದ ಬಂದೀ ಖಾನೆಯಲ್ಲಿ ಪೋಲೀಸರಿಂದ ಹತ್ಯೆಗೀಡಾದ ಖಾಲಿದ್ ಸಯಿದ್ ಸ್ಮರಣಾರ್ಥ ಸ್ಥಾಪನೆಗೊಂಡ ಕೆಫಯಾ ಸಂಘಟನೆ (ವಿ ಆರ್ ಆಲ್ ಖಾಲಿದ್‌ಸಯಿದ್ ಸಂಘಟನೆ) ಈಜಿಪ್ಟಿನ ಸಾಂವಿಧಾನಿಕ ಸುಧಾರಣೆಗಾಗಿ ಮತ್ತು ನಾಗರಿಕ ಹಕ್ಕುಗಳಿಗಾಗಿ ಹೋರಾಟ ರೂಪಿಸಿದ ಮುಂಚೂಣಿ ಸಂಘಟನೆಯಾಗಿತ್ತು. ಇದರೊಂದಿಗೆ ಜನವರಿ 25ರ ಆಂದೋಲನ, ನೊಬೆಲ್ ಪ್ರಶಸ್ತಿ ವಿಜೇತ ಅಲ್‌ಬರಾದಿ ನೇತೃತ್ವದ ಎನ್‌ಎಸಿ, ಏಪ್ರಿಲ್ 6ರ ಆಂದೋಲನ ಹೀಗೆ ಹಲವು ಸಂಘಟನೆಗಳು ಹೋರಾಟದ ಮುಂಚೂಣಿಯಲ್ಲಿದ್ದವು. ಈ ಸಂಘಟನೆಗಳ ಅಹಿಂಸಾತ್ಮಕ ಹೋರಾಟಕ್ಕೆ ಈಜಿಪ್ಟಿನ ಸಮಸ್ತ ಜನತೆ ತಮ್ಮ ಅಸ್ಮಿತೆಗಳನ್ನು ಮೀರಿ ಬೆಂಬಲ ಸೂಚಿಸಿದ್ದು ಕ್ರಾಂತಿಕಾರಿ ಪರಿಣಾಮ ಬೀರಿತ್ತು.

ಪ್ರಮುಖ ನೇತಾರಳಾದ 26 ವರ್ಷದ ಅಸ್ಮಾ ಮಹಫೌಜ್ ಎಂಬ ಯುವತಿ. ಫೆಬ್ರವರಿ 1 2011ರಂದು ಕೈರೋದ ತಹ್ರೀರ್ ಚೌಕಕ್ಕೆ ಪ್ರಜೆಗಳ ಬೃಹತ್ ರ್‍ಯಾಲಿಯನ್ನು ಕೊಂಡೊಯ್ಯುವ ಯೋಜನೆಗೆ ಸ್ಪಷ್ಟ ರೂಪ ನೀಡಿದ ಮಹಫೌಜ್ 20 ಲಕ್ಷ ಜನರನ್ನು ಸಂಘಟಿಸುವುದರಲ್ಲಿ ಯಶಸ್ವಿಯಾದದ್ದು ಕ್ರಾಂತಿಯ ಮಹತ್ವದ ಹೆಜ್ಜೆಯಾಗಿತ್ತು. ಆ ಐತಿಹಾಸಿಕ ದಿನದಂದು ಕೈರೋದ ತಹ್ರೀರ್ ಚೌಕದಲ್ಲಿ 20 ಲಕ್ಷ ಜನ ಸೇರಿದ ಕೂಡಲೇ ಹೊಸ್ನಿ ಮುಬಾರಕ್ ತಾವು ಸೆಪ್ಟೆಂಬರ್‌ನಲ್ಲಿ ಅಧಿಕಾರ ತ್ಯಾಗ ಮಾಡುವುದಾಗಿ ಘೋಷಿಸಿದ್ದು ಕ್ರಾಂತಿಯ ಮೊದಲ ವಿಜಯವೇ ಆದರೂ, ಪ್ರತಿಭಟನಾಕಾರರು ಅಷ್ಟಕ್ಕೇ ಸಂತೃಪ್ತರಾಗದೆ, ಮುಬಾರಕ್ ಪದಚ್ಯುತಿಗಾಗಿ ಹೋರಾಟವನ್ನು ಮುಂದುವರೆಸಿದ್ದು ನಿಜಕ್ಕೂ ಚಾರಿತ್ರಿಕ ಘಟನೆ.

ಈಜಿಪ್ಟಿನ ಕ್ರಾಂತಿಯ ಕಿಡಿ ಹೊತ್ತಿಸಿದ ಘಟನೆ ಎಂದರೆ ಖಾಲಿದ್ ಸಯಿದ್ ಎಂಬ ಯುವಕ ಪೊಲೀಸ್ ಲಾಕಪ್‌ನಲ್ಲಿ ಮೃತನಾದದ್ದು. ಅಲೆಕ್ಸಾಂಡ್ರಿಯಾದ ಬಂದೀ ಖಾನೆಯಲ್ಲಿ ಪೋಲೀಸರಿಂದ ಹತ್ಯೆಗೀಡಾದ ಖಾಲಿದ್ ಸಯಿದ್ ಸ್ಮರಣಾರ್ಥ ಸ್ಥಾಪನೆಗೊಂಡ ಕೆಫಯಾ ಸಂಘಟನೆ (ವಿ ಆರ್ ಆಲ್ ಖಾಲಿದ್ ಸಯಿದ್ ಸಂಘಟನೆ) ಈಜಿಪ್ಟಿನ ಸಾಂವಿಧಾನಿಕ ಸುಧಾರಣೆಗಾಗಿ ಮತ್ತು ನಾಗರಿಕ ಹಕ್ಕುಗಳಿಗಾಗಿ ಹೋರಾಟ ರೂಪಿಸಿದ ಮುಂಚೂಣಿ ಸಂಘಟನೆಯಾಗಿತ್ತು. ಇದರೊಂದಿಗೆ ಜನವರಿ 25ರ ಆಂದೋಲನ, ನೊಬೆಲ್ ಪ್ರಶಸ್ತಿ ವಿಜೇತ ಅಲ್‌ಬರಾದಿ ನೇತೃತ್ವದ ಎನ್‌ಎಸಿ, ಏಪ್ರಿಲ್ 6ರ ಆಂದೋಲನ ಹೀಗೆ ಹಲವು ಸಂಘಟನೆಗಳು ಹೋರಾಟದ ಮುಂಚೂಣಿಯಲ್ಲಿದ್ದವು. ಈ ಸಂಘಟನೆಗಳ ಅಹಿಂಸಾತ್ಮಕ ಹೋರಾಟಕ್ಕೆ ಈಜಿಪ್ಟಿನ ಸಮಸ್ತ ಜನತೆ ತಮ್ಮ ಅಸ್ಮಿತೆಗಳನ್ನು ಮೀರಿ ಬೆಂಬಲ ಸೂಚಿಸಿದ್ದು ಕ್ರಾಂತಿಕಾರಿ ಪರಿಣಾಮ ಬೀರಿತ್ತು. ಈ ಕ್ರಾಂತಿಕಾರಿ ಆಂದೋಲನದ ಮತ್ತೊಂದು ವೈಶಿಷ್ಟ್ಯವೆಂದರೆ ದೇಶದ ರಾಜಕಾರಣದಲ್ಲಿ ಸಕ್ರಿಯವಾದ ಪಾತ್ರ

ವಹಿಸಲು ಯುವ ಸಮುದಾಯ ತೋರಿರುವ ಆಸಕ್ತಿ ಮತ್ತು ಜನಪರ ಕಾಳಜಿ. ಇಸ್ಲಾಂ ಉಗ್ರರು ಅರಬ್ ರಾಷ್ಟ್ರಗಳ ಯುವಕರನ್ನು ಸೆಳೆಯುತ್ತಿದ್ದಾರೆ ಎಂದು ಹುಯಿಲೆಬ್ಬಿಸುತ್ತಿದ್ದ ಅಮೆರಿಕ ಮತ್ತು ಮಿತ್ರ ರಾಷ್ಟ್ರಗಳಿಗೆ ತಕ್ಕ ಪ್ರತ್ಯುತ್ತರ ನೀಡಿದ ಈ ಯುವ ಜನತೆ ಈಜಿಪ್ಟಿನ ಮುಸ್ಲಿಂ ಬ್ರದರ್ ಹುಡ್ ಸಂಘಟನೆ ಯನ್ನೂ ನಿರ್ಲಕ್ಷ್ಯ ಮಾಡಿರುವುದೇ ಪ್ರಸ್ತುತ ಯಶಸ್ಸಿಗೆ ಕಾರಣವಾಗಿದೆ.

ತಹ್ರೀರ್ ಚೌಕ – ವಿಮೋಚನೆಯ ಸಂಕೇತ

ಪ್ರತಿಯೊಂದು ಕ್ರಾಂತಿಕಾರಿ ಚಳುವಳಿಗೂ ಒಂದು ನಿರ್ದಿಷ್ಟ ಸ್ಥಳ ಸಾಂಕೇತಿಕವಾಗಿ ಇತಿಹಾಸದುದ್ದಕ್ಕೂ ನಿಲ್ಲುತ್ತದೆ. ರಷ್ಯಾದ ಲೆನಿನ್‌ಗ್ರಾಡ್, ಚೀನಾದ ಟಿಯಾನಮನ್ ಚೌಕ ಹೀಗೆ. ಈ ನಿಟ್ಟಿನಲ್ಲಿ ಈಜಿಪ್ಟಿನ ಜನತೆಯ ವಿಮೋಚನೆಯ ಸಂಕೇತವಾಗಿ ರೂಪುಗೊಂಡಿದ್ದು ಕೈರೋದಲ್ಲಿರುವ ತಹ್ರೀರ್ ಚೌಕ. ಫೆಬ್ರವರಿ 1, 2011ರಂದು ಈ ಚೌಕದಲ್ಲಿ ಸೇರಿದ 20 ಲಕ್ಷಕ್ಕೂ ಹೆಚ್ಚು ಜನರ ಏಕಮೇವ ಧ್ಯೇಯ ಮುಬಾರಕ್‌ನ ಪದಚ್ಯುತಿ ಮತ್ತು ಪ್ರಜಾಸತ್ತೆಯ ಸ್ಥಾಪನೆಯಾಗಿತ್ತು. ಫೆಬ್ರವರಿ 1ರ ಬುಧವಾರ ರಾತ್ರಿ ತಂಡೋಪತಂಡವಾಗಿ ದೇಶದ ಮೂಲೆ ಮೂಲೆಗಳಿಂದ ತಹ್ರೀರ್ ಚೌಕದೆಡೆಗೆ ಹರಿದು ಬಂದ ಜನಸಾಗರದಲ್ಲಿ ಮಹಿಳೆಯರು, ಮಕ್ಕಳು, ವೃದ್ಧರು ಹೀಗೆ ದೇಶದ ಸಮಸ್ತ ಜನತೆ ಸೇರಿತ್ತು. ಹೊಸ್ನಿ ಮುಬಾರಕ್ ಅವರ ಸಾವಿರಾರು ಸಮರ್ಥಕರು ಲಕ್ಷಾಂತರ ವಿರೋಧಿ ಗುಂಪುಗಳೊಡನೆ ಸೆಣಸಾಡಲು ಸಿದ್ಧರಾಗುತ್ತಿದ್ದರು. ಸೇನಾ ತುಕಡಿಗಳು ಅಧ್ಯಕ್ಷರ ಬೆಂಬಲಿಗರಿಗೆ ಪರೋಕ್ಷ ಬೆಂಬಲ ಸೂಚಿಸುವ ರೀತಿಯಲ್ಲಿ ವರ್ತಿಸುತ್ತಿದ್ದರು.

ಆದರೂ ಮುಬಾರಕ್ ಪದಚ್ಯುತಿಗಾಗಿ ಪಣ ತೊಟ್ಟಿದ್ದ ಜನತೆ ಎದೆಗುಂದಲಿಲ್ಲ. ಪ್ರತಿರೋಧಿ ಗುಂಪುಗಳ ಮೇಲೆ ಫೈರ್‌ಬಾಂಬುಗಳು ತುಂಬಿದ ಬಾಟಲುಗಳನ್ನು ಎಸೆಯಲಾಯಿತು. ಹೋರಾಟಗಾರರೂ ಸುಮ್ಮನಿರಲಿಲ್ಲ. ಅಹಿಂಸಾತ್ಮಕವಾಗಿಯೇ ಹೋರಾಡಿದರೂ ತಮ್ಮ ರಕ್ಷಣೆಗಾಗಿ ಹಿಂಸಾತ್ಮಕ ಮಾರ್ಗ ಅನುಸರಿಸಲು ಕ್ರಾಂತಿಕಾರಿ ಜನತೆ ಹಿಂಜರಿಯಲಿಲ್ಲ. ಈ ಸಂದರ್ಭದಲ್ಲಿ ಕೊಂಚ ಹಿನ್ನಡೆಯಾದರೂ ಆತ್ಮಸ್ಥೈರ್ಯದಿಂದ ಮುನ್ನುಗ್ಗಿದ ಪ್ರಜಾತಂತ್ರ ಪರ ಜನತೆ ಮುಬಾರಕ್ ಬೆಂಬಲಿಗರ ಕಡೆಯಿಂದ ರಾಕೆಟ್‌ಗಳಂತೆ ಅಪ್ಪಳಿಸುತ್ತಿದ್ದ ಕಲ್ಲುಗಳ ದಾಳಿಗೆ ಪ್ರತಿದಾಳಿ ನಡೆಸುವುದರಲ್ಲೂ ಸಫಲರಾಗಿದ್ದರು. 150ಕ್ಕೂ ಹೆಚ್ಚು ಜನ ಮೃತಪಟ್ಟರು. ಸಾವಿರಾರು ಜನ ಗಾಯಗೊಂಡರು. ಕಲ್ಲು ತೂರಾಟ ಇಡೀ ರಾತ್ರಿ ನಡೆದಿತ್ತು.

ದಾಳಿಯಿಂದ ತಪ್ಪಿಸಿಕೊಳ್ಳಲು ತಗಡುಗಳಿಂದ ರಕ್ಷಣಾ ಗೋಡೆಗಳನ್ನು ನಿರ್ಮಿಸಿದ ಪ್ರತಿಭಟನಾಕಾರರು ಗಾಯಗೊಂಡವರಿಗೆ ಚಿಕಿತ್ಸೆ ನೀಡಲು ಮಸೀದಿಯೊಂದನ್ನು ಆಸ್ಪತ್ರೆಯಾಗಿ ಪರಿವರ್ತಿಸಿದ್ದರು. ಸ್ವಯಂ ಸೇವಕರಾಗಿ ದುಡಿದ ಅನೇಕ ವೈದ್ಯರು ಅವಿರತವಾಗಿ ಅಹೋರಾತ್ರಿ ಚಿಕಿತ್ಸೆ ನೀಡುತ್ತಿದ್ದರು. ಆ ಸಂದರ್ಭದಲ್ಲೇ ಕೆಲವು ಯುವಕರು ಪೊಲೀಸ್ ಕಾರ್ಯವನ್ನೂ ನಿರ್ವಹಿಸಿ ಮುಬಾರಕ್ ಬೆಂಬಲಿಗರಲ್ಲಿ ಕೆಲವರನ್ನು ವಶಪಡಿಸಿಕೊಳ್ಳುವುದರಲ್ಲಿ ಯಶಸ್ವಿಯಾದರು. ಈ ಬಂಧಿತ ಪಾತಕಿಗಳಿಗೆ ಉಗ್ರ ಶಿಕ್ಷೆ ನೀಡಲು ಹಲವರು ಅಪೇಕ್ಷಿಸಿದರೆ ಬಹುಪಾಲು ಜನತೆ ಇಂತಹ ದ್ರೋಹಿಗಳನ್ನು ಸೇನೆಯ ವಶಕ್ಕೆ ಒಪ್ಪಿಸಲು ಸೂಚಿಸಿದರು.

ಗುರುವಾರ 2ನೆಯ ತಾರೀಖಿನಂದು ಮುಂಜಾನೆಯೇ ಸೇನೆಯಿಂದ ಗುಂಡಿನ ದಾಳಿ ಆರಂಭವಾಗಿತ್ತು.

> **ತೈಲ ಸಂಪತ್ತನ್ನು ತನ್ನ ವಶದಲ್ಲಿರಿಸಿಕೊಳ್ಳಲು ಅರಬ್ ರಾಷ್ಟ್ರಗಳಲ್ಲಿ ಪ್ರಜಾಸತ್ತೆಯ ಉಸಿರೇ ಏಳದಂತೆ ತಡೆಗಟ್ಟಿದ್ದ ಅಮೆರಿಕದ ಸಾಮ್ರಾಜ್ಯಶಾಹಿ ನೀತಿಗಳಿಗೆ ಈಜಿಪ್ಟ್ ಕ್ರಾಂತಿ ತೀವ್ರ ಹಿನ್ನಡೆಯಾಗಿದೆ. ವಿಶ್ವದೆಲ್ಲೆಡೆ ಪ್ರಜಾತಂತ್ರ ಜಾರಿಗೊಳಿಸುವ ಅಮೆರಿಕದ ಕುಹಕ ನೀತಿಯ ಹಿಂದಿರುವುದು ಸಾಮ್ರಾಜ್ಯ ವಿಸ್ತರಣೆ ಮತ್ತು ಬಂಡವಾಳದ ನಿಯಂತ್ರಣ. ಹಾಗಾಗಿಯೇ ಜಗತ್ತಿನ ಅತ್ಯಮೂಲ್ಯ ನೈಸರ್ಗಿಕ ಸಂಪತ್ತಿನ ಒಡೆತನ ಹೊಂದಿರುವ ಅರಬ್ ರಾಷ್ಟ್ರಗಳಲ್ಲಿ ಸರ್ವಾಧಿಕಾರವೇ ತಾಂಡವಾಡುತ್ತಿದೆ. ಆದರೆ ಟುನಿಷಿಯಾ ಎಂಬ ಪುಟ್ಟ ರಾಷ್ಟ್ರದಲ್ಲಿ ಭುಗಿಲೆದ್ದ ಪ್ರಜೆಗಳ ಆಕ್ರೋಶ ಈಗ ಈಜಿಪ್ಟನ್ನು ಆಕ್ರಮಿಸಿರುವುದು ಅಮೆರಿಕವನ್ನು ಕಂಗೆಡಿಸಿದೆ.**

ಈ ಗುಂಡಿನ ದಾಳಿಯಲ್ಲಿ ಐದು ಮಂದಿ ಮೃತಪಟ್ಟು 900 ಜನ ಗಾಯಗೊಂಡಿದ್ದರು. ಆದರೂ ಪ್ರತಿಭಟನಾಕಾರರು ತಹ್ರೀರ್ ಚೌಕವನ್ನು ಬಿಟ್ಟು ಕದಲಲಿಲ್ಲ. 24ಗಂಟೆಗಳ ಕಾಲ ಮುಬಾರಕ್ ಬೆಂಬಲಿಗರ ಆಕ್ರಮಣವನ್ನು ದಿಟ್ಟವಾಗಿ ಎದುರಿಸಿದ್ದ ಜನತೆ ತಮ್ಮ ಅಚಲ ನಿಲುವನ್ನು ಸಡಿಲಗೊಳಿಸಲಿಲ್ಲ. ಈ ಹೋರಾಟಗಾರರ ದೃಷ್ಟಿಯಲ್ಲಿ ತಹ್ರೀರ್ ಚೌಕ ಕೇವಲ ಆಕ್ರಮಿತ ಪ್ರದೇಶವಾಗಿರಲಿಲ್ಲ. ಸರ್ವಾಧಿಕಾರ ಮತ್ತು ಪ್ರಜಾತಂತ್ರದ ನಡುವಿನ ಸಂಘರ್ಷದ ದ್ಯೋತಕವಾಗಿ ಪರಿಣಮಿಸಿತ್ತು. ಈ ಸಂಘರ್ಷ ಇಂದು ನೆನ್ನೆ ಸೃಷ್ಟಿಯಾದದ್ದಲ್ಲ. ನಾಸೆರ್ ಕಾಲದಿಂದಲೂ ಬೂದಿಮುಚ್ಚಿದ ಕೆಂಡದಂತಿದ್ದ ಪ್ರಜಾಸತ್ತೆಯ ಹಪಹಪಿ ಭುಗಿಲೇಳಲು ಹಲವು ವರ್ಷಗಳೇ ಬೇಕಾಯಿತಷ್ಟೆ.

ಹಾಗಾಗಿಯೇ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಿರ್ಲಕ್ಷ್ಯಕ್ಕೊಳಗಾಗಬಹುದಾದ ಈಜಿಪ್ಟಿನ ಸೇನೆಯೂ ಪ್ರತಿಭಟನಾಕಾರರನ್ನು ಹೆಚ್ಚಾಗಿ ನಿಯಂತ್ರಿಸಲೆತ್ನಿಸಲಿಲ್ಲ. ಆದರೆ ಪ್ರತಿಭಟನಾಕಾರರ ಮೇಲೆ ದಾಳಿ ಮಾಡಲೆಂದೇ ಆಯುಧಗಳ ಸಮೇತ ತಹ್ರೀರ್ ಚೌಕಕ್ಕೆ ಬಂದಿಳಿದ ಮುಬಾರಕ್ ಬೆಂಬಲಿಗರನ್ನು ಶಾಂತಿಯುತ ಪ್ರತಿಭಟನಾಕಾರರ ವಿರುದ್ಧ ಹರಿಹಾಯಲು ಅವಕಾಶ ಮಾಡಿಕೊಡುವ ಮೂಲಕ ಸೇನೆಯೂ ತನ್ನ ನೈಜ ಸ್ವರೂಪವನ್ನು ಬಹಿರಂಗಪಡಿಸಿತ್ತು. ಆದರೂ ತಮ್ಮ ಅಚಲವಾದ ನಿಲುವಿನಿಂದ ಹಿಂದೆ ಸರಿಯದ ಈಜಿಪ್ಟಿನ ಜನತೆ ಮುಬಾರಕ್ ಅವರ ಯಾವುದೇ ಷರತ್ತಿಗೆ ಒಪ್ಪದೆ ಫೆಬ್ರವರಿ 11ರಂದು ಅಧ್ಯಕ್ಷರ ಬಂಗಲೆಯನ್ನು ಸುತ್ತುವರೆಯ ಲಾರಂಭಿಸಿದಾಗ ಮುಬಾರಕ್‌ಗೆ ಪಲಾಯನ ಮಾಡುವು ದೊಂದೇ ಮಾರ್ಗವಾಗಿತ್ತು. ಕೊನೆಯ ಘಳಿಗೆಯವರೆಗೂ ತನ್ನ ಅಧಿಕಾರ ಬಿಡುವುದಿಲ್ಲ ಎಂದು ಹೇಳುತ್ತಿದ್ದ ಮುಬಾರಕ್ ಅಂತಿಮವಾಗಿ ದೇಶವನ್ನೇ ತೊರೆದು, ಪ್ರಜಾ ಸತ್ತೆಯ ಆಶಯಗಳಿಗೆ ಮಣಿದು ಶರಣಾಗಿದ್ದು ಈಜಿಪ್ಟಿನ ಸಾರ್ವಭೌಮ ಪ್ರಜೆಗಳ ಹೋರಾಟದ ಪ್ರತಿಫಲವಾಗಿದೆ.

ಭವಿಷ್ಯದ ದಿನಗಳು ?

ತೈಲ ಸಂಪತ್ತನ್ನು ತನ್ನ ವಶದಲ್ಲಿರಿಸಿಕೊಳ್ಳಲು ಅರಬ್ ರಾಷ್ಟ್ರಗಳಲ್ಲಿ ಪ್ರಜಾಸತ್ತೆಯ ಉಸಿರೇ ಏಳದಂತೆ ತಡೆಗಟ್ಟಿದ್ದ ಅಮೆರಿಕದ ಸಾಮ್ರಾಜ್ಯಶಾಹಿ ನೀತಿಗಳಿಗೆ ಈಜಿಪ್ಟ್ ಕ್ರಾಂತಿ ತೀವ್ರ ಹಿನ್ನಡೆಯಾಗಿದೆ. ವಿಶ್ವದೆಲ್ಲೆಡೆ ಪ್ರಜಾತಂತ್ರ ಜಾರಿಗೊಳಿಸುವ ಅಮೆರಿಕದ ಕುಹಕ ನೀತಿಯ ಹಿಂದಿರುವುದು ಸಾಮ್ರಾಜ್ಯ ವಿಸ್ತರಣೆ ಮತ್ತು ಬಂಡವಾಳದ ನಿಯಂತ್ರಣ. ಹಾಗಾಗಿಯೇ ಜಗತ್ತಿನ ಅತ್ಯಮೂಲ್ಯ ನೈಸರ್ಗಿಕ ಸಂಪತ್ತಿನ ಒಡೆತನ ಹೊಂದಿರುವ ಅರಬ್ ರಾಷ್ಟ್ರಗಳಲ್ಲಿ ಸರ್ವಾಧಿಕಾರವೇ ತಾಂಡವಾಡುತ್ತಿದೆ. ಆದರೆ ಟುನಿಷಿಯಾ ಎಂಬ ಪುಟ್ಟ ರಾಷ್ಟ್ರದಲ್ಲಿ ಭುಗಿಲೆದ್ದ ಪ್ರಜೆಗಳ ಆಕ್ರೋಶ ಈಗ ಈಜಿಪ್ಟನ್ನು ಆಕ್ರಮಿಸಿರುವುದು ಅಮೆರಿಕವನ್ನು ಕಂಗೆಡಿಸಿದೆ. ಸದ್ಯಕ್ಕೆ ಈಜಿಪ್ಟಿನ ಆಡಳಿತ ಸೇನೆಯ ವಶವಾಗಿದ್ದು ಮುಂದಿನ ಆರು ತಿಂಗಳಿನಲ್ಲಿ ಪ್ರಜಾತಾಂತ್ರಿಕ ಸಂವಿಧಾನದ ರಚನೆ ಮಾಡಿ ಮುಕ್ತ ಚುನಾವಣೆಗಳನ್ನು ನಡೆಸುವುದಾಗಿ ಘೋಷಿಸಿದೆ.

ಮತ್ತೊಂದೆಡೆ ಪ್ರಸಕ್ತ ಕ್ರಾಂತಿಕಾರಿ ಬದಲಾವಣೆಯಲ್ಲಿ ಯಾವುದೇ ಪ್ರಾಮುಖ್ಯತೆ ಪಡೆಯದ ಮುಸ್ಲಿಂ ಬ್ರದರ್ ಹುಡ್ ಎಂಬ ಮೂಲಭೂತವಾದಿ ಸಂಘಟನೆಯೂ ತನ್ನ ನೈಜ ಸ್ವರೂಪವನ್ನು ಹೊರಗೆಡಹಲಾಗದೆ ಜನಪರ ಕಾಳಜಿಯ ಮುಖವಾಡ ಧರಿಸಿದೆ. ಭವಿಷ್ಯದಲ್ಲಿ ಈ ಸಂಘಟನೆ ಈಜಿಪ್ಟಿನ ಜನತೆಯನ್ನು ಮತ್ತೊಂದು ರೀತಿಯ ಧಾರ್ಮಿಕ ಪ್ರಭುತ್ವದೆಡೆಗೆ ಸೆಳೆಯುವ ಪ್ರಯತ್ನ ಮಾಡಲೂ ಬಹುದು. ಈ ಪ್ರಯತ್ನಕ್ಕೆ ಅಮೆರಿಕ ಪರೋಕ್ಷವಾಗಿ ಬೆಂಬಲ ನೀಡಿದರೂ ಅಚ್ಚರಿಯಿಲ್ಲ. ಏಕೆಂದರೆ ಈಜಿಪ್ಟಿನ ಸಂಪನ್ಮೂಲಗಳು ಪ್ರಜೆಗಳ ಕೈಗೆ ತಲುಪದೆ ಅಮೆರಿಕದ ಸೂತ್ರದ ಗೊಂಬೆಗಳ ಕೈಯ್ಯಲ್ಲಿರಬೇಕೆಂಬುದು ದೊಡ್ಡಣ್ಣನ ಆಶಯ. ಮತ್ತೊಂದೆಡೆ ಪ್ರಸಕ್ತ ಕ್ರಾಂತಿಕಾರಿ ಬದಲಾವಣೆಯ ಮುಂಚೂಣಿಯಲ್ಲಿರುವ ಯುವ ಜನತೆಗೂ ಸ್ಪಷ್ಟವಾದ ಪರ್ಯಾಯದ ಕಲ್ಪನೆ ಇಲ್ಲದಿರುವುದು ಹೋರಾಟದ ಸಂದರ್ಭದಲ್ಲೇ ವ್ಯಕ್ತವಾಗಿದೆ.

ನವ ಉದಾರವಾದವನ್ನು ವಿರೋಧಿಸಿದರೂ, ಒಂದು ಪರ್ಯಾಯ ಆರ್ಥಿಕ ವ್ಯವಸ್ಥೆಯನ್ನು ರೂಪಿಸುವುದು ಮಹತ್ವದ ನಿರ್ಣಯವಾಗಲಿದೆ. ವಿಶ್ವದಾದ್ಯಂತ ನವ ಉದಾರವಾದ ಸೃಷ್ಟಿಸಿರುವ ಭ್ರಮಾಲೋಕವನ್ನು ಛಿದ್ರಗೊಳಿಸಿರುವ ಈಜಿಪ್ಟಿನ ಜನತೆ, ಬಂಡವಾಳಶಾಹಿ ನೀತಿಯಿಂದ ವಿಮುಖವಾಗಿ ಜನಪರ ಆರ್ಥಿಕ ನೀತಿಯನ್ನು ಅನುಸರಿಸುವುದು ತುರ್ತು ಅಗತ್ಯತೆಯಾಗಿದೆ. ಸಾಮ್ರಾಜ್ಯಶಾಹಿಗಳ ಬ್ಲಾಕ್‌ಮೇಲ್ ತಂತ್ರ, ಆರ್ಥಿಕ ನೀತಿಗಳ ಒತ್ತಡ ಮತ್ತು ಆಂತರಿಕ ಭಿನ್ನಮತೀಯರನ್ನು ಉಪಯೋಗಿಸಿಕೊಂಡು ಅಮೆರಿಕ ನಡೆಸಬಹುದಾದ ಹುನ್ನಾರಗಳನ್ನು ಗಮನದಲ್ಲಿಟ್ಟುಕೊಂಡೇ ಈಜಿಪ್ಟಿನ ಹೊಸ ಪೀಳಿಗೆಯ ಪ್ರಭುತ್ವ ತನ್ನ ಭವಿಷ್ಯದ ಮಾರ್ಗವನ್ನು ಕಂಡುಕೊಳ್ಳಬೇಕಿದೆ. ತಹ್ರೀರ್ ಚೌಕ ಕೇವಲ ದೇಶದ ವಿಮೋಚನೆಯ ಸಂಕೇತವಾದರೆ ಸಾಲದು. ನವ ಉದಾರವಾದ ಮತ್ತು ಸಾಮ್ರಾಜ್ಯಶಾಹಿ ಸರ್ವಾಧಿಕಾರದಿಂದ ಮುಕ್ತವಾದ ಈಜಿಪ್ಟಿನ ಶ್ರಮಜೀವಿಗಳು, ದುಡಿಯುವ ವರ್ಗಗಳು, ತಳ ಸಮುದಾಯಗಳು ನೆಮ್ಮದಿಯಿಂದ ಬಾಳಲು ಒಂದು ಹೊಸ ಯುಗವನ್ನು ಸೃಷ್ಟಿಸುವಂತಾಗಬೇಕು. ಹಾಗಾದಲ್ಲಿ ಮಾತ್ರ ಈಜಿಪ್ಟಿನ ಕ್ರಾಂತಿ ಜಗತ್ತಿನ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿಯುತ್ತದೆ. □

ಕಾವ್ಯ

ದೇವರ ಹೆಣಗಳ ಚರಮಗೀತೆ



ಯಾಕೋ
ದೇವಾಲಯದಲ್ಲೀಗ
ದೇವರ ಹೆಣ ಸುಟ್ಟ ವಾಸನೆ !

ಮಸೀದಿಗಳಲ್ಲಿ
ಯಾ ಅಲ್ಲಾ, ಯಾ, ಖುದಾ
ಗಳನ್ನೆಲ್ಲಾ ಬಿಸ್ಮಿಲ್ಲಾ ಮಾಡಿ
ದಫನ್ ಮಾಡಿದ ಕಮಟು ವಾಸನೆ!

ಚರ್ಚ್‌ಗಳಲ್ಲಿ
ಆಲೇಲೂಯಾಗಳು, ಆಮೇನ್‌ಗಳನ್ನೆಲ್ಲಾ
ಶಿಲುಬೆಗೇರಿಸಿ ಚಮಡಾ ತೆಗೆದು
ರವರವಷ್ಟೇ ರೋಸ್ಟುಮಾಡಿ, ಫ್ರೈ ಮಾಡಿದ
ಸ್ಪೈಸೀ ಮಸಲಾ ವಾಸನೆ!

ದೇವಸ್ಥಾನದ ಮುಂದೆ
ಯಾರೋ ಭಕ್ತರು ಹೇಸಿಗೆ ತುಳಿದು
ಬಿಟ್ಟು ಹೋದ ಚಪ್ಪಲಿಯ ವಾಸನೆ
ದೇವಾಲಯದ ಗರ್ಭಗುಡಿಯ
ದೂಪದ ಜೊತೆ ಸೇರಿಕೊಂಡಂತೆ
ಒಳಗೂ–ಹೊರಗೂ ಗಬ್ಬು ಗಬ್ಬೋ–ವಾಸನೆ!

೨

ಶುಕ್ರವಾರದ ನಮಾಜು
ಭಾನುವಾರದ ಪ್ರಾರ್ಥನೆ
ದಿನದಿನದ ಮಂತ್ರಘೋಷಗಳಲ್ಲೇ
ಅರಳುತ್ತಿದ್ದ ಪ್ರೇಮದ ಕುಡಿನೋಟ
ಪ್ರೀತಿಯ ಪಿಸುಮಾತು

ಶ್ವೇತ ಶುಭ್ರ ಉಡುಪಿನ
ಅಚ್ಚ ಬಿಳಿ ಪ್ರಶಾಂತ ಭಾವಗಳು
ದೀಪದ ಕುಡಿಬೆಳಕು, ಗಂಧಾಕ್ಷತೆ
ಬಿಳಿಗುಲಾಬಿ–ಪರಿವಾಳ, ಪಾರಿಜಾತ
ಎಲ್ಲ ಖುಲ್ಲಂ ಖುಲ್ಲ ಹೊತ್ತಿಕೊಂಡು
ದಗಾ ಧಗಾ ಉರಿಯುತ್ತಿವೆ.

೩

ಕೈ ಸುಟ್ಟುಕೊಂಡ
ಮಗುವೊಂದರ ಅಳು
ಹಾಗೂ
ಆ ತಾಯಿಯ ಸೆರಗಿಗಂಟಿದ
ಬೆಂಕಿಯ ಕಾವಿನಲ್ಲಿ
ನಡೆದಿದೆ ಮುಖವಿಲ್ಲದ ಮೈಗಳ
ಮೈಥುನದ ಕೇಳಿ !

ನಾಳೆ
ಸುದ್ದಿ ಪತ್ರಿಕೆಯಲ್ಲಿ
ಏನೆಂದು ಬಂದೀತೋ
ಕಾದು ನೋಡಬೇಕು
ಬೆಳಕಾಗುವವರೆಗೂ...

○ ಪ್ರೊ|| ಟಿ. ಯಲ್ಲಪ್ಪ

ಪದ್ಮಶ್ರೀ ಅಮಾಸ- ಮಹಾದೇವರಿಗೆ ಪ್ರಶಸ್ತಿ ಬಂದುದು !

ಪ್ರೊ. ರಾಜೇಂದ್ರ ಚೆನ್ನಿ

ದೇವನೂರು ಮಹಾದೇವರಿಗೆ ಪದ್ಮಶ್ರೀ ಪ್ರಶಸ್ತಿ ಬಂದ ಸುದ್ದಿ ಪ್ರಸಾರವಾದಕೂಡಲೇ ನಾವೆಲ್ಲ ನಿರೀಕ್ಷಿಸಿದಂತೆ ಅವರು ಭೂಗತರಾಗಿದ್ದರು. ಹೀಗಾಗಿ ನಾವು-ಅಂದರೆ ಅವರ ಅಭಿಮಾನಿಗಳ ಸಂಘದ ಖಾಯಂ ಸದಸ್ಯರು-ಒಬ್ಬರನ್ನೊಬ್ಬರು ಅಭಿನಂದಿಸಿಕೊಂಡೆವು. ಯಾವ ಕಾನೂನಿನ ಪ್ರಕಾರವೂ ನೋಂದಾಯಿತವಾಗಲಾರದ ಅರಾಜಕ ಓದುಗರ ಸಂಘವಿದಾಗಿದೆ. ಒಂದು ಸಾರಿ ಸಭೆಯೊಂದರ ಅಧ್ಯಕ್ಷತೆ ವಹಿಸಿದ ಮಹಾದೇವರು ಅಲ್ಲಿ ಶುರುವಾದ ಚರ್ಚೆ, ಗೊಂದಲಗಳನ್ನು ನೋಡಿ 'ನಾನು ಇದ್ದಲ್ಲಿ ಅರಾಜಕತೆ ತಂತಾನೆ ಶುರುವಾಗುತ್ತದೆ' ಎಂದು ವಿಪರೀತ ಖುಷಿಪಟ್ಟಿದ್ದರು. ಕನ್ನಡದ ದುರ್ದೈವವೆಂದರೆ ಪ್ರತಿಭಾವಂತ ಬರಹಗಾರರು ಪ್ರಭಾವಿಗಳೂ ಆದಾಗ ನಾಡಿನುದ್ದಕ್ಕೂ ಅವರ ಮಠದ ಗಿಂಡಿಮಾಣಿಗಳು, ಅವರು ಕಟ್ಟುವ ಮಾಫಿಯಾದ ಜ್ಯೂನಿಯರ್ ಡಾನ್‌ಗಳು ಹಾಗೂ ಉನ್ಮತ್ತ ದರ್ವೇಶಿಗಳನ್ನು ಅಪಾರ ಸಂಖ್ಯೆಯಲ್ಲಿ ಉತ್ಪಾದಿಸತೊಡಗುತ್ತಾರೆ.

ಇತ್ತೀಚಿನ ದಿನಗಳಲ್ಲಿ ಸಮಾಜವಿಜ್ಞಾನಿಯೊಬ್ಬನ ಸುತ್ತ ಹುಟ್ಟಿಕೊಂಡಿರುವ cultನ ಉಗ್ರ ಹಿಂಬಾಲಕರನ್ನು ನೋಡಿ ನಾನಂತೂ ತತ್ತರಿಸಿಹೋಗಿದ್ದೇನೆ. ಚಿಕ್ಕವನಿದ್ದಾಗ ಧಾರವಾಡದಲ್ಲಿ ಎಲ್ಲಮ್ಮನ ಭಕ್ತೆಯರಾದ ಜೋಗತಿಯರು ಭಿಕ್ಷೆ ಹಾಕುವವರೆಗೂ ಉಗ್ರವಾದ ಕಣ್ಣುಗಳಿಂದ ಹೆದರಿಸುತ್ತಿದ್ದಾಗ ಅನಿಸುತ್ತಿದ್ದ ಭೀತಿಯನ್ನೇ ಈತನ ಹಿಂಬಾಲಕರು ವೈಚಾರಿಕ ವಲಯದಲ್ಲಿ ಪ್ರಯೋಗಿಸುತ್ತಿದ್ದಾರೆ. ಇದೆಲ್ಲಾ ಯಾಕೆ ಹೇಳಿದೆನೆಂದರೆ ಸಾಹಿತ್ಯ ಕೊಡುವ ಸವಲತ್ತೆಂದರೆ ಅದರ ಓದಿನ ಮೂಲಕ ನಾವು ಕಂಡುಕೊಳ್ಳುವ ಸ್ವಾಯತ್ತತೆ. ಪಂಪ, ಅಲ್ಲಮ, ಕುವೆಂಪು ಅವರೊಂದಿಗೆ ನಮ್ಮ ಸ್ವತಂತ್ರ ನೆಲೆಗಳಲ್ಲಿ ನಿಂತುಕೊಂಡು ಹೆಗಲ ಮೇಲೆ ಕೈಹಾಕಿ ಮಾತನಾಡುವ ಸ್ವಚ್ಛಂದ, ವಾಸ್ತವಿಕ ಸಮಾಜದಲ್ಲಿ ಇರುವ ಇಕ್ಕಟ್ಟುಗಳು, ಆಕ್ರಮಣಶೀಲವಾದ ಸಂಕಥನಗಳು ಮನಸ್ಸುಗಳನ್ನು ಮುರುಟಿಸಿ ಬುದ್ಧಿಯನ್ನು ಸೀಮಿತಗೊಳಿಸಿ ಇನ್ನೊಬ್ಬರ ಗುಲಾಮನನ್ನಾಗಿಸುತ್ತವೆ.

ಇದಾವುದೂ ಇಲ್ಲದ ಆರೋಗ್ಯಕರವಾದ ಅರಾಜಕತೆಗಾಗಿಯೇ ನಾವು ಸಾಹಿತ್ಯವನ್ನು ಇಷ್ಟು ಹಚ್ಚಿಕೊಳ್ಳುತ್ತೇವೆಯಲ್ಲವೆ? ಆದರೆ ಅಂತಃಕರಣ ಮಾತ್ರ ಇರಬೇಕಾದ ಸಾಹಿತ್ಯದ ವಲಯದಲ್ಲಿ ಕೂಡ ಪ್ರಭಾವಿ ಬರಹಗಾರರ ಅಧಿಕಾರ ಕೇಂದ್ರಗಳು ಹುಟ್ಟಿಕೊಂಡು ಸಮಾಜದಲ್ಲಿರುವ ಯಾವತ್ತೂ ವಿಕೃತಿಗಳನ್ನು ಇಲ್ಲಿಯೂ ಅನುಕರಿಸತೊಡಗುತ್ತಾರೆ. ಹಾಗೆ ಆಗದೇ ಇರುವಂಥ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಇಷ್ಟೊಂದು ವರ್ಷ ಮಯ್ಗೆಡದಂತೆ ಕಾಪಾಡಿಕೊಂಡ ಮಹಾದೇವ ಕನ್ನಡ ಸಂಸ್ಕೃತಿಯ ಆರೋಗ್ಯಕ್ಕೆ ಮುಖ್ಯ ಕಾರಣವಾಗಿದ್ದಾರೆ. ತಮ್ಮ ಏಕಾಂತ, ನಾಚಿಕೆ, ದಾಕ್ಷಿಣ್ಯ, ಯಾರು ಯಾವ ವರಸೆ ಹಾಕಿದರೂ ತಮ್ಮ ಬಾಯಿಂದ ಇನ್ನೊಬ್ಬರ ಮಾತನ್ನು ಆಡುವುದಿಲ್ಲ ಎನ್ನುವ ಜಿಗುಟುತನ ಇವುಗಳಿಂದಾಗಿ ಮಹಾದೇವ ಇಂದಿಗೂ ಸಹಜವಾಗಿದ್ದಾರೆ. ಇದರಿಂದಾಗಿ ಕನ್ನಡದ ದಲಿತ ಬರಹ, ದಲಿತ ಸಂಸ್ಕೃತಿ ರಾಜಕಾರಣಕ್ಕೆ ಆಗಿರುವ ಅಪಾರವಾದ ಪ್ರಯೋಜನಗಳ ಬಗ್ಗೆ ಯೋಚಿಸುತ್ತಿದ್ದೇನೆ. ಇಂಗ್ಲಿಷ್ ಬಾರದ ಮಹಾದೇವರು ಅಮೆರಿಕಕ್ಕೆ ಹೋದಾಗ 'ಅಮೇರಿಕದಲ್ಲಿ ಅಮಾಸ' ಎಂದುಕೊಂಡು ಖುಷಿಪಟ್ಟಿದ್ದ ನಾನು ಈಗ ಅವರಿಗೆ ಪ್ರಶಸ್ತಿ ಬಂದಿರುವಾಗ 'ಪದ್ಮಶ್ರೀ ಅಮಾಸ' ಅಂದರೆ ಹೇಗನಿಸುತ್ತಿದೆಯೆಂದು ಖುಷಿಪಡುತ್ತಿದ್ದೇನೆ.

ಪ್ರಭಾವಿ ಬರಹಗಾರರ ಅಧಿಕಾರ ಕೇಂದ್ರಗಳು ಹುಟ್ಟಿಕೊಂಡು ಸಮಾಜದಲ್ಲಿರುವ ಯಾವತ್ತೂ ವಿಕೃತಿಗಳನ್ನು ಇಲ್ಲಿಯೂ ಅನುಕರಿಸತೊಡಗುತ್ತಾರೆ. ಹಾಗೆ ಆಗದೇ ಇರುವಂಥ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಇಷ್ಟೊಂದು ವರ್ಷ ಮಯ್ಗೆಡದಂತೆ ಕಾಪಾಡಿಕೊಂಡ ಮಹಾದೇವ ಕನ್ನಡ ಸಂಸ್ಕೃತಿಯ ಆರೋಗ್ಯಕ್ಕೆ ಮುಖ್ಯ ಕಾರಣವಾಗಿದ್ದಾರೆ. ತಮ್ಮ ಏಕಾಂತ, ನಾಚಿಕೆ, ದಾಕ್ಷಿಣ್ಯ, ಯಾರು ಯಾವ ವರಸೆ ಹಾಕಿದರೂ ತಮ್ಮ ಬಾಯಿಂದ ಇನ್ನೊಬ್ಬರ ಮಾತನ್ನು ಆಡುವುದಿಲ್ಲ ಎನ್ನುವ ಜಿಗುಟುತನ ಇವುಗಳಿಂದಾಗಿ ಮಹಾದೇವ ಇಂದಿಗೂ ಸಹಜವಾಗಿದ್ದಾರೆ.



ದಲಿತ ಸಂಕಥನಗಳಿಗೆ (discourses) ಇರುವ ದೊಡ್ಡ ಅಪಾಯವೆಂದರೆ ಸವರ್ಣೀಯ ಮತ್ತು ಮೇಲುವರ್ಗದ ಗ್ರಹಿಕೆಗಳನ್ನು ಗೊತ್ತಿಲ್ಲದೇ ಒಪ್ಪಿಕೊಂಡುಬಿಡುವುದು. ಈ ಗ್ರಹಿಕೆಗಳು ಒಂದು ಕಡೆಗೆ ದಲಿತ ಸಮುದಾಯಗಳಿಗೆ ಯಾವ ವರ್ಣದಲ್ಲೂ ಜಾಗವಿಲ್ಲನಂತೆ ಮಾಡಿ ಅವರನ್ನು ಸಮಾಜ, ಭಾಷೆ ಹಾಗೂ ಸಂಸ್ಕೃತಿಗಳಿಂದ 'ಅದೃಶ್ಯ'ಗೊಳಿಸಿ ಬಿಡುತ್ತವೆ. ಅವರುಗಳಿಗೆ ಯಾವ ಪ್ರಾತಿನಿಧ್ಯವೇ ಇಲ್ಲದಂತೆ ಮಾಡುತ್ತವೆ. ಸಾವಿರಾರು ವರ್ಷಗಳವರೆಗೆ ಮಲ ಹೊರುವ ಮುಂತಾದ ಅಶೌಚ ಕೆಲಸಗಳನ್ನು ಮಾಡುವ ದೇಹಗಳ ಹೊರತಾಗಿ ಇವರಿಗೆ ಅಸ್ತಿತ್ವವೇ ಇಲ್ಲವೆನ್ನುವಂಥ ಧರ್ಮ, ಸಂಸ್ಕೃತಿ, ಭಾಷೆಗಳನ್ನು ಸವರ್ಣೀಯರು ರಚಿಸಿಕೊಂಡರು. ಭಕ್ತಿ ಪರಂಪರೆಗಳಲ್ಲಿ, ಅದು ಕೂಡಾ ಆ ಪರಂಪರೆಗಳು ಸಾಂಸ್ಥೀಕರಣಗೊಂಡು ವೈದಿಕ ಪರಂಪರೆಗಳೊಂದಿಗೆ ರಾಜೀಕಬೂಲಿ ಮಾಡಿಕೊಳ್ಳುವವರೆಗೆ ಮಾತ್ರ, ದಲಿತರ ಅಸ್ತಿತ್ವದ ಬಗ್ಗೆ ಅಲ್ಲಲ್ಲಿ ಚಿಂತನೆಯಿದೆ.

ಇನ್ನೊಂದು ಕಡೆಗೆ ಕಾಲಕ್ರಮೇಣವಾಗಿ ಸವರ್ಣೀಯ ಗ್ರಹಿಕೆಗಳಲ್ಲಿ ಒಂದಿಷ್ಟು ಮಾನವೀಯತೆ, ನ್ಯಾಯಬದ್ಧತೆಗಳು ಪ್ರವೇಶ ಮಾಡಿದ ಮೇಲೆ ದಲಿತರನ್ನೂ ಶೋಷಿತರನ್ನಾಗಿ ನೋಡುವ, ಜಾತಿ ವ್ಯವಸ್ಥೆಯ ಬಲಿಪಶುಗಳನ್ನಾಗಿ ನೋಡುವ, ಅನುಕಂಪದ ವಸ್ತುಗಳನ್ನಾಗಿ ನೋಡುವ ಗ್ರಹಿಕೆಗಳು ಹುಟ್ಟಿಕೊಂಡವು.

(22ನೇ ಪುಟಕ್ಕೆ)

ಸಮಾನತೆಯ ಪ್ರತಿಪಾದಕ ದೇವನೂರರಿಗೆ 'ಪದ್ಮಶ್ರೀ' ಪ್ರಶಸ್ತಿ ಗರಿ

ತಮ್ಮ ನಡೆ-ನುಡಿಗಳಿಂದ 'ಸಂತ'ನಂತೆ ಬದುಕುತ್ತಿರುವ ದೇವನೂರ ಮಹಾದೇವರಿಗೆ ರಾಷ್ಟ್ರದ ಪರಮೋಚ್ಚ ಪ್ರಶಸ್ತಿಗಳೊಲ್ಲೊಂದಾದ 'ಪದ್ಮಶ್ರೀ' ಪುರಸ್ಕಾರ ದೊರತದ್ದು ಸೃಜನಶೀಲರಲ್ಲಿ ಸಂಭ್ರಮ ತಂದಿದೆ. ಇವರದ್ದು 'ಸಂವಾದ' ದೊಂದಿಗೆ ತಾಯಿ ಕರುಳಿನ ಸಂಬಂಧ. ಅದಕ್ಕಾಗಿ ನಮ್ಮ ಬಳಗಕ್ಕೆ ತುಸು ಹೆಚ್ಚೇ ಸಡಗರ.

ದಮನಿತ ಸಮುದಾಯಗಳ ತಳಮಳಗಳನ್ನು ಹಾಗೂ ಅವರ ಅನನ್ಯ ಸಾಂಸ್ಕೃತಿಕ ವೈವಿಧ್ಯತೆಗಳನ್ನು ಮನಮುಟ್ಟುವಂತೆ ಚಿತ್ರಿಸಿದ ದೇವನೂರರು ತಮ್ಮ ದಟ್ಟ ಅನುಭವದ ಮೂಲಕ ಕನ್ನಡದ ದಲಿತ ಸಾಹಿತ್ಯಕ್ಕೆ ವಿಸ್ತಾರ ರೂಪ ನೀಡಿದವರಲ್ಲಿ ಅಗ್ರಗಣ್ಯರು. ಈವರೆಗೆ ರೂಢಿಗತವಾಗಿದ್ದ ಸಾಹಿತ್ಯದ ಸಾಂಪ್ರದಾಯಿಕ ಶಿಷ್ಟಾಚಾರಗಳನ್ನು ಮುರಿದು ಹೊಸತೊಂದು ಕಥನಕ್ರಮವನ್ನು ಕಟ್ಟಿಕೊಟ್ಟ ಹೆಗ್ಗಳಿಕೆ ಇವರದು.

ಹೊಸ ಕ್ರಮವನ್ನು ಅನುಸರಿಸುವಾಗ ಬೇರೆಯವರಂತೆ ನಮ್ಮ ಪರಿಸರದ್ದಲ್ಲದ ಮತ್ತೆಲ್ಲಿಂದಲೋ ಎರವಲು ಪಡೆಯದ ದೇವನೂರರು ಸಾಮಾನ್ಯರ ಬದುಕಿನ ಮೌಲ್ಯವನ್ನು ಎತ್ತಿಹಿಡಿಯುವ ನಮ್ಮ ಜನಪದ ಮಹಾಕಾವ್ಯಗಳ ಅಂತಃಸತ್ವದಿಂದ ಹುರಿಗೊಂಡು ಅತ್ಯಂತ ಸ್ಥಳೀಯ ಆಡು ಮಾತಿನ ಭಾಷೆಯಲ್ಲಿ ರಚಿಸಿದ 'ಕುಸುಮಬಾಲೆ' ಕಾದಂಬರಿಯಲ್ಲಿ ತಳ ಸಮುದಾಯಗಳ ಜೀವಸೆಲೆಯನ್ನು, ಅವರ ತುಡಿತಗಳನ್ನು ಸಮರ್ಥವಾಗಿ ಹೊರಲೋಕಕ್ಕೆ ಪರಿಚಯಿಸಿದ್ದಾರೆ. ಚಡಪಡಿಸುವ ಶೋಷಿತ ಜೀವಗಳಿಗೆ ಚೈತನ್ಯ ತುಂಬುವ ಆಶಯದ ೧೯೮೮ರಲ್ಲಿ ಪ್ರಕಟವಾದ ಈ ಕಿರು ಕಾದಂಬರಿ ಇಲ್ಲಿಯವರೆಗೆ ಎಂಟು ಮುದ್ರಣಗಳನ್ನು ಕಂಡಿದೆ. 'ದ್ಯಾವನೂರು' ಮತ್ತು 'ಒಡಲಾಳ' ಇವೆರಡು ದೇವನೂರರ ಕಥಾ ಸಂಕಲನಗಳು. 'ಒಡಲಾಳ' ಕತೆ ಆಧರಿಸಿ ಅದೇ ಹೆಸರಿನಲ್ಲಿ ಸಿಜಿಕೆ ರೂಪಿಸಿದ ನಾಟಕ ವಿನೂತನ ಪ್ರಯೋಗವಾಗಿ ಸಂಚಲನನ್ನುಂಟು ಮಾಡಿತು. ಈವರೆಗೆ ಇವರು ಬರೆದ ಸಾಹಿತ್ಯ ಸುಮಾರು ೨೦೦ ಪುಟಗಳಾಗಬಹುದು. ಬರೆದದ್ದು ಕಡಿಮೆಯಾದರೂ ಅದು ಬೀರಿದ ಪರಿಣಾಮ ಅಪಾರ. ದಲಿತ ದನಿಯನ್ನು ಸ್ವೋಪಜ್ಞವಾದ ರೀತಿಯಲ್ಲಿ ಬಿಂಬಿಸಿದ ಇವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಉನ್ನತ ಸ್ಥಾನ ಗಳಿಸಿದ್ದಾರೆ.

ದೇವನೂರರ ವ್ಯಕ್ತಿತ್ವ ವಿಶಿಷ್ಟವಾದದ್ದು, ವಿಶಾಲ ದೃಷ್ಟಿಕೋನವುಳ್ಳದ್ದು. ಮೂಲಭೂತವಾದಿಗಳ, ಜಾತಿ-ಮತಧರ್ಮವಾದೀ ಕಿಡಿಗೇಡಿಗಳ ಶೋಷಕ ಕೃತ್ಯಗಳಿಗೆ ಇವರು ನೀಡುವ ಪ್ರತಿಕ್ರಿಯೆ ತಣ್ಣನೆಯದೆನಿಸಿದರೂ ಮರ್ಮಾಘಾತವುಂಟು ಮಾಡುವಂತಹ ಶಕ್ತಿ ಪಡೆದಿರುತ್ತದೆ. ಜೊತೆಗೇ ಅಂತಹ ದುಷ್ಟ ಶಕ್ತಿಗಳನ್ನು ದ್ವೇಷಿಸಿ ದೂರವಿರಿಸದೆ ಮನ ಪರಿವರ್ತಿಸಿ 'ಸಾಮಾಜಿಕ ನ್ಯಾಯ'ದ ಪರಿಕಲ್ಪನೆ ಬಗ್ಗೆ ಅವರಲ್ಲಿ ಅರಿವು ಮೂಡಿಸಬೇಕೆಂಬ ಆಶಯ ಇವರದು.



ದೇವನೂರರಿಗೆ ಅಭಿನಂದನೆ

ನಮ್ಮ ನಾಡಿನ ಪ್ರಭುತ್ವಗಳಿಗೆ ಪರ್ಯಾಯ ಶಕ್ತಿಯಾಗಿ ಬೆಳೆದ ದಸಂಸ ಸ್ಥಾಪಕರಲ್ಲಿ ಒಬ್ಬರು. ಆ ಸಂಘಟನೆ ಹಳ್ಳಿ ಹಳ್ಳಿಗೂ ಅಡಿಯಿಟ್ಟು ದಲಿತ ಸ್ವಾಭಿಮಾನದ ಕೂಗು ಹಾಕಲು ಸಾಧ್ಯವಾದದ್ದರಲ್ಲಿ ಇವರದು ಗಣನೀಯ ಪಾತ್ರವಿದೆ. ಒಂದು ಹಂತದಲ್ಲಿ ದಲಿತ ಸಂಘಟನೆಗಳಲ್ಲಿ ದಲಿತೇತರರಿಗೇನು ಕೆಲಸ ಎಂಬ ಕೆಲವರ ವಾದವನ್ನು ಒಪ್ಪದ ದೇವನೂರರು ಸೆಕ್ಯೂಲರ್ ಪ್ರಜಾಪ್ರಭುತ್ವದ ಬಗ್ಗೆ ನಿಷ್ಠೆ ಇರುವ ಸಮಾನತಾ ಸಮಾಜವನ್ನೂ ಕಟ್ಟಬಯಸುವ ವ್ಯಕ್ತಿಗಳು ಯಾವ ಜಾತಿಯವರಾಗಿದ್ದರೂ ಅವರನ್ನು ದೂರವಿರಿಸುವುದು ತರವಲ್ಲವೆಂಬ ನಿಲುವನ್ನು ವ್ಯಕ್ತಪಡಿಸಿ ಅವರ ಬಾಯಿ ಮುಚ್ಚಿಸಿದ್ದರು.

ಅಲ್ಲದೆ ರೈತ ಸಂಘದ ಕಾರ್ಯಕರ್ತರೇ ತಳ ಸಮುದಾಯದವರನ್ನು ಅವಮಾನಿಸುತ್ತಾ ದ್ರೋಹವೆಸಗುತ್ತಿದ್ದ ಬಗ್ಗೆ ಚಕಾರವೆತ್ತದ ಪ್ರೊ. ನಂಜುಂಡ ಸ್ವಾಮಿಯರ ನಿಲುವಿನ ಬಗ್ಗೆ ತೀವ್ರವಾಗಿ ಖಂಡಿಸಿ 'ಅಸ್ಪೃಶ್ಯನ ಮನೆಯಲ್ಲಿ ಉಂಡವನಿಗೆ ಮಾತ್ರ ರೈತ ಸಂಘದಲ್ಲಿ ಓಟಿನ ಹಕ್ಕು' ಎಂದು ಜಾರಿಗೆ ತರುವ ಇಚ್ಛಾಶಕ್ತಿ ತಮಗಿದೆಯೇ ಎಂದು ಸವಾಲು ಹಾಕಿದ್ದು, 'ಹೆಣಗಳ ರಾಶಿಯಲ್ಲಿ ಜೀವ ಹುಡುಕಲು ಸಾಧ್ಯವೇ' ಎಂಬ ಉತ್ತರ ನೀಡಿ ಬಸವಲಿಂಗಪ್ಪನವರು ಎತ್ತಿದ್ದ 'ಕನ್ನಡ ಸಾಹಿತ್ಯಾ ಬೂಸಾ'ಎಂಬ ಪ್ರಶ್ನೆಯನ್ನು ಸಮರ್ಥಿಸಿದ್ದು, 'ಐಷ್ಟೋ ದೇಶಗಳಲ್ಲಿ ಮತದಾನದ ಹಕ್ಕಿಲ್ಲ. ಆ ಹಕ್ಕು ನಮಗೆ ದಕ್ಕಿದೆ ಅದನ್ನು ಗೌರವಿಸೋಣ. ಚುನಾವಣೆ ಬೇಡ- ಅಹಿಂಸೆ ಬೇಡ ಎಂದರೆ ನಾವು ನಕ್ಸಲೀಯರಗಾ ಬೇಕಾಗುತದೆ' - ಇದು ಚುನಾವಣೆಗಳ ಬಹಿಷ್ಕಾರದ ಹಾದಿ ತುಳಿದಿದ್ದ ದಸಂಸ ದೋರಣೆಗೆ ಇವರು ನೀಡಿದ ವಿವೇಕಯುತ ಮಾತು, 'ಬೆತ್ತಲೆ ಸೇವೆ ಯಾಕೆ ಬೇಡ' ಎಂದವರಿಗೆ 'ನೋಡುವವರು ಮೊದಲು ಬೆತ್ತಲಾಗಿ' ಎಂದು ನೀಡಿದ ಖಡಕ್ ಉತ್ತರ, ಮಾಂಸಹಾರವನ್ನು ತ್ಯಜಿಸಿದ್ದ ಇವರು 'ಈವರೆಗೆ ದನದ ಮಾಂಸ ತಿನ್ನದ ನಾನು ಇನ್ನು ಮುಂದೆ ದನದ ಮಾಂಸ ಮಾತ್ರ ತಿನ್ನುತ್ತೇನೆ' ಎಂದು ಹೇಳುವುದರ ಮೂಲಕ ಹಿಂದೂ ಸನಾತನ ವಾದಿಗಳು ಗೋರಕ್ಷಣೆ ಹೆಸರಿನಲ್ಲಿ ನಡೆಸುತ್ತಿರುವ ದೌರ್ಜನ್ಯಕ್ಕೆ ಸೌಮ್ಯವಾಗಿಯೇ ತಿರುಗೇಟು ನೀಡಿದ ಪರಿ, ಮಾತೃ ಭಾಷಾ ಶಿಕ್ಷಣ ಜಾರಿ ಬಗ್ಗೆ ಕಸಾಪ ನಿಲುವೇನೆಂದು ಪ್ರಶ್ನಿಸಿ ಅದು ನೀಡಿದ 'ನೃಪತುಂಗ ಪ್ರಶಸ್ತಿ' ತಿರಸ್ಕರಿಸಿದ್ದು, ಆ ನಿಟ್ಟಿನಲ್ಲಿ ದೃಢ ಹೆಜ್ಜೆ ಇಟ್ಟರೆ ನಾನು ಆ ಹೋರಾಟದಲ್ಲಿ ಕೈಜೋಡಿಸುವುದಾಗಿ ಕರೆ ನೀಡಿದ್ದು, ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆಯವರು ತಮ್ಮನ್ನು ಎಂಎಲ್‌ಸಿ ಮಾಡುತ್ತೇನೆಂದಾಗ ನಯವಾಗಿ ತಿರಸ್ಕರಿಸಿದ್ದು - ಇವು ಮಹಾದೇವ ಅವರ ವ್ಯಕ್ತಿತ್ವದ ಕೆಲವು ಸ್ಯಾಂಪಲ್‌ಗಳು.

ಮೈಸೂರು ಜಿಲ್ಲೆ ನಂಜನಗೂಡು ತಾಲೂಕಿನ ದೇವನೂರಿನಲ್ಲಿ ಜನಿಸಿದ (೧೯೪೮ರಲ್ಲಿ) ಮಹಾದೇವ ಅವರು ನಂಜನಗೂಡು ಹಾಗೂ ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿದರು. ಕನ್ನಡ ಎಂ.ಎ. ವಿದ್ಯಾರ್ಥಿಯಾಗಿದ್ದಾಗಲೇ (೧೯೭೨-೭೪ರ ಅವಧಿಯಲ್ಲಿ) 'ನರ ಬಂಡಾಯ' ಎಂಬ ಪತ್ರಿಕೆಯನ್ನು ಹೊರಡಿಸಿದ್ದರು. ವ್ಯಾಸಂಗದ ಬಳಿಕ ಮೈಸೂರಿನ ಭಾರತೀಯ ಭಾಷಾ ಸಂಸ್ಥೆಯಲ್ಲಿ ಕೆಲಕಾಲ ಸೇವೆ ಸಲ್ಲಿಸಿದರು.

ದೇವನೂರರಿಗೆ ಈವರೆಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ೧೯೯೦ರಲ್ಲಿ 'ಕುಸುಮಬಾಲೆ' ಕೃತಿಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಇದಲ್ಲದೆ ಅಮೇರಿಕಾದಲ್ಲಿ ನಡೆದ 'ಇಂಟರ್ ನ್ಯಾಶನಲ್ ರೈಟಿಂಗ್ ಪ್ರೋಗ್ರಾಮ್'ನಲ್ಲಿ ಭಾಗವಹಿಸಿದ್ದಾರೆ. ಇದೀಗ ಅವರು 'ಪದ್ಮಶ್ರೀ' ಪ್ರಶಸ್ತಿಗೆ ಭಾಜನರಾಗಿದ್ದಾರೆ.

ದಲಿತ ಸಾಂಸ್ಕೃತಿಕ ಜಗತ್ತಿನ ಸಾಕ್ಷಿ ಪ್ರಜ್ಞೆಯಂತಿರುವ ದೇವನೂರ ಮಹಾದೇವರವರು ಯಾವುದೇ 'ಇಸಂ'ಗಳನ್ನು ಮೀರಿ ನಿಂತವರು. ಎಲ್ಲರಿಗೂ ಒಳಿತಾಗಬೇಕೆಂಬ ಹಂಬಲವುಳ್ಳ ಮಮತಾಮಯಿ. ಪ್ರಸ್ತುತ ಸಮಾನ ಮನಸ್ಕರೊಂದಿಗೆ 'ಸರ್ವೋದಯ ಕರ್ನಾಟಕ' ಎಂಬ ರಾಜಕೀಯ ಪಕ್ಷ ಸ್ಥಾಪಿಸಿ, ಅದರ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ. ವ್ಯವಸಾಯದಲ್ಲಿ ತೊಡಗಿ ಮೈಸೂರಿನಲ್ಲಿ ನೆಲೆಸಿದ್ದಾರೆ. ಭಿನ್ನ ನೆಲೆಯ ಮಾನವ ಸಂಬಂಧಗಳ ಅಂತರ ಹೆಚ್ಚಾಗುತ್ತಿರುವ ಈ ಹೊತ್ತಿನಲ್ಲಿ, ಆ ಬಿರುಕುಗಳನ್ನು ಸರಿಪಡಿಸಿ, ನಿಸ್ತೇಜಗೊಂಡ ಸಾಮಾಜಿಕ ಚಳವಳಿಗೆ ಹೊಸ ರೂಪ, ನವ ಚೈತನ್ಯ ತುಂಬುವ ಕೆಲಸ ಮಹಾದೇವರಿಂದಾಗಲಿ ಎಂಬ ಸದಾಶಯ 'ಸಂವಾದ' ಬಳಗದ್ದು. ❑

(20ನೇ ಪುಟದಿಂದ)
ಆದರೆ, ಇಂಥ ಗ್ರಹಿಕೆಗಳು ಕೂಡ ದಲಿತರನ್ನು ಸವರ್ಣೀಯರ 'ಅನ್ಯ'ರನ್ನಾಗಿ ರಚಿಸಿಕೊಂಡು ನೋಡುತ್ತಿವೆಯೇ ಹೊರತು ದಲಿತ ಅಸ್ತಿತ್ವದ ಅನನ್ಯತೆಯನ್ನು ಗುರುತಿಸುವುದಿಲ್ಲ. ಹೀಗಾಗಿ ಇಂಥ 'ಸಹಾನು ಭೂತಿ ಪರ' ನಿಲುವುಗಳಿಂದ ದಲಿತ ಅಸ್ತಿತ್ವವನ್ನು ನೋಡುವುದು ಕೂಡ ಅದನ್ನು ಇಕ್ಕಟ್ಟಿಗೆ ಸಿಕ್ಕಿಸುವ ಕೆಲಸವಾಗಿ ಬಿಡುತ್ತದೆ. ಈ ಇಕ್ಕಟ್ಟುಗಳ ಆಚೆಗೆ ದಲಿತ ಸಮುದಾಯಗಳು ತಮ್ಮ ಅಸ್ತಿತ್ವವನ್ನು ತಾವೇ ತಮ್ಮ ನುಡಿಗಟ್ಟಿನಲ್ಲಿ ನಿರ್ವಚಿಸಿಕೊಂಡು ಬಂದಿವೆ. ತಮ್ಮದೇ ಆದ ಸಮಗ್ರವಾದ, elf-sufficient ಆದ, ಸ್ವಾಯತ್ತ ವಿಶ್ವಗಳನ್ನು ರಚಿಸಿಕೊಂಡಿವೆ. ಇದರಲ್ಲಿರುವ ಮನುಷ್ಯ ಸಂಬಂಧಗಳ ಸ್ವರೂಪದ ಕಲ್ಪನೆ, ಮನುಷ್ಯ-ಪ್ರಕೃತಿಗಳ ಸಂಬಂಧದ ಕಲ್ಪನೆ, ತಮಗೆ ಬೇಕಾದ ಆದರೆ ಇನ್ನೂ ಸೃಷ್ಟಿಯಾಗಿರದ ಸಮಾಜದ ಕಲ್ಪನೆ ಇವೆಲ್ಲವೂ ಸೇರಿ ನೇಯ್ಗೆಗೊಂಡಿವೆ.

ಸವರ್ಣೀಯ ಪ್ರಜ್ಞೆ ಈ ದಲಿತ ವಿಶ್ವವನ್ನು ಅದು ತನ್ನ ವಿಶ್ವದಿಂದ ಹೇಗೆ ಭಿನ್ನವಾಗಿದೆಯೆಂದು ವಿವರಿಸಬಲ್ಲದೇ ಹೊರತು ಅದರಲ್ಲಿ ಸಂಪೂರ್ಣವಾಗಿ ಪ್ರವೇಶಿಸಲಾರದು. ದೇವನೂರು ಮಹಾದೇವರಂಥ ಶ್ರೇಷ್ಠ ಸೃಜನಶೀಲ ಪ್ರತಿಭೆ ತನ್ನ ಅಗಾಧವಾದ ರೂಪಕಶಕ್ತಿಯಿಂದ, ಭಾಷೆ ಮತ್ತು ಅದರ ಹಿಂದಿನ ಗ್ರಹಿಕೆಗಳನ್ನು ಮುರಿದುಕಟ್ಟುವ ಸಾಮರ್ಥ್ಯದಿಂದ ಹಾಗೂ ಸಾಹಿತ್ಯಸಂಪ್ರದಾಯದಲ್ಲಿ ರೂಢಿಯಲ್ಲಿರುವ ಕಥನಕ್ರಮಗಳನ್ನು ಭಗ್ನಗೊಳಿಸುವ ಮೂಲಕ ಈ ದಲಿತ ವಿಶ್ವವನ್ನು ಮೂರ್ತಗೊಳಿಸಿ ತೋರಿಸಬಲ್ಲದು; ದಲಿತ ಅನುಭವವನ್ನು ಅದರ ಮೂಲ ಆಕೃತಿಗಳೊಂದಿಗೆ ಅದರ ಸಹಜ ಶರೀರದೊಂದಿಗೆ ಪುನಃಸೃಷ್ಟಿಸಬಲ್ಲದು. ಇದು ಸಾಧ್ಯವಾಗಬೇಕಾದರೆ, ದಲಿತ ಬರಹಗಾರನಿಗೆ ತಾನು ಈಗಾಗಲೇ ಸಾಹಿತ್ಯವೆನ್ನುವ ಸವರ್ಣೀಯ ಸಾಂಸ್ಕೃತಿಕ ಸಂಸ್ಥೆಯೊಂದರ ಭಾಗವಾಗಿದ್ದರೂ ಕೂಡ, ಸವರ್ಣೀಯ ಸಂಕಥನಗಳಲ್ಲಿ ಪ್ರವೇಶ ಮಾಡಿದ್ದರೂ ಕೂಡ, ದಲಿತ ಅನುಭವದ ಅನನ್ಯತೆಯನ್ನು ಒಂದು ತೀವ್ರವಾದ ಅಂತರ್ಮುಖತೆಯೊಂದಿಗೆ (passion ate inwardness) ಶೋಧಿಸುವ ಅಪೂ ರ್ವವಾದ ಏಕಾಗ್ರತೆ ಬೇಕಾಗುತ್ತದೆ.

ಈಗಾಗಲೇ ಮಾನ್ಯತೆ ಪಡೆದ ಕಥನಕ್ರಮಗಳು ಪ್ರಭಾವಿಯಾಗಿರುವದರಿಂದ ಅವು ಯಾವುದೇ ಅನುಭವವನ್ನು ಕಥಿಸಬಲ್ಲವು ಎನ್ನುವ ಪ್ರಭಾವಿಗುಣವನ್ನು ಬೆಳೆಸಿಕೊಂಡಿರುತ್ತವೆ. ಆದರೆ, ಈ ಕಥನಕ್ರಮಗಳು ಕೂಡ ದಲಿತ ಅನುಭವದ ಅನನ್ಯತೆಯನ್ನು ಮೊಟಕುಗೊಳಿಸುತ್ತವೆಯಾದ್ದರಿಂದ ವಿಭಿನ್ನ ಕಥನಕ್ರಮಗಳನ್ನು ಶೋಧಿಸುವ ಸೃಜನಶೀಲತೆಯೂ ದಲಿತ ಬರಹಗಾರನಿಗೆ ಬೇಕಾಗುತ್ತದೆ. ಇದೆಲ್ಲವೂ ದೇವನೂರು ಮಹಾದೇವರಿಗೆ ಸಾಧ್ಯವಾಗಿದ್ದರಿಂದ ಕನ್ನಡ ದಲಿತ ಸಾಹಿತ್ಯಕ್ಕೆ ಇತರ ಭಾಷಾ ಸಾಹಿತ್ಯದ ದಲಿತ ಬರಹಗಳಲ್ಲಿ ಕಾಣದ ವಿಶಿಷ್ಟ ಪ್ರಭೇದೊಂದು ಲಭ್ಯವಾಗಿದೆ. ಇದು ಕೇವಲ ಮಹಾದೇವರ ವೈಯಕ್ತಿಕ ಸಾಧನೆಯಲ್ಲ.

ಅನೇಕ ಪ್ರತಿಭಾವಂತ ದಲಿತ ಬರಹಗಾರರು ಏಕಕಾಲಕ್ಕೆ ಬರೆಯುತ್ತಿರುವುದು ಸುದೈವದ ಸಂಗತಿಯಾಗಿದೆ. ಮಹಾದೇವರು ಸುಲಭವಲ್ಲದ, ಸದಾ ಎಚ್ಚರವನ್ನು ಉನ್ನತ ಮಟ್ಟದ ಸೃಜನಶೀಲತೆಯನ್ನು ಅಪೇಕ್ಷಿಸುವ ಕಷ್ಟದ ದಾರಿಯನ್ನು ತೋರಿಸಿಕೊಟ್ಟರು. ಉದಾಹರಣೆಗೆ ಹೇಳುವುದಾದರೆ, ಬಹುಪಾಲು ದಲಿತ ಬರಹಗಳು ವಾಸ್ತವವಾದಿ ಕಥನ ಸಂಪ್ರದಾಯವನ್ನು ನೆಚ್ಚಿಕೊಂಡು ಬಂದವು. ಮರಾಠಿ ಭಾಷೆಯಲ್ಲಿ ಬಂದ ದಲಿತ ಆತ್ಮಚರಿತ್ರೆಗಳ ಅಗಾಧವಾದ ಶ್ರೀಮಂತಿಕೆಯಿಂದಾಗಿ ಆನಂತರದ ದಲಿತ ಬರಹಗಾರರಿಗೆ ತಮ್ಮ ಅನುಭವಗಳನ್ನು ಇದ್ದದ್ದು ಇದ್ದ ಹಾಗೆ ಅಂದರೆ ವಾಸ್ತವವಾದಿ ಕಥನಗಳ ಮೂಲಕ ಹೇಳಬೇಕು; ಹೀಗೆ ಹೇಳಿದರೆ ಮಾತ್ರ ಅದು ಸಾಚಾ (authentic)ಆಗಲು ಸಾಧ್ಯವೆನ್ನುವ ನಂಬಿಕೆ ಬಂದಿತು. ಆದರೆ 'ದ್ಯಾವನೂರು' ಸಂಗ್ರಹದ ಒಂದೆರಡು ಕತೆಗಳನ್ನು ಬಿಟ್ಟರೆ ಮಹಾದೇವರು ವಾಸ್ತವವಾದಿ ಕಥನದ ಇಕ್ಕಟ್ಟಿನಿಂದ ದೂರ ಬಂದರು. ಬದಲಾಗಿ ಮೌಖಿಕ ಕಥನ, ಜಾನಪದ ಕಥನ, ಪುರಾಣ, ಕಾವ್ಯ ಇವುಗಳ ಮಾದರಿಯನ್ನು ಹೋಲುವ ವಾಸ್ತವವಾದಿಯಲ್ಲದ ಕಥನಕ್ರಮಗಳನ್ನು ಅನ್ವೇಷಿಸಿದರು.

ನನ್ನ ದೃಷ್ಟಿಯಲ್ಲಿ ಇದು ದಲಿತ ಬರಹಕ್ಕೆ ದೊರೆತ ಅತಿ ಮಹತ್ವದ ಪಲ್ಲಟ. ವಾಸ್ತವವಾದಿ ಕಥನದ ಮೂಲಗಳನ್ನು ಹುಡುಕುತ್ತಾ ಹೋದರೆ ಅದು ಕೊನೆಗೆ ನಮ್ಮನ್ನು ಪಶ್ಚಿಮದ ಬಹುಪ್ರಬಲವಾದ ವೈಚಾರಿಕ ಸಂಪ್ರದಾಯಗಳಿಗೆ ಕೊಂಡೊಯ್ಯುತ್ತದೆ. ಪಶ್ಚಿಮವು ಸರಿಸುಮಾರು 17ನೇ ಶತಮಾನದ ಕೊನೆಯ ಭಾಗದಿಂದ ಆರಂಭವಾದ ಜ್ಞಾನಪರ್ವದ (Enlightenment) ಯುಗದಿಂದ ಒಂದು ಬಲವಾದ ಲೋಕಗ್ರಹಿಕೆಯನ್ನು ಪ್ರತಿಪಾದಿಸುತ್ತಾ ಬಂದಿದೆ. ಇದರ ಪ್ರಕಾರ ಇಂದ್ರಿಯಗಮ್ಯವಾದ ಅನುಭವ ಮಾತ್ರ ಸತ್ಯವಾದುದು; ಇದೇ ವಿಜ್ಞಾನಕ್ಕೂ ಆಧಾರವಾದುದು. ಅಲ್ಲದೇ ಈ ಅನುಭವವನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ ತರ್ಕದ ಆಧಾರ ಸಾಕು. 18ನೇ ಶತಮಾನದಲ್ಲಿ ಇಂಗ್ಲಿಷ್ ಕಾದಂಬರಿ ಪ್ರವರ್ಧಮಾನಕ್ಕೆ ಬಂದಾಗ ಸತ್ಯದ ಈ ಪರಿಕಲ್ಪನೆ ಸಾಮಾಜಿಕ ವಾಸ್ತವವಾಗಿ ಪರಿವರ್ತಿತವಾಯಿತು. ಅಂದರೆ, ಕಾದಂಬರಿಯು ಕಣ್ಣಿಗೆ ಕಾಣುವ ಸಾಮಾಜಿಕ ವಾಸ್ತವವನ್ನು ಕನ್ನಡಿಸುವ ಮಾಧ್ಯಮವಾಯಿತು.

ಸಾಹಿತ್ಯದ ಇನ್ನೆಲ್ಲ ಪ್ರಕಾರಗಳಿಗಿಂತ ಕಾದಂಬರಿ ಪ್ರಕಾರವು ಸಾಮಾಜಿಕ ವಾಸ್ತವವನ್ನು ಸತ್ಯಕ್ಕೆ ಹತ್ತಿರವಾಗುವಂತೆ ಅದನ್ನು ತೋರಿಸುವ ಜವಾಬ್ದಾರಿಯನ್ನು ಹೊರಬೇಕಾಯಿತು. ಇದರಿಂದ ಮುಂದಿನ 19ನೇ ಶತಮಾನದ ಇಂಗ್ಲಿಷ್ ಹಾಗೂ ಯುರೋಪಿಯನ್ ಕಾದಂಬರಿ ಸಾಮಾಜಿಕ-ವಾಸ್ತವಿಕ ಕಾದಂಬರಿಯಾಯಿತು. ಅಲ್ಲದೇ ಆ ಶತಮಾನದ ದಾಖಲೆಯೂ ಆಯಿತು. ಸುದೈವದಿಂದ ವಾಸ್ತವವಾದವನ್ನು ಮೀರಿದ ತಂತ್ರಗಳನ್ನು ಪ್ರಯೋಗಿಸುವ ಕಾದಂಬರಿಕಾರರೂ 18ನೇ ಶತಮಾನದಿಂದಲೇ ಬರೆಯುತ್ತಿದ್ದರು. ಆದರೂ ಕಾದಂಬರಿಯಲ್ಲಿ ವಾಸ್ತವವಾದದ ಪ್ರಭಾವವು ಒಂದಲ್ಲ ಒಂದು ರೀತಿಯಲ್ಲಿ ಮುಂದುವರೆಯಿತು. 1960 ದಶಕದಿಂದ ಮುನ್ನೆಲೆಗೆ ಬಂದ ಸ್ಪ್ಯಾನಿಷ್ ಭಾಷೆಯಲ್ಲಿ ಬರೆಯಲಾದ ಮಾಂತ್ರಿಕ ವಾಸ್ತವತಾವಾದ (magic realism) ಅದರ ಹಿಡಿತವನ್ನು ಸಡಿಲಿಸಿ ವಾಸ್ತವದ ಬಗೆಗಿನ ಪರಿಕಲ್ಪನೆಗಳನ್ನೇ ಬದಲಾಯಿಸಿತು. ವಾಸ್ತವ, ಫ್ಯಾಂಟಸಿ, ಕಲ್ಪನೆ ಇವುಗಳನ್ನು ಸ್ವಚ್ಛಂದದಿಂದ ಬೆರೆಸುವ ಹೊಸ ಕಥನಕ್ರಮವು ಹುಟ್ಟಿಕೊಂಡಿತು.

ಇದೆಲ್ಲ ಕೇವಲ ಕಾದಂಬರಿ ಪ್ರಕಾರದಲ್ಲಿ ಕಂಡುಬಂದ ನವೀನ ಪ್ರಯೋಗಶೀಲತೆಯೆಂದು ಯುರೋಪಿಯನ್ ವಿಮರ್ಶೆ ಮೊದಲು ಅಂದುಕೊಂಡಿತು. ಆದರೆ ನಿಜವೆಂದರೆ ಯುರೋಪಿನ ಪ್ರಬಲವಾದ ಅನುಭವಗ್ರಹಿಕೆ ಮಾದರಿಯನ್ನು ಧಿಕ್ಕರಿಸುವ, ವಿಭಿನ್ನ ಲೋಕಗ್ರಹಿಕೆಯಲ್ಲಿ ಹುಟ್ಟಿದ ಕಥನಕ್ರಮವಿದಾಗಿತ್ತು, ಮಾರ್ಕೆಜ್‌ನಂಥ ಬರಹಗಾರ ಕಾಲ, ಚರಿತ್ರೆ, ಪ್ರಗತಿ ಇವೆಲ್ಲವುಗಳ ಬಗ್ಗೆ ಯುರೋಪು ಇಟ್ಟುಕೊಂಡ ಪರಿಕಲ್ಪನೆಗಳನ್ನು ಬುಡಮೇಲು ಮಾಡುವ ಕಥನಗಳನ್ನು ಬರೆಯುತ್ತಾನೆ.

ಕನ್ನಡದ ದಲಿತ ಬರಹಗಾರರಿಗೆ ಮಾಂತ್ರಿಕ ವಾಸ್ತವವಾದವನ್ನು ಹೊರಗಿನಿಂದ ತರುವ ಅವಶ್ಯಕತೆ ಇರಲಿಲ್ಲ. ಶಿಷ್ಟ ಸಾಹಿತ್ಯ ಸಂಪ್ರದಾಯದ ಆಚೆಗೆ ನಮ್ಮ ಸಮಾಜದಲ್ಲಿ ಜೀವಂತವಾಗಿ ಇರುವ ಮೌಖಿಕ, ಜಾನಪದ ಕಥನಗಳಲ್ಲಿ, ಜನಪದ ಕಾವ್ಯ ಪುರಾಣಗಳಲ್ಲಿ ವಾಸ್ತವವಾದವನ್ನು ತಿರಸ್ಕರಿಸುವ ಕಥನಕ್ರಮಗಳು ಲಭ್ಯವಿದ್ದವು. ಮಹಾದೇವ ಮುಖ್ಯವಾಗಿ 'ಮಲೆಮಾದೇಶ್ವರ ಕಾವ್ಯ', 'ಮಂಟೆಸ್ವಾಮಿ ಕಾವ್ಯ', ಜನಪದ ಕತೆಗಳು ಹಾಗೂ ಕನ್ನಡದ ಚಂಪೂ ಪರಂಪರೆಯ ಸಾಧ್ಯತೆಗಳನ್ನು ಬಳಸಿಕೊಂಡು ಹೊಸ ಕಥನಕ್ರಮವನ್ನು ರಚಿಸಿಕೊಂಡರು. ಇದರ ಸ್ವರೂಪದ ಬಗ್ಗೆ ನಾನು ಹಲವಾರು ಲೇಖನಗಳಲ್ಲಿ ವಿಸ್ತಾರವಾಗಿ ಬರೆದಿದ್ದೇನೆ. ಮುಖ್ಯವಾಗಿ ಪ್ರಸ್ತಾಪ ಮಾಡಬೇಕಾದ ವಿಷಯವೆಂದರೆ ಮಹಾದೇವರ ಬರಹ ಕನ್ನಡ ಕಥನವನ್ನು ವಾಸ್ತವವಾದದ ಸೆರೆಮನೆಯಿಂದ ಬಿಡುಗಡೆಗೊಳಿಸಿತು.

'ಕುಸುಮಬಾಲೆ'ಯ ಬಹುಮುಖಿ ಬರಹವು print-capitalism ಎಂದು ಕರೆಯಲಾಗುವ ಘಟ್ಟದಿಂದ ಆರಂಭಗೊಂಡ ಪ್ರಕಾರಗಳ ವಿಭಜನೆಯನ್ನು (ಅಂದರೆ ಕಾವ್ಯ-ಕಥನ, ಗದ್ಯ-ಕಾವ್ಯ) ಮುರಿದುಹಾಕಿ ಬಹುಮುಖಿಯಾದ ಕಥನಕ್ರಮವನ್ನು ರಚಿಸಿಕೊಳ್ಳುತ್ತದೆ. ಇದು ಒಂದು ಕಡೆಗೆ ಅತ್ಯಂತ ನವೀನ ಪ್ರಯೋಗಶೀಲತೆಯಾಗಿ ಕಂಡರೆ ಇನ್ನೊಂದು ಕಡೆಗೆ ನಮ್ಮ ಸಂಸ್ಕೃತಿಯ ದಮನಿತ ಲೋಕಗಳ ಅಭಿವ್ಯಕ್ತಿ ಕ್ರಮಗಳಿಗೆ (ಪ್ರಧಾನವಾಗಿ ಮೌಖಿಕ ಅಭಿವ್ಯಕ್ತಿ ಕ್ರಮಗಳಿಗೆ) ಮರಳುವುದೂ ಆಗುತ್ತದೆ. ಅದಕ್ಕೆ 'ಕುಸುಮಬಾಲೆ'ಯನ್ನು ಪೂರ್ವಿಕನಾದ ಮಲೆಮಾದೇಶ್ವರನಿಗೆ ಅರ್ಪಿಸಲಾಗಿದೆ. ಮಹಾದೇವರ ಈ ಆಯ್ಕೆಯ ಇನ್ನೊಂದು ಮಹತ್ವಪೂರ್ಣ ಪರಿಣಾಮವೂ ಇದೆ. ವಸಾಹತುಶಾಹಿಯ ಮೂಲಕ ನಮ್ಮ ಸಾಹಿತ್ಯ ಪರಂಪರೆಯನ್ನು ಪ್ರವೇಶಿಸಿದ ವಾಸ್ತವವಾದಿ ಕಾದಂಬರಿಯು ಪ್ರಬಲವಾದ ಮಾದರಿಯಾಗಿಬಿಟ್ಟಿತ್ತು(modular form). ಈ ಯಜಮಾನ ಮಾದರಿಯನ್ನೂ ಅವರು ಪಲ್ಲಟಗೊಳಿಸಿ 'ದೇಸೀ' ಎಂದು ಕರೆಯಬಹುದಾದ ಕಥನಕ್ರಮಗಳನ್ನು ಮತ್ತೆ ಮುನ್ನೆಲೆಗೆ ತಂದರು.

ಅಷ್ಟರಮಟ್ಟಿಗೆ ಕನ್ನಡ ಕಥನದ ನಿರ್ವಸಾಹತೀಕರಣವು ಸಾಧ್ಯವಾಯಿತು. ಇಂಥ ಕಥನಕ್ರಮಗಳನ್ನು ಮಹಾದೇವ ಶೋಧಿಸಿದ್ದು ಒಂದು ಖಚಿತವಾದ ಉದ್ದೇಶಕ್ಕಾಗಿ. ಅದೇನೆಂದರೆ, ನಮ್ಮ ದಮನಿತ ಲೋಕಗಳ ಸೃಜನಶೀಲ ಕಲ್ಪನಾಶಕ್ತಿಯನ್ನು ಬಿಡುಗಡೆಗೊಳಿಸುವುದು. ದಲಿತ ಲೋಕದ ಅನನ್ಯ ಅನುಭವಲೋಕಗಳು ತಮ್ಮ ಸಂಪೂರ್ಣ ಶರೀರದೊಂದಿಗೆ ಅವತರಿಸುವಂತೆಮಾಡಲು ಈ ಬಗೆಯ ಕಥನಕ್ರಮದ ಪಲ್ಲಟವು ಅತ್ಯವಶ್ಯಕವಾಗಿತ್ತು. ಇಲ್ಲದಿದ್ದರೆ ನಿಗಿನಿಗಿ ಕೆಂಡದಂಥ ಅನುಭವಗಳನ್ನು ಒಡಲಲ್ಲಿಟ್ಟುಕೊಂಡ ದಲಿತ ಸಮುದಾಯಗಳು ಸವರ್ಣೀಯ ಅಭಿವ್ಯಕ್ತಿ ಕ್ರಮಗಳನ್ನೇ ಅನುಕರಿಸುತ್ತಾ ತಮ್ಮ ನೈಜ ಅನುಭವಕ್ಕೆ ತಾವೇ ಎರವಾಗುತ್ತಿದ್ದವು. ದಲಿತ ಸಾಹಿತ್ಯದ ಕೊಂಚ ಮೊದಲು ಹುಟ್ಟಿದ ಬಂಡಾಯ ಚಳುವಳಿ

ಹೋರಾಟ, ಶೋಷಣೆ ಇವುಗಳ ಬಗ್ಗೆ ಸರಳವಾದ ಗ್ರಹಿಕೆಗಳನ್ನು ಪ್ರತಿಪಾದಿಸಿದ್ದು ಮಾತ್ರವಲ್ಲ ದಮನಿತ ವರ್ಗಗಳ ಅನುಭವಗಳ ಸಮಗ್ರ ಅಭಿವ್ಯಕ್ತಿಗಾಗಿ ಹೊಸ ಕಥನ ಕ್ರಮಗಳು ಬೇಕೆನ್ನುವುದನ್ನು ಗಮನಿಸಲಿಲ್ಲ.

ಅದರ ಪ್ರಭಾವದಲ್ಲಿ ಹೊರಬಂದ ಬಂಡಾಯಪರ ದಲಿತ ಕಾವ್ಯಕ್ಕೆ ಒಂದು ಅವಶ್ಯಕವಾದ ಆದರೆ ಸೀಮಿತವಾದ ಸಾಂಸ್ಕೃತಿಕ ಪಾತ್ರವಿತ್ತು. ಮಹಾದೇವರ ಸೃಜನಶೀಲ ಒಳನೋಟಗಳಿಂದಾಗಿ ಕನ್ನಡ ದಲಿತ ಸಾಹಿತ್ಯ ಅನೇಕ ಹೊಸ ಸಾಧ್ಯತೆಗಳನ್ನು ಕಂಡುಕೊಂಡಿತು. (ಅಂದ ಹಾಗೆ ನನ್ನ ಈ ವ್ಯಾಖ್ಯಾನವನ್ನು ಅಕಸ್ಮಾತ್ತಾಗಿ ಮಹಾದೇವರು ಓದಿದರೆ ಗಾಬರಿಯಾಗಿ ಛೆ, ಛೆ, ನಾನಿದನೆಲ್ಲ ಮಾಡಿಲ್ಲ ಎಂದು ಮುದುಡಿಕೊಳ್ಳುತ್ತಾರೆ! ಆದರೆ ಸೃಜನಶೀಲತೆಯನ್ನು ಕೇವಲ ಬರಹಗಾರರ 'ಮುಗ್ಧ' ವಿವರಣೆಗಳ ಮೂಲಕ ನೋಡಲಾಗುವುದಿಲ್ಲ. ಅದನ್ನು ಚಾರಿತ್ರಿಕ ಚೌಕಟ್ಟುಗಳಲ್ಲಿಟ್ಟೇ ನೋಡಬೇಕಾಗುತ್ತದೆ).

ಇದೆಲ್ಲ ಸಾಧ್ಯವಾದದ್ದು ದಲಿತ ಸಂಘರ್ಷ ಸಮಿತಿಯು ನಡೆಸಿದ ಸಾಂಸ್ಕೃತಿಕ ಹೋರಾಟಗಳಿಂದಲೇ. ದಲಿತ ಅಸ್ತಿತ್ವದ ಗುರುತು (identity) ಮತ್ತು ಸಾಂಸ್ಕೃತಿಕ ಸ್ವಾಭಿಮಾನದ ಈ ಚಳುವಳಿ ದಲಿತ ಜನಾಂಗಗಳಲ್ಲಿ ಹುಟ್ಟುಹಾಕಿದ ಆತ್ಮವಿಶ್ವಾಸ ಹಾಗೂ ಹೋರಾಟದ ಕ್ರಿಯಾಶೀಲತೆ ಆಧುನಿಕ ಕನ್ನಡ ಸಮಾಜದ ಅತ್ಯಂತ ಮಹತ್ವಪೂರ್ಣ ಪಲ್ಲಟವನ್ನು ತಂದಿತು. ದಲಿತ ಅಸ್ತಿತ್ವದ ಅನನ್ಯತೆಗೆ ರಾಜಕೀಯ ಶಕ್ತಿ ಕೊಡಲು ಅಂಬೇಡ್ಕರ್ ಮಾಡಿದ ಹೋರಾಟದ ಮಾದರಿಯಲ್ಲಿ ಈ ಚಳುವಳಿ ಆ ಅನನ್ಯತೆಗೆ ಸಾಂಸ್ಕೃತಿಕ ಸ್ವರೂಪವನ್ನು ಕೊಡುವ ಹೋರಾಟವನ್ನು ಆರಂಭಿಸಿತು. ಕೃಷ್ಣಪ್ಪನವರ ನೇತೃತ್ವದಲ್ಲಿ ಬಹುಬೇಗನೇ ಈ ಚಳುವಳಿ ಭೂರಹಿತ ರೈತ ಕಾರ್ಮಿಕರಾದ ದಲಿತರ ಸಮಸ್ಯೆ, ದಲಿತ ಮಹಿಳೆಯ ಮೇಲಿನ ಅತ್ಯಾಚಾರ, ದಲಿತ ಸಂಸ್ಕೃತಿಯ ಅವಹೇಳನದ ವಿರುದ್ಧ ಸಂಘಟಿತ ಹೋರಾಟ ಮುಂತಾದ ಮಹತ್ವಪೂರ್ಣ ವಿಷಯಗಳನ್ನು ಎತ್ತಿಕೊಂಡು ಪ್ರಬುದ್ಧವಾಗಿ ಬೆಳೆಯಿತು.

ಇಂದು ಈ ಚಳುವಳಿ ಛಿದ್ರವಾಗಿ ಹೋಗಿದೆ ಎನ್ನುವಾಗಲೇ ನಾನು ಇದನ್ನು ಬರೆಯುತ್ತಿರುವ ಇಂದಿನ 'ಪ್ರಜಾವಾಣಿ'ಯಲ್ಲಿ(12-2-2011) ಒಬ್ಬ ದಲಿತ ಯುವತಿ, ದಲಿತರ ಸಂಘ ನಮ್ಮೂರಲ್ಲಿದ್ದಾಗ ಹೀಂಗೆ ಯಾವ ಮಗನು ಮಾತಾಡಂಗಿರ್ಲಿಲ್ಲ" ಎಂದು ಇಂದಿಗೂ ಹೇಳುತ್ತಾಳೆ ಎನ್ನುವುದನ್ನು ಗಮನಿಸಬೇಕು. ತನ್ನೆಲ್ಲ ಅವನತಿಗಳ ಮಧ್ಯೆ ದಲಿತ ಸಂಘರ್ಷ ಸಮಿತಿ ಹುಟ್ಟಿಸಿದ ಆತ್ಮವಿಶ್ವಾಸ ದಲಿತ ಜನಾಂಗಗಳ ಮೇಲೆ ಶಾಶ್ವತವಾದ ಪರಿಣಾಮವನ್ನು ಮಾಡಿದೆ ಎನ್ನುವುದು ನಿಶ್ಚಿತ. ಈ ಚಳುವಳಿಯನ್ನು ಕಟ್ಟಿ ಬೆಳೆಸುವುದರಲ್ಲಿ ಮಹಾದೇವರ ಪಾತ್ರ ಬಹಳ ದೊಡ್ಡದು. ಆರಂಭದ ದಿನಗಳಲ್ಲಿಯೇ ಕೃಷ್ಣಪ್ಪ, ಸಿದ್ಧಲಿಂಗಯ್ಯ ಮತ್ತು ಮಹಾದೇವರಂಥ ಸೂಕ್ಷ್ಮ ಸಂವೇದನೆಯ ಹಾಗೂ ಸಾಹಿತಿಗಳ ಮುಂದಾಳತ್ವ ಪಡೆದದ್ದು ಡಿಎಸ್‌ಎಸ್‌ನ ಸುದೈವವಾಗಿತ್ತು. ಚಳುವಳಿಗಳನ್ನು ವ್ಯಕ್ತಿಗಳ ಕೊಡುಗೆಯಾಗಿ ನೋಡುವುದು ನನಗೆ ಸಮ್ಮತವಲ್ಲವಾದರೂ ಸಾಮಾಜಿಕ ಚಳುವಳಿಗಳಲ್ಲಿ ವ್ಯಕ್ತಿತ್ವಗಳೂ ಮುಖ್ಯವಾಗುತ್ತವೆ.

ತಾವು ಮೂವರು ವಹಿಸಿದ ಪಾತ್ರಗಳ ಬಗ್ಗೆ ಮಹಾದೇವರೇ ಬರೆದ ಲಘುಶೈಲಿಯ ಟಿಪ್ಪಣಿಯನ್ನು ನೋಡಬಹುದು. ಮಹಾದೇವರು ದಲಿತ ಚಳುವಳಿಗೆ ಒಂದು ವಿಶಾಲವಾದ ಸಾಂಸ್ಕೃತಿಕ ಆಯಾಮವನ್ನು ನೀಡಿದರು. ಅದಕ್ಕೆ ಸಾಹಿತ್ಯಕ ಸಾಂಸ್ಕೃತಿಕ ವಲಯದಲ್ಲಿ ಅಧಿಕೃತತೆಯನ್ನು ತಂದುಕೊಟ್ಟರು. ತಮ್ಮ ಪ್ರಾಮಾಣಿಕತೆಯಿಂದಾಗಿ ಚಳುವಳಿಯ ಚಿಂತನೆ ಹಾಗೂ ಕ್ರಿಯೆಗಳು ಪೆಡಸಾಗದಂತೆ, ಜಡವಾಗದಂತೆ ಪ್ರಯತ್ನಿಸಿದರು. ಗಾಂಧಿ ಸಿನಿಮಾ ನೋಡಿದ್ದರ ಬಗ್ಗೆ ಬರೆದು ಗಾಂಧಿ-ಅಂಬೇಡ್ಕರ್‌ರನ್ನು ಎರಡು ವಿರುದ್ಧ ಧ್ರುವಗಳನ್ನಾಗಿ ನೋಡುವ ಕ್ರಮದಲ್ಲಿ ಪಲ್ಲಟ ತಂದರು. ಆನಂತರ ಬಂದ ಡಿ.ಆರ್. ಅವರ 'ಉರಿವ ಚಮ್ಮಾಳಿಗೆ" ಈ ಕ್ರಮವನ್ನು ಮುಂದುವರೆಸಿತು. ಆದರೆ ಹೀಗೆ ಮಾಡುತ್ತಲೇ ಗಾಂಧಿ ಆಕಾಶಕ್ಕೆ ಮೂರುಗೇಣು ಕಮ್ಮಿ ಎಂದೂ ಖಚಿತವಾಗಿ ಹೇಳಿದರು. ಬಂಡಾಯವೆಂದರೆ 'ಬಂಡೆಗಲ್ಲಲ್ಲಿ ಚಿಗುರು ಮೂಡಿಸುವ ಕೆಲಸ'ವೆಂದು ಹೇಳಿ ದಲಿತ ಬಂಡಾಯ ಚಳುವಳಿಗಳ ಸಂಬಂಧವನ್ನು ಕುದುರಿಸಿದರು.

ಸಾವಿರಾರು ವರ್ಷಗಳ ಕನ್ನಡ ಸಾಹಿತ್ಯ ಪರಂಪರೆಯ ವಿಮರ್ಶೆಯು ಅದು ಎಷ್ಟರಮಟ್ಟಿಗೆ ದಮನಿತ ವರ್ಗಗಳ ಸಾಂಸ್ಕೃತಿಕ ಅಭಿವ್ಯಕ್ತಿಯಾಗಿದೆಯೆನ್ನುವ ಪ್ರಶ್ನೆಯನ್ನು ಕೇಳಿಕೊಂಡಿರಲಿಲ್ಲ. ಸಾಹಿತ್ಯವೆನ್ನುವ ಸಂಸ್ಥೆ ಯಾವ ಅನುಭವ ಲೋಕಗಳನ್ನು ಹೊರಗಿಟ್ಟಿದೆ ಎನ್ನುವ ಪ್ರಶ್ನೆಯನ್ನು ಕೇಳಿರಲಿಲ್ಲ. ಅದನ್ನು ಒರಟಾಗಿ ಹಾಗೂ ಪ್ರಾಮಾಣಿಕವಾಗಿ ಬಸವಲಿಂಗಪ್ಪನವರು 'ಕನ್ನಡ ಸಾಹಿತ್ಯವನ್ನು ಬೂಸಾ' ಎಂದು ಕರೆದು ಎತ್ತಿದರು. ಮಹಾದೇವ ಸಾಹಿತ್ಯ ಪರಂಪರೆಯಲ್ಲಿ ಮಾನವಪರ ಮೌಲ್ಯಗಳನ್ನು ಶೋಧಿಸುವುದೆಂದರೆ 'ಹೆಣದ ರಾಶಿಯಲ್ಲಿ ಜೀವ ಹುಡುಕುವ ಕೆಲಸ' ಎಂದು ವರ್ಣಿಸಿ ಈ ಪ್ರಶ್ನೆಗೆ ಸ್ಪಂದಿಸಿದರು. ಹೀಗೆ ತಮ್ಮ ಸಂಕ್ಷಿಪ್ತವಾದ ಆದರೆ ಅಪಾರ ಅರ್ಥವಂತಿಕೆಯ ರೂಪಕಕೇಂದ್ರಿತ ಹೇಳಿಕೆಗಳಿಂದ ಮಹಾದೇವ ಕನ್ನಡ ಸಮಾಜದ ಬಹುಮುಖ್ಯ ಸಂವಾದಗಳಲ್ಲಿ ಭಾಗಿಯಾಗುತ್ತ ಬಂದಿದ್ದಾರೆ. "ಜಾಗತೀಕರಣ ವ್ಯಾಪಾರವಲ್ಲ; ಅದು ಯುದ್ಧ" "ಮಾಹಿತಿ ತಂತ್ರಜ್ಞಾನ ನರಭಕ್ಷಕ ತಂತ್ರಜ್ಞಾನ"...ಇವು ನಮ್ಮ ಕಾಲದ ರಾಜಕೀಯದ 'ನಿರ್ಲಜ್ಜತನ' ಹೀಗೆ ಇತ್ತೀಚಿನ ಸಂವಾದಗಳಲ್ಲಿ ತಮ್ಮ ಒಳನೋಟಗಳನ್ನು ಸೇರಿಸಿದ್ದಾರೆ.

'ಬೆತ್ತಲೆ ಸೇವೆ ಯಾಕೆ ಕೂಡದು' ಎಂದು ಬ್ರಾಹ್ಮಣ ಬುದ್ಧಿಜೀವಿವರ್ಗ ವಾದಿಸಿದಾಗ "ಬೆತ್ತಲೆ ಸೇವೆಯನ್ನು ನೋಡುವವರೂ ಬೆತ್ತಲೆಯಾಗಿದ್ದರೆ ಸರಿ" ಎನ್ನುವ ಮೂಲಕ ಆ ವಾದಕ್ಕೆ ತೆರೆ ಎಳೆದರು. (ತೀರಾ ಇತ್ತೀಚಿನ ಮಡೆಸ್ನಾನ ವಿವಾದದ ಬಗ್ಗೆ 'ದಲಿತರು ಉಂಡ ಎಲೆಗಳ ಮೇಲೆ ಬ್ರಾಹ್ಮಣರು ಉರುಳಾಡಿದರೆ ಆಗಬಹುದೇನೋ" ಎನ್ನುತ್ತಾರೆಂದು ಕಾಯುತ್ತಿದ್ದೇನೆ!) ಹೀಗೆ ನಮ್ಮ ಪ್ರಮುಖ ವಾಗ್ವಾದಗಳಲ್ಲಿ ಮಹಾದೇವರು ಮಾಡುತ್ತ ಬಂದಿರುವ intervention ಸಾಂಸ್ಕೃತಿಕವಾಗಿ ಬಹಳ ಮಹತ್ವಪೂರ್ಣವಾಗಿವೆ. ಅಲ್ಲದೆ ಅಕ್ಯಾಡೆಮಿಕ್ ಅಲ್ಲದ, ಭಾರವಲ್ಲದ ರೂಪಕನಿಷ್ಠ ಮಾತುಗಳಲ್ಲಿ ಇಷ್ಟೆಲ್ಲಾ ವಿಷಯಗಳ ಬಗ್ಗೆ ಚಿಂತಿಸಬಹುದೆಂದು ತೋರಿಸಿ ಪರ್ಯಾಯವಾದ ವೈಚಾರಿಕ ನುಡಿಗಟ್ಟನ್ನು ಅವರು ರೂಪಿಸಿದ್ದಾರೆ. ಇದು ಚಾಲ್ತಿಯಲ್ಲಿರುವ ವೈಚಾರಿಕ ನುಡಿಗಟ್ಟಿನಿಂದ ಬಹಳ ಭಿನ್ನವಾಗಿರುವುದರಿಂದಾಗಿ ಇದರ ಪ್ರಖರ ವೈಚಾರಿಕತೆಯನ್ನು ನಾವಿಂದೂ ಗುರುತಿಸಿಲ್ಲ.

ಇದೆಲ್ಲಾ ಹೇಳುವಾಗ ಮಹಾದೇವರ ವ್ಯಕ್ತಿತ್ವ ಹಾಗೂ ಡಿ.ಎಸ್.ಎಸ್‌ನಲ್ಲಿ ವಹಿಸಿದ ಪಾತ್ರಗಳ ಬಗ್ಗೆ ಅತ್ಯಂತ ಕಟುವಾದ ಅಭಿಪ್ರಾಯಗಳಿವೆ ಎನ್ನುವುದನ್ನೂ ನಾನು ಬಲ್ಲೆ. ಇವರ ಎಡಬಿಡಂಗಿತನದಿಂದಾಗಿ ಡಿ.ಎಸ್.ಎಸ್ ಹೋಳಾಯಿತು, ಕೃಷ್ಣಪ್ಪನವರ ಹೋರಾಟ ಸೋತಿತು ಎಂದು ಗಟ್ಟಿಯಾಗಿ ನಂಬಿರುವ ಒಂದು ದೊಡ್ಡ ಗುಂಪು ಇದೆ. ಸಾಹಿತ್ಯಕ ವಲಯದಲ್ಲಿ ಪ್ರಭಾವಿಯಾದವರ ಸಾನಿಧ್ಯದಿಂದಾಗಿ ತಮ್ಮ radical ಗುಣ ಕಳೆದುಕೊಂಡರು ಎನ್ನುವ ಸಂಶಯವೂ ಅನೇಕರಲ್ಲಿದೆ. ಅವರ ಎಚ್ಚರದ ಕಲಾತ್ಮಕತೆಯು ದಲಿತ ಅನುಭವದ ಹಿಂಸೆಯನ್ನು ಮರೆಮಾಚಿ ಅದನ್ನು ನವಿರಾಗಿ ಮಂಡಿಸುತ್ತದೆ ಎನ್ನುವ ಗಂಭೀರ ಓದುಗರೂ ಇದ್ದಾರೆ.

ದಲಿತ ಚಳುವಳಿಗಳೂ ಸೇರಿದಂತೆ 70, 80ರ ದಶಕದ ಸಾಮಾಜಿಕ ಚಳುವಳಿಗಳ ವಸ್ತುನಿಷ್ಠವಾದ ಚಾರಿತ್ರಿಕ ಅಧ್ಯಯನ ಇದುವರೆಗೆ ನಡೆದಿಲ್ಲವಾದ್ದರಿಂದ ಅವುಗಳ ಸೋಲಿನ ಹೊಣೆಯನ್ನು ಅವುಗಳ ನೇತಾರರ ವ್ಯಕ್ತಿತ್ವದ ಮೇಲೆ ಹೊರೆಸಲಾಗುತ್ತಿದೆ. ನನಗೆ ತೋರುವ ಹಾಗೆ ಈ ಚಳುವಳಿಗಳಿಗೆ ಇದ್ದ ಸಾಂಸ್ಕೃತಿಕ ಜೀವಂತಿಕೆಗೆ ಸಮಾನವಾದ ರಾಜಕೀಯ ಕ್ರಿಯಾಶೀಲತೆ ಇರಲಿಲ್ಲ. ಆದ್ದರಿಂದ ಅವು ಪ್ರಜ್ಞೆಯಲ್ಲಿ ಬದಲಾವಣೆಗಳನ್ನು ತರುವುದರಲ್ಲಿ ಸಫಲವಾದವೇ ಹೊರತು ಸಮಾಜದ ರಚನೆಗಳಲ್ಲಿ, ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ತರಲಾಗಲಿಲ್ಲ. ಇದನ್ನು ಅರ್ಥಮಾಡಿಕೊಳ್ಳದಿದ್ದರೆ ಅವುಗಳ ಸೋಲಿನ ಜವಾಬ್ದಾರಿಯನ್ನು ಒಬ್ಬ ವ್ಯಕ್ತಿಯ ಮೇಲೆ ಹೊರೆಸುವುದು ಸುಲಭವಾಗುತ್ತದೆ. ದಲಿತ ಚಳುವಳಿ ಒಡೆದು ತುಂಡಾಗಿರುವುದು ಮಾತ್ರ ನಮ್ಮ ಕಾಲದ ಅತಿದೊಡ್ಡ ಸಾಂಸ್ಕೃತಿಕ ದುರಂತವಾಗಿದೆ.

ನನಗೆ ಮಹಾದೇವರು ಮುಖ್ಯರಾಗುವುದು ಅವರು ಸೃಷ್ಟಿಸಿದ ಅನನ್ಯವಾದ ಕಥನಗಳಿಂದಾಗಿ. ಒಟ್ಟಾರೆ 180ಕ್ಕೂ ಕಡಿಮೆ ಪುಟಗಳ ಸೃಜನಶೀಲ ಸಾಹಿತ್ಯವನ್ನು ರಚಿಸಿರುವ ಮಹಾದೇವರು ದಲಿತ ಲೋಕವನ್ನು(cosmos) ಕಟ್ಟಿಕೊಟ್ಟಿರುವ ರೀತಿ ಅಪೂರ್ವವಾದುದು. 'ಗ್ರಸ್ತರು', 'ಒಂದು ದಹನದ ಕಥೆ' ಈ ಮುಂತಾದ ಕತೆಗಳ ವ್ಯಗ್ರತೆಯಿಂದ, 'ಒಡಲಾಳ'ದ ಸಾಕವ್ವನ ಮನೆಯ ಅದ್ಭುತ ನಿಬಿಡ ಮನುಷ್ಯ ಪ್ರಪಂಚದವರೆಗೆ, 'ಕುಸುಮಬಾಲೆ'ಯ ಹಲವು ಅವ್ವಂದಿರ ಸಹನೆ ಹಾಗೂ ಪ್ರೀತಿಯಿಂದ ಚೆನ್ನನ ತಂದೆ-ತಾಯಿಯರ ಮುಗ್ಧ ದುರಂತಮಯ ಪ್ರೀತಿಯವರೆಗೆ ಹೀಗೆ ಮನುಷ್ಯಜೀವಿಗಳ ಅನುಭವಗಳು ಒಂದು ಸಂಕೀರ್ಣವಾದ ಸಿಂಫನಿ (symphony)ಯಾಗಿ ಅವರ ಕಥನಲೋಕವು ನನಗೆ ಕಂಡಿದೆ.

ದುಪ್ಪಿ ಕಮಿಷನರ್, ಗೋಡೆಯ ಮೇಲಿನ ನವಿಲುಗಳು, ದೇವದೂತೆಯಾಗಿ ಮಾರ್ಪಡುವ ಸಾಕವ್ವ, ಕದ್ದ ಕಡಲೆಕಾಯಿಯನ್ನು ಕೂತು ತಿನ್ನುವ ದಲಿತ ಕುಟುಂಬದ 'ಯಜ್ಞ' ಇವೇ ಮುಂತಾದ ಅದ್ಭುತ ರೂಪಕಗಳ ಮೂಲಕ ದಲಿತಲೋಕದ ಅವಮಾನ, ಶೋಷಣೆಗಳ ಜೊತೆಗೆ ಅದರ ಜೀವಂತಿಕೆ, ಕ್ರಿಯಾಶೀಲತೆಯನ್ನು ದರ್ಶಿಸಿದ್ದಾರೆ. ಮೇಲಿನ ಕೇರಿಯವರ ಜಡಗಟ್ಟಿಸುವ ಸಂಕಥನಗಳಿಂದಾಚೆಗೆ ತನ್ನದೇ ಸ್ವಾಯತ್ತತೆಯುಳ್ಳ ದಲಿತ ವಿಶ್ವವನ್ನು ವಿವರಿಸುವ ಕಥನಕ್ರಮಗಳನ್ನು ಶೋಧಿಸಿದ್ದಾರೆ. ಇದಕ್ಕಿಂತ ದೊಡ್ಡದನ್ನು ಏನು ಮಾಡಬಹುದು?

ಪದ್ಮಶ್ರೀ ಅಮಾಸನಿಗೆ ಅಭಿನಂದನೆಗಳು. □

ಶಿವಸುಂದರ್

ಯಡ್ಡಿಯ ಕೊನೆಗಾಲ ಹತ್ತಿರವಾಗುತ್ತಿದ್ದಂತೆ ದಿನಕ್ಕೊಂದು ಗಿಮಿಕ್ಕು ಮಾಡುತ್ತಾ ಗಳಿಗೆಗೊಬ್ಬರಿಗೆ ಟೋಪಿ ಹಾಕಲು ಹೊರಟಿರುವುದು ಸ್ಪಷ್ಟವಾಗುತ್ತಿದೆ. ಈ ನಿಟ್ಟಿನಲ್ಲಿ ಬಜೆಟ್ ಅಧಿವೇಶನ ಹತ್ತಿರ ಬರುತ್ತಿದ್ದಂತೆ 'ಪ್ರತ್ಯೇಕ ಕೃಷಿ ಬಜೆಟ್' ಎಂಬ ಹೊಸ ನಾಟಕ ಪ್ರಾರಂಭವಾಗಿದೆ. ಈ ನಾಟಕದ ವಿಶೇಷ ಮತ್ತು ವಿಷಾದ ಏನೆಂದರೆ ಈ ನಾಟಕವನ್ನಾಡಲು ಯಡಿಯೂರಪ್ಪನವರು, ರೈತಸಂಘದವರು ಆಚರಿಸುತ್ತಿದ್ದ, ಈ ನಾಡು ಕಂಡ ಅಪರೂಪದ ರೈತ ಚಿಂತಕ-ನಾಯಕ ಪ್ರೊ. ನಂಜುಂಡಸ್ವಾಮಿಯವರ 75ನೇ ಜನ್ಮ ದಿನೋತ್ಸವದ ಸಂದರ್ಭದ 'ರೈತೋತ್ಸವ"ದ ವೇದಿಕೆಯನ್ನೇ ಬಳಸಿಕೊಂಡಿದ್ದು. ಹೀಗಾಗಿಯೇ ಈ ನಾಟಕವು ರೈತರ ಮಟ್ಟಿಗೆ ಒಂದು ದೊಡ್ಡ ಟ್ರಾಜಿಡಿಯಾಗುವ ಎಲ್ಲಾ ಲಕ್ಷಣಗಳನ್ನು ತೋರುತ್ತಿದೆ.

ಅಸಲು ಈ ಕೃಷಿ ಬಜೆಟ್ ಎಂದರೇನು?

ಯಡಿಯೂರಪ್ಪನವರ ಪ್ರಕಾರ ತಮ್ಮ ನೇತೃತ್ವದಲ್ಲಿ ಮಂಡಿಸಲಿರುವ ಈ ಕೃಷಿ ಬಜೆಟ್ಟು ಇತರ ರಾಜ್ಯಗಳಿಗೂ ಮತ್ತು ಕೇಂದ್ರ ಸರ್ಕಾರಕ್ಕೂ ಮಾದರಿಯಾಗಲಿದೆಯಂತೆ! ಈ ಕಾರಣಕ್ಕಾಗಿಯೇ ಅವರು ಕರ್ನಾಟಕದ ಇತಿಹಾಸದಲ್ಲೇ ಮೊದಲ ಬಾರಿಗೆ ಕೇಂದ್ರ ಸರ್ಕಾರಕ್ಕಿಂತ ನಾಲ್ಕು ದಿನ ಮುಂಚಿತವಾಗಿ ಫೆಬ್ರವರಿ 24ರಂದೇ ರಾಜ್ಯ ಬಜೆಟ್ ಮಂಡಿಸುತ್ತಿದ್ದಾರೆ.

ಅವರ ಪ್ರಕಾರ ಕೃಷಿ ಬಜೆಟ್ಟೆಂದರೆ ಕೃಷಿಯ ಬಗ್ಗೆಯೇ ವಿಶೇಷ ಕಾಳಜಿಯುಳ್ಳ ಪ್ರತ್ಯೇಕ ಬಜೆಟ್.

ಆದರೆ, ಈ ಹಿಂದೆಯೂ ಬಜೆಟ್ಟಿನಲ್ಲಿ ನಿರ್ಲಕ್ಷ್ಯಕ್ಕೊಳಗಾದ ಪ್ರದೇಶ ಅಥವಾ ವರ್ಗಗಳನ್ನು ವಿಶೇಷವಾಗಿ ಗುರುತಿಸಬೇಕೆಂದು ಜನತೆ ಆಗ್ರಹ ಪಡಿಸುತ್ತಲೇ ಬಂದಿದ್ದಾರೆ. ಉದಾಹರಣೆಗೆ ಹಿಂದುಳಿದ ಪ್ರದೇಶವಾದ ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಯಾಗಬೇಕೆಂದರೆ ಅದರ ಸಮಸ್ಯೆಗಳನ್ನು ಬೇರೆಯಾಗಿಯೇ ಅರ್ಥಮಾಡಿಕೊಂಡು ಬಜೆಟ್ಟನ್ನು ಮತ್ತು ಪರಿಹಾರವನ್ನು ಒದಗಿಸಬೇಕೆಂಬ ಆಗ್ರಹವಿತ್ತು. ಅಧರ ಭಾಗವಾಗಿಯೇ ನಂಜುಂಡಪ್ಪ ಆಯೋಗ, ಹೈ-ಕ ಅಭಿವೃದ್ಧಿ ಮಂಡಳಿಗಳು ಸೃಷ್ಟಿಯಾದವು. ಹಾಗೆಯೇ ಲಿಂಗ ಅಸಮಾನತೆಯನ್ನು ಹೊಡೆದೋಡಿಸಬೆಕಿದ್ದರೆ ಸರ್ಕಾರ ಬಜೆಟ್ ಮಂಡಿಸುವಾಗ ಜೆಂಡರ್ ಬಜೆಟ್ ಅಂದರೆ ಪ್ರತ್ಯೇಕವಾಗಿ ಸ್ತ್ರೀಯರ ಅಭಿವೃದ್ಧಿ-ತಾರತಮ್ಯ ನಿವಾರಣೆಯನ್ನೇ ಗಮನದಲ್ಲಿಟ್ಟು ಕೊಂಡಿರುವ ಯೋಜನೆಗಳು ಮತ್ತು ಅದರ ಅನುಷ್ಠಾನವನ್ನು ಉದ್ದೇಶಿಸಿರುವ ಬಜೆಟ್ಟು. ಕೇಂದ್ರ ಹಾಗೂ ಕೆಲವು ರಾಜ್ಯಗಳು ಜೆಂಡರ್ ಬಜೆಟ್ ಮಂಡಿಸುವ ಪ್ರಯತ್ನಗಳನ್ನು ನಡೆಸಿದೆ.

ಯಡಿಯೂರಪ್ಪನವರ ಪ್ರಕಾರ ತಮ್ಮ ನೇತೃತ್ವದಲ್ಲಿ ಮಂಡಿಸಲಿರುವ ಈ ಕೃಷಿ ಬಜೆಟ್ಟು ಇತರ ರಾಜ್ಯಗಳಿಗೂ ಮತ್ತು ಕೇಂದ್ರ ಸರ್ಕಾರಕ್ಕೂ ಮಾದರಿಯಾಗಲಿದೆಯಂತೆ! ಈ ಕಾರಣಕ್ಕಾಗಿಯೇ ಅವರು ಕರ್ನಾಟಕದ ಇತಿಹಾಸದಲ್ಲೇ ಮೊದಲ ಬಾರಿಗೆ ಕೇಂದ್ರ ಸರ್ಕಾರಕ್ಕಿಂತ ನಾಲ್ಕು ದಿನ ಮುಂಚಿತವಾಗಿ ಫೆಬ್ರವರಿ ೨೪ರಂದೇ ರಾಜ್ಯ ಬಜೆಟ್ ಮಂಡಿಸುತ್ತಿದ್ದಾರೆ. ಅವರ ಪ್ರಕಾರ ಕೃಷಿ ಬಜೆಟ್ಟೆಂದರೆ ಕೃಷಿಯ ಬಗ್ಗೆಯೇ ವಿಶೇಷ ಕಾಳ ಜಿಯುಳ್ಳ ಪ್ರತ್ಯೇಕ ಬಜೆಟ್. ಆದರೆ, ಈ ಹಿಂದೆಯೂ ಬಜೆಟ್ಟಿನಲ್ಲಿ ನಿರ್ಲಕ್ಷ್ಯ ಕ್ಕೊಳಗಾದ ಪ್ರದೇಶ ಅಥವಾ ವರ್ಗಗಳನ್ನು ವಿಶೇಷವಾಗಿ ಗುರುತಿಸ ಬೇಕೆಂದು ಜನತೆ ಆಗ್ರಹ ಪಡಿಸುತ್ತಲೇ ಬಂದಿದ್ದಾರೆ.

ಪ್ರತ್ಯೇಕ ಕೃಷಿ ಬಜೆಟ್-ರೈತಾಪಿಯ ಕನವರಿಕೆಗೆ ಯಡ್ಡಿಯ ಬುಡಬುಡಿಕೆ!

ರೈತಸಂಘದ ಸಂಗಾತಿಗಳಿಗೊಂದು ಪತ್ರ!!

ಇವೆಲ್ಲಾ ಪ್ರಾರಂಭವಾಗಿ ಒಂದೆರೆಡು ದಶಕಗಳೇ ಕಳೆದ ನಂತರವೂ, ಪ್ರಾದೇಶಿಕ ಮಂಡಳಿಗಳು ಮತ್ತು ಜೆಂಡರ್ ಬಜೆಟ್‌ಗಳು ಪ್ರಾದೇಶಿಕ ತಾರತಮ್ಯವಾಗಲೀ, ಲಿಂಗ ತಾರತಮ್ಯವಾಗಲೀ ಪರಿಹಾರವಾಗಲಿಲ್ಲವೆಂಬುದನ್ನು ಅನುಭವದಿಂದಲೇ ಕಂಡುಕೊಂಡಿದ್ದೇವೆ.

ಈಗ ಈ ಕೃಷಿ ಬಜೆಟ್ಟು!

ಕೃಷಿ ಬಜೆಟ್ಟಾಗಲೀ, ಜೆಂಡರ್ ಬಜೆಟ್ಟಾಗಲೀ ವಾಸ್ತವವಾಗಿ ಆಯಾ ವರ್ಗಗಳಿಗೆ ಹೆಚ್ಚಿನ ಸಂಪನ್ಮೂಲವನ್ನೇನೂ ಕಡ್ಡಾಯವಾಗಿ ಒದಗಿಸಿಕೊಡುವುದಿಲ್ಲ. ಆವುಗಳು ಬಹುಮುಖ್ಯವಾಗಿ ಆಯಾ ವರ್ಗಗಳ ಸಮಸ್ಯೆಗಳನ್ನು ಮತ್ತು ಪರಿಹಾರಗಳನ್ನು ಗ್ರಹಿಸುವುದರಲ್ಲಿ, ಅದನ್ನು ನಿವಾರಿಸಲು ಬೇಕಾದ ಯೋಜನೆಯನ್ನು ರೂಪಿಸುವಲ್ಲಿ, ಅದನ್ನು ಮಂಜೂರು ಮಾಡಿ ಅನುಷ್ಠಾನಗೊಳಿಸುವಲ್ಲಿ, ಅದರ ಉಸ್ತುವಾರಿಯನ್ನು ನೋಡಿಕೊಳ್ಳುವಲ್ಲಿ ಮತ್ತು ನಂತರದಲ್ಲಿ ಫಲಿತಾಂಶಗಳನ್ನು ವಿಶ್ಲೇಷಿಸಿ ಮರುರೂಪಿಸುವಂಥ ಯೋಜನಾತ್ಮಕ ಮತ್ತು ಪರಿಹಾರ ನೀತಿಗಳ ಮೂಲಕ ಆ ವರ್ಗಗಳಿಗೆ ವಿಶೇಷ ಒತ್ತನ್ನು ತಂದು ಕೊಡುತ್ತವೆ. ಹೀಗಾಗಿ ಆ ಸಮಸ್ಯೆ ಮತ್ತು ಅದಕ್ಕೆ ಪರಿಹಾರವನ್ನು ಒಂದು ಸರ್ಕಾರ ಹೇಗೆ ಭಾವಿಸಿಕೊಂಡಿರುತ್ತದೆ ಎಂಬುದು ಅದರಲ್ಲಿ ಅತ್ಯಂತ ಕೀಲಕವಾದ ಅಂಶ.

ಆದರೆ ಪ್ರಾದೇಶಿಕ ಅಭಿವೃದ್ಧಿಯಾಗಲೀ, ಲಿಂಗ ತಾರತಮ್ಯ ನಿವಾರಣೆಯ ವಿಷಯದಲ್ಲಾಗಲೀ, ಅಥವಾ "ಅಭಿವೃದ್ಧಿ" ಸಂಬಂಧಿ ಇತರ ಯಾವುದೇ ವಿಷಯಗಳಲ್ಲಾಗಲೀ ನಮ್ಮ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ನೀತಿಗಳು ಯಾವ ಪಕ್ಷ ಬಂದರೂ ಏನೂ ಭಿನ್ನವಾಗಿಲ್ಲ. ಹೀಗಾಗಿಯೇ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಯಾವುದೇ ಗಿಮಿಕ್ಕುಗಳನ್ನು ಮಾಡುತ್ತಾ ಬಂದರೂ ಜನತೆಯ ಪರಿಸ್ಥಿತಿಯೂ ಸುಧಾರಿಸಲಿಲ್ಲ.

ಹೀಗಾಗಿ ಯಡ್ಡಿಯವರ ಕೃಷಿ ಬಜೆಟ್ಟೂ ಇವೆಲ್ಲಕ್ಕಿಂತ ಭಿನ್ನವಾಗಿರಬೇಕೆಂದರೆ ಕೃಷಿಯ ಬಗ್ಗೆ

1. ಸಮಸ್ಯೆಗಳನ್ನು ಮತ್ತು ಪರಿಹಾರಗಳನ್ನು ಗ್ರಹಿಸುವುದರಲ್ಲಿ
2. ಅದನ್ನು ನಿವಾರಿಸಲು ಬೇಕಾದ ಯೋಜನೆಯನ್ನು ರೂಪಿಸುವಲ್ಲಿ
3. ಅದನ್ನು ಮಂಜೂರು ಮಾಡಿ ಅನುಷ್ಠಾನಗೊಳಿಸುವಲ್ಲಿ
4. ಅದರ ಉಸ್ತುವಾರಿಯನ್ನು ನೋಡಿಕೊಳ್ಳುವಲ್ಲಿ
5. ಮತ್ತು ನಂತರದಲ್ಲಿ ಫಲಿತಾಂಶಗಳನ್ನು ವಿಶ್ಲೇಷಿಸಿ ಮರುರೂಪಿಸುವಲ್ಲಿ ...ಭಿನ್ನವಾಗಿರಬೇಕಾಗಿರುತ್ತದೆ.

ಮೇಲಿನ ಈ ಐದೂ ವಿಷಯಗಳಲ್ಲಿ ಯಡ್ಡಿಯವರ ಸರ್ಕಾರದ ನಿಲುವೇನಿದೆ ಎಂಬುದರ ಹಿನ್ನೆಲೆಯಲ್ಲಿ ಮಾತ್ರ ಈ ಕೃಷಿ ಬಜೆಟ್ಟು ರೈತರ ಬದುಕಿನ ಮೇಲೆ ಆಡುತ್ತಿರುವ ಎಂಥಾ ಕ್ರೂರ ಪ್ರಹಸನವೆಂದು ತಿಳಿಯುತ್ತದೆ.

ಅದರ ವಿಶ್ಲೇಷಣೆಗೆ ಹೋಗುವ ಮೊದಲು ಯಡಿಯೂರಪ್ಪನವರು ಕೃಷಿ ಬಜೆಟ್ಟಿನ ಮೂಲಕ ಒಟ್ಟಾರೆಯಾಗಿ ಕೃಷಿ ಕ್ಷೇತ್ರಕ್ಕೆ ಒಟ್ಟಾರೆಯಾಗಿ ಹೆಚ್ಚು ಹಣವನ್ನು ಒದಗಿಸುವುದಾಗಿಯೂ, ಒಟ್ಟಾರೆ ಬಜೆಟ್ಟನ್ನೇ ಒಂದು ಲಕ್ಷ ಕೋಟಿಯಷ್ಟು ಬೃಹತ್ ಗಾತ್ರಕ್ಕೆ ಏರಿಸಲಾಗುವುದೆಂದೂ ನೀಡುತ್ತಿರುವ ಹೇಳಿಕೆ ಎಷ್ಟು ಅರ್ಧ ಸತ್ಯದಿಂದ, ಅಗ್ಗದ ಗಿಮಿಕ್ಕಿನಿಂದ ಕೂಡಿದೆ ಎಂಬುದನ್ನು ನೋಡೋಣ!

ಕಳೆದ ವರ್ಷ 2010-11ನೇ ಸಾಲಿನ ಬಜೆಟ್ಟಿನ ಗಾತ್ರ 70,063 ಕೋಟಿ ರೂಪಾಯಿಯಷ್ಟು ದೊಡ್ಡದಾಗಿತ್ತು. ಅದರಲ್ಲಿ ರಾಜ್ಯದ ತೆರಿಗೆ, ಕೇಂದ್ರದ ತೆರಿಗೆಯ

ಕೃಷಿ ಬಜೆಟ್ಟಾಗಲೀ, ಜೆಂಡರ್ ಬಜೆಟ್ಟಾಗಲೀ ವಾಸ್ತವವಾಗಿ ಆಯಾ ವರ್ಗಗಳಿಗೆ ಹೆಚ್ಚಿನ ಸಂಪನ್ಮೂಲವನ್ನೇನೂ ಕಡ್ಡಾಯವಾಗಿ ಒದಗಿಸಿಕೊಡುವುದಿಲ್ಲ. ಆವುಗಳು ಬಹುಮುಖ್ಯವಾಗಿ ಆಯಾ ವರ್ಗಗಳ ಸಮಸ್ಯೆಗಳನ್ನು ಮತ್ತು ಪರಿಹಾರಗಳನ್ನು ಗ್ರಹಿಸುವುದರಲ್ಲಿ, ಅದನ್ನು ನಿವಾರಿಸಲು ಬೇಕಾದ ಯೋಜನೆಯನ್ನು ರೂಪಿಸುವಲ್ಲಿ, ಅದನ್ನು ಮಂಜೂರು ಮಾಡಿ ಅನುಷ್ಠಾನಗೊಳಿಸುವಲ್ಲಿ, ಅದರ ಉಸ್ತುವಾರಿಯನ್ನು ನೋಡಿಕೊಳ್ಳುವಲ್ಲಿ ಮತ್ತು ನಂತರದಲ್ಲಿ ಫಲಿತಾಂಶಗಳನ್ನು ವಿಶ್ಲೇಷಿಸಿ ಮರುರೂಪಿಸುವಂಥ ಯೋಜನಾತ್ಮಕ ಮತ್ತು ಪರಿಹಾರ ನೀತಿಗಳ ಮೂಲಕ ಆ ವರ್ಗಗಳಿಗೆ ವಿಶೇಷ ಒತ್ತನ್ನು ತಂದು ಕೊಡುತ್ತವೆ. ಹೀಗಾಗಿ ಆ ಸಮಸ್ಯೆ ಮತ್ತು ಅದಕ್ಕೆ ಪರಿಹಾರವನ್ನು ಒಂದು ಸರ್ಕಾರ ಹೇಗೆ ಭಾವಿಸಿಕೊಂಡಿರುತ್ತದೆ ಎಂಬುದು ಅದರಲ್ಲಿ ಅತ್ಯಂತ ಕೀಲಕವಾದ ಅಂಶ.

ಪಾಲು, ಇನ್ನಿತ್ಯಾದಿ ರೆವೆನ್ಯೂ ಮೂಲಗಳಿಂದ 53,639 ಕೋಟಿ ರೂಪಾಯಿಗಳು ಸಂದಾಯವಾದರೆ, 14, 925 ಕೋಟಿ ರೂಪಾಯಿಗಳನ್ನು ಲಾಭ, ಬಡ್ಡಿ ಇನ್ನಿತರ ಬಂಡವಾಳ ಖಾತೆಯಿಂದ ಗಳಿಸಲಾಗಿತ್ತು. ಆದರೂ ಸುಮಾರು ಹತ್ತು ಸಾವಿರ ಕೋಟಿ ರೂಪಾಯಿ ಖೋತಾ ಬಿದ್ದಿತ್ತು. ರಾಜ್ಯದ ರಾಜಸ್ವ ಆದಾಯದ ಪ್ರಧಾನ ಮೂಲ ವಾಣಿಜ್ಯ ತೆರಿಗೆ, ಎಕ್ಸೈಸ್ ತೆರಿಗೆ, ಮೋಟಾರು ವಾಹನಗಳ ತೆರಿಗೆ, ಸ್ಟಾಂಪ್ ಡ್ಯೂಟಿ, ಅದಿರು ಇನ್ನಿತರ ರಾಜ್ಯದ ಸಂಪನ್ಮೂಲಗಳ ಬಳಕೆಗೆ ವಿಧಿಸುವ ರಾಜಧನ ಇನ್ನಿತ್ಯಾದಿಗಳೇ ಪ್ರಧಾನ ಮೂಲಗಳು. ಕಳೆದ ವರ್ಷ ರಾಜ್ಯದ ಈ ಸ್ವಂತ ಮೂಲಗಳಿಂದ ಅಂದಾಜು 39,000 ಕೋಟಿ ಆದಾಯ ಬಂದಿರಬಹುದೆಂದು ನಿರೀಕ್ಷಿಸಲಾಗಿದೆ. ಇದಲ್ಲದೆ ಕೇಂದ್ರದಿಂದ 15,000 ಕೋಟಿ ಅನುದಾನ ಮತ್ತು ಪಾಲು ಹಾಗೂ ಅಂದಾಜು 3,000 ಕೋಟಿ ತೆರಿಗೆಯೇತರ ಆದಾಯದಿಂದ ಬಂದಿರಬಹುದೆಂದು ನಿರೀಕ್ಷಿಸಲಾಗಿದೆ.

ಈಗ 72,000 ಕೋಟಿ ರೂಪಾಯಿಗಳಿರುವ ನಮ್ಮ ಬಜೆಟ್ಟಿನ ಗಾತ್ರ ಇನ್ನೂ 30,000 ಕೋಟಿಗಳಷ್ಟು ಹೆಚ್ಚಿ ಒಂದು ಲಕ್ಷ ಕೋಟಿ ರೂಗಳಾಗಬೇಕೆಂದರೆ ಪ್ರಧಾನವಾಗಿ ಇರುವುದು ಮೂರು ಮಾರ್ಗ.

1. ನಮ್ಮ ರಾಜಸ್ವ ಆದಾಯಗಳಾದ ವಾಣಿಜ್ಯ ತೆರಿಗೆ, ಎಕ್ಸೈಸ್ ತೆರಿಗೆ, ಮೋಟಾರು ವಾಹನಗಳ ತೆರಿಗೆ, ಸ್ಟಾಂಪ್ ಡ್ಯೂಟಿ, ಇನ್ನಿತ್ಯಾದಿಗಳನ್ನು ಮೊದಲಿಗಿಂತ ಶೇ. 30ರಷ್ಟು ಹೆಚ್ಚಿಸುವುದು. ಅರ್ಥಾತ್ ಒಟ್ಟಾರೆ ತೆರಿಗೆಯನ್ನು ಶೇ. 30ರಷ್ಟು ಹೆಚ್ಚಿಸುವುದು.

– ಆದರೆ ಇವೆಲ್ಲವೂ ಪರೋಕ್ಷ ತೆರಿಗಗಳೇ ಆಗಿರುವುದರಿಂದ ತೆರಿಗೆ ಹೆಚ್ಚಳದ ಅಂತಿಮ ಹೊರೆ ಸಾಮಾನ್ಯ ಜನರ ಮೇಲೇ ಅಂದರೆ ರೈತರ ಮೇಲೆಯೇ ಬೀಳುತ್ತದೆ. ಮತ್ತು ತೆರಿಗೆ ಹೆಚ್ಚಳದಿಂದ ಹಣದುಬ್ಬರವೂ ಹೆಚ್ಚಾಗಿ ರೈತಾಪಿಯ ಕೊಳ್ಳುವ ಶಕ್ತಿ ಕಡಿಮೆಯಾಗುತ್ತದೆ. ಇದರಿಂದ ಕೃಷಿ ಬಜೆಟ್ಟಿನ ಗಾತ್ರ ಹೆಚ್ಚಾದರೂ ರೈತ ಫಲಾನುಭವಿಯಾಗುವ ಬದಲು ಬಲಿಪಶುವಾಗುತ್ತಾನೆ.

2. ನಂತರದ ಮಾರ್ಗ ತೆರಿಗೇತರ ಆದಾಯ ಮೂಲಗಳನ್ನು ಹೆಚ್ಚಿಸಿಕೊಳ್ಳುವುದು. ಅಂದರೆ ರಾಜ್ಯದ ಸಂಪನ್ಮೂಲಗಳಾದ ಅದಿರು, ಕಾಡು ಇತ್ಯಾದಿ ಬಳಕೆಗೆ ರಾಜಧನ ವಿಧಿಸುವುದು. ಸರ್ಕಾರಿ ಕಾರ್ಖಾನೆ ಅಥವಾ ಸೇವಾ ಸಂಸ್ಥೆಗಳು ಕೊಡುತ್ತಿರುವ ಸೇವೆಗೆ ಹೆಚ್ಚು ಶುಲ್ಕ ವಿಧಿಸುವುದು.

–ಇದರಲ್ಲಿ ರಾಜ್ಯದ ಅದಿರು ಸಾಗಾಣಿಕೆಯ ಮೇಲೆ ರಸ್ತೆ ಶುಲ್ಕ ವಿಧಿಸಲು ಮಾಡಿದ ಪ್ರಯತ್ನ ಹೇಗೆ ಸರ್ಕಾರವನ್ನೇ ಅಸ್ಥಿರಗೊಳಿಸಿತು ಎಂಬುದನ್ನು ನೋಡಿದ್ದೇವೆ. ಅಲ್ಲಿಂದಾಚೆಗೆ ಯಡ್ಡಿ ಸರ್ಕಾರ ಪ್ರಭಾವಿಗಳಿಗೆ ಸೇವೆ ಮಾಡುತ್ತಿದೆಯೇ ವಿನಃ ಯಾವುದೇ ಸೇವಾ ಶುಲ್ಕ ಹಾಕುವ ಯೋಚನೆಯನ್ನೂ ಮಾಡುತ್ತಿಲ್ಲ. ಇನ್ನು ಸರ್ಕಾರ ಈವರೆಗೆ ಸಾಮಾನ್ಯ ಜನರಿಗೆ ಕೊಡುತ್ತಿದ್ದ ಉಚಿತವಾಗಿ ಕೊಡುತ್ತಿದ್ದ ಕುಡಿಯುವ ನೀರು, ನೀರಾವರಿ ನೀರು, ವಿದ್ಯುತ್, ಸಾರಿಗೆ ಸೇವೆ, ಶಿಕ್ಷಣ ಮತ್ತು ವೈದ್ಯಕೀಯ ಸೇವೆಗಳ ಮೇಲೆ ಶುಲ್ಕ ವಿಧಿಸಲು ಪ್ರಾರಂಭಿಸಿದೆ. ಅದನ್ನು ಇನ್ನೂ ಶೇ. 30ರಷ್ಟು ಹೆಚ್ಚಳ ಮಾಡಿದರೆ ಸಾಮಾನ್ಯರ ಗತಿ? ಅದು ಕೃಷಿ ಬಜೆಟ್ಟಲ್ಲ-ರೈತರ ತಿಥಿ ಬಜೆಟ್ಟಾಗುವುದಷ್ಟೆ!

3. ಮೂರನೆಯ ದಾರಿ ಸಾಲ ಮಾಡಿ ಬಜೆಟ್ಟಿನ ಗಾತ್ರವನ್ನು ಹೆಚ್ಚಿಸುವುದು. ಮೊದಲನೆಯದಾಗಿ ಈ ಪ್ರಮಾಣದಲ್ಲಿ ಸಾಲ ಕೊಡುವುದು ವಿಶ್ವಬ್ಯಾಂಕು. ಅದು ಸಾಲ ಕೊಡುತ್ತದೆ. ಆದರೆ ಅವು ಹಾಕುವ ಶರತ್ತುಗಳನ್ನು ಪಾಲಿಸುತ್ತಾ ಬಂದಿರುವುದರಿಂದಲೇ ಇಂದು ರಾಜ್ಯದ-ದೇಶದ ಕೃಷಿ ಮತ್ತು ರೈತಾಪಿಯ ಪರಿಸ್ಥಿತಿ ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದೆ. ಅದನ್ನು ನಂತರದಲ್ಲಿ ಚರ್ಚಿಸೋಣ.

4. ಇನ್ನೊಂದು ದಾರಿ ಇದೆ. ಅದು ಒಂದು ಲಕ್ಷ ಕೋಟಿಯಷ್ಟು ಬಜೆಟ್ ಮಂಡಿಸುವುದು. ಅದಕ್ಕೆ ಪೂರಕವಾದ ಮಾರ್ಗೋಪಾಯಗಳಿಲ್ಲದೆ ಅಂತಿಮವಾಗಿ ಖೋತಾ ಬಜೆಟ್ ಎದುರಿಸುವುದು. ಅಂಥರೆ ಬಜೆಟ್ಟಿನಲ್ಲಿ ಹಣಕಾಸಿನ ಬೆಂಬಲವಿಲ್ಲದೆ ಸುಖಾಸುಮ್ಮನೆ ಯೋಜನೆಗಳ ಮಹಾಪೂರವನ್ನೇ ಹರಿಸುವುದು. ಆದರೆ ವರ್ಷದ ಕೊನೆಯಲ್ಲಿ ಹಣಕಾಸು ಕೊರತೆಯಿಂದ ಅದನ್ನು ಈಡೇರಿಸಲಾಗಲಿಲ್ಲ ಎಂದು ಘೋಷಿಸುವುದು. ನಮ್ಮ ಬಹುಪಾಲು ಸರ್ಕಾರಗಳು ಚುನಾವಣೆ ಹತ್ತಿರ ಬರುತ್ತಿದ್ದಂತೆ ಅನುಸರಿಸುವ ಮಾರ್ಗ ಇದೇ! ಕಳೆದ ಎರಡು ವರ್ಷಗಳಿಂದ ಯಡಿಯೂರಪ್ಪನವರು ಅನುಸರಿಸುತ್ತಿರುವ ಮಾರ್ಗವೂ ಇದೇ!

ಹೀಗೆ ಬಜೆಟ್ಟಿನ ಗಾತ್ರ ಹೆಚ್ಚಾಗುವುದು ಹೇಗೆ ಎಂಬ ಪ್ರಶ್ನೆ ಕೇಳಿಕೊಳ್ಳದೆ, ಕೃಷಿಗೆ ಹೆಚ್ಚು ಹಣ ಕೊಟ್ಟಲ್ಲಿ ಅದೇ ಕೃಷಿ ಬಜೆಟ್, ರೈತಪರ ಬಜೆಟ್ಟೆಂದು ಭಾವಿಸುವುದು ರಾಜಕೀಯ ಮುಠಾಳತನ. ಪ್ರೊ.ನಂಜುಂಡಸ್ವಾಮಿಯವರು ಕರ್ನಾಟಕದ ರೈತರಿಗೆ ಈ ಬಗ್ಗೆ ನೀಡಿದ ರಾಜಕೀಯ ಶಿಕ್ಷಣವೇ ಕರ್ನಾಟಕದ ರೈತರನ್ನು ರಾಜಕೀಯವಾಗಿ ವಂಚನೆಗೆ ಬಲಿಬೀಳದಂತೆ ತಡೆಯುವಲ್ಲಿ ಸ...

ಮಟ್ಟಿಗೆ ಯಶಸ್ವಿಯಾಗಿತ್ತು ಎಂದರೂ ತಪ್ಪಿಲ್ಲ. ಆದರೆ ಈಗ ಯಡ್ಡಿಯವರು ನಂಜುಂಡಸ್ವಾಮಿಯವರ ನೆನಪಿನ ವೇದಿಕೆಯ ಮೇಲೇ, ರೈತಸಂಘದ ಸಮಾರಂಭದಲ್ಲೇ ರಾಜಾರೋಷವಾಗಿ ರೈತರನ್ನು ದಾರಿ ತಪ್ಪಿಸುತ್ತಿದ್ದಾರೆ!!

ಇನ್ನೂ ಯಡ್ಡಿ ಹೇಳುತ್ತಿರುವ ಕೃಷಿ ಬಜೆಟ್ಟಿನ ಸಾರಾಂಶವೇನು?

ಅದರಲ್ಲಿ ಕೃಷಿಯ ಸಮಸ್ಯೆಗಳನ್ನು ಮತ್ತು ಅದರ ಪರಿಹಾರವನ್ನು ಅವರು ಪರಿಭಾವಿಸಿಕೊಂಡಿರುವ ಬಗೆಯೇನು? ಅದಕ್ಕೆ ಅವರು ರೂಪಿಸುತ್ತಿರುವ ಯೋಜನೆಗಳೇನು? ಅದರ ಉಸ್ತುವಾರಿ ಮತ್ತು ಪುನರ್‌ವಿಮರ್ಶೆಗೆ ಅವರು ರೂಪಿಸಿರುವ ಸಾಂಸ್ಥಿಕ ರಚನೆಗಳೇನು?

ಕೃಷಿ ಮತ್ತು ಆತ್ಮಹತ್ಯೆಯ ದಾರಿ ಹಿಡಿದಿರುವ ರೈತಾಪಿಯ ಸಮಸ್ಯೆಗಳ ಬಗೆಗೆ ಬಿಜೆಪಿಯ ರಾಷ್ಟ್ರೀಯ ನಿಲುವು 2000ದಲ್ಲಿ ವಾಜಪೇಯಿ ಸರ್ಕಾರದ ರಾಷ್ಟ್ರೀಯ ಕೃಷಿ ನೀತಿಯಲ್ಲಿ ತುಂಬಾ ಸ್ಪಷ್ಟವಾಗಿ ನಿರೂಪಿಸಲಾಗಿದೆ. ಅದರ ಪ್ರಕಾರ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೃಷಿಯಲ್ಲಿ ಭವಿಷ್ಯವಿಲ್ಲ. ಆದ್ದರಿಂದ ಅವರು ಕೃಷಿ ಬಿಟ್ಟು ಹೊರಬರಬೇಕು. ನಿಧಾನಕ್ಕೆ ಭಾರತದ ಕೃಷಿಯಲ್ಲಿ ಕಾಂಟ್ರಾಕ್ಟ್ ಫಾರ್ಮಿಂಗ್, ಮತ್ತು ಕಾರ್ಪೊರೇಟ್ ಫಾರ್ಮಿಂಗ್‌ಗೆ ಅವಕಾಶ ಮಾಡಿಕೊಡಬೇಕು. ಬಿಟಿ ತಂತ್ರಜ್ಞಾನದ ಮೂಲಕ ಎರಡನೇ ಹಸಿರುಕ್ರಾಂತಿಗೆ ಅವಕಾಶ ಮಾಡಿಕೊಡಬೇಕು. 2004ರಿಂದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಸಹ ಇದನ್ನೇ ಚಾಚೂ ತಪ್ಪದೇ ಮುಂದುವರೆಸಿದೆ.

ಯಡಿಯೂರಪ್ಪನವರ ಸರ್ಕಾರವಂತೂ ಒಂದೆಡೆ ಕೃಷಿ ಬಜೆಟ್‌ನ ಭರವಸೆಗಳನ್ನು ನೀಡುತ್ತಿರುವ ಮರುಕ್ಷಣದಲ್ಲೇ ಕೃಷಿಯಲ್ಲಿ ಮುಂದಿನ ಐದು ವರ್ಷಗಳಲ್ಲಿ 50,000 ಕೋಟಿ ಖಾಸಗಿ ಬಂಡವಾಳವನ್ನು ಹೂಡಲಾಗುವುದೆಂದೂ, ಅದಕ್ಕಾಗಿ ಬರುವ ಜೂನ್‌ನಲ್ಲಿ ಕೃಷಿ ಕ್ಷೇತ್ರದಲ್ಲಿನ ವಿಶ್ವ ಬಂಡವಾಳಿಗರ ಸಮ್ಮೇಳನವನ್ನು ನಡೆಸುವುದಾಗಿ ಘೋಷಿಸಿದೆ. ಹಾಗೂ ಆ ನಿಟ್ಟಿನಲ್ಲಿ ಈಗಾಗಲೇ ಸಣ್ಣ ಮತ್ತು ಅತಿ ಸಣ್ಣ ರೈತರಿಂದ ವಶಪಡಿಸಿಕೊಂಡಿರುವ 1.75ಲಕ್ಷ ಎಕರೆಯ ಜೊತೆಜೊತೆಗೆ ಇನ್ನೂ ಒಂದು ಲಕ್ಷ ಎಕರೆ ವಶಪಡಿಸಿಕೊಳ್ಳುವುದಾಗಿ ಘೋಷಿಸಿದ್ದಾರೆ. ಈಗಾಗಲೇ ಅಭಿವೃದ್ಧಿಯ ಹೆಸರಿನಲ್ಲಿ ರಾಜ್ಯಾದ್ಯಂತ ದೊಡ್ಡ ರಸ್ತೆಗಳಿಗೆ, ಟೌನ್‌ಶಿಪ್‌ಗಳಿಗೆ, ವಿಮಾನ ನಿಲ್ದಾಣಗಳಿಗೆ ರೈತಾಪಿಯ ಜಮೀನು ದೊಡ್ಡ ಮಟ್ಟದಲ್ಲಿ ವಶವಾಗುತ್ತಿದೆ.

ಮೂಲಭೂತ ಸೌಕರ್ಯಗಳ ಅಭಿವೃದ್ಧಿಯ ಪಟ್ಟಿಯಲ್ಲಿ ಹೆಚ್ಚಾಗುತ್ತಿರುವುದು ಎಕ್ಸ್‌ಪ್ರೆಸ್ ಹೈವೇಗಳೇ ವಿನಃ ಸರ್ವಋತು ಗಾಮೀಣ ರಸ್ತೆಯಲ್ಲ. ದೊಡ್ಡ ದೊಡ್ಡ ಮಾಲ್‌ಗಳೇ ವಿನಃ ರೈತರು ಬೆಳದ ಕೃಷಿ ಉತ್ಪನ್ನಗಳನ್ನು ಸಂಗ್ರಹಿಸಿಡುವ ಕೋಲ್ಡ್ ಸ್ಟೋರೇಜ್‌ಗಳಲ್ಲ. ಸಾವಯವ ಕೃಷಿ ಉತ್ತೇಜನ ಇನ್ನಿತರ ಹೆಸರಲ್ಲಿ ರೈತಾಪಿಯ ಒಟ್ಟಾರೆ ಅಭಿವೃದ್ಧಿಗೆ ಸಹಾಯಕವಾಗುತ್ತಿದ್ದೇವೆ ಎಂದು ಹೇಳಿದರೂ ಅದಕ್ಕೆ ಖರ್ಚಾಗುತ್ತಿರುವ ಹಣದ ದುಪ್ಪಟ್ಟು ಹಣವನ್ನು ರೈತರಿಗೆ ಕೊಡುತ್ತಿದ್ದ ನೀರು, ವಿದ್ಯುತ್, ಸಾರಿಗೆ, ಪಡಿತರ ಸೇವೆಯ ಶುಲ್ಕವನ್ನು ಏರಿಸುವ ಮೂಲಕ ಹಿಂಪಡೆಯಲಾಗುತ್ತಿದೆ. ಸುಲಿಯಲಾಗುತ್ತಿದೆ. ಅದೇರೀತಿ ಅವರ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡುವ ಯೋಜನೆಗಳು, ಉಚಿತ ವಿದ್ಯುತ್ ಯೋಜನೆಗಳು ಇವೆಲ್ಲಾ ಅದಕ್ಕೆ ಬೇಕಾದ ಹಣಕಾಸು ಬೆಂಬಲವನ್ನು ಬಜೆಟ್ಟಿನಲ್ಲಿ ಪಡೆಯದೇ ಹೇಗೆ ಪೊಳ್ಳು ಭರವಸೆಗಳಾಗಿ ಮಾತ್ರ ಉಳಿದವು ಎಂಬುದನ್ನು ಕಳೆದ ಎರಡು ವರ್ಷಗಳಲ್ಲಿ ನೋಡಿದ್ದೇವೆ. ಗ್ರಾಮೀಣ ಕ್ಷೇತ್ರದ ಅಭಿವೃದ್ಧಿಯಲ್ಲಿ ಕರ್ನಾಟಕದ ಸ್ಥಾನ ಕೆಳಗಿರುವುದರಿಂದಲೇ ಸತತ ಹತ್ತನೇ ವರ್ಷವೂ ಕರ್ನಾಟಕ ಅತಿ ಹೆಚ್ಚು ರೈತರ ಆತ್ಮಹತ್ಯೆಗಳಾಗುತ್ತಿರುವ ರಾಜ್ಯಗಳಲ್ಲಿ ಒಂದಾಗಿದೆ.

ಶೇ.2ರ ಬಡ್ಡಿ ದರದ ಸಾಲದ ಬಗ್ಗೆ ಘೋಷಣೆಯಾದ ನಂತರವೂ ಕರ್ನಾಟಕದಲ್ಲಿ ಸಾಲ ಬಾಧೆ ತಡೆಯಲಾಗದೆ 2009ರಲ್ಲಿ 1500ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇನ್ನು ಬೆಳೆದ ಬೆಳೆಗೆ ವೈಜ್ಞಾನಿಕ ದರವಿರಲಿ, ಕನಿಷ್ಠ ಬೆಂಬಲ ದರ ನಿಗದಿ ಮಾಡಬೇಕೆಂಬುದಕ್ಕೂ ಸರ್ಕಾರ ಒಗೊಡದಿದ್ದರಿಂದ ಬೇರೆಬೇರೆ ಕೃಷಿ ಉತ್ಪನ್ನಗಳ ಬೆಳೆಗಾರರು ಇಡೀ ವರ್ಷ ಹೋರಾಟದಲ್ಲೇ ಕಳೆದರು. ಬೇಡಿಕೆಯ ಅರ್ಧ ಭಾಗವೂ ಈಡೇರಲಿಲ್ಲ. ರೈತರಿಗೆ ಚುನಾವಣಾ ಸಂದರ್ಭದಲ್ಲಿ ಬಿಟ್ಟರೆ ಉಚಿತ ವಿದ್ಯುತ್ತಿರಲಿ 12 ಗಂಟೆಗಳ ನಿರಂತರ ಕೊಳ್ಳುವ ವಿದ್ಯುತ್ತೂ ಸಿಗಲಿಲ್ಲ.

ಇವೆಲ್ಲವೂ ಆಡಳಿತ ವೈಫಲ್ಯವೇನಲ್ಲ. ಬದಲಿಗೆ ಇವು ರೈತ ವಿರೋಧಿ ನೀತಿಗಳ ಪರಿಣಾಮ. ಹೀಗಾಗಿ ಬೇಕಿರುವುದು ಕೃಷಿ ಬಜೆಟ್ಟು ಅಥವಾ ಹೆಚ್ಚಿನ ಬಜೆಟ್ಟು ಮಾತ್ರವಲ್ಲ. ಮೂಲಭೂತವಾಗಿ ಬದಲಾಗಿರಬೇಕಿರುವುದು ರೈತ ವಿರೋಧಿ ನೀತಿಗಳು. ಆದರೆ ಈ ರೈತ ವಿರೋಧಿ ನೀತಿಗಳ ಬಗ್ಗೆ ಕಾಂಗ್ರೆಸ್, ಬಿಜೆಪಿ, ಜನತಾದಳ ಎಲ್ಲಾ ಪಕ್ಷಗಳಲ್ಲೂ ಸಮ್ಮತಿ ಇದೆ. ಏಕೆಂದರೆ ಈ ದೇಶದ ಅಭಿವೃದ್ಧಿಯ ಬಗ್ಗೆ ಈ ಪಕ್ಷ ಕಾಣುತ್ತಿರುವ ಕನಸುಗಳೆಲ್ಲಾ ವಿಶ್ವಬ್ಯಾಂಕಿನಿಂದ ಕಿರಾಯಿಗೆ ತಂದವೇ! ವಿಶ್ವಬ್ಯಾಂಕು ಈ ದೇಶದ ಕೃಷಿಯನ್ನು ಮೂಲಭೂತವಾಗಿ ಸಾಮ್ರಾಜ್ಯಶಾಹಿ ದೇಶಗಳ ವಸಾಹತುವನ್ನಾಗಿ ಮಾಡಿಕೊಳ್ಳಲುಯತ್ನಿಸುತ್ತಿದೆ. ಈ ನಿಟ್ಟಿನಲ್ಲಿ ಈ ದೇಶದ ಕೃಷಿ ಎದುರಿಸುತ್ತಿರುವ ಪ್ರತಿಯೊಂದು ಸಮಸ್ಯೆಗೂ ಅದು ಮಾನ್ಸಾಂಟೋ, ಸಿಬಾ–ಗೈಗಿ, ಸಿಂಜೆಂಟಾ, ಕಾರ್ಗಿಲ್, ಡುಪಾಂಟ್ ಹಾಗೂ ಇನ್ನಿತರ ದೈತ್ಯ ಕೃಷಿ ಕಾರ್ಪೊರೇಟ್ ಕಂಪನಿಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ನೀತಿಗಳನ್ನು ಸಲಹೆ ನೀಡಿದೆ. ಮತ್ತು ಅದನ್ನು ನಮ್ಮ ಪಕ್ಷಗಳು ಚಾಚೂ ತಪ್ಪದೆ ಪಾಲಿಸುತ್ತಿವೆಯಲ್ಲದೆ ಅದನ್ನೇ ಶಾಸನ ಮಾಡಿದೆ.

ಯಡಿಯೂರಪ್ಪನವರ ಸರ್ಕಾರವಂತೂ ಒಂದೆಡೆ ಕೃಷಿ ಬಜೆಟ್‌ನ ಭರವಸೆಗಳನ್ನು ನೀಡುತ್ತಿರುವ ಮರುಕ್ಷಣದಲ್ಲೇ ಕೃಷಿಯಲ್ಲಿ ಮುಂದಿನ ಐದು ವರ್ಷಗಳಲ್ಲಿ 50,000 ಕೋಟಿ ಖಾಸಗಿ ಬಂಡವಾಳವನ್ನು ಹೂಡಲಾಗುವುದೆಂದೂ, ಅದಕ್ಕಾಗಿ ಬರುವ ಜೂನ್‌ನಲ್ಲಿ ಕೃಷಿ ಕ್ಷೇತ್ರದಲ್ಲಿನ ವಿಶ್ವ ಬಂಡವಾಳಿಗರ ಸಮ್ಮೇಳನವನ್ನು ನಡೆಸುವುದಾಗಿ ಘೋಷಿಸಿದೆ. ಹಾಗೂ ಆ ನಿಟ್ಟಿನಲ್ಲಿ ಈಗಾಗಲೇ ಸಣ್ಣ ಮತ್ತು ಅತಿ ಸಣ್ಣ ರೈತರಿಂದ ವಶಪಡಿಸಿಕೊಂಡಿರುವ 1.75 ಲಕ್ಷ ಎಕರೆಯ ಜೊತೆಜೊತೆಗೆ ಇನ್ನೂ ಒಂದು ಲಕ್ಷ ಎಕರೆ ವಶಪಡಿಸಿಕೊಳ್ಳುವುದಾಗಿ ಘೋಷಿಸಿದ್ದಾರೆ. ಈಗಾಗಲೇ ಅಭಿವೃದ್ಧಿಯ ಹೆಸರಿನಲ್ಲಿ ರಾಜ್ಯಾದ್ಯಂತ ದೊಡ್ಡ ರಸ್ತೆಗಳಿಗೆ, ಟೌನ್‌ಶಿಪ್‌ಗಳಿಗೆ, ವಿಮಾನ ನಿಲ್ದಾಣಗಳಿಗೆ ರೈತಾಪಿಯ ಜಮೀನು ದೊಡ್ಡ ಮಟ್ಟದಲ್ಲಿ ವಶವಾಗುತ್ತಿದೆ.

2002ರಲ್ಲಿ ಕರ್ನಾಟಕ ರಾಜ್ಯ ಸರ್ಕಾರ Karnataka Fiscal Responsibility Act ಎಂಬ ಶಾಸನವನ್ನು ಜಾರಿಗೆ ತಂದಿದೆ. ಅದರ ಪ್ರಕಾರ ಸರ್ಕಾರ ತನ್ನ ಬಜೆಟ್ ಮಂಡಿಸುವಾಗ ಮತ್ತು ಆರ್ಥಿಕ ನೀತಿಗಳನ್ನು ಜಾರಿಗೆ ತರುವಾಗ ಸರ್ಕಾರದ ವೆಚ್ಚಗಳನ್ನು ಕಡಿಮೆ ಮಾಡಬೇಕು, ಸರ್ಕಾರ ಕೊಡುತ್ತಿರುವ ಸೇವೆ–ಸರಕುಗಳನ್ನು ಉಚಿತವಾಗಿಯಲ್ಲದೆ ಲಾಭದ ಬೆಲೆಗೆ ಮಾರಬೇಕು, ಪ್ರತಿಯೊಂದು ಕ್ಷೇತ್ರಗಳಲ್ಲೂ ಖಾಸಗಿ ಬಂಡವಾಳದ ಪ್ರವೇಶಕ್ಕೆ ಅವಕಾಶ ಒದಗಿಸಬೇಕು, ಕೃಷಿ ಮಾರುಕಟ್ಟೆ, ನೀರಾವರಿ, ಬೀಜ ಮಾರುಕಟ್ಟೆ, ಗೊಬ್ಬರ, ಸಾಲ, ಬೆಳೆ ಖರೀದಿ ಎಲ್ಲದರಲ್ಲೂ ಕಾರ್ಪೊರೇಟ್ ಬಂಡವಾಳಿಗರಿಗೆ ಅವಕಾಶ ಮಾಡಿಕೊಡಬೇಕು ಮತ್ತು ಸರ್ಕಾರ ಆ ಕ್ಷೇತ್ರದಿಂದ ಹಿಂತೆಗಯಬೇಕು. ಇವು ಸಾರಾಂಶದಲ್ಲಿ ಆ ಶಾಸನದ ತಾತ್ಪರ್ಯ. ಹೀಗಾಗಿ ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಸರ್ಕಾರ ಕೊಡುತ್ತಿದ್ದ ಎಲ್ಲಾ ಸಬ್ಸಿಡಿಗಳನ್ನು ತಾನು ಹೇಗೆ ಹಂತಹಂತವಾಗಿ ಹಿಂತೆಗೆದುಕೊಳ್ಳುತ್ತೇನೆಂಬ ಬಗ್ಗೆ ಸರ್ಕಾರ ಪ್ರತಿ ಬಜೆಟ್ ಮಂಡನೆ ಮಾಡುವ ಮುನ್ನ ಒಂದು ಮಧ್ಯಂತರವಿತ್ತೀಯ ಕಾರ್ಯಯೋಜನೆಯನ್ನು (Mid Term Fiscal Policy-MTFP) ಸದನದಲ್ಲಿ ಮಂಡಿಸಬೇಕು. ಅದರಲ್ಲಿ ಏನಾದರೂ ಒಂದು ವರ್ಷದಲ್ಲಿ ಏರುಪೇರಾಗಿದ್ದರೆ ಹೇಗೆ ಅದನ್ನು ತಿದ್ದುಪಡಿ ಮಾಡಿಕೊಳ್ಳುತ್ತೇನೆಂದೂ ಅದರಲ್ಲಿ ಸೂಚಿಸಬೇಕು.

ಈ ಶಾಸನದ ಶರತ್ತುಗಳಿಗೆ ಅಧೀನವಾಗಿಯೇ 2002ರಿಂದಲೂ ಹಂತಹಂತವಾಗಿ ಸರ್ಕಾರ ಕೊಡುತ್ತಿದ್ದ ಎಲ್ಲಾ ಸರಕು ಮತ್ತು ಸೇವೆಗಳನ್ನು ಹಿಂತೆಗೆದುಕೊಳ್ಳಲಾಗುತ್ತಿದೆ. 2015ರ ವೇಳೆಗೆ ಈ ಬಗೆಯ ಸರಕಾರಿ ಸಹಾಯ ಶೂನ್ಯಕ್ಕೆ ತಲುಪಬೇಕೆಂಬುದು ವಿಶ್ವಬ್ಯಾಂಕಿನ ಕಡ್ಡಾಯ ಶರತ್ತು. ಹೀಗಾಗಿಯೇ 2009ರಲ್ಲಿ ಸರ್ಕಾರ ಬಜೆಟ್ ಅಧಿವೇಶನದಲ್ಲಿ ಮಂಡಿಸಿದ 2009–12ರವರೆಗಿನ Mid Term Fiscal Policy-MTFPಯಲ್ಲಿ– ಆಹಾರ, ಸಾರಿಗೆ, ವಸತಿ ಮತ್ತು ಸಣ್ಣ ಕೈಗಾರಿಕೆಗಳಿಗೆ ಕೊಡುತ್ತಿದ್ದ ಸಬ್ಸಿಡಿಯು 2007ರಲ್ಲಿ ಶೇ.1.37 ಇದ್ದದ್ದು 2011–12ರಲ್ಲಿ ಶೇ.0.63ಕ್ಕೂ ಮತ್ತು 2012–13ರಲ್ಲಿ ಶೇ.0.59ಕ್ಕೂ ಇಳಿಸುವ ಭರವಸೆಯನ್ನು ನೀಡಲಾಗಿದೆ. ಅದೇ ರೀತಿ ವಿದ್ಯುತ್ತಿಗೆ ನೀಡಲಾಗುತ್ತಿದ್ದ ಸಬ್ಸಿಡಿಯನ್ನು 2007ರಲ್ಲಿ ಶೇ.0.98 ಇದ್ದದ್ದು 2011–12ರಲ್ಲಿ ಶೇ.0.85ಕ್ಕೂ ಇಳಿಸಿ 2012–13ನೇ ಸಾಲಿಗೆ ಶೇ.0.80ಗೆ ಇಳಿಸುವ ಯೋಜನೆಯನ್ನು ಮಂಡಿಸಲಾಗಿದೆ.

ಇದೇ ನಿಜವಾದ ಬಜೆಟ್ಟು. ಸದನದಲ್ಲಿ ಮಂಡಿಸುವುದು ಬಜೆಟ್ಟಲ್ಲ. ಚುನಾವಣಾ ಅಗತ್ಯಗಳಿಗನುಸಾರವಾಗಿ ಘೋಷಿಸಲ್ಪಡುವ ಕರಪತ್ರಗಳು!!

ಇವು ಬದಲಾಗದೆ ಕೃಷಿ ಬಜೆಟ್ಟು ಮಾತ್ರ ಹೇಗೆ ಭಿನ್ನವಾದೀತು?

ಹೀಗಾಗಿ ಕೃಷಿ ಬಜೆಟ್ಟು ಎನ್ನುವುದು ಹೆಚ್ಚೆಂದರೆ ಈವರೆಗೆ ಸರ್ಕಾರವು ವಿವಿಧ ಶೀರ್ಷಿಕೆಗಳಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕೃಷಿಗೆ ಮತ್ತು ಗ್ರಾಮೀಣ ಅಭಿವೃದ್ಧಿಗೆ ಮಾಡುತ್ತಿದ್ದ ವೆಚ್ಚವನ್ನೆಲ್ಲಾ ಒಂದೆಡೆ ಕ್ರೂಢೀಕರಿಸಿ, ನಂಜುಂಡಸ್ವಾಮಿಯವರ ಹೆಸರಿನಲ್ಲಿ ಯಾವುದಾದರೂ ಯೋಜನೆಯನ್ನು ಪ್ರಕಟಿಸಿ, ಮಿಕ್ಕಿದ್ದೆಲ್ಲವನ್ನೂ ವಿಶ್ವಬ್ಯಾಂಕಿನ ಶರತ್ತಿಗನುಗುಣವಾಗಿ–ಈಗಾಗಲೇ ಚರ್ಚಿಸಿದಂತೆ ಅತ್ಯಂತ ರೈತ ವಿರೋಧಿ ಮತ್ತು ದೈತ್ಯ ಬಹುರಾಷ್ಟ್ರೀಯ ಕಂಪನಿಗಳ ಪರವಾದ Karnataka Fiscal Responsibility Act ಶಾಸನಕ್ಕೆ ಬದ್ಧವಾಗಿ ನಡೆದುಕೊಳುವ–ಮತ್ತೊಂದು ಗಿಮಿಕ್ ಆಗಿದೆ.

ಹೀಗೆ ಯಡಿಯೂರಪ್ಪನವರು ಸಾರಾಂಶದಲ್ಲಿ ಅತ್ಯಂತ ರೈತವಿರೋಧಿಯಾದ ಕಾರ್ಪೊರೇಟ್‌ಪರ ಕೃಷಿ ನೀತಿಯನ್ನೇ ಮುಂದುವರೆಸಲು ಇಟ್ಟಿರುವ ಹೊಸ ಹೆಸರೇ "ಕೃಷಿ ಬಜೆಟ್ಟು".

ಆದರೆ ರೈತ ಸಂಘವು ಕಳೆದ ಹಲವು ದಶಕಗಳಿಂದ ಒಂದು ರೈತಪರವಾದ ಕೃಷಿ ಬಜೆಟ್ಟನ್ನು ಆಗ್ರಹಿಸುತ್ತಾ ಬಂದಿತ್ತು. ಈಗ ಯಡಿಯೂರಪ್ಪನವರು ರೈತ ಸಂಘದವರು ಆಗ್ರಹಿಸುತ್ತಿದ್ದ ಬೇಡಿಕೆಯ ಹೆಸರನ್ನು ಮಾತ್ರ ತೆಗೆದುಕೊಂಡು ಸಾರಾಂಶವನ್ನು ಮಾತ್ರ ರೈತ ವಿರೋಧಿಯನ್ನಾಗಿಯೇ ಉಳಿಸಿಕೊಂಡಿದೆ. ದುರದೃಷ್ಟಕರ ಸಂಗತಿಯೆಂದರೆ ನಂಜುಂಡಸ್ವಾಮಿಯವರ ಗರಡಿಯಲ್ಲಿ ಪಳಗಿದ ರೈತಸಂಘದಂತಹ ವಿಚಾರಶೀಲ ನಾಯಕತ್ವವೂ ಸಹ ಯಡಿಯೂರಪ್ಪನವರ ಈ ಹುನ್ನಾರವನ್ನು ಅರ್ಥ ಮಾಡಿಕೊಳ್ಳದಿರುವುದು!!

ಯಡಿಯೂರಪ್ಪನವರ ನೀತಿಗಳೆಲ್ಲಾ ಉದ್ದಕ್ಕೂ ರೈತ ವಿರೋಧಿಯೇ ಆಗಿರುವಾಗ, ಈಗಲೂ ಒಂದೆಡೆ ಕೃಷಿ ಬಜೆಟ್ ಎನ್ನುತ್ತಲೇ ಮತ್ತೊಂದು ಕಡೆ ಕಾರ್ಪೊರೇಟ್ ಪರ ಬೀಜ ನೀತಿ, ಬಂಡವಾಳ ಹೂಡಿಕೆ ನೀತಿ ಮತ್ತು ವಿಶ್ವ ಹೂಡಿಕೆದಾರರ ಬಂಡವಾಳವನ್ನು ಆಯೋಜಿಸಿ ಲಕ್ಷ ಲಕ್ಷ ಎಕರೆ ಜಮೀನು ವಶಪಡಿಸಿಕೊಳ್ಳುತ್ತಿರುವಾಗ, ಕೃಷಿ ಬಜೆಟ್ಟಿನ ಹೆಸರನ್ನು ನೋಡಿ ಹೇಗೆ ಮಾರು ಹೋದರು? ಇದು ನಿಜಕ್ಕೂ ವಿಷಾದಕರ.

ಹೀಗಾಗಿ ಈ ಬಜೆಟ್ಟಿನಲ್ಲಿ ಖಂಡಿತಾ ಕೃಷಿಪರತೆಯ ಹೆಸರಿನಲ್ಲಿ ಒಂದಷ್ಟು ಹಣ ಮತ್ತು ಯೋಜನೆಗಳು ಖಂಡಿತಾ ಘೋಷಿತವಾಗುತ್ತವೆ. ಆದರೆ ಅದರ ನಿಜವಾದ ಬಣ್ಣ ಅರ್ಥಮಾಡಿಕೊಳ್ಳಲು ರೈತರು ಮತ್ತು ಜನರು ಈ ಕೆಳಗಿನ ವಿಷಯಗಳನ್ನು ಪರಿಶೀಲಿಸಬೇಕು:

1. ಈ ಬಜೆಟ್ಟು ವಿಶ್ವ ಬ್ಯಾಂಕಿನ ಆದೇಶದಂತೆ Karnataka Fiscal Responsibility Act ಶಾಸನಕ್ಕೆ ಬದ್ಧವಾಗಿ ನಡೆದುಕೊಳ್ಳುವ ಬದ್ಧತೆಯನ್ನು ಘೋಷಿಸಿರುತ್ತದೆಯೋ ಇಲ್ಲವೋ? (ಇದನ್ನು ಹುಡುಕಲು ಹೆಚ್ಚು ಕಷ್ಟ ಪಡಬೇಕಿಲ್ಲ. ಇದು ಬಜೆಟ್ ಭಾಷಣದ ಮೊದಲ ವಾಕ್ಯಗಳಲ್ಲೇ ಇರುತ್ತದೆ.)

2. ಕೃಷಿ ಬಜೆಟ್ ಎಂಬ ಶಿರ್ಷಿಕೆಯಲ್ಲಿ ಹೆಚ್ಚುವರಿ ಹಣ ಘೋಷಣೆ ಮಾಡಿದ್ದರೆ ಅಥವಾ ಒಟ್ಟಾರೆ ಬಜೆಟ್ ಗಾತ್ರ ಒಂದು ಲಕ್ಷ ಕೋಟಿಯಾಗಿದ್ದರೆ ಹೆಚ್ಚುವರಿ ಹಣ ಸಂಪನ್ಮೂಲ ಸಂಗ್ರಹವಾಗಿರುವ ಬಗೆ ಹೇಗೆ? ಅದು ಶ್ರೀಮಂತರ ಮೇಲೆ ಹೆಚ್ಚಿಗೆ ತೆರಿಗೆ ಹಾಕುವುದರಿಂದ ಸಂಗ್ರಹಿಸಲಾಗುತ್ತಿದೆಯೋ ಅಥವಾ ರೈತಾಪಿ ಮತ್ತು ಸಾಮಾನ್ಯ ಜನರ ಮೇಲೆಯೇ ಹೆಚ್ಚಿನ ತೆರಿಗೆ ಹಾಕಿ ಸಂಗ್ರಹಿಸಲಾಗುತಿದೆಯೋ?

3. ಎಲ್ಲಕ್ಕಿಂತ ಹೆಚ್ಚಾಗಿ ರೈತಪರ ಎಂದು ಸರ್ಕಾರ ಘೋಷಿಸುವ ಯೋಜನೆಗಳಿಗೆ ಸೂಕ್ತ ಬಜೆಟ್ ಬೆಂಬಲವಿದೆಯೋ ಅಥವಾ ಅದು ಕೇವಲ ಹಣಕಾಸು ಬೆಂಬಲವಿಲ್ಲದ ಘೋಷಣೆಯೋ?

4. ಕೃಷಿಗೆಂದು ಎತ್ತಿಡಲಾಗಿರುವ ಮೊತ್ತವು ಹೋದ ವರ್ಷಕ್ಕಿಂತ ಎಷ್ಟು ಜಾಸ್ತಿ?

5. ಕೃಷಿಗೆ ಜಾಸ್ತಿ ಹಣ ನೀಡಿದ ಮಾತ್ರಕ್ಕೆ ಅದು ರೈತಪರವಾಗುವುದಿಲ್ಲ. ಹೆಚ್ಚುವರಿ ಯಾವ ಬಾಬತ್ತಿಗೆ ಎಂಬುದು ಮುಖ್ಯ. ಉದಾಹರಣೆಗೆ ಕೃಷಿ ಸಲಕರಣೆಗಳನ್ನು ಕೊಳ್ಳಲು ನೀಡಲಾಗುವ ಸಬ್ಸಿಡಿ ಪ್ರಧಾನವಾಗಿ ಟ್ರಾಕ್ಟರ್ ಕೊಳ್ಳಲು ಹೋದರೆ ಅದು ಯಾವ ರೈತನನ್ನು ಮತ್ತು ಯಾವ ಬಗೆಯ ಕೃಷಿಯನ್ನು ಬೆಂಬಲಿಸುತ್ತದೆ ಎಂಬುದನ್ನು ಪರಿಶೀಲಿಸಬೇಕು.

6. ರೈತರಿಗೆ ವಿಮೆ, ಪಿಂಚಣಿ, ನಿರ್ದಿಷ್ಟ ಆದಾಯ ಖಾತರಿ, ಹಿಡುವಳಿ ಆಧಾರಿತ ಬೆಳೆ ಆಧಾರಿತ ಕಡ್ಡಾಯ ಕನಿಷ್ಟ ಆದಾಯದ ಖಾತರಿ–ಇವೇ ಇನ್ನಿತರ ವಿಷಯಗಳನ್ನು ಖ್ಯಾತ ರೈತಪರ ಅರ್ಥಶಾಸ್ತ್ರಜ್ಞ ದೇವೆಂದರ್ ಶರ್ಮಾರವರು ಬಿಜೆಪಿ–ಜೆಡಿಎಸ್ ಆಡಳಿತವಿದ್ದಾಗಲೂ ಸರ್ಕಾರಕ್ಕೆ ಸಲಹೆ ನೀಡಿದ್ದರು. ಸರ್ಕಾರ ಒಪ್ಪಿಕೊಂಡಿದ್ದಕ್ಕೆ ಅವರಿಗೆ ಸಂತೋಷವೂ ಆಗಿತ್ತು. ಆದರೆ ಅದು ಜಾರಿಗೆ ಬರಲಿಲ್ಲ. ಏಕೆಂದರೆ ಅದನ್ನು ಜಾರಿಗೆ ತರಲು ಬೇಕಾದ ಸಂಪನ್ಮೂಲ ಸರ್ಕಾರದ ಬಳಿ ಇರಲಿಲ್ಲ. ಸಂಪನ್ಮೂಲ ಇದ್ದವರಿಂದ ವಸೂಲಿ ಮಾಡುವ ರಾಜಕೀಯ ಬಿಜೆಪಿಯದ್ದೂ ಆಗಿರಲಿಲ್ಲ. ಜೆಡಿಎಸ್‌ದೂ ಆಗಿರಲಿಲ್ಲ. ಈಗಲೂ ಅಷ್ಟೆ. ಸರ್ಕಾರ ಶರ್ಮಾರವರ ಸಲಹೆಯನ್ನು ಮನ್ನಿಸಿ, ಬಿಜೆಪಿ ಸರ್ಕಾರ ನಂಜುಂಡಸ್ವಾಮಿಯವರ ಹೆಸರಿನಲ್ಲಿ ಯೋಜನೆಗಳನ್ನು ಘೋಷಿಸಬಹುದು. ಆದರೆ ಅದಕ್ಕೆ ಬೇಕಾದ ಹಣವನ್ನು ಸರ್ಕಾರ ಎಲ್ಲಿಂದ ಮತ್ತು ಹೇಗೆ ಒದಗಿಸಿದೆ ಎಂಬುದು ಸ್ಪಷ್ಟವಾಗದೆ ಅದು ಕೇವಲ ಪೊಳ್ಳು ಭರವಸೆ ಮಾತ್ರ.

7. ಘೋಷಿತವಾಗುವ ಕೃಷಿ ಯೋಜನೆಗಳಲ್ಲಿ ಸಾಲ, ಹಿಡುವಳಿ, ನೀರಾವರಿ, ಉತ್ಪನ್ನ ಮಾರಾಟ ವ್ಯವಸ್ಥೆ, ಬೀಜ ಮಾರುಕಟ್ಟೆ ಇವುಗಳಲ್ಲಿ ಸೂಕ್ಷ್ಮವಾಗಿ ಸರ್ಕಾರ ತಾನು ವಹಿಸಿಕೊಳ್ಳುವ ಯೋಜನೆಯೆಷ್ಟು? ಮತ್ತು ಸರ್ಕಾರಿ–ಖಾಸಗಿ ಪಾಲುದಾರಿಕೆಯ ಹೆಸರಿನಲ್ಲಿ ಲಾಭಕೋರತನವೇ ಪ್ರೇರಣೆಯಾಗಿರುವ ಖಾಸಗಿ ಕೃಷಿ ದೈತ್ಯ ಕಂಪನಿಗಳಿಗೆ ವಹಿಸಿಕೊಡುವ ಯೋಜನೆಗಳೆಷ್ಟು?

8. ಹಾಗೂ ಒಟ್ಟಾರೆಯಾಗಿ ರಾಜ್ಯದ ಆರ್ಥಿಕತೆಯಲ್ಲಿ ನವ ಆರ್ಥಿಕ ನೀತಿ ಪ್ರಣೀತ ಬಹುರಾಷ್ಟ್ರೀಯ ಕಂಪನಿಗಳಪರ ಒತ್ತೆಷ್ಟು?

ಇವುಗಳನ್ನು ಕೂಲಂಕಷವಾಗಿ ಪರಿಶೀಲಿಸದೆ ಯಾವುದೇ ತೀರ್ಮಾನಕ್ಕೆ ಬರಬಾರದೆಂದು ರೈತಸಂಘದ ಸಂಗಾತಿಗಳಲ್ಲಿ ಈ ಲೇಖಕ ನಮ್ರ ಮನವಿ ಮಾಡಿಕೊಳ್ಳಲು ಬಯಸುತ್ತಾನೆ!

ಏಕೆಂದರೆ ಯಡಿಯೂರಪ್ಪನವರ ಮತ್ತು ಬಿಜೆಪಿಯ ಕೃಷಿ ನೀತಿಗಳೆಲ್ಲಾ ರೈತವಿರೋಧಿಯೇ ಆಗಿರುವಾಗ ವಿಶ್ವಬ್ಯಾಂಕಿನ ಆದೇಶದಂತೆ ನಡೆಯುತ್ತಿರುವಾಗ ಕೃಷಿ ಬಜೆಟ್ಟು ಮಾತ್ರ ರೈತ ಪರವಾಗಿರಲು ಹೇಗೆ ಸಾಧ್ಯ? ರೈತಸಂಘಕ್ಕೆ ಈ ಪ್ರಶ್ನೆ ಏಕೆ ಮೂಡಲಿಲ್ಲ? ಅದು ನಂಜುಂಡಸ್ವಾಮಿಯವರ ಜನ್ಮದಿನದಂದು ರೈತೋತ್ಸವ ಮಾಡುತ್ತಿರುವಾಗ!!!??? □

ನಾನು ಸಾಯುವ ಹೊತ್ತಲ್ಲಿ
ನಿನಗೊಂದು ಪೆಟ್ಟಿಗೆ ಕೊಡುತ್ತೇನೆ
ಅದನ್ನು ತೆರೆದು ನೋಡಬಾರದು,
ನೀನದನ್ನು ನೋಡುತ್ತ ನಾಳೆಯ ಕುರಿತಾಗಿ
ತಪಸ್ಸು ಮಾಡಬೇಕು,
ಕಣ್ಣು ಮುಚ್ಚಿಕೊಂಡು

ಅದರ ಮುಂದೆ ಕುಳಿತರೆ
ಸರ್ವ ಪ್ರಕೃತಿ ನಿನ್ನೊಳಗೆ ವಿಕಸಿಸುತ್ತದೆ
ಸರ್ವ ಪ್ರಪಂಚ ನಿನ್ನೊಳಗೆ ಕರಗಿ ಹೋಗುತ್ತದೆ

ಎರಡು ಕೈಗಳು ಸಾಕು
ಎಂತಹ ಕೆಲಸವನ್ನಾದರು ಮಾಡಬಹುದು
ಎಂತಹ ಕವಿತೆಗಳನ್ನಾದರು ಬರೆಯಬಹುದು.



○ ತೆಲುಗು ಮೂಲ: ಡಾ. ಕೆ. ಶಿವಾರೆಡ್ಡಿ
ಕನ್ನಡಕ್ಕೆ: ವೆಂಕಟಾಪು ಸತ್ಯಂ, ಮಾಲೂರು.

ವಿಶ್ವ ಹಿಂದೂ ಪರಿಷತ್ ಮತ್ತು ಧಾರ್ಮಿಕ ಪ್ರಜ್ಞೆ

ಬಿ. ಎಚ್. ಸತ್ಯನಾರಾಯಣ

ವಿಶ್ವ ಹಿಂದೂ ಪರಿಷತ್‌ನ ನಿರ್ಮಾಣವು ಹಿಂದೂ ಜನಾಂಗವನ್ನು ಒಗ್ಗೂಡಿಸಲು ವಿಸ್ತರಿಸಲಾದ ಒಂದು ವ್ಯವಸ್ಥಿತ ಪ್ರಯತ್ನ. ಜನಾಂಗವನ್ನು ಒಗ್ಗೂಡಿಸಲು ಸಂಘಟಿತ ಹೆಜ್ಜೆಯೊಂದು ಇಲ್ಲದಿದ್ದರೆ, ಕ್ರೈಸ್ತಧರ್ಮ, ಇಸ್ಲಾಂ ಮತ್ತು ಕಮ್ಯುನಿಸಂ ಈ ಮೂರು ಪರಕೀಯ ಸಿದ್ಧಾಂತಗಳು ಯಾ ಮೂರು ಅಂತರಂಗದ ಅನಿಷ್ಟ ಸೂಚಕಗಳಿಂದ, ಹಿಂದೂ ರಾಷ್ಟ್ರೀಯ ಸಿದ್ಧಾಂತವು ಸಾವನ್ನಪ್ಪುವುದು ಮತ್ತು ಅಳಿಸಿ ಹೋಗುವುದು ಎಂಬುದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್.ಎಸ್.ಎಸ್) ಹೆದರಿಕೆ[1], ಮೇಲಾಗಿ, ಇಂಡಿಯಾದ ಜಾತ್ಯತೀತ ರಾಷ್ಟ್ರೀಯತೆಯನ್ನು ಸಹಿತ ಹಗೆತನದ ಸಿದ್ಧಾಂತ ಎಂಬುದಾಗಿ ತಿಳಿದು ಅದನ್ನೂ ಕಿತ್ತೊಗೆಯಬೇಕು ಎಂದು ಬಯಸುತ್ತದೆ.

ಧರ್ಮಿಯ ಒಗ್ಗೂಡಿಕೆಯ ಕಾರ್ಯವನ್ನು ವಿ.ಎಚ್.ಪಿ.ಯು ಧಾರ್ಮಿಕ ನಾಯಕನ ಸ್ವಕೀಯ ಗುಣದಿಂದ ಮುಂದುವರೆಸಿತು. ಇದು ತನ್ನ ಹಿರಿಯ ಮಾತೃ ಸಂಸ್ಥೆ ಆರ್.ಎಸ್.ಎಸ್. ಬೆಂಬಲದಿಂದ ಬಂದ ಗುಣ. ಅದು ತನ್ನನ್ನು ಧಾರ್ಮಿಕ ಜಾಗೃತಿಯ ದೀಪ ಹೊತ್ತು, ಹಿಂದೂ ಜನಾಂಗವನ್ನು ಒಂದುಗೂಡಿಸಲು ಮತ್ತು ಸ್ವಾಭಿಮಾನವನ್ನು ಕೆರಳಿಸುವ ಕಾರ್ಯಪ್ರವೃತ್ತ ಸಂಸ್ಥೆ ಎನಿಸಿಕೊಂಡಿತು. ಅದು ಧರ್ಮ ಜಾಗೃತಿಯನ್ನು ಮತ್ತು ಧರ್ಮ ಶ್ರದ್ಧೆಯನ್ನು ಬೆಳೆಸಲು ಹೊಣೆ ಹೊತ್ತಿತು. ಜಾತ್ಯಾತೀತ ಮತ್ತು ಬಹುತ್ವವಾದದ ಇಂಡಿಯನ್ ವ್ಯಕ್ತಿತ್ವದ ವಿರುದ್ಧ ಹಿಂದೂ ಸಾಮ್ರಾಜ್ಯವನ್ನು ಕಟ್ಟುವುದು ಮತ್ತು ಹಿಂದೂತ್ವವನ್ನು ಬಲಪಡಿಸುವುದು ಈ ಧಾರ್ಮಿಕ ಪ್ರಜ್ಞೆಯ ಪೂರ್ಣ ಆಸಕ್ತಿಯಾಗಿತ್ತು.

ಈ ಧರ್ಮ ಜಾಗೃತಿ ಎನ್ನುವುದರ ಅರ್ಥವೇನು? ಮೊದಲಿಗೆ, ಸ್ವತಂತ್ರ ವಿಶಾಲ ಹಿಂದೂ ರಾಷ್ಟ್ರವನ್ನು ಸೃಷ್ಟಿಸಲು ಅಡ್ಡಿ ಬರುವ ಆಂತರಿಕ ಸಾಂಸ್ಕೃತಿಕ ಮೇರೆಗಳಾದ ಜಾತಿ, ಭಾಷೆ ಮತ್ತು ಪ್ರಾಂತ್ಯಗಳನ್ನು ಇಲ್ಲವಾಗಿಸುವುದು. ಅದು ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳನ್ನೆದುರಿಸಲು

ಆರ್ಯ ಸಮಾಜದ ಮಾರ್ಗವನ್ನು ಅನುಸರಿಸಿ, ಒಂದು ಮುಖ್ಯ ಹಿಂದೂ ನಂಬಿಕೆಯಾದ ಶುದ್ಧೀಕರಣವನ್ನು ಅನುಸರಿಸುವುದು, ಅಗತ್ಯ ಬಿದ್ದಲ್ಲಿ ಸ್ವಾಭಿಮಾನವನ್ನು ಕಾಪಾಡಿಕೊಳ್ಳಲು ಮತ್ತು ಹಿಂದೂ ಪ್ರಭಾವವನ್ನು ಹರಡಲು ಹಿಂಸಾ ಪ್ರಯೋಗವನ್ನೂ ಮಾಡುವುದು. ಈ ಕಾರ್ಯಗಳ ಸುತ್ತ ಕ್ರಮಬದ್ಧವಾಗಿ ಕೆಲಸಮಾಡಲು ಒಂದು ಸಂಸ್ಥೆಗೆ ಸಂಬಂಧಪಟ್ಟಂತಹ ಪ್ರಯತ್ನದ ಅವಶ್ಯಕತೆ ಇತ್ತು.

ಇದು 'ಮಾರ್ಗದರ್ಶಕ ಮಂಡಲ್' ಮತ್ತು 'ಧರ್ಮ ಸಂಸದ್'ನ ರಚನೆಗೆ ದಾರಿ ಮಾಡಿಕೊಟ್ಟಿತು. ರಾಮಜನ್ಮಭೂಮಿ ಮತ್ತು ಇತರೆ ವಿವಾದಗಳಲ್ಲಿ ವಿಹಿಂಪದ ಪ್ರಯತ್ನಗಳಿಗೆ ಸಹಾನುಭೂತಿ ತೋರುತ್ತಿದ್ದ ಹಿಂದೂ ಧರ್ಮದ ಧುರೀಣರನ್ನು ಒಂದೇ ವೇದಿಕೆಗೆ ತರಲು ಅವಕಾಶವಾಯಿತು. ಈ ಸಂಸ್ಥೆಗಳನ್ನು ರಚಿಸಿದ ಉದ್ದೇಶ ಸಂಘಪರಿವಾರದ ಪ್ರಯತ್ನಗಳಿಗೆ ಪೂರಕವಾಗಿ ಮತ್ತು ಹಿಂದುತ್ವ ಚಳುವಳಿಗೆ ಮಾರ್ಗ ದರ್ಶನ ನೀಡುವುದು. ಪ್ರಸ್ತುತ ಲೇಖನವು ಈ ಕೆಲವು ಅಂಶಗಳ ಬಗ್ಗೆ ದೃಷ್ಟಿಹರಿಸುತ್ತದೆ. ವಿಶ್ವ ಹಿಂದೂ ಪರಿಷತ್‌ಗೆ ಆಳವಾದ ತತ್ವಶಾಸ್ತ್ರದ ಧಾರ್ಮಿಕ ಪ್ರಜ್ಞೆಯ ತಳಪಾಯ ಇದೆಯೇ ಅಥವಾ ಇಲ್ಲವೆ ಎಂಬುದನ್ನು ಶೋಧಿಸಿ ನೋಡುವುದು. ವಿಹಿಂಪವು ಯಾವುದೂ ಒಂದೇ ಧರ್ಮ ಗ್ರಂಥವನ್ನು, ಪೂಜಾ ಪಾಠವನ್ನು ಅಥವಾ ಧಾರ್ಮಿಕ ಅನುಸರಣೆಯನ್ನು, ಬೇರೆಯವಕ್ಕಿಂತ ಹೆಚ್ಚು ಅನುಮೋದಿಸುತ್ತದೆಯೆ ಎಂಬುದನ್ನೂ ಕೂಡ ಚರ್ಚಿಸಲಾಗಿದೆ.

ಸಾಧುಗಳು ಮತ್ತು ಸಂತರುಗಳ ಒಳಸೇರುವಿಕೆ:

ವಿಹಿಂಪವು ರಚನೆಯಾದ ಮೊದಲಿನಿಂದಲೇ ಅದರ ಕಾರ್ಯಕ್ರಮಗಳಲ್ಲಿ ಸಾಧುಗಳನ್ನು ಸೇರಿಸಿಕೊಳ್ಳಲು ಪ್ರಯತ್ನಿಸಿತ್ತು. ಇದು ಸ್ವಯಂ ಘೋಷಿತ ಹಿಂದೂ ಧಾರ್ಮಿಕ-ಸಾಂಸ್ಕೃತಿಕ ಸಂಸ್ಥೆಯಾದ್ದರಿಂದ ದೇಶಾದ್ಯಂತ ನಡೆದ ಗೋಹತ್ಯಾ ನಿಷೇಧ ಚಳುವಳಿಗೆ ತನ್ನ ಸಹಕಾರವನ್ನು ನೀಡಿತು. ಪಾರ್ಲಿಮೆಂಟ್‌ನ ಮುಂದೆ 1966ರಲ್ಲಿ ನಡೆದ ಬೃಹತ್ ಸಮಾವೇಶದಲ್ಲಿ ಅದು ಕೊನೆಗೊಂಡು, ದೆಹಲಿಯಲ್ಲಿ ದೊಡ್ಡ ಪ್ರಮಾಣದ ಹಿಂಸಾಚಾರಕ್ಕೆ ಎಡೆಮಾಡಿಕೊಟ್ಟಿತು[2]. ವಿಹಿಂಪದಿಂದ ಸಜ್ಜುಗೊಳಿಸಿದ ಸಾಧುಗಳು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದರು. ಈಟಿಗಳು ಮತ್ತು ತ್ರಿಶೂಲಗಳನ್ನು ಹಿಡಿದ ಸಾಧುಗಳು ಪಾರ್ಲಿಮೆಂಟ್ ಭವನವನ್ನು ಕಾಯುತ್ತಿದ್ದ ಪೋಲೀಸ್ ಪಡೆಯ ಕಾವಲು ಸಾಲುಗಳನ್ನು ಭೇದಿಸಿ ಮುನ್ನುಗ್ಗಿದರು. ಹಿಂಸಾಚಾರ ಮತ್ತು ದೊಂಬಿ ಕೈಮೀರಿದ್ದರಿಂದ ಪೊಲೀಸರು ಲಾಠಿ ಮತ್ತು ಟಿಯರ್ ಗ್ಯಾಸ್ ಪ್ರಯೋಗಿಸಬೇಕಾಯಿತು.

ವಾಹನಗಳು ಮತ್ತು ಆಸ್ತಿಗೆ ಅಪಾರ ಹಾನಿ ಮತ್ತು ನಷ್ಟಮಾಡಿದ ಘಟನೆಗಳು ಬಹಳವಾಗಿ ಜರುಗಿದವು. ಪೊಲೀಸರು ಬಲವಂತವಾಗಿ ಗುಂಡು ಹಾರಿಸಬೇಕಾಯ್ತು. ಒಬ್ಬ ಪೇದೆಯೂ ಸೇರಿ ಎಂಟು ಜನ ಮೃತಪಟ್ಟು ಕರ್ಫ್ಯೂ ಹೇರಲಾಯ್ತು[3]. ಗಣನೀಯ ಸಂಖ್ಯೆಯಲ್ಲಿ ಸಾಧುಗಳು ಭಾಗವಹಿಸಿದ್ದ ಈ ಚಳುವಳಿಯು ಫೆಬ್ರವರಿ 1967ರ ಸಾರ್ವತ್ರಿಕ ಚುನಾವಣೆಗೆ ಕೊಂಚ ಮುಂಚೆ ನಡೆಯಿತು. 1960ರ ದಶಕ ಹಿಂದೂ ರಾಷ್ಟ್ರೀಯತೆಯ ಭಾವದಿಂದ ಮುನ್ನುಗ್ಗಿದವರಿಗೆ ತುಂಬ ಉದ್ರೇಕಗೊಳಿಸಿದ ದಶಕ. ಕ್ರೈಸ್ತರು ಹೆಚ್ಚಿನ ಸಂಖ್ಯೆಯಲ್ಲಿದ್ದು, 1963ರಲ್ಲಿ ನಾಗಾಲ್ಯಾಂಡ್ ರಾಜ್ಯ ರಚನೆಗೊಂಡಿತು. ನವೆಂಬರ್ 1966ರಲ್ಲಿ ಬಹಳ ದಿನಗಳ ಚಳುವಳಿಯ ನಂತರ ಸಿಖ್ಖರ-ಪಂಜಾಬಿ ಭಾಷೆಯನ್ನು ಆಡುವವರ ಪಂಜಾಬ್ ಸಭಾದ ಸೃಷ್ಟಿಕೂಡ ಆಯಿತು.

ವಿಹಿಂಪ ಹುಟ್ಟಿದ ಆರಂಭದ ದಿನಗಳಲ್ಲಿ ಸಾಧುಗಳು ಎರಡು ರೀತಿಯ ಕಾರ್ಯ ಮಾಡಬೇಕಾಗಿತ್ತು. ಒಂದು ಹಿಂದೂಗಳಿಗೆ ಧರ್ಮ ಶ್ರದ್ಧೆಯ ಆಧ್ಯಾತ್ಮಿಕ ವಿಷಯಗಳ ಬಗ್ಗೆ ಮಾರ್ಗದರ್ಶನ ಮತ್ತು ಎರಡನೆಯದಾಗಿ ವಿಹಿಂಪದ ಪ್ರತಿನಿಧಿಗಳಾಗಿ ಹಿಂದೂ ಧರ್ಮದ

ಧರ್ಮ ಜಾಗೃತಿ ಎನ್ನುವುದರ ಅರ್ಥವೇನು? ಮೊದಲಿಗೆ, ಸ್ವತಂತ್ರ ವಿಶಾಲ ಹಿಂದೂ ರಾಷ್ಟ್ರವನ್ನು ಸೃಷ್ಟಿಸಲು ಅಡ್ಡಿ ಬರುವ ಆಂತರಿಕ ಸಾಂಸ್ಕೃತಿಕ ಮೇರೆಗಳಾದ ಜಾತಿ, ಭಾಷೆ ಮತ್ತು ಪ್ರಾಂತ್ಯಗಳನ್ನು ಇಲ್ಲವಾಗಿಸುವುದು. ಅದು ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳನ್ನೆದುರಿಸಲು ಆರ್ಯ ಸಮಾಜದ ಮಾರ್ಗವನ್ನು ಅನುಸರಿಸಿ, ಅಗತ್ಯ ಬಿದ್ದಲ್ಲಿ ಸ್ವಾಭಿಮಾನವನ್ನು ಕಾಪಾಡಿಕೊಳ್ಳಲು ಮತ್ತು ಹಿಂದೂ ಪ್ರಭಾವವನ್ನು ಹರಡಲು ಹಿಂಸಾ ಪ್ರಯೋಗವನ್ನೂ ಮಾಡುವುದು. ಈ ಕಾರ್ಯಗಳ ಸುತ್ತ ಕ್ರಮಬದ್ಧವಾಗಿ ಕೆಲಸ ಮಾಡಲು ಒಂದು ಸಂಸ್ಥೆಗೆ ಸಂಬಂಧಪಟ್ಟಂತಹ ಪ್ರಯತ್ನದ ಅವಶ್ಯಕತೆ ಇತ್ತು. ಇದು 'ಮಾರ್ಗದರ್ಶಕ ಮಂಡಲ್' ಮತ್ತು 'ಧರ್ಮ ಸಂಸದ್'ನ ರಚನೆಗೆ ದಾರಿ ಮಾಡಿಕೊಟ್ಟಿತು.

ಆದೇಶಗಳನ್ನು ಭಾರತದಲ್ಲೂ ಮತ್ತು ಹೊರಗಡೆಯೂ ಪ್ರಸಾರ ಮಾಡಬೇಕಿತ್ತು.

ಏನೇ ಆದರೂ, ಜಾತ್ಯತೀತತೆಯ ಕ್ಷೇತ್ರದಲ್ಲಿ, ಅದರಲ್ಲೂ ರಾಜಕೀಯದಲ್ಲಿ ಅವರ ಪಾತ್ರವನ್ನು ತೆಗೆದು ಹಾಕದಿದ್ದರೂ, ಯಾವ ವಿಧದಲ್ಲೂ ಪ್ರಾಮುಖ್ಯತೆ ನೀಡಲಿಲ್ಲ. ಇನ್ನೂ ವಾಸ್ತವಿಕ ಯೋಜನೆಗಳಾವುವೂ ಈ ರೀತಿಯ ಸೇರುವಿಕೆಗೆ ಆಸ್ಪದ ನೀಡಿರಲಿಲ್ಲ. ತಮ್ಮ ಜೀವನದ ಯಾವುದೋ ಕಾಲದಲ್ಲಿ ಧರ್ಮಗುರುಗಳು ಪ್ರಾಪಂಚಿಕ ವ್ಯವಹಾರವನ್ನು ತ್ಯಜಿಸಿ ಬಂದವರು. ಕಟ್ಟು ನಿಟ್ಟಾದ ನೀತಿ ನಿಯಮ ನಿಬಂಧನೆಗಳನ್ನು ಪಾಲಿಸುವವರು ಎಂಬ ಊಹೆ ಇದ್ದು, ಅಂತಹವರು ಸಾಂಸಾರಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂಬ ಆಶಯ ಇರಲಿಲ್ಲ. ಹಾಗಾಗಿ, 1972ರಲ್ಲಿ 'ಧರ್ಮದರ್ಶಿಗಳು ಮತ್ತು ಮಹಾತ್ಮರು'[4] ಗೊತ್ತು ಗುರಿ ಇಲ್ಲದ ಅಪಾದನೆ ಮಾಡುವ ಚಾಳಿಯು ಬೆಳೆಯುತ್ತಿರುವುದನ್ನು ವಿಹಿಂಪವು ಸಹಿಸಲಿಲ್ಲ. ಆದರೂ ತಮ್ಮ ವರ್ತನೆ ಮತ್ತು ಚಟುವಟಿಕೆಗಳಲ್ಲಿ ಸಂಯಮದಿಂದ ವರ್ತಿಸಬೇಕೆಂದು, ಯಾವ ಕಾರಣಕ್ಕೂ ಟೀಕೆಗಳಿಗೆ ಅವಕಾಶ ಕೊಡಕೂಡದೆಂದೂ ಧರ್ಮದರ್ಶಿಗಳಿಗೆ ಮನವರಿಕೆ ಮಾಡಿತು[5].

ವಿಹಿಂಪವು 1980ರ ಮಧ್ಯಭಾಗದಿಂದ ಶುದ್ಧಾಂಗವಾಗಿ ಧಾರ್ಮಿಕ ಚಟುವಟಿಕೆಗಳಲ್ಲದ ಸಾರ್ವಜನಿಕ ವ್ಯವಹಾರಗಳಲ್ಲಿ ಸಾಧುಗಳನ್ನು ದೊಡ್ಡ ರೀತಿಯಲ್ಲಿ ಭಾಗವಹಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿತು. ಹಾಗೆ ಪ್ರತ್ಯೇಕಿಸಲ್ಪಟ್ಟ ಸಾಧುಗಳ ಸ್ಥಾನಮಾನವನ್ನು, ಧಾರ್ಮಿಕ-ಆಧ್ಯಾತ್ಮಿಕ ಕ್ಷೇತ್ರಕ್ಕೆ ಸಾಂಪ್ರದಾಯಿಕವಾಗಿ ಸೇರದ ಒಂದು ಉದ್ಯೋಗಶೀಲ ಹೋರಾಟವನ್ನು ಒಳಗೊಳ್ಳುವ ಕ್ಷೇತ್ರಕ್ಕೆ ಪರಿವರ್ತಿಸಲಾಯ್ತು. ಹಿಂದುತ್ವದ ಯೋಜನೆಗಳಿಗಾಗಿ ಬೆಂಬಲ ದೊರಕಿಸಲು ಮತ್ತು ನ್ಯಾಯಸಮ್ಮತ ಸ್ಥಾನ ಕಲ್ಪಿಸಲು ಸಾಧುಗಳ ಸೇವೆಯನ್ನು ಉಪಯೋಗಿಸಿಕೊಳ್ಳಲಾಯಿತು. ವಿಹಿಂಪವು ಸಾಧುಗಳು ರಾಜಕೀಯದಲ್ಲಿ ತೊಡಗಿಸಿಕೊಳ್ಳಲು ಉತ್ತೇಜನವನ್ನಿತ್ತು, ಅದಕ್ಕೆ ತಕ್ಕ ಪರಿಸರ ನಿರ್ಮಾಣ ಮಾಡಿ, ಅವರ ಅಧಿಕಾರವು ಅನುಮಾನಕ್ಕೆಡೆಯಿಲ್ಲದಂತೆ ಮೇಲೇರಿಸಲಾಯ್ತು. ಜಾತ್ಯತೀತ ರಾಜಕೀಲು ಕ್ಷೇತ್ರದಲ್ಲಿ ಮತ್ತು ಆಳ್ವಿಕೆಯಲ್ಲಿ ಅವರ ಸೇರುವಿಕೆಗಳು ಪ್ರತಿಭಟನೆಗಳಿಂದ ದೂರವಿರಿಸಲ್ಪಟ್ಟು ಅವರ ಮಾತನ್ನೇ ಅಂತಿಮ ಎಂದು ಸ್ವೀಕರಿಸಲಾಯ್ತು.

ಧರ್ಮದರ್ಶಿಗಳು ವಿಹಿಂಪದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಸಾಧುಗಳೆನ್ನೆಲ್ಲ ಒಂದೇ ಸಂಸ್ಥೆಯಡಿ ಒಗ್ಗೂಡಿಸಲು ಪ್ರಯತ್ನಿಸಿದರು. ಈ ರೀತಿಯಲ್ಲಿ ವಿಹಿಂಪವು ತನ್ನೊಡನಿರುವ 'ಮಾರ್ಗದರ್ಶಕ ಮಂಡಲದ' ಸಾಧುಗಳು ಅದರ ಎಲ್ಲ ಚಟುವಟಿಕೆಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವರು ಎಂಬ ಕಥೆಯನ್ನು ಪ್ರಸಾರ ಮಾಡಿದರು. (Van Dyke- 1997:3150) ಸಾಂಸಾರಿಕ ಮತ್ತು ಸಾಮಾಜಿಕ ಜಂಜಾಟದಲ್ಲಿರುವ ಸಾಧಾರಣ ಮಾನವರು ಸಾಧಿಸಲಾಗದ ಉಚ್ಚಮಟ್ಟದ ಗುರಿಯನ್ನು ಮುಟ್ಟಲು ವಿರಕ್ತ ಜೀವನ ನಡೆಸಲು ಧರ್ಮ ಗುರುಗಳಿಗೆ ಮಾತ್ರ ಸಾಧ್ಯ. ವೈರಾಗ್ಯ ಮತ್ತು ಬ್ರಹ್ಮಚರ್ಯೆಗಳು ಅಸಾಧಾರಣ ಶಕ್ತಿಯನ್ನು ಕೊಡುತ್ತವೆ ಎಂಬ ನಂಬಿಕೆ, ಸಾಧುಗಳನ್ನು ಒಟ್ಟುಗೂಡಿಸಿ ಹಿಂದೂಗಳ ಸಾಮಾಜಿಕ ತಳಪಾಯವನ್ನು ವಿಸ್ತರಿಸಲು ಕಾರಣವಾಯಿತು. ಹಿಂದೂ ರಾಷ್ಟ್ರೀಯತೆಯನ್ನು ಪ್ರತಿಪಾದಿಸುವ ಸಂಸ್ಥೆಯಾಗಿ ವಿಹಿಂಪವು ಅನು ಪಮವಾದ ರೀತಿಯಲ್ಲಿ ಕಾರ್ಯಾಚರಣೆ

ಸಾಮೂಹಿಕ ಚಳುವಳಿಗಳಲ್ಲಿ ಸಾಧುಗಳ ಭಾಗವಹಿಸುವಿಕೆಯು ವಿಹಿಂಪದ ಸಾಮಾಜಿಕ ಮಾನ್ಯತೆ ಹೆಚ್ಚಿಸಿ, ತನ್ಮೂಲಕ ಅದರ ಕಾರ್ಯಕ್ರಮಗಳಿಗೆ ವಿದ್ಯುದ್ಬಲ ತಂದುಕೊಟ್ಟಿತು. ವಿಹಿಂಪವು ತನ್ನ ಪ್ರಾಪಂಚಿಕ ನಿಲುವನ್ನು ಸೂತ್ರೀಕರಿಸಲು ಮತ್ತು ಸ್ಪಷ್ಟಪಡಿಸಲು ಸ್ಥಾಪಿಸಿದ ಸಾಮಾಜಿಕ ಸಭೆಗಳಲ್ಲಿ ಮತ್ತು ಸಂಘಗಳಲ್ಲಿ ಸಾಧುಗಳೇ ಒಂದು ವರ್ಗವಾಗಿ ರಾಜಕೀಯವಾಗಿ ಕ್ರಿಯಾಶಕ್ತರಾದರು. ಮಾರ್ಗದರ್ಶಕ ಮಂಡಲ, ಧರ್ಮಸಂಸದ್ ಮತ್ತು ಸಂತಸಮ್ಮೇಳನ್ ನಂತಹ ವಿವಿಧ ಸಭೆಗಳು ವಿಹಿಂಪದ ರಾಜಕೀಯಕ್ಕೆ ಸೈದ್ಧಾಂತಿಕ ಸಮರ್ಥನೆ ಕೊಡುವ ವೇದಿಕೆಗಳಾದವು. ಆ ಮೂಲಕ ಭಾರತದಲ್ಲಿ ರಾಜಕೀಯ ಶಕ್ತಿ ಕೇಂದ್ರಗಳಾದವು. ಇವು ಒತ್ತಡ ಗುಂಪುಗಳಾಗಿ ಕಾರ್ಯ ನಿರ್ವಹಿಸಿ ಸಾಮಾಜಿಕ ನಂಬಿಕೆಗಳ ಮೇಲೆ ಪ್ರಭಾವ ಬೀರಿ ವಿಹಿಂಪ-ಭಾಜಪಗಳಿಗೆ ಬೆಂಬಲಗಳಿಸಿಕೊಟ್ಟವು.

ನಡೆಸಿ ಸಾಧುಗಳು ಧಾರ್ಮಿಕವಲ್ಲದ ವೇದಿಕೆಗಳಲ್ಲಿ ಭಾಗವಹಿಸುವುದನ್ನು ಪ್ರಚುರಪಡಿಸಿತು.

ಹಾಗಾಗಿ ಸಾಮೂಹಿಕ ಚಳುವಳಿಗಳಲ್ಲಿ ಸಾಧುಗಳ ಭಾಗವಹಿಸುವಿಕೆಯು ವಿಹಿಂಪದ ಸಾಮಾಜಿಕ ಮಾನ್ಯತೆ ಹೆಚ್ಚಿಸಿ, ತನ್ಮೂಲಕ ಅದರ ಕಾರ್ಯಕ್ರಮಗಳಿಗೆ ವಿದ್ಯುದ್ಬಲ ತಂದುಕೊಟ್ಟಿತು. ವಿಹಿಂಪವು ತನ್ನ ಪ್ರಾಪಂಚಿಕ ನಿಲುವನ್ನು ಸೂತ್ರೀಕರಿಸಲು ಮತ್ತು ಸ್ಪಷ್ಟಪಡಿಸಲು ಸ್ಥಾಪಿಸಿದ ಸಾಮಾಜಿಕ ಸಭೆಗಳಲ್ಲಿ ಮತ್ತು ಸಂಘಗಳಲ್ಲಿ ಸಾಧುಗಳೇ ಒಂದು ವರ್ಗವಾಗಿ ರಾಜಕೀಯವಾಗಿ ಕ್ರಿಯಾಶಕ್ತರಾದರು. ಮಾರ್ಗದರ್ಶಕ ಮಂಡಲ, ಧರ್ಮಸಂಸದ್ ಮತ್ತು ಸಂತ ಸಮ್ಮೇಳನ್ ನಂತಹ ವಿವಿಧ ಸಭೆಗಳು ವಿಹಿಂಪದ ರಾಜಕೀಯಕ್ಕೆ ಸೈದ್ಧಾಂತಿಕ ಸಮರ್ಥನೆ ಕೊಡುವ ವೇದಿಕೆಗಳಾದವು. ಆ ಮೂಲಕ ಭಾರತದಲ್ಲಿ ರಾಜಕೀಯ ಶಕ್ತಿ ಕೇಂದ್ರಗಳಾದವು. ಇವು ಒತ್ತಡ ಗುಂಪುಗಳಾಗಿ ಕಾರ್ಯ ನಿರ್ವಹಿಸಿ ಸಾಮಾಜಿಕ ನಂಬಿಕೆಗಳ ಮೇಲೆ ಪ್ರಭಾವ ಬೀರಿ ವಿಹಿಂಪ-ಭಾಜಪಗಳಿಗೆ ಬೆಂಬಲಗಳಿಸಿಕೊಟ್ಟವು.

ಇಲ್ಲಿ ಗಮನಿಸಬೇಕಾದದ್ದು, ಸಾಧುಗಳು ಮಾರ್ಗದರ್ಶಕ ಮಂಡಲ ಮತ್ತು ಧರ್ಮ ಸಂಸದ್‌ಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ವಿಹಿಂಪದ ಚಟುವಟಿಕೆಯನ್ನು ಮತ್ತು ಹಿಂದೂ ರಾಷ್ಟ್ರೀಯತಾ ಯೋಜನೆಯನ್ನು ನ್ಯಾಯ ಬದ್ಧವಾಗಿಸಿದವು. ಅದೂ ಅಲ್ಲದೆ ಶಾಸನಬದ್ಧವಾಗಿ ಸ್ಥಾಪಿತವಾದ ಸಂಸದೀಯ ಸಂಸ್ಥೆಗಳು ಮತ್ತು ಧಾರ್ಮಿಕ ನಂಬಿಕೆಗಳ ಮಧ್ಯೆ ಘರ್ಷಣೆ ಉಂಟುಮಾಡಿ, ತಮ್ಮ ಮಾರ್ಗದರ್ಶಕ ಮಂಡಲ ಹಾಗೂ ಧರ್ಮ ಸಂಸದ್‌ಗಳ ಅಧಿಕಾರ ವ್ಯಾಪ್ತಿಯನ್ನು ನ್ಯಾಯದ ಕಟ್ಟುಪಾಡಿಗಿಂತ ಎತ್ತರಕ್ಕೆ ಏರಿಸಿದರು.

ಪರಾವರ್ತನ ಅಥವಾ 'ಪುನರ್ ಪರಿವರ್ತನೆ':

ಮತಾಂತರವನ್ನು ಕಟ್ಟುನಿಟ್ಟಾಗಿ ನಿಷೇಧಿಸಿದ್ದ ಸನಾತನ ಧರ್ಮದ ಸಿದ್ಧಾಂತಕ್ಕೆದುರಾಗಿ ಆರ್ಯ ಸಮಾಜದ ಮೇಲ್ಪಂಕ್ತಿಯನ್ನನುಸರಿಸಿ ವಿಹಿಂಪವು ಪುನರ್ ಮಂತಾತರವನ್ನು ಜಾಗೃತಗೊಳಿಸಿತು. ಆದರೂ ಮತಾಂತರದ ಕಾರ್ಯಕ್ರಮವನ್ನು ಆರ್ಯಸಮಾಜವು ಸೌಮ್ಯೋಕ್ತಿಯಿಂದ ಶುದ್ಧೀಕರಣ[6] ಎಂದು ಹೆಸರಿಟ್ಟು 19ನೇ ಶತಮಾನದ ಕೊನೆಯಲ್ಲಿ ಆರಂಭಿಸಿತು. ಇದನ್ನು ಅನುಸರಿಸಿ ವಿ.ಹಿಂ.ಪವು ಮತಾಂತರಕ್ಕೆ ಮುಂದಾಯಿತು. ವಿಶ್ವ ಹಿಂದೂ ಪರಿಷತ್ ಅದನ್ನು ಶುದ್ಧೀಕರಣ ಎನ್ನುವುದರ ಬದಲು ಪರಾವರ್ತನ (ಬದಲಾವಣೆ ಅಥವಾ ಪುನರ್ ಮತಾಂತರದ ಸೂಚನೆ) ಎಂದು ಹೆಸರಿಸಿ ಈ ಕೆಲಸವನ್ನು ವ್ಯಾಪಕವಾಗಿ ಮುಂದುವರೆಸಿತು. ಹೀಗೆ ಪರಾವರ್ತನ ಎಂದರೆ ಬರಿ ಪುನರ್ ಮತಾಂತರ ಮಾತ್ರವೇ ಆಗಿರದೆ, ಸಂಘದ ತೆಕ್ಕೆಗೆ ಬುಡಕಟ್ಟು ಜನರನ್ನೂ ಸೇರಿಸಿಕೊಳ್ಳುವುದೂ ಆಯಿತು. ವಿಹಿಂಪವು ಈ ರೀತಿಯಲ್ಲಿ ಈ ಮತಾಂತರ ವನ್ನು ನ್ಯಾಯ ಸಮ್ಮತವಾಗಿಸಲು ಪ್ರಯತ್ನ ಪಟ್ಟು, ಜಾತಿ ಯಲ್ಲಿ ಹುಟ್ಟುವಿಕೆಯೇ ಧರ್ಮಕ್ಕೆ ಆಧಾರ ಎಂಬ ಹಿಂದೂ ನಂಬಿಕೆಯನ್ನು ಸಡಿಲಿಸಿ ಶುದ್ಧಿಕರಣ ಹಾಗೂ ನೇರ ಸೇರುವಿಕೆಗೆ ಅವಕಾಶ ನೀಡಿತು. ವಿಹಿಂಪದ ಮತಾಂತರದ ನಿಲುವು ಏಕ ಪಕ್ಷೀಯವಾಗಿತ್ತು.

ಕಾರಣವೇನೆಂದರೆ ಅದು ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರವಾಗುವುದನ್ನು ಕಟುವಾಗಿ ಟೀಕಿಸಿ, ವಿರುದ್ಧವಾಗಿ ಪ್ರಚಾರ ಮಾಡಿದ್ದೇ ಅಲ್ಲದೇ, ಇದನ್ನು ತಡೆಗಟ್ಟಲು ಸರ್ಕಾರದ ಮಧ್ಯಸ್ಥಿಕೆಯನ್ನೂ ಯಾಚಿಸಿತು. ವಿಹಿಂಪ-ಆರ್‌ಎಸ್‌ಎಸ್‌ಗಳ ಪ್ರಚಾರದಿಂದಲೇ ರಾಜಸ್ಥಾನ ಮತ್ತು ಗುಜರಾತ್‌ಗಳು ಕಾನೂನು ಮಾಡಿ ಮತಾಂತರವನ್ನು ನಿಷೇಧಿಸಿವೆ. ಅದೇ ಮಾದರಿಯಲ್ಲಿ ಕರ್ನಾಟಕ ಮತ್ತು ತಮಿಳುನಾಡುಗಳ ಮೇಲೂ ಹಾಗೇ ಮಾಡಬೇಕೆಂದು ಒತ್ತಾಯ ಮಾಡುತ್ತಿವೆ.

ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು 'ಹಿಂದೂ'ಗಳನ್ನು ಭಾರತದಲ್ಲಿ ಇನ್ನು ಮೂವತ್ತು ವರ್ಷಗಳಲ್ಲಿ ಅಲ್ಪಸಂಖ್ಯಾತರನ್ನಾಗಿ ಮಾಡಿ, ತಮ್ಮ ಆಳ್ವಿಕೆಯನ್ನು ಇಲ್ಲಿ ಸ್ಥಾಪಿಸಿ, ಹಿಂದೂ ಸಂಸ್ಕೃತಿಯನ್ನು ಪೂರ್ಣ ಧ್ವಂಸ ಮಾಡಬೇಕೆಂದು ಯೋಜಿಸಿವೆ[7] ಎಂದು ವಿ.ಹಿಂ.ಪ. ನಂಬಿಕೊಂಡು ತಮ್ಮ ನಿಲುವಿಗೆ ಬದ್ಧವಾಯಿತು. ಈ ಅನುಮಾನದಿಂದ ವಿಹಿಂಪವು 'ಧರ್ಮ ಪ್ರಸಾರ'ದ ಉದ್ದೇಶಕ್ಕಾಗಿ ಮೂರು ಮುಖ್ಯವಾದ ಧ್ಯೇಯಗಳನ್ನು ಸಿದ್ಧಪಡಿಸಿದೆ. ಅವುಗಳು-ಧಾರ್ಮಿಕ ಮತಾಂತರವನ್ನು ತಡೆಗಟ್ಟುವುದು, ಹಿಂದೂ ಧರ್ಮಕ್ಕೆ 'ಪುನರ್ ಪರಿವರ್ತನೆ' ಮತ್ತು ಸುಭದ್ರವಾದ ಸಂಸ್ಕಾರಗಳನ್ನು ಕಟ್ಟುವುದು[8]. ವಿಹಿಂಪವು ಈ ಕೆಳಕಂಡ ಕಾರ್ಯಕ್ರಮಗಳನ್ನು ತನ್ನ ಸಾಮಾನ್ಯ ಸದಸ್ಯರಿಗೆ ಕಡ್ಡಾಯಗೊಳಿಸಿತು.

1. ಗ್ರಾಮೀಣ ಮಟ್ಟದಲ್ಲಿ ಒಂದು ಭದ್ರವಾದ ಹಿಂದೂ ಸಂಸ್ಥೆಯನ್ನು ಕಟ್ಟುವುದು.
2. ಸಾಂಸ್ಕೃತಿಕ ಜಾಗೃತಿಗಾಗಿ ಮೌಲ್ಯಾಧಾರಿತ ಚಳುವಳಿ.
3. ಸಾಮಾನ್ಯ ಜನರಿಗೆ ಕ್ಷೇಮಾಭ್ಯುದಯ ಸೇವೆಯನ್ನು ವಿಸ್ತರಿಸುವುದು.
4. ಸಾಮಾಜಿಕ ಸಾಮರಸ್ಯಕ್ಕಾಗಿ ವ್ಯಾಪಕ ಪ್ರಚಾರ.
5. ಹುಸಿ ಪ್ರಚಾರಕರು, ಅಧಾರ್ಮಿಕ ಮೋಸಗಾರರು

ಮತ್ತು ಅವರು ಒಡ್ಡುವ ಆಮಿಷಗಳ ಬಗ್ಗೆ ಜನರನ್ನು ಎಚ್ಚರಿಸುವುದು.

ರಾಮ ಮಂದಿರದ ಸಮಸ್ಯೆಯೊಡನೆ ವಿಹಿಂಪವು ಮತಾಂತರ ಸಮಸ್ಯೆಯನ್ನೂ ಎತ್ತಿಹಿಡಿದು, ಅಲ್ಪ ಸಂಖ್ಯಾತರ ಮೇಲೆ ದಬ್ಬಾಳಿಕೆ ನಡೆಸುತ್ತಲೇ ಈ ಬಗ್ಗೆ ದೇಶಾದ್ಯಂತ ಒಂದು ವ್ಯಾಪಕ ಚಳುವಳಿಯನ್ನು ಹಮ್ಮಿಕೊಂಡಿತು. ಈ ವಿಶಿಷ್ಟ ಟೀಕೆಯು ಕಾಂಗ್ರೆಸ್ ಪಕ್ಷಹಾಗೂ ಸೋನಿಯಾ ಗಾಂಧಿಯವರನ್ನು ಕುರಿತದ್ದೂ ಆಗಿತ್ತು.

ಉತ್ತರ ಪ್ರದೇಶದ ಬದಯೂನ್‌ನಲ್ಲಿ ಅಶೋಕ್ ಸಿಂಘಾಲ್ ತಮ್ಮ ಭಾಷಣದಲ್ಲಿ ಹೀಗೆ ಘೋಷಿಸಿದರು. "ದೇಶದಲ್ಲಿ ಒಬ್ಬನಾದರೂ ಹಿಂದೂವಲ್ಲದವನು ಉಳಿದಿರುವುದಿಲ್ಲ. ಒತ್ತಾಯ ಪೂರ್ವಕವಾಗಿ ಮತಾಂತರಗೊಳಿಸಲ್ಪಟ್ಟ ಎಲ್ಲ ಹಿಂದುಯೇತರರನ್ನು ವಿಹಿಂಪವು ಹಿಂದುಗಳನ್ನಾಗಿ ಮಾಡುವುದು. ಇದು ವಿಹಿಂಪದ ಧ್ಯೇಯ"[10]. 1977ರಲ್ಲಿ ಅರುಣಾಚಲ ಪ್ರದೇಶದಲ್ಲಿ ಒಬ್ಬನಾದರೂ ಕ್ರೈಸ್ತನಿರಲಿಲ್ಲ. ಆದರೆ, ಈಗ ಆ ರಾಜ್ಯದಲ್ಲಿ 60,000 ಕ್ರೈಸ್ತರಿದ್ದಾರೆ[11] ಎಂದು ಈ ಬಗ್ಗೆ ಗಾಬರಿ ವ್ಯಕ್ತಪಡಿಸಿದರು. ಭಾರತದ ಕ್ರೈಸ್ತ ಪಾದ್ರಿಗಳಿಗೆ ಸೋನಿಯಾ ಗಾಂಧಿ ಬೆಂಬಲ ಕೊಡುತ್ತಿರುವುದಾಗಿ ಆಪಾದಿಸಿ, ಅವರ ಪ್ರಕಾರ ಈ ಮತಾಂತರ ಕಾರ್ಯಕ್ಕಾಗಿ ಹೊರದೇಶಗಳಿಂದ ಅವರಿಗೆ 14,000 ಮಿಲಿಯನ್ ರೂಪಾಯಿ ವಾರ್ಷಿಕವಾಗಿ ಬರುತ್ತಿದೆ[12].

ಹಿಂದೂಗಳ ಸಂಖ್ಯೆ ಇಳಿಮುಖವಾಗುತ್ತಿರುವುದನ್ನು ತಡೆಯಲು, ಹೊರಗಿನ ಮುಸ್ಲಿಮರು ಭಾರತಕ್ಕೆ ನುಸುಳುವುದನ್ನು ತಪ್ಪಿಸಲು ಮತ್ತು ಈ ಧಾರ್ಮಿಕ ಪ್ರಚಾರ ಕಾರ್ಯದ ವಿರುದ್ಧ ಹೋರಾಡಲು ವಿಹಿಂಪವು ನಾಲ್ಕು ವರ್ಷಗಳ ದೊಡ್ಡ ಯೋಜನೆ ಒಂದನ್ನು ಹಾಕಿಕೊಂಡಿದೆ ಎಂದು ಸಿಂಘಾಲ್ ಸೂಚನೆ ಕೊಟ್ಟರು. ಅದರ ಪ್ರಕಾರ 2,500 ಹಿಂದೂಗಳು ವಿವಿಧ ಜಿಲ್ಲೆಗಳಿಗೆ ಹೋಗಿ, ಈ ಕ್ರೈಸ್ತ ಮಿಷನರಿಗಳಿಂದ ಆಗುವ ಬೆದರಿಕೆಯನ್ನು ಎದುರಿಸುವ ಉಪಯೋಗಕ್ಕಾಗಿ 2,000ರೂಪಾಯಿ ವಂತಿಗೆ ಕೊಡಬಲ್ಲ 1.5 ಮಿಲಿಯನ್ ಬೆಂಬಲಿಗರನ್ನು ಗೊತ್ತು ಮಾಡುವುದು[13]. ವಿಹಿಂಪ ಮತ್ತು ಭಜರಂಗದಳ ಎರಡೂ ಒಟ್ಟುಗೂಡಿ, ದೇಶಾದ್ಯಂತ ಹಮ್ಮಿಕೊಂಡಿರುವ ಕ್ರೈಸ್ತಮತ ವಿರೋಧಿ–ಶಾಬ್ದಿಕ ಮತ್ತು ದೈಹಿಕ ಆಂದೋಳನವು ಮತ್ತು ಇತ್ತೀಚಿನ ದಿನಗಳಲ್ಲಿ ಭಜರಂಗದಳದ ಸದಸ್ಯರಿಗೆ 'ರಾಷ್ಟ್ರ ವಿರೋಧಿ'ಗಳನ್ನು ಎದುರಿಸಲು ಕೊಟ್ಟ ಮದ್ದು–ಗುಂಡು ಉಡಾಯಿಸುವ ತಯಾರಿಯೂ ಇದರ ಒಂದು ಭಾಗ ಎಂದು ತೋರುತ್ತದೆ.

ವಿಹಿಂಪ ಮತ್ತು ಭಜರಂಗದಳ ಎರಡೂ ಒಟ್ಟುಗೂಡಿ, ದೇಶಾದ್ಯಂತ ಹಮ್ಮಿಕೊಂಡಿರುವ ಕ್ರೈಸ್ತಮತ ವಿರೋಧಿ – ಶಾಬ್ದಿಕ ಮತ್ತು ದೈಹಿಕ ಆಂದೋಳನವು ಮತ್ತು ಇತ್ತೀಚಿನ ದಿನಗಳಲ್ಲಿ ಭಜರಂಗದಳದ ಸದಸ್ಯರಿಗೆ 'ರಾಷ್ಟ್ರ ವಿರೋಧಿ'ಗಳನ್ನು ಎದುರಿಸಲು ಕೊಟ್ಟ ಮದ್ದು–ಗುಂಡು ಉಡಾಯಿಸುವ ತಯಾರಿಯೂ ಇದರ ಒಂದು ಭಾಗ ಎಂದು ತೋರುತ್ತದೆ. ಪುನರ್ ಪರಿವರ್ತನೆಯ ಕಲ್ಪನೆಯು ಹಿಂದೂ ಧರ್ಮವನ್ನು ಮತಾಂತರ ಪಡಿಸುವ ಧರ್ಮವನ್ನಾಗಿ ರೂಪಿಸಿತು. ಇದರಿಂದ ಬುಡಕಟ್ಟು ಜನರನ್ನು ಹಿಂದೂ ಧರ್ಮದ ನಂಬಿಕೆಗೆ ಒಳಪಡಿಸುವುದು ಮತ್ತು ಕ್ರೈಸ್ತ ಧರ್ಮದ ವಿರುದ್ಧವಾಗಿ ಎತ್ತಿಕಟ್ಟಲು ಪ್ರಯತ್ನಿಸಿತು.

ಪುನರ್ ಪರಿವರ್ತನೆಯ ಕಲ್ಪನೆಯು ಹಿಂದೂ ಧರ್ಮವನ್ನು ಮತಾಂತರ ಪಡಿಸುವ ಧರ್ಮವನ್ನಾಗಿ ರೂಪಿಸಿತು. ಇದರಿಂದ ಬುಡಕಟ್ಟು ಜನರನ್ನು ಹಿಂದೂ ಧರ್ಮದ ನಂಬಿಕೆಗೆ ಒಳಪಡಿಸುವುದು ಮತ್ತು ಕ್ರೈಸ್ತ ಧರ್ಮದ ವಿರುದ್ಧವಾಗಿ ಎತ್ತಿಕಟ್ಟಲು ಪ್ರಯತ್ನಿಸಿತು. ಪರಾವರ್ತನವು ಮಿಷನರಿಗಳ ಚಟುವಟಿಕೆಗಳನ್ನು ತಡೆಹಿಡಿಯುವುದು ಮಾತ್ರವಲ್ಲದೇ, ದಲಿತರು ಮತ್ತು ಬುಡಕಟ್ಟು ಜನರು ಕ್ರೈಸ್ತ ಮತ ಅಥವಾ ಇಸ್ಲಾಂ ಮತಕ್ಕೆ ಮತಾಂತರಗೊಳ್ಳುವುದನ್ನು ತಡೆಯಲು ಮತ್ತು ವಿಹಿಂಪದ ಬಲವರ್ಧನೆಗೆ ಸಹಾಯವಾಯಿತು. ಇದನ್ನು ಸಾಮೂಹಿಕವಾಗಿ ಸ್ವೀಕಾರಯೋಗ್ಯವನ್ನಾಗಿ ಮಾಡಲು ವಿಹಿಂಪವು ಪರಾವರ್ತನವನ್ನು 'ಪುನರ್ ಮತಾಂತರ ಪಡೆದ ಹಿಂದೂಗಳು (ಕ್ರೈಸ್ತರು ಮತ್ತು ಮುಸ್ಲಿಮರಾಗಿದ್ದವರು) ತಮ್ಮ ಹಿಂದೂ ಪೂರ್ವಜರ[14] ದಿವ್ಯ ಪ್ರಭೆಯನ್ನು ಜಾಗೃತಗೊಳಿಸುವಿಕೆ ಎಂದು ಕರೆದರು.

ಹಿಂದೂಗಳಾದ ಮೇಲೆ ಅವರು ಮತ್ತೆ ಇತರ ಹಿಂದೂಗಳನ್ನು ತಮ್ಮ ಪ್ರಾಮಾಣಿಕ ಸಹೋದರರು[15] ಎಂದು ನಂಬಲು ಪ್ರಾರಂಭಿಸಿದರು. ಈ ಪುನರ್ ಮತಾಂತರ ಹೊಂದಿದ ಕುಟುಂಬಗಳಲ್ಲಿ ಹಿಂದೂ ಸಿದ್ಧಾಂತಗಳು, ಮೌಲ್ಯಗಳು, ಪ್ರಾರ್ಥನಾ ಸ್ಥಳಗಳು, ಹಿಂದೂ ಪವಿತ್ರ ಗ್ರಂಥಗಳು ಮುಂತಾದವುಗಳಲ್ಲಿ ಗೌರವ ಭಾವನೆ ಜಾಗೃತವಾಗುತ್ತದೆ. ಆದ ಕಾರಣ, ಮತೀಯ ಗಲಭೆಗಳನ್ನು, ಗೋಹತ್ಯೆಯನ್ನು ತಡೆಯಲು ಸಾಧ್ಯವಾಗುತ್ತದೆ ಮತ್ತು ದೇವಸ್ಥಾನಗಳನ್ನು ಕಾಪಾಡಲು ಸುಲಭವಾಗುತ್ತದೆ[16]. ಆದ್ದರಿಂದ ಪರಾವರ್ತನವನ್ನು ಬರಿದೆ ಹಿಂದೂಗಳನ್ನಾಗಿಸುವಿಕೆ ಮಾತ್ರವೇ ಅಲ್ಲದೆ, ಸಾಮಾಜಿಕ–ರಾಜಕೀಯ ವ್ಯವಸ್ಥೆ ಮತ್ತು ನಿಯಂತ್ರಣಕ್ಕೊಂದು ಸಾಧನವೆಂದು ತಿಳಿಯುತ್ತದೆ[17].

1970ರ ಸರಿಸುಮಾರಿನಲ್ಲಿ ಉದಯಪುರ, ಪಾಲಿ, ಬಿಲ್ವಾರ ಮತ್ತು ಅಜ್ಮೀರ್ ಜಿಲ್ಲೆಗಳಲ್ಲಿ ಹರಡಿಕೊಂಡಿದ್ದ ಚೀಟಾ–ಮೀರಟ್ ರಜಪೂತ ಮುಸ್ಲಿಮರ ಬೃಹತ್ ಪ್ರಮಾಣದ ಮತಾಂತರಕ್ಕೆ ವಿ.ಹಿಂ.ಪ. ಆಯೋಜಿಸಿತು. ವಿಹಿಂಪವು 1992–93ರಲ್ಲಿ ಗುಜರಾತ್ ಒಂದರಲ್ಲೇ ಸ್ವಾಭಿಮಾನ್ (Self Respect) ಮತ್ತು ಸಲಾಮತಿ (Security) ಯ ವಾಗ್ದಾನದ ಮೇಲೆ 200ಮೀರ್ ಮುಸ್ಲಿಂರನ್ನು ಹಿಂದೂ ಧರ್ಮಕ್ಕೆ ಮತಾಂತರಿಸಿತು. (Sikand and Katju 1994). 1993ರಲ್ಲಿ ಎಪ್ಪತ್ತು ಮೀರ್ ಮುಸ್ಲಿಂ ಕುಟುಂಬಗಳು ಪೂರ್ಣ ಹಿಂದೂ ಧರ್ಮಾವಲಂಬಿಗಳಾದರು[18].

ಈ ಮತಾಂತರಗಳು ವೈಯಕ್ತಿಕ ಅಥವಾ ಕುಟುಂಬ ಮತಾಂತರಗಳಲ್ಲ. ನನಗೆ ತಿಳಿದ ಪ್ರಕಾರ ಒಬ್ಬ ವ್ಯಕ್ತಿಯನ್ನಾಗಲಿ ಅಥವಾ ಒಂದು ಅಥವಾ ಎರಡು ಕುಟುಂಬಗಳನ್ನಾಗಲಿ ಮತಾಂತರಿಸುವುದು ಸಾಧಾರಣವಾಗಿ ಕಷ್ಟ. ಆ ಕಾರಣದಿಂದಲೆ ಪಂಗಡಗಳನ್ನು ಗುರುತಿಸಿ ಅವನ್ನು ಹಿಂದಕ್ಕೆ ಕರೆದುಕೊಳ್ಳಲು[19] ಪ್ರಯತ್ನ ಮಾಡುವುದು. ವಿಹಿಂಪದ ತಳಹದಿ ಎಲ್ಲಿ ಭದ್ರವಾಗಿದೆಯೋ ಮತ್ತು ಸಂಸ್ಥಾನ ಅಥವಾ ಸ್ಥಳೀಯ ರಾಜಕೀಯ ಇಂತಹ ಚಟುವಟಿಕೆಯನ್ನು ಬೆಂಬಲಿಸುವುದೋ ಅಂತಹ ನಿರ್ಜನ ಗುಡ್ಡಗಾಡು ಪ್ರದೇಶಗಳಲ್ಲಿ ಪರಾವರ್ತನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು.

ಇಂದು ಮೋರೆ ಸಲಾಂ ಮುಸ್ಲಿಮರು (More Salaam) ಹಿಂದೂ ಧರ್ಮಕ್ಕೆ ತಿರುಗಿ ವಾಪಸಾಗಿದ್ದಾರೆ

ಮತ್ತು ನಾಳೆ ಪೂರ್ಣ ಮುಸ್ಲಿಂ ಜನಾಂಗವೆ ಅಂತಹುದೇ ಹೆಜ್ಜೆ ಇಡುವರು. ಏಕೆಂದರೆ 'ಅದರ ಪೂರ್ವಜರು ಹಿಂದೂಗಳು' ಎಂಬ ಮನವರಿಕೆ ಅದಕ್ಕೆ ಬರುತ್ತದೆ. ಒಬ್ಬ ವಿಹಿಂಪದ ಕಾರ್ಯಕರ್ತನ ಹೇಳಿಕೆಯ ಪ್ರಕಾರ, ನಾವು ಮುಸ್ಲಿಮರನ್ನು ಒಟ್ಟುಗೂಡಿಸುತ್ತೇವೆ ಮತ್ತು ಅವರ ಮುಂದೆ ಕೆಲವು ಕಾರ್ಯಕ್ರಮಗಳನ್ನು ಇಡುತ್ತೇವೆ. ಇದರಿಂದ ಅವರು ತಮ್ಮ ಪೂರ್ವಜರು ಯಾರು ಮತ್ತು ಅವರು ಏಕೆ ಹಿಂದೂ ಧರ್ಮವನ್ನು ತ್ಯಜಿಸಿದರು ಎಂಬುದನ್ನು ತಿಳಿಯುತ್ತಾರೆ; ನಾವು ಅವರಿಗೆ ಹಿಂದೂ ಧರ್ಮಕ್ಕೆ ವಾಪಸ್ಸಾಗಬಹುದೆಂದೂ ಹೇಳುತ್ತೇವೆ[20].

ಧರ್ಮ ಮತ್ತು ಪೂಜೆ:

ವಿಹಿಂಪವು ಧಾರ್ಮಿಕ ಪ್ರಜ್ಞೆಯನ್ನು ಪ್ರಯತ್ನಪೂರ್ವಕವಾಗಿ ಮನಸ್ಸಿನಲ್ಲಿ ನಿಲ್ಲಿಸುವ ಕೆಲಸವನ್ನು ಒಂದು ಸಾಂಘಿಕ ಜವಾಬ್ದಾರಿಯನ್ನಾಗಿ ಮಾಡಿದೆ. ಧಾರ್ಮಿಕ ಮಹತ್ವ (ಮೌಲ್ಯಗಳನ್ನು) ಮನಸ್ಸಿಗೆ ನಾಟಿಸುವುದು ಮತೀಯ ಸಂಸ್ಥೆಗಳ ಕಾರ್ಯವಾಗುತ್ತದೆ. ಧಾರ್ಮಿಕ ಜಾಗೃತಿಯ ಕಾರ್ಯವನ್ನು ಧಾರ್ಮಿಕ ನಾಯಕರು (ಗುರುಗಳು) ನೆರವೇರಿಸಬೇಕು. ಸ್ವಯಂ ಘೋಷಿತ ಧಾರ್ಮಿಕ ನಾಯಕತ್ವದ ಜವಾಬ್ದಾರಿಯನ್ನು ವಿಹಿಂಪವು ತಾನೇ ವಹಿಸಿಕೊಳ್ಳುತ್ತದೆ. ಸಂಸ್ಕಾರಗಳು ಮುಂಚೆ ಪಿತೃಪ್ರಧಾನ ಕರ್ತವ್ಯವಾಗಿ ತಂದೆಯಿಂದ ಬೋಧಿಸಲ್ಪಡುತ್ತಿದ್ದುದು ಈಗ ಸಾಮಾಜಿಕ ಸಂಸ್ಥೆಯಿಂದ ಅಂಗೀಕರಿಸಲ್ಪಟ್ಟವು. ಸ್ಪಷ್ಟವಾದ ಅರ್ಥವೇನೆಂದರೆ ಕುಟುಂಬಗಳು ಧಾರ್ಮಿಕ ಮೌಲ್ಯಗಳ ಬಗ್ಗೆ ತಮ್ಮ ಮಕ್ಕಳಿಗೆ ಸಾಕಷ್ಟು ಸ್ಫೂರ್ತಿ ನೀಡುತ್ತಿಲ್ಲ. ನೀಡಲು ಆಗುವುದೂ ಇಲ್ಲ. ಆದ್ದರಿಂದ ಈ ಜವಾಬ್ದಾರಿ ಯನ್ನು ಸಂಸ್ಥೆಯು ನಿಭಾಯಿಸಬೇಕು. ಮತ್ತು ಅವರ ಕಾರ್ಯದಲ್ಲಿ ಕೊರತೆಯಾದದ್ದನ್ನು ಪೂರೈಸಬೇಕು ಎಂದು ಹೇಳಲಾಯಿತು.

ಆದರೆ ವಿಹಿಂಪದವರ ಭಾವನೆಯಲ್ಲಿ 'ಧರ್ಮ' ಎಂದರೆ ಏನು? 'ಧರ್ಮ' ಎಂಬ ಪದವನ್ನು ಅದಲು ಬದಲು ಮಾಡಬಹುದಾಗಿದ್ದು, ವಿಹಿಂಪದ ಪ್ರಕಾರ 'ಮತ' 'ಕರ್ತವ್ಯ' 'ಸದ್ವರ್ತನೆ' ಮತ್ತು 'ವೃತ್ತಿ'. ಧರ್ಮ ಎಂಬ ಪದದ ವಿವಿಧ ರೀತಿಯ ವ್ಯಾಖ್ಯಾನ ಸ್ವಾರಸ್ಯಕರವಾಗಿದೆ. ವಿಹಿಂಪವು ಅದರ ಅರ್ಥಗಳನ್ನು ರಾಜಕೀಯವಾಗಿ ತನ್ನ ಉಪಯೋಗಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಾ ಬದಲಾಗುವ ಸಂದರ್ಭಕ್ಕೆ ತಕ್ಕ ಹಾಗೆ ಬದಲಿಸಬಹುದೆಂಬ ಧರ್ಮದ ಶಾಸ್ತ್ರೀಯ ನಂಬಿಕೆಯನ್ನು ಅಲ್ಲಗೆಳೆಯಿತು.[21] ಶಾಸ್ತ್ರದ ಬಿಗಿ ಕಟ್ಟು-ಕಟ್ಟಳೆಗಳಿಗೆ ಹೆಚ್ಚಿನ ಒತ್ತು ನೀಡಲಿಲ್ಲ.

ಹೀಗಿದ್ದೂ ಏಕರೂಪತೆಯನ್ನು ಸಾಧಿಸಲು ಪ್ರಯತ್ನ ನಡೆಸಿತು. ವಿಹಿಂಪದ ಪುಸ್ತಿಕೆಯೊಂದರಲ್ಲಿ ಜಾತ್ಯತೀತತೆಯು ಪ್ರತಿಯೊಬ್ಬರನ್ನೂ ಕೀಳು ಚಾರ್ವಾಕ ಜೀವನಶೈಲಿಯ ಕಡೆಗೆ ತಳ್ಳುತ್ತಿದೆ ಮತ್ತು 'ಚಾರ್ವಾಕ'ರಿಗೆ ಕರ್ತವ್ಯದ ಮತ್ತು ಮತದ ಮೌಲ್ಯಗಳ ಬಗ್ಗೆ ಕಾಳಜಿ ಇಲ್ಲ[22] ಎಂದು ವಿ.ಹೆಚ್.ಪಿ. ಪ್ರತಿಪಾದಿಸಿದೆ. ನಮ್ಮ ನಡತೆಯು ಧರ್ಮಕ್ಕನುಸಾರ ಇಲ್ಲದಿದ್ದರೆ ಅದು ನಮ್ಮ ನಾಶಕ್ಕೆ ದಾರಿ ಮಾಡಿಕೊಡುತ್ತದೆ ಎಂದು ಎಚ್ಚರಿಕೆ ನೀಡಿತು. (ಪು. 14).ಧರ್ಮವನ್ನು ತ್ಯಜಿಸಿ ಜಾತ್ಯತೀತತೆಯನ್ನು ಆಲಂಗಿಸುವುದು ಆರ್ಯಧರ್ಮವಲ್ಲ. ಆದರೆ ದಾಸ್ಯ ಧರ್ಮ (ರಾಕ್ಷಸ ಧರ್ಮ ಪು.16) ಮಹಾಭಾರತವನ್ನು ಪ್ರಸ್ತಾಪಿಸುತ್ತ ಹೇಳುತ್ತದೆ. ಯಾವುದು ರಕ್ಷಿಸುತ್ತದೆಯೊ ಮತ್ತು ಕಾಪಾಡುತ್ತದೆಯೊ ಮತ್ತು ಅಹಿಂಸಾತ್ಮಕವೊ ಅದು ಧರ್ಮ. ಯಾವ ಧರ್ಮವು ಇತರ ಧರ್ಮಗಳಿಗೆ ಅಡ್ಡಿಪಡಿಸುತ್ತದೆಯೋ

'ಧರ್ಮ' ಎಂಬ ಪದವನ್ನು ಅದಲು ಬದಲು ಮಾಡಬಹುದಾಗಿದ್ದು, ವಿಹಿಂಪದ ಪ್ರಕಾರ 'ಮತ' 'ಕರ್ತವ್ಯ' 'ಸದ್ವರ್ತನೆ' ಮತ್ತು ವೃತ್ತಿ ಧರ್ಮ' ಎಂಬ ಪದದ ವಿವಿಧ ರೀತಿಯ ವ್ಯಾಖ್ಯಾನ ಸ್ವಾರಸ್ಯಕರವಾಗಿದೆ. ವಿಹಿಂಪವು ಅದರ ಅರ್ಥಗಳನ್ನು ರಾಜಕೀಯವಾಗಿ ತನ್ನ ಉಪಯೋಗಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಾ ಬದಲಾಗುವ ಸಂದರ್ಭಕ್ಕೆ ತಕ್ಕ ಹಾಗೆ ಬದಲಿಸಬಹುದೆಂಬ ಧರ್ಮದ ಶಾಸ್ತ್ರೀಯ ನಂಬಿಕೆಯನ್ನು ಅಲ್ಲಗೆಳೆಯಿತು. ಶಾಸ್ತ್ರದ ಬಿಗಿ ಕಟ್ಟು-ಕಟ್ಟಳೆಗಳಿಗೆ ಹೆಚ್ಚಿನ ಒತ್ತು ನೀಡಲಿಲ್ಲ. ಹೀಗಿದ್ದೂ ಏಕರೂಪತೆಯನ್ನು ಸಾಧಿಸಲು ಪ್ರಯತ್ನ ನಡೆಸಿತು.

ಅದು ಧರ್ಮವಲ್ಲ. ಆದರೆ ಕು-ಧರ್ಮ. ಈ ಪ್ರಸ್ತಾಪವು ಶುದ್ಧಾಂಗವಾಗಿ ಕ್ರೈಸ್ತರು ಮತ್ತು ಮುಸ್ಲಿಮರನ್ನೇ ಕುರಿತದ್ದಾಗಿ ಅವರ ಮತಾಂತರ ಚಟುವಟಿಕೆಗೆ ಸಂಬಂಧಿಸಿದೆ.

ಈ ಪುಸ್ತಿಕೆಯಲ್ಲಿ ಮನು ಸ್ಮೃತಿಯನ್ನು ಪ್ರಸ್ತಾಪಿಸಲಾಗಿದೆ. ಅದರಿಂದ ಉದ್ಧರಿಸಲಾದ ಒಂದು ಪದ್ಯದ ಅರ್ಥ-ನಾಶಪಡಿಸಲಾದ ಧರ್ಮವು ಪ್ರತಿಯಾಗಿ ನಾಶವನ್ನೇ ಮಾಡುತ್ತದೆ. ಅದೇ ಕಾಪಾಡಲ್ಪಟ್ಟ ಧರ್ಮವು ಕಾಪಾಡುತ್ತದೆ. ಇದರಿಂದ ಆಗುವ ನಿರ್ಧಾರ ಧರ್ಮದ ನಾಶವು ಜನಗಳ ನಾಶಕ್ಕೆ ದಾರಿಮಾಡಿಕೊಡುತ್ತದೆ ಮತ್ತು ಸಮಾಜದಲ್ಲಿ ಅನಾಯಕತ್ವ-ಈಗಿನ ನಮ್ಮ ದೇಶದ ಪರಿಸ್ಥಿತಿಯಂತೆ (ಪು. 17). ಈ ಹೇಳಿಕೆಯು ಭಾರತ ರಾಷ್ಟ್ರವನ್ನು ಮತ್ತು ಅದರ ಜಾತ್ಯತೀತತೆಯ ನೀತಿಯನ್ನು ಕುರಿತದ್ದಾಗಿದೆ.

ಮುಂದೆ ಶ್ರೀಮದ್ ಭಾಗವತದಿಂದ ಉದ್ಧರಿಸಿ ಅದು ತಿಳಿ ಹೇಳುವ-ಧರ್ಮವು ಭಗವಂತನ ಸೃಷ್ಟಿ. ಆದ್ದರಿಂದ ಅದು ಹೇಗೆ ಜನ ಕಲ್ಯಾಣ ಮಾಡದೇ ಇರಲು ಸಾಧ್ಯ? (ಪು.17) ಸ್ವಾರಸ್ಯವೆಂದರೆ, ಪುಸ್ತಿಕೆಯಲ್ಲಿ ಈ ಪ್ರಬಂಧವು ಹಿಂದೂ ಧರ್ಮವೊಂದೇ ಧರ್ಮ ಎಂದು ನಿರ್ಧರಿಸುತ್ತದೆ. ವಸ್ತುತಃ ಹಿಂದೂ ಧರ್ಮವೊಂದೇ ಧರ್ಮದ ಸ್ಥಾನಕ್ಕೆ ಅರ್ಹತೆ ಪಡೆಯುವುದೆಂದು ವಿವೇಕಾನಂದರು ಹೇಳಿದರು ಎಂದು ಉದ್ಧರಿಸುತ್ತದೆ (ಪು. 18).

ವಿ.ಹೆಚ್.ಪಿ. ಜಾತ್ಯಾತೀತ ರಾಷ್ಟ್ರೀಯತಾ ಸಿದ್ಧಾಂತದ ವಿರುದ್ಧವಾಗಿ ಪ್ರಯೋಗಿಸಲು ಒಂದು ಸಾಧನವನ್ನಾಗಿ ಧರ್ಮಕ್ಕೆ ಹೊಸ ರೂಪ ನೀಡಿತು. ಇದು ಈ ಧರ್ಮದ ತಂತ್ರಜ್ಞಾನೀ ವ್ಯಾಖ್ಯಾನವು ತನ್ನನ್ನೇ ಪರಿವರ್ತಿಸಿಕೊಳ್ಳುತ್ತದೆ ಮತ್ತು ಹಿಂದೂತ್ವದ ಸಂದೇಶವು ಆರ್‌ಎಸ್‌ಎಸ್ ಸಂಸ್ಥೆಯ ಸಾಮಾಜಿಕ ಭದ್ರತೆಯನ್ನು ಹೆಚ್ಚಿಸಲು ಪ್ರಚಾರಕ್ಕೆ ತಕ್ಕಂತೆ ಅರ್ಥ ಪಡೆಯುತ್ತದೆ.

ಧಾರ್ಮಿಕತೆಯ ಬಗ್ಗೆ ಮತ್ತು ಪುರಾತನ ಹಿಂದೂ ಋಷಿಗಳು ಮತ್ತು ಪಂಡಿತರು ಹಿಂದೂ ಧರ್ಮದ ಬಗ್ಗೆ ತಳೆದಿದ್ದ ಹಿಂದಿನ ಒಲವು ಮೆಚ್ಚಿಕೆ ವಿಹಿಂಪದ ತತ್ವ ಚಿಂತನೆಯ ಮುಖ್ಯ ಭಾಗವಾಗಿಲ್ಲ ಎಂಬುದನ್ನು ಗಮನಿಸುವುದು ಸೂಕ್ತ. ಹಾಗೆಂದ ಮಾತ್ರಕ್ಕೆ ವಿಹಿಂಪವು ಹಿಂದೂ ಧರ್ಮದ ಉತ್ಕೃಷ್ಟತೆಯ ಬಗ್ಗೆ ಶ್ರಮಿಸುವುದಿಲ್ಲ ಎಂದು ಅರ್ಥವಲ್ಲ. ಮೇಲಿನ ಚರ್ಚೆಯಂತೆ ಅದಕ್ಕೆ ನಿಜವಾಗಿಯೂ ಕಾಳಜಿಯನ್ನು ಋಜುವಾತುಪಡಿಸಲು ವಿಹಿಂಪದ ಪ್ರಾಪಂಚಿಕ ದರ್ಶನ ರೀತಿಯು ಹಿಂದಿನ ಭಾವನೆಯ ಎತ್ತೆತಲೋ ಸಾಗುವ ಪದ್ಧತಿಯಾದ ಇಂದ್ರಿಯಾತೀತ ಧ್ಯಾನಶೀಲತೆ ಅಥವಾ ಅನುಭಾವದ ಯೋಗೀಯ ಕ್ರಮದ ಹಿಂದೂತ್ವ ಧಾರ್ಮಿಕ ಶ್ರದ್ಧೆಯನ್ನು ಎತ್ತಿಹಿಡಿಯುವುದಿಲ್ಲ.

ವಿಹಿಂಪವು ಈ ಸಮೀಕರಿಸಿಕೊಳ್ಳುವಿಕೆಯಿಂದ ಭಿನ್ನವಾಗುತ್ತದೆ. ಹಾಗಿದ್ದಾಗ್ಯೂ ಅದು ಸಾರ್ವಜನಿಕ ಸಾಮೂಹಿಕ (ಗುಂಪು) ಭಕ್ತಿ ಪ್ರದರ್ಶನಕ್ಕೆ ಮಹತ್ವ ಕೊಡುತ್ತದೆ. ಅದರ ಹಿಂದೂತ್ವದ ಕಾರ್ಯಕ್ರಮಗಳಿಗೆ ಧಾರ್ಮಿಕ ನಂಬಿಕೆಗಳ ಸಾರ್ವಜನಿಕ ಪ್ರದರ್ಶನ ಬಹಳ ಮುಖ್ಯ. ಈ ಭಕ್ತಿಯ ಪ್ರದರ್ಶನವನ್ನು ನಿರ್ಣಾಯಕವನ್ನಾಗಿ ಪರಿಗಣಿಸುತ್ತದೆ, ಏಕೆಂದರೆ ಅದು ಹಿಂದೂಗಳ ದೈಹಿಕ ಶಕ್ತಿಯ ಪ್ರತೀಕವಾಗಿ ಬೆಳೆಯುತ್ತಿರುವ ಜನಾಂಗವನ್ನು ಪ್ರತಿಬಿಂಬಿಸುವುದರಲ್ಲಿ ಸಹಕಾರಿಯಾಗುತ್ತದೆ. ಅಲ್ಲದೆ, ಭಿನ್ನಾಭಿಪ್ರಾಯದ ಜನಾಂಗವನ್ನು ಒಟ್ಟುಗೂಡಿಸುವ ತುರ್ತು ಕಾರ್ಯವನ್ನು ನೆರವೇರಿಸುತ್ತದೆ.

ಇದರಿಂದ ಅರ್ಥವಾಗುವುದೇನೆಂದರೆ, ಸಮರೋತ್ಸಾಹದ ಉಗ್ರ ಮತ್ತು ಮಚೋರಾಮ್[23]ನ ನಿರ್ಮಾಣದಲ್ಲಿ ತೊಡಗಿಸಿಕೊಳ್ಳುವುದು ವಿಹಿಂಪದ ಉದ್ದೇಶವಾಗಿದೆ. ವಿಹಿಂಪದವರ ಕಾರ್ಯಯೋಜನೆಗಳಲ್ಲಿ ತೋರಿಕೆಯ ಭಕ್ತಿಗೆ ಅಗ್ರಮಾನ್ಯತೆ. ಈ ಪ್ರದರ್ಶಕ ಧರ್ಮವು ತನ್ನ ಸ್ವಾರ್ಥಕ್ಕಾಗಿ ಮಾತ್ರವಲ್ಲದೇ ತನ್ನ ಬಲ ಪ್ರದರ್ಶನಕ್ಕೆ ಎಡೆಮಾಡಿಕೊಡುತ್ತದೆ. ವಿಹಿಂಪದವರ ಯೋಜನಾ ಕಾರ್ಯಗಳಲ್ಲಿ ಹಿಂದೂ ಧಾರ್ಮಿಕ ಉತ್ಕೃಷ್ಟತೆಯನ್ನು ಈ ರೀತಿಯಲ್ಲಿ ಕಾಪಾಡಿಕೊಳ್ಳಬೇಕು. ಇದು ಮೂಲ ಬಲದಲ್ಲಿ ಕಾರ್ಯಕರ್ತರು ಮತ್ತು ಎದುರಾಳಿಗಳಲ್ಲಿ ಸ್ವಯಂ ಗ್ರಹಿಕೆಯನ್ನು ವರ್ಧಿಸುತ್ತದೆ. ಎರಡನೆಯ ಮುಖ್ಯ ವೈಶಿಷ್ಟ್ಯವೆಂದರೆ ಸಾಮೂಹಿಕ ಪೂಜೆ (ಆರಾಧನೆ). ವಿಹಿಂಪಕ್ಕೆ ಸಂಖ್ಯಾಬಲ ಬಹುಮುಖ್ಯ.

ವಿಹಿಂಪವನ್ನು ಸೃಜಿಸಿದ ಉದ್ದೇಶವೇ ಸಂಖ್ಯಾಬಲವನ್ನು ಸಮುದ್ರದೋಪಾದಿಯಲ್ಲಿ ಬೆಳೆಸಲು ಇದಕ್ಕೆ ಕಾರಣ ಹಿಂದೂ ಜನಾಂಗವು ತನ್ನದೇ ನಾಡಿನಲ್ಲಿ 'ಅಲ್ಪಸಂಖ್ಯಾತ'ವಾಗುವುದನ್ನು ತಪ್ಪಿಸಲು ಆರ್.ಎಸ್.ಎಸ್‌ನವರ ಭಯವೆಂದರೆ ಮತಾಂತರ ಪ್ರಕ್ರಿಯೆಯಿಂದ ಮುಸ್ಲಿಂಮರು ಮತ್ತು ಕ್ರೈಸ್ತರು ಸಂಖ್ಯಾಬಲದಲ್ಲಿ ವೃದ್ಧಿಯಾಗಿ ಅವರ ಸಾಮಾಜಿಕ ರಾಜಕೀಯ ಪ್ರಾಬಲ್ಯ ಹೆಚ್ಚುತ್ತಿರುವುದು. ಅದಕ್ಕಾಗಿಯೇ ಈ ಕಲ್ಪನೆಯಲ್ಲಿ ಸಂಖ್ಯಾಬಲದ ಮೇಲೆ ಒತ್ತು ಕೊಡಲಾಗಿದೆ. ಈ ರೀತಿ ಸಂಖ್ಯೆಯನ್ನು ಎತ್ತಿಹಿಡಿಯುವುದು ಮತ್ತು ಸಾರ್ವಜನಿಕ ಪೂಜೆ ಆ ಕಾರ್ಯವನ್ನು ಮಾಡಲು ಶಕ್ತವಾಗಿದೆ ಎಂದು ಪ್ರತಿಪಾದಿಸುತ್ತಾರೆ.

ವಿಹಿಂಪದ ಸಾಮೂಹಿಕ ಕಾರ್ಯಕ್ರಮಗಳಾದ ತೀರ್ಥ. ಯಾತ್ರೆಗಳು, ಹಿಂದೂ ಸಮ್ಮೇಳನಗಳು, ಕರಸೇವೆ, ಸಾಮಾಜಿಕ ಗುಂಪುಗಳ ಮತಾಂತರ ಚಳುವಳಿ ಮತ್ತು ಸಾಮೂಹಿಕವಾಗಿ ಹಬ್ಬಗಳ ಆಚರಣೆ ಮುಂತಾದವು ಪ್ರದರ್ಶಕ ಸಾಮೂಹಿಕ, ಧಾರ್ಮಿಕ ಕಾರ್ಯಗಳ ಅಭಿವ್ಯಕ್ತಿಯಾಗಿವೆ. ಈ ಘಟನೆಗಳಿಗೆ ವಿಹಿಂಪ ವಿಶೇಷ ಸ್ಥಾನವನ್ನು ಕೊಡುತ್ತದೆ ಎಂಬುದು ಅವರ ಇನ್ನೊಂದು ಪುಸ್ತಿಕೆಯಿಂದ ತಿಳಿಯುತ್ತದೆ[24]. ಯಾತ್ರೆಗಳನ್ನು 'ಚಾರಿತ್ರಿಕ ಚಳುವಳಿ' (ಪು.2)ಎಂತಲೂ, ಕರಸೇವೆಯನ್ನು 'ವಿರಗಾಥಾ' (ಪು.2)

ಎಂತಲೂ, ಹಿಂದೂ ಸಮ್ಮೇಳನಗಳನ್ನು "ಪ್ರಕಾಶ ಮಾನ ಪರಿಣಾಮಕಾರಿ ಒಗ್ಗೂಡಿಕೆ" (ಪುಟ.3)ಎಂತಲೂ, ಗುಂಪು ಮತಾಂತರವನ್ನು 'ಮಹತ್ವಪೂರ್ಣ ವಿಜಯ' (ಪು.4)ಎಂತಲೂ, ಸಾಮೂಹಿಕವಾಗಿ ಹಬ್ಬಗಳ ಆಚರಣೆಗಳು 'ಒಂದು ಭಾವಪ್ರಚೋದಕ ಬೆಸುಗೆ ಹಾಗೂ ಧಾರ್ಮಿಕ ಪ್ರಜ್ಞೆಯನ್ನು ಬೆಳಸುವಿಕೆ" (ಪು. 4) ಎಂತಲೂ ಹೆಸರಿಟ್ಟು ಕರೆದಿದೆ. ಇವುಗಳನ್ನು ವಿಹಿಂಪದ ಧರ್ಮ ಜಾಗೃತಿ ಮುನ್ನಡೆಯಲ್ಲಿ ಮಹತ್ವದ ದಾಪುಗಾಲು ಎಂದು ಪರಿಗಣಿಸುತ್ತಾರೆ.

ಉಪಸಂಹಾರ:

ಕೊನೆಯ ಮಾತಾಗಿ ಸುಲಭ ಗ್ರಾಹ್ಯವಾಗಿ, ವಿಹಿಂಪದ ಪ್ರಯತ್ನಗಳು ಹಿಂದೂ ಧಾರ್ಮಿಕ ಹೆಸರುಗಳು ಮತ್ತು ಕ್ರಿಯೆಗಳ ರೂಪಾಂತರ ಎಂದೇ ಪ್ರಾರಂಭ ಮಾಡಬೇಕು. ಆದರೆ ಅದಕ್ಕೆ ಸೇರಿಸಬೇಕಾದದ್ದು ಅದು ಹಿಂದೂ ಧರ್ಮವನ್ನು ಹೆಚ್ಚು ವ್ಯವಸ್ಥಿತವಾದ ಮತ್ತು ಹೋರಾಟ ಸ್ವಭಾವದ ಧರ್ಮವನ್ನಾಗಿ ಮಾರ್ಪಡಿಸುವುದು ಮಾತ್ರವಲ್ಲ, ದೃಷ್ಟಿಗೋಚರವಾಗುವ ಮತ್ತು ಪ್ರದರ್ಶಕ ಧರ್ಮವಾಗಿ ಬೆಳೆಸುವುದು. ಮಧ್ಯಮ ವರ್ಗದವರನ್ನು ಮತ್ತು ಭಾರತದ ಗುಡ್ಡಗಾಡು ಜನಾಂಗದ ಗುಂಪುಗಳಿಂದಲೂ ಅನುಯಾಯಿಗಳನ್ನು ಧರ್ಮಕ್ಕೆ ಸೆಳೆಯುವುದು. ವಿಹಿಂಪವು ತನ್ನ ಧರ್ಮಕ್ಕೆ ತಳಹದಿಯನ್ನಾಗಿ ಯಾವುದೇ ನಿಖರವಾದ ಧಾರ್ಮಿಕ ವಿಧಿ ಅಥವಾ ನಿಯಮಗಳನ್ನೂ ತೆಗೆದುಕೊಳ್ಳುವುದಿಲ್ಲ.

ಅದು ಮಾಡುವುದೇನೆಂದರೆ ಆಯ್ದ ಕೆಲವು ಹಿಂದೂ ಧರ್ಮಗ್ರಂಥಗಳಿಂದ ಮತ್ತು ಭಾಷ್ಯಗಳಿಂದ ನಿರ್ದೇಶನಗಳನ್ನೂ, ಮಾರ್ಗದರ್ಶಕ ಸೂತ್ರಗಳನ್ನು ಆಯ್ದುಕೊಂಡು ಅವುಗಳನ್ನು ಸಂಘಪರಿವಾರದ ರಾಜಕೀಯಕ್ಕೆ ಅನುಕೂಲವಾಗುವ ಒಂದು ಧರ್ಮವನ್ನು ನೆಯ್ದು ತಯಾರಿಸಿಕೊಡುತ್ತದೆ. ಈ ರಾಜಕೀಯಕ್ಕೆ ಹೇಗೆ ಬಲ ಮತ್ತು ಯುದ್ಧೋತ್ಸಾಹದ ಪ್ರದರ್ಶನಿಯತೆ ಮುಖ್ಯವೊ ಹಾಗೆ ಸಂಖ್ಯಾಬಲವೂ ಮುಖ್ಯ. ಈ ಹಿಂದೂತ್ವದ ಮೂಲಭೂತ ಕಾರ್ಯಗಳನ್ನು ನೆರವೇರಿಸುವುದು ವಿಹಿಂಪದವರ ಹೊಣೆಯಾಗಿದೆ. □

END NOTES AND REFERENCES

1. See M.S. Golwalkar (1966)
2. H.K. Vyas, Vishwa Hindu Parishad; The RSS Broad Outfit for Spreading Millitant Aggres sive Hindu Communal Poison, New Delhi, CPI, 1983, P.3.,
3. National Herald, 8 November 1966, P 1&6.
4. Raghunandan Prasad Sharma (ed). Vishva Hindu Parishad Ke Prastav Op.Cit. P.86.
5. Ibid,
6. Shuddhi stands for purification and implies the purifying of Non - Hindus by Sacred Rituals and Ceremonies to admit or readmit them in to the Hindu fold.
'ಶುದ್ಧಿ' ಎಂದರೆ ಪರಿಶುದ್ಧಗೊಳಿಸುವುದು, ಹಿಂದೂಗಳಲ್ಲದವರನ್ನು ಪವಿತ್ರ ಸಂಸ್ಕಾರ ಮತ್ತು ಮತೀಯ ಆಚರಣೆಗಳಿಂದಲೂ ಪವಿತ್ರಗೊಳಿಸಿ ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳುವುದು.
7. 'Vishwa Hindu Parishad; Dharma Prasar Yojana', (Vishwa Hindu Parishad – Dharma Propagation Programme), Vanavasi Kalyan Kendra, Sonbhadra (U.P) Vishva Hindu Parishad Publication 1992, P.112)
8. Ibid, P. 111.
9. Ibid, P. 112.
10. Ashok Singhal, "Chal Prapanch aur zor zabardasti se ahindu banaye gaye logon ko VHP punha Hindu banayegi" (The VHP would reconvert those who by fraud and force were made non-Hindus), Hindu Chethana, 16 April 1995. P.5.
11.Ibid,
12.Ashok Singhal in Hindu Chetna, 1st December 1995.P.23 and in Hindu Chetna, 1st November 1995. P.7
13.Ibid,
14.'Vishva Hindu Parishad–Dharma Prasar Yojana' (Vishwa Hindu Parishad-Dharma propagation Programme) Vanavasi Kalyan Kendra, Sona badhara (U.P) Vishva Hindu Parishad Publication 1992. P.113.
15. Ibid. P. 113.
16. Ibid. P. 113.
17. The Reported Violence against Christians in Orissa involving the Bajrang Dal is an instance of VHP's militant stance on proselytization.
18. Arvind Brahmabhatt Interview on 28 December 1995.
19. Ibid.,
20. Ibid.,
21. See J.N. Mohanty, 2000. Classical Indian Philosophy, Maryland; Rowman and littlefield. P 108.
22. This discussion on secularism and dharma is elaborated in a booklet called, Dharma nirpekshata; Kitna Sarthak Kitna Sarheen,nd.circulated by theV.H.P.
23. See The discussion on Ram's iconography in Anuradha Kapur; (1992 and Manjari Katju 2003)
24. Y.Raghavulu. Nd. Vishwa Hindu Parishad in Progress. VHP Publication.

STATEMENT ABOUT OWNERSHIP AND OTHER PARTICULARS ABOUT NEWSPAPER

FORM IV

1.	Place of Publication	:	Bangalore
2.	Periodicity of its publication	:	Monthly
3.	Printer's Name	:	**S.R. Govindu**
	Nationality		Indian
	Address		63, Anjananagar, Vishwaneedam Post, Bangalore-560 091
4.	Publisher's Name	:	**S.R. Govindu**
	Nationality		Indian
	Address		63, Anjananagar, Vishwaneedam Post, Bangalore-560 091
5.	Editor's Name	:	**Indudhara Honnapura**
	Nationality		Indian
	Address		402,1st main,2nd Block, HBR Layout, Bangalore-560 043
6.	Name and address of individuals who own the newspaper and partners and share holders holding more than one percent of the total capital	:	Spoorthidhama, 63, Anjananagar, Vishwaneedam Post, Bangalore-560 091 (Sole proprietors)

I, **S.R. Govindu,** hereby declare that the particulars given above are true to the best of my knowledge and belief.

Sd/-
S.R. Govindu
Publisher

Date: 28-02-2011

ಉರಿಲಿಂಗ ಬೆಲೆ: ರೂ. ೫೦/-
ಲೇ: ಡಾ. ವಿಜಯಶ್ರೀ ಸಬರದ

ಬಸವಣ್ಣನ ಕಾಲದಲ್ಲಿನ ಕಲ್ಯಾಣದ ಕ್ರಾಂತಿಯನ್ನು ವಸ್ತುವಾಗಿರಿಸಿ ರಚಿಸಿದ ನಾಟಕದ ಈ ಕೃತಿಯಲ್ಲಿ ಮೇಲು-ಕೀಳು ಧರ್ಮ-ಅಧರ್ಮಗಳನ್ನು ಸರಿಯಾಗಿ ಅರ್ಥೈಸಿಕೊಳ್ಳದ ಸಂಪ್ರದಾಯವಾದಿ ನಿಲುವಿನ ವಿರುದ್ಧ ಶರಣ ಸಂಸ್ಕೃತಿಯ ಕ್ರಾಂತಿಕಾರಿಗಳು ಪ್ರತಿಭಟಿಸಿದ ಸನ್ನಿವೇಶದ ಚಿತ್ರಣ ಮನೋಜ್ಞವಾಗಿ ಮೂಡಿಬಂದಿದೆ. ಅಸಮಾನತೆಯನ್ನು ತೊಲಗಿಸಲು ಶ್ರಮಿಸಿದ ವಚನಕಾರರ ಸಂದೇಶಗಳನ್ನು ಸಂಭಾಷಣೆಗಳಾಗಿಸಿ, ಆ ಕಾಲದ ಭಾಷೆಯ ಸೊಗಡು, ಭಾವದ ಉತ್ಕಟತೆ, ಹಾಗೂ ಜೀವ ವಿರೋಧಿಗಳ ಕಪಟತನಗಳು ಸಮಾನತೆಯ ಆಶಯದೊಂದಿಗೆ ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ.

ಪ್ರ: ಪಲ್ಲವಿ ಪ್ರಕಾಶನ, ಗುಲ್ಬರ್ಗಾ



ಹೊಸ ಪುಸ್ತಕ

ಕಪ್ಪು ಮಲ್ಲಿಗೆ
ಲೇ: ಗೌರಿ ಲಂಕೇಶ್
ಬೆಲೆ: ರೂ. ೭೫/-

ಹತ್ತೊಂಭತ್ತು ಅನುವಾದಿತ ಕತೆಗಳು ಲಂಕೇಶ್ ಪತ್ರಿಕೆಯಲ್ಲಿ ಪ್ರಕಟಗೊಂಡು ಕೃತಿ ರೂಪ ಪಡೆದಿವೆ. ಇಲ್ಲಿನ ಬಹುತೇಕ ಕತೆಗಳು ಮಹಿಳಾ ಕೇಂದ್ರಿತವಾಗಿದ್ದು, ಕಟ್ಟುಪಾಡುಗಳ ಮೌಢ್ಯದ ಸಂಪ್ರದಾಯಿಕ ಕೌದಿಯನ್ನು ಕಿತ್ತೊಗೆದು ಬಿಡುಗಡೆಯತ್ತ ದಾಪುಗಾಲು ಹಾಕಲು ತುಡಿಯುವ ಮನಸ್ಥಿತಿಯನ್ನು ಬಿಂಬಿಸುತ್ತವೆ. ಆ ಮೂಲಕ ಆಧುನಿಕ ಪ್ರಪಂಚಕ್ಕೆ ತೆರೆದುಕೊಳ್ಳಲು ಬಯಸುವ ಮಹಿಳೆಯರಿಗೆ ಪ್ರೇರಣೆಯನ್ನು ನೀಡುವಂತಿವೆ. ಭಾಷಾಂತರ ಸತ್ವದಿಂದ ಕೂಡಿದ್ದು ಮೂಲ ತನ್ನ ಭಾಷೆಯಲ್ಲಿಯೇ ಓದಿದ ಗಾಢವಾದ ಅನುಭವ ನೀಡುತ್ತವೆ.

ಪ್ರಕಾಶಕರು: ಲಂಕೇಶ್ ಪ್ರಕಾಶನ
ಬೆಂಗಳೂರು-೫೬೦೦೦೪

ನಾಗಾರ್ಜುನ-ಅಲ್ಲಮಪ್ರಭು
ಲೇ: ಎಸ್. ನಟರಾಜು ಬೂದಾಳು
ಬೆಲೆ: ರೂ. ೧೨೦/-

ಕನ್ನಡ ನೆಲದ ಇಬ್ಬರು ಮಹಾನ್ ದಾರ್ಶನಿಕರ ತಾತ್ವಿಕ ಲೋಕಹಿತ ಚಿಂತನೆಗಳನ್ನು ಕುರಿತ ತೌಲನಿಕ ಅಧ್ಯಯನದ ಈ ಕೃತಿ ತುಂಬಾ ಮಹತ್ವದ್ದು. ಶ್ರಮಣ ಪರಂಪರೆಗಳು ಮತ್ತು ಧರ್ಮ ತತ್ವಗಳನ್ನು ಮುಖಾಮುಖಿಯಾಗಬಯಸುವ ಅಲ್ಲಮ ಹಾಗೂ ಬೌದ್ಧ ಚಿಂತನೆಗಳಿಗೆ ಒಂದು ಆಯಾಮವನ್ನೂ, ತರ್ಕ ವಿಧಾನವನ್ನು ಒದಗಿಸಿದ ನಾಗಾರ್ಜುನ-ದ್ವೈತಾದ್ವೈತಗಳನ್ನು ದಾಟಿದ ಇವರಿಬ್ಬರ ತಾತ್ವಿಕತೆಯ ಅನುಸಂಧಾನವನ್ನು ತಮ್ಮ ಸೃಜನಶೀಲ ಅಧ್ಯಯನದಿಂದ ಲೇಖಕರು ಸಮರ್ಥವಾಗಿ ವಿವೇಚಿಸಿದ್ದಾರೆ. ವಿಶ್ಲೇಷಿಸಿದ್ದಾರೆ.

ಪ್ರ: ಗೋಧೂಳಿ ಪ್ರಕಾಶನ
ಬೆಂಗಳೂರು-೫೬೦೦೯೧





ಮುಳ್ಳೂರ ವಚನಗಳು
ಲೇ: ಮುಳ್ಳೂರು ನಾಗರಾಜ್
ಬೆಲೆ: ರೂ. ೧೨೫/-

ಎಂಟು ಸಾಲಿನ ಆರುನೂರಕ್ಕೂ ಹೆಚ್ಚಿನ ವಚನಗಳ ಈ ಸಂಕಲನದಲ್ಲಿ ಮಾನವೀಯತೆ ಹಾಗೂ ದಲಿತ ಪ್ರಜ್ಞೆ ಮೆಳೈಸಿದೆ. ಜನಪದ ಕಾವ್ಯ, ವಚನಸಾಹಿತ್ಯ, ದಾಸರ ಕೀರ್ತನೆಗಳ ಪ್ರಭಾವದಿಂದ ಮೂಡಿಬಂದಿರುವ ನಿಕೃಷ್ಟ ಬದುಕಿನ ಕುರಿತು ಗಾಢ ಪರಿಣಾಮ ಬೀರುವುದರ ಜೊತೆಗೆ ತರ್ಕದ ಮೇಲೆ ವೈಚಾರಿಕ ಆಲೋಚನೆಗೆ ಇಂಬು ನೀಡುತ್ತವೆ. ಅಲ್ಲದೆ ಧಾರ್ಮಿಕ, ಸಾಮಾಜಿಕ, ರಾಜಕೀಯ ಸೇರಿದಂತೆ ಸಮಕಾಲೀನ ವಿಪ್ಲವಗಳ ಕಪಟತನವನ್ನು ವಿಡಂಬನೆ ಮೂಲಕ ಬಯಲುಗೊಳಿಸುತ್ತವೆ. ದಲಿತ ಕವಿಗಳು ದಲಿತ ಪರಧಿಯನ್ನು ಮೀರಿ ಮಾತನಾಡುತ್ತಿದ್ದಾರೆ, ಚರ್ಚಿಸುತ್ತಿದ್ದಾರೆ, ವ್ಯಾಖ್ಯಾನಿಸುತ್ತಿದ್ದಾರೆ ಬರೆಯುತ್ತಿದ್ದಾರೆ ಎನ್ನುವುದಕ್ಕೆ ಇಲ್ಲಿನ ವಚನಗಳು ಸಾಕ್ಷಿಯಾಗುತ್ತವೆ.

ಪ್ರಕಾಶಕರು: ನಿಜದನಿ ಪ್ರಕಾಶನ
ಮೈಸೂರು-೫೭೦೦೦೪

ಉರಿಯ ಪೇಟೆ
ಲೇ: ಡಾ.ಕಾ.ವೆಂ. ಶ್ರೀನಿವಾಸಮೂರ್ತಿ
ಬೆಲೆ: ರೂ. ೬೦/-

ಈಗಾಗಲೇ ಅನೇಕ ಪತ್ರಿಕೆಗಳಲ್ಲಿ ಪ್ರಕಟಗೊಂಡ ಇಲ್ಲಿಯ ಬರಹಗಳು ಈ ಹೊತ್ತಿನ 'ಪೇಟೆ'ಯ ವಿವಿಧ ಸಾಂದರ್ಭಿಕ ಒತ್ತಡಗಳ ಹಿನ್ನಲೆಯಲ್ಲಿ ಮೂಡಿಬಂದಿವೆ. ರಾಜಕೀಯ-ಸಾಮಾಜಿಕ ಸಂಘರ್ಷಗಳಿಗೆ ಸೃಜನಶೀಲ ಮನಸ್ಸೊಂದು ಪ್ರತಿಕ್ರಿಯಿಸಿದಾಗ ಉಂಟಾಗುವ ತಳಮಳ ಹಾಗೂ ಅದಕ್ಕೆ ಪರಿಹಾರಾತ್ಮಕ ಚಿಂತನೆಗಳು ಹೇಗೆ ರೂಪುಗೊಳ್ಳುತ್ತವೆ ಎಂಬುದಕ್ಕೆ ನಿದರ್ಶನ ಇಲ್ಲಿದೆ. ಜಾಗತೀಕರಣ, ಆರ್ಥಿಕ ನೀತಿ, ಭಾಷೆ, ಸಾಹಿತ್ಯ, ಸಂಸ್ಕೃತಿ, ಮತಾಂದತೆ ಸೇರಿದಂತೆ ಬಹುಮುಖಿ ಆಯಾಮ ಪಡೆದುಕೊಂಡಿರುವ ಒಟ್ಟು ಲೇಖನಗಳಲ್ಲಿ ಜನಪರ ಕಾಳಜಿ ಎದ್ದು ಕಾಣುತ್ತದೆ.

ಪ್ರಕಾಶಕರು: ಲಡಾಯಿ ಪ್ರಕಾಶನ
ಗದಗ-೫೮೨೧೦೧



ಸೆಳೆತ
ಲೇ: ರುದ್ರಪ್ಪ ಹನಗವಾಡಿ
ಬೆಲೆ: ರೂ: ೪೫/-

ಅನುಭವದ ಪ್ರಮಾಣಿಕತೆ ಮತ್ತು ಬದುಕಿನ ಬದ್ದತೆಗಳ ಬೆಳಕಲ್ಲಿ ನಿರೀಕ್ಷೆಗೆ ಒಡ್ಡುಕೊಳ್ಳುವ ಹಾಗೂ ಮಾನವೀಯ ನೆಲೆಯ ಚಿಂತನೆಯಲ್ಲಿ ಹರಿದ ಭಾವದ ಬೆರಗು ಈ ಸಂಕಲನದ ಕವನಗಳ ಪ್ರಧಾನ ಗುಣ. ವ್ಯಕ್ತಿ ಸಂಬಂಧಗಳು ನಮ್ಮ ಸಾಮಾಜಿಕ, ಕೌಟುಂಬಿಕ, ಸಾಂಸ್ಕೃತಿಕ ನೆಲೆಗಟ್ಟನ್ನು ಮನಗಾಣಿಸುವ ಸೂಕ್ಷ್ಮತೆಗಳನ್ನು ಸಮರ್ಥವಾಗಿ ಕಟ್ಟಿಕೊಡಲಾಗಿದೆ. ಆತ್ಮ ಕಥನದ ಹಾಡಿನ ಸಾಲುಗಳಿರುವಂತೆಯೇ ಜೀವದ್ರವ್ಯದ ಬಗೆಗಿನ ಪ್ರತಿಕ್ರಿಯಾತ್ಮಕ ಮೆಲುದನಿಗಳು ಒಡಮೂಡಿದ್ದು ಗಮನ ಸೆಳೆಯುತ್ತವೆ.

ಪ್ರಕಾಶಕರು: ಪ್ರೊ.ಬಿ. ಕೃಷ್ಣಪ್ಪ ಟ್ರಸ್ಟ್
ಬೆಂಗಳೂರು-೬೪

ಕುವೆಂಪು ತತ್ವ ಮತ್ತು ವರ್ತಮಾನದ ಬದುಕು

ಡಾ. ಬಿ. ಜಿ. ಚನ್ನೇಶ್ ಹೊನ್ನಾಳಿ

ಕುವೆಂಪು ಎಂದರೆ ಕೇವಲ ಕವಿ-ಬರಹಗಾರರಷ್ಟೆ ಅಲ್ಲ, ಇಡೀ ಒಂದು ಶತಮಾನವನ್ನು ತಮ್ಮ ಬದುಕು- ಬರಹಗಳಿಂದ ಎಚ್ಚರವಾಗಿಟ್ಟವರು. ಸಾಹಿತ್ಯಿಕವಾಗಿ ಅವರು ಎಷ್ಟು ಮುಖ್ಯರೋ ಸಾಂಸ್ಕೃತಿಕವಾಗಿಯೂ ಅಷ್ಟೇ ಮುಖ್ಯರಾಗುತ್ತಾರೆ. ಹಾಗಾಗಿ ಕುವೆಂಪು ಅವರನ್ನು ಕೇವಲ ಕವಿಯಾಗಿ ನಾವಿಂದು ಪರಿಗಣಿಸಿಲ್ಲ. ಸಾಂಸ್ಕೃತಿಕ ರಾಯಭಾರಿಯಾಗಿ ಇಪ್ಪತ್ತನೇ ಶತಮಾನದ ಆಧುನಿಕತೆ, ಜಾತಿ ವ್ಯವಸ್ಥೆ, ಸಂಸ್ಕೃತಿ, ವಿದ್ಯಾಭ್ಯಾಸ ಮೊದಲಾದವುಗಳಿಗೆ ಮುಖಾಮುಖಿಯಾದ ದಾರ್ಶನಿಕ ವ್ಯಕ್ತಿಯಾಗಿ ನಮಗೆ ಕಾಣುತ್ತಾರೆ. ಇಪ್ಪತ್ತನೇ ಶತಮಾನದ ಸಾಹಿತ್ಯಿಕ-ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣಕ್ಕೆ ಕಾರಣರಾದವರು ಅವರು. ಹಾಗಾಗಿ ಈ ಶತಮಾನದ ಸಾಹಿತ್ಯ-ಸಾಂಸ್ಕೃತಿಕ ಚರಿತ್ರೆಯಿಂದ ಅದು ಕುವೆಂಪು ಅವರ ಬದುಕು-ಬರಹದ ಚರಿತ್ರೆಯೇ ಆಗುತ್ತದೆ. ಈ ಕಾರಣದಿಂದಲೇ ಸಾಹಿತ್ಯ ಚರಿತ್ರೆಯಲ್ಲಿ 'ಕುವೆಂಪು ಯುಗ' ಎಂದೇ ಬಿಂಬಿತವಾಗಿದೆ. ಕುವೆಂಪು ಅವರಿಗಿರುವ ಈ ಸಾಂಸ್ಕೃತಿಕವಾದ ಮುಖದಿಂದಲೇ ಅವರು ಸಮಕಾಲೀನದ ಉಳಿದೆಲ್ಲ ಸಾಹಿತಿಗಳಿಗಿಂತ ಭಿನ್ನರಾಗಿ ನಿಲ್ಲುತ್ತಾರೆ. ಅವರ ಬದುಕು ಮತ್ತು ಒಳ್ಳೆಯ ಬರಹ ಒಂದು 'ತತ್ವ'ವಾಗಿ ಈಗ ನಮ್ಮೆದುರಿಗಿದೆ. ಇದನ್ನು 'ಕುವೆಂಪು ತತ್ವ' ಎನ್ನಬಹುದು.

ಕುವೆಂಪು ತಾವು ಬದುಕಿದ ರೀತಿ ನೀತಿಗಳು ಹಾಗೂ ತಮ್ಮ ಜೀವಿತಾವಧಿಯ ಸೃಜನಶೀಲ ಮತ್ತು ಸೃಜನೇತರ ಕೃತಿಗಳಲ್ಲಿ ಕಾಣಿಸಿದ ಅನೇಕ ಅಂಶಗಳು ಇಂದು ಬೇರೆ ಬೇರೆ ತತ್ವಗಳಾಗಿ ಕಾಣುತ್ತಿವೆ. ಕುವೆಂಪು ತತ್ವ ಎಂದರೆ ಕುವೆಂಪು ಅವರು ಬದುಕಿದ ವೈಯಕ್ತಿಕ ಬದುಕು ಹಾಗೂ ತಮ್ಮ ಕೃತಿಗಳಲ್ಲಿ ತಾವು 'ಕಂಡುಕೊಂಡ' ಮತ್ತು ಸಮಾಜಕ್ಕೆ 'ಕಾಣಿಸಿದ' 'ದರ್ಶನ' (Vision)ಗಳೇ ಆಗಿವೆ. ಹಾಗೆ ನೋಡಿದರೆ ಅವರ ವೈಯಕ್ತಿಕ ಬದುಕೇ ಒಂದು ಮಹೋನ್ನತ ತತ್ವ ವಾಗಿದೆ. ಅವರ ಅನಿಕೇತನ, ಪಂಚಮಂತ್ರ ಹಾಗೂ ಸಪ್ತ ಸೂತ್ರಗಳೇ ಬಹುದೊಡ್ಡ ವಿಶ್ವಮಾನವ ತತ್ವವಾಗಿವೆ.



ಕುವೆಂಪು ತಾವು ಬದುಕಿದ ರೀತಿ ನೀತಿಗಳು ಹಾಗೂ ತಮ್ಮ ಜೀವಿತಾವಧಿಯ ಸೃಜನಶೀಲ ಮತ್ತು ಸೃಜನೇತರ ಕೃತಿಗಳಲ್ಲಿ ಕಾಣಿಸಿದ ಅನೇಕ ಅಂಶಗಳು ಇಂದು ಬೇರೆ ಬೇರೆ ತತ್ವಗಳಾಗಿ ಕಾಣುತ್ತಿವೆ. ಕುವೆಂಪು ತತ್ವ ಎಂದರೆ ಕುವೆಂಪು ಅವರು ಬದುಕಿದ ವೈಯಕ್ತಿಕ ಬದುಕು ಹಾಗೂ ತಮ್ಮ ಕೃತಿಗಳಲ್ಲಿ ತಾವು 'ಕಂಡುಕೊಂಡ' ಮತ್ತು ಸಮಾಜಕ್ಕೆ 'ಕಾಣಿಸಿದ' 'ದರ್ಶನ' (Vision)ಗಳೇ ಆಗಿವೆ. ಹಾಗೆ ನೋಡಿದರೆ ಅವರ ವೈಯಕ್ತಿಕ ಬದುಕೇ ಒಂದು ಮಹೋನ್ನತ ತತ್ವವಾಗಿದೆ. ಅವರ ಅನಿಕೇತನ, ಪಂಚಮಂತ್ರ ಹಾಗೂ ಸಪ್ತ ಸೂತ್ರಗಳೇ ಬಹುದೊಡ್ಡ ವಿಶ್ವಮಾನವ ತತ್ವವಾಗಿವೆ. ಇವೆಲ್ಲ ಅವರೆ ನೇರವಾಗಿ ಕಾವ್ಯ ಹಾಗೂ ಲೇಖನಗಳ ಮೂಲಕ ಹೇಳಿರುವ ತತ್ವಗಳಾಗಿರುವವುದು ವಿಶೇಷ. ಉಳಿದಂತೆ ಅವರ ಜೀವನ ಹಾಗೂ ಕೃತಿಗಳನ್ನಾಧರಿಸಿ ಅನೇಕ ತತ್ವಗಳನ್ನು ನಾವು ನೋಡಬಹುದಾಗಿದೆ.

* ಮಂತ್ರಮಾಂಗಲ್ಯ ತತ್ವ
* ನಿರಂಕುಶಮತಿ ತತ್ವ
* ದೇವಾಲಯ ಮತ್ತು ಪೂಜಾ ಸಂಸ್ಕೃತಿಯ ನಿರಾಕರಣೆಯ ತತ್ವ
* ಪ್ರತಿಭಟನೆ, ಪ್ರತಿರೋಧದ ತತ್ವ
* ವ್ಯಚಾರಿಕತೆ ಮತ್ತು ವೈಜ್ಞಾನಿಕತೆ ತತ್ವ
* ಆಧ್ಯಾತ್ಮ ಸಿದ್ಧಿ ತತ್ವ
* ಯಾರೂ, ಯಾವುದೂ ಮುಖ್ಯವಲ್ಲ, ಯಾರೂ, ಯಾವುದೂ ಅಮುಖ್ಯವಲ್ಲ ತತ್ವ
* ಕನ್ನಡವೇ ಸತ್ಯ ಕನ್ನಡವೇ ನಿತ್ಯ... ಹೀಗೆ

ಇದರ ಪಟ್ಟಿ ಬೆಳೆಯುತ್ತದೆ. ವಿಶೇಷ ಸಂಗತಿ ಎಂದರೆ ಕುವೆಂಪು ಈ ಎಲ್ಲ ತತ್ವಗಳನ್ನು ಒಣ ಭಾಷಣಗಳಾಗಿ, ಲೇಖನಗಳಾಗಿ ಹೇಳದೆ ಸೃಜನಶೀಲ ಕೃತಿಗಳಲ್ಲಿ ಕಂಡರಿಸಿರುವುದು ಹಾಗೂ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಕೊನೆಯವರೆಗೂ ಬದುಕಿದ್ದು.

ಕುವೆಂಪು ಅವರ ಈ ತತ್ವಗಳು ನಮ್ಮ ವರ್ತಮಾನದ ಬದುಕಿನಲ್ಲಿ ಹೇಗೆ ಪ್ರಾಯೋಗಿಕವಾಗಿ ಸೇರಿಕೊಂಡಿವೆ, ಅವುಗಳನ್ನು ಸಮಾಜ ಒಪ್ಪಿಕೊಂಡಿದೆಯೇ? ಅಪ್ಪಿಕೊಂಡಿದೆಯೇ? ಒಂದು ವೇಳೆ ಒಪ್ಪಿಕೊಳ್ಳದಿದ್ದರೆ ಯಾಕೆ? ಆ ಸೋಲು ತತ್ವಗಳಲ್ಲಿದೆಯಾ? ಅಥವಾ ಸಮಾಜದಲ್ಲಿಯಾ? ಇತ್ಯಾದಿ ಅಂಶಗಳನ್ನು ಚರ್ಚಿಸುವುದೇ ಈ ಲೇಖನದ ಉದ್ದೇಶ.

ಮಂತ್ರ ಮಾಂಗಲ್ಯ

'ಮದುವೆ' ಎಂಬ ಖಾಸಗಿ ಸಂಸ್ಥೆ ಒಂದು ಒಣ ಆಡಂಬರದ, ಪ್ರತಿಷ್ಠೆಯ ಸಂಕೇತವಾಗಿದೆ. ಜಾತಿಯ ನೆಲೆಗಟ್ಟನ್ನು ಗಟ್ಟಿಗೊಳಿಸುತ್ತಾ, ಆರ್ಥಿಕ ದಿವಾಳಿಗೂ ಕಾರಣವಾಗಿದೆ. ಸರಳತೆಯಿಂದ ಎರಡು ಮನಸ್ಸುಗಳ ಮಿಲನವಾಗಬಹುದಾದ ಮದುವೆಯ ಆಚರಣೆ, ಆಡಂಬರ ಹಾಗೂ ಶಾಸ್ತ್ರಗಳಿಂದ ಮಾನವೀಯ ಮುಖಗಳನ್ನು ಕಳಚಿಕೊಂಡು ಕೇವಲ ಅದ್ದೂರಿತನದ ಮೆರವಣಿಗೆಯಾಗಿದೆ. ವರ/ವಧು ದಕ್ಷಿಣೆಯೆಂಬ ಆಚರಣೆಯಲ್ಲಿ ಮದುವೆಯ ಅರ್ಥವನ್ನು ಕಳಚಿಹಾಕಿ ವ್ಯವಹಾರಿಕ ಮಟ್ಟಕ್ಕೆ ಇಳಿಸಿದೆ.

ಸರಳ ವಿವಾಹ, ವಿಧವಾ ವಿವಾಹಗಳು ನಗೆಪಾಟಲಾಗಿ ವರದಕ್ಷಿಣೆಯ, ಆಡಂಬರದ ಮದುವೆಗಳು ಆದರ್ಶ ಮದುವೆಗಳಾಗಿವೆ. ಜೊತೆಗೆ ಕಂದಾಚಾರಗಳ ಶಾಸ್ತ್ರ ಮೊದಲಾದವುಗಳಿಂದ ಪುರೋಹಿತಶಾಹಿಯ ಹುನ್ನಾರ ಸೇರಿಕೊಂಡಿದೆ. ಬಡವರು, ಸಾಮಾನ್ಯರು, ಮಧ್ಯಮ ವರ್ಗದವರು ಹೆಣ್ಣು ಮಕ್ಕಳಿಗೆ ಮದುವೆ ಮಾಡುವುದು ಕನಸಿನ ಮಾತಾಗಿದೆ. ವರದಕ್ಷಿಣೆ ಹಾಗೂ ಕಂದಾಚಾರಗಳ ಆಚರಣೆಗಳಿಂದಾದ ಮದುವೆಗಳ ಪರಿಣಾಮ ಹೆಣ್ಣನ್ನು ಸುಡುವುದು, ಆಕೆಯೇ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡುವುದು, ವಿವಾಹ ವಿಚ್ಛೇದನ ಇತ್ಯಾದಿ ಅವಘಡಗಳಲ್ಲಿ ಪರಿಣಾಮ ಕಾಣುತ್ತದೆ.

ಕುವೆಂಪು ದೃಷ್ಟಿಯಲ್ಲಿ 'ಮದುವೆ'ಯ ಅದ್ದೂರಿತನ ಹಾಗೂ ಶಾಸ್ತ್ರಗಳ ಆಚರಣೆಗಳು ಶೋಷಣೆಯ ಪ್ರತಿರೂಪಗಳಾಗಿವೆ. ಸರಳವಾಗಿ ಮದುವೆಯಾಗಬಹುದಾದ ಒಂದು ವಿಧಾನವನ್ನು ಅವರು ಕಾಣಲು ಯತ್ನಿಸುತ್ತಾರೆ. ಅಷ್ಟೇ ಅಲ್ಲ, ಅದನ್ನು ಸ್ವತಃ ಮಗ ತೇಜಸ್ವಿಯವರ ಮದುವೆ (1966)ಯಿಂದಲೇ ಪ್ರಾರಂಭಿಸುತ್ತಾರೆ. ಅನಂತರ ಸರಳ ಮದುವೆಯ ವಿಧಾನಕ್ಕೊಂದು ಚೌಕಟ್ಟು ನೀಡಿ 'ಮಂತ್ರ ಮಾಂಗಲ್ಯ' ಕೃತಿಯನ್ನೂ ರೂಪಿಸುತ್ತಾರೆ. ಋಗ್ವೇದ, ಬೃಹದಾರಣ್ಯಕ ಉಪನಿಷತ್‌ಗಳಿಂದ ಕೆಲವು ಮಂತ್ರಗಳನ್ನು, ದೇವಿಸ್ತುತಿ ಹಾಗೂ ರಾಮಕೃಷ್ಣ ಸ್ತೋತ್ರಗಳ ಕೆಲವು ಸಂಸ್ಕೃತದ ಭಾಗಗಳನ್ನು ನೀಡಿ ಕನ್ನಡದ ಅನುವಾದವನ್ನೂ ಕೊಟ್ಟಿದ್ದಾರೆ. ಆರಂಭದಲ್ಲಿ ಮಂತ್ರ ಮಾಂಗಲ್ಯದ ಅರ್ಥ, ಸ್ವರೂಪ, ಉದ್ದೇಶ ಹಾಗೂ ವಿಧಾನಗಳ ಬಗೆಗೆ ವಿವರವಾಗಿ ಬರೆದಿದ್ದಾರೆ.

"ಮಂತ್ರ ಮಾಂಗಲ್ಯ ಮದುವೆಯಲ್ಲಿ ಈ ಪುಸ್ತಕದಲ್ಲಿ ಸೂಚಿಸಿರುವ ಮಂತ್ರ ಮತ್ತು ಪ್ರತಿಜ್ಞೆ ವಿಧಿಗಳ ಉಪದೇಶವಲ್ಲದೆ ಇನ್ನಾವುದೇ ಶಾಸ್ತ್ರಾಚಾರಗಳನ್ನಾಗಲೀ, ಜೋಯಿಸರಿಂದ ಜಾತಕಾದಿಗಳನ್ನು ನೋಡಿಸುವುದೇ ಆಗಲಿ ನಿಷಿದ್ಧ. ಜಾತಿ ಪದ್ಧತಿ, ಸ್ತ್ರೀ ಅಸಮಾನತೆ, ಅಸ್ಪೃಶ್ಯತೆ ಮೊದಲಾದ ಅನಿಷ್ಟಗಳಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕಾರಣವಾಗಿರುವ ಈ ಶಾಸ್ತ್ರಾಚಾರಗಳಿಂದ ಭಾರತೀಯರನ್ನು ವಿಮುಕ್ತಗೊಳಿಸುವುದೇ ಮಂತ್ರ ಮಾಂಗಲ್ಯದ ಮೂಲ ಉದ್ದೇಶ" ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅವರಿಗೆ "ಈ ವಿವಾಹ ವಿಧಾನವು ಕ್ರಮೇಣ ವಧು ವರರ ಜೀವನ ವಿಧಾನವೂ ಆಗಬೇಕೆಂಬುದು" ಮುಖ್ಯ ಆಶಯವಾಗಿದ್ದಿತು. ಮಂತ್ರ ಮಾಂಗಲ್ಯದಲ್ಲಿ ವಿವಾಹವಾದವರು ಕೊನೆಯಲ್ಲಿ ಹೆಣ್ಣಿನ ಹಿತದೃಷ್ಟಿಯಿಂದ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ನೋಂದಾಯಿಸುವುದು ಕಡ್ಡಾಯವಾಗಿದೆ. ಒಟ್ಟಿನಲ್ಲಿ ಸಮಾಜವು ಸರಳವಾಗಿ ಅನುಸರಿಸಬಹುದಾದ ಮದುವೆಯ ವಿಧಾನದ ಕೃತಿಯಿದು. ಅಷ್ಟೇ ಅಲ್ಲ ಕುವೆಂಪುರವರ ಬದುಕಿನ ಮುಖ್ಯ ತತ್ವ ಕೂಡಾ ಇದಾಗಿದೆ.

ವಾಸ್ತವದಲ್ಲಿ ಮಂತ್ರ ಮಾಂಗಲ್ಯದ ಬೆಂಬಲಕ್ಕೆ ನಿಂತು ಆಚರಣೆಗೆ ತಂದವರಲ್ಲಿ ಕೆ. ರಾಮದಾಸ್, ಸುಂದರೇಶ್, ಕಡಿದಾಳ ಶಾಮಣ್ಣ, ದೇವನೂರು ಮಹಾದೇವ, ಡಿ. ಬಿ. ಚಂದ್ರೇಗೌಡ ಮೊದಲಾದವರನ್ನು ಬಿಟ್ಟರೆ ಇದು ಸಮಾಜದ ಉನ್ನತ ವರ್ಗ, ಮಧ್ಯಮ ವರ್ಗ ಹಾಗೂ ದುಡಿವ ಶ್ರಮಿಕ ವರ್ಗ–ಈ ಮೂರು ವರ್ಗಗಳಲ್ಲೂ ಸಹಿತ ಹೆಚ್ಚಾಗಿ ಬಳಕೆಗೆ ಬಂದಿಲ್ಲ. ಆದರೆ ಅಲ್ಲಲ್ಲಿ ಅನೇಕ ಮಧ್ಯಮ ವರ್ಗದ ಯುವಕ-ಯುವತಿಯರು ಇದರ ರೀತಿ ಮದುವೆಯಾಗಿ ಚೆನ್ನಾಗಿದ್ದಾರೆ. ಆದರೆ

ಕುವೆಂಪು ದೃಷ್ಟಿಯಲ್ಲಿ 'ಮದುವೆ'ಯ ಅದ್ದೂರಿತನ ಹಾಗೂ ಶಾಸ್ತ್ರಗಳ ಆಚರಣೆಗಳು ಶೋಷಣೆಯ ಪ್ರತಿರೂಪಗಳಾಗಿವೆ. ಸರಳವಾಗಿ ಮದುವೆಯಾಗಬಹುದಾದ ಒಂದು ವಿಧಾನವನ್ನು ಅವರು ಕಾಣಲು ಯತ್ನಿಸುತ್ತಾರೆ. ಅಷ್ಟೇ ಅಲ್ಲ, ಅದನ್ನು ಸ್ವತಃ ಮಗ ತೇಜಸ್ವಿಯವರ ಮದುವೆ (1966)ಯಿಂದಲೇ ಪ್ರಾರಂಭಿಸುತ್ತಾರೆ. ಅನಂತರ ಸರಳ ಮದುವೆಯ ವಿಧಾನಕ್ಕೊಂದು ಚೌಕಟ್ಟು ನೀಡಿ 'ಮಂತ್ರ ಮಾಂಗಲ್ಯ' ಕೃತಿಯನ್ನೂ ರೂಪಿಸುತ್ತಾರೆ. ಋಗ್ವೇದ, ಬೃಹದಾರಣ್ಯಕ ಉಪನಿಷತ್‌ಗಳಿಂದ ಕೆಲವು ಮಂತ್ರಗಳನ್ನು, ದೇವಿ ಸ್ತುತಿ ಹಾಗೂ ರಾಮಕೃಷ್ಣ ಸ್ತೋತ್ರಗಳ ಕೆಲವು ಸಂಸ್ಕೃತದ ಭಾಗಗಳನ್ನು ನೀಡಿ ಕನ್ನಡದ ಅನುವಾದವನ್ನೂ ಕೊಟ್ಟಿದ್ದಾರೆ. ಆರಂಭದಲ್ಲಿ ಮಂತ್ರ ಮಾಂಗಲ್ಯದ ಅರ್ಥ, ಸ್ವರೂಪ, ಉದ್ದೇಶ ಹಾಗೂ ವಿಧಾನಗಳ ಬಗೆಗೆ ವಿವರವಾಗಿ ಬರೆದಿದ್ದಾರೆ.

ಯಾವೊಂದು ವರ್ಗವು ಇದನ್ನೊಂದು ಚಳುವಳಿ ಅಥವಾ ಮಾದರಿಯ ರೀತಿಯಲ್ಲಿ ಅನುಸರಿಸಲಿಲ್ಲ. ಆದರೆ ಇದರ ಪ್ರಭಾವವನ್ನು ಅಲ್ಲಗೆಳೆಯುವಂತಿಲ್ಲ.

ಚಿತ್ರದುರ್ಗದ ಮುರುಘಾಮಠ ಸೇರಿದಂತೆ ಕರ್ನಾಟಕದ ಅನೇಕ ಪ್ರಗತಿಪರ ಮಠಗಳ ಸರಳವಾದ, ಸಾಮೂಹಿಕವಾದ, ಜಾತ್ಯಾತೀತ ಮದುವೆಗಳಿಗೆ ಇದು ಪ್ರೇರಣೆ ನೀಡಿದೆ. ಅನೇಕ ಸಂಘ ಸಂಸ್ಥೆಗಳು ಪ್ರಭಾವಿತವಾಗಿವೆ. ಇದರ ಪ್ರಭಾವದಿಂದ ಕೆ. ರಾಮದಾಸ್ ಮತ್ತಿತರ ಗೆಳೆಯರು 'ಮಾನವ ಮಂಟಪ' ಎಂಬ ಸಂಸ್ಥೆಯನ್ನು ಹುಟ್ಟುಹಾಕಿ ಪ್ರತಿವರ್ಷ ಬುದ್ಧ ಪೂರ್ಣಿಮೆಯಂದು ಅಂತರ್ ಜಾತೀಯ, ಅಂತರ್ ಧರ್ಮಿಯ ಹಾಗೂ ಸರಳ ವಿವಾಹಗಳನ್ನೇರ್ಪಡಿಸುತ್ತಿದ್ದು ಇತ್ತೀಚಿಗೆ ಅದೂ ಆಗುತ್ತಿಲ್ಲ. ಡಾ. ಸಣ್ಣರಾಮ ಅವರು ಅದನ್ನೇ ಲಂಬಾಣಿ ಭಾಷೆಗೆ ಅನುವಾದಿಸಿ ತಮ್ಮ ಮಗಳ ಮದುವೆಯನ್ನು ಅದೇ ರೀತಿ ಮಾಡಿದ್ದಾರೆ.

ಕುವೆಂಪು ಅವರ ಒಕ್ಕಲಿಗರಲ್ಲೇ ಮಂತ್ರ ಮಾಂಗಲ್ಯ ರೀತಿಯ ಮದುವೆಯ ಬಗ್ಗೆ ಆಸಕ್ತಿ ಇಲ್ಲ. ಕುವೆಂಪುರನ್ನು ಕಾಣಲು ಬಂದ ಒಕ್ಕಲಿಗರ ಸ್ವಾಮೀಜಿ ಆದಿ ಚುಂಚನಗಿರಿಯ ಬಾಲಗಂಗಾಧರನಾಥರಿಗೆ ಅವರು ಹೇಳಿದ್ದು, "ವೈದಿಕ ಮಠಗಳನ್ನು ಅನುಕರಣೆ ಮಾಡುತ್ತಾ, ಪಾದ ಪೂಜೆ, ಅಡ್ಡಪಲ್ಲಕ್ಕಿ, ಕಿರೀಟಧಾರಣೆ ಇವುಗಳ ನಕಲಿಯಲ್ಲಿ ತೊಡಗಬೇಡಿ, ಏಕೆಂದರೆ ನೀವು ಭಾರತೀಯ ಸನಾತನ ಧರ್ಮದ ವೈದಿಕ ಆವೃತ್ತಿಯನ್ನು ಪುರಸ್ಕರಿಸುವುದಾದರೆ ಅದು ಜಗದ್ಗುರುವಾಗುವ ನಿಮ್ಮ ಅರ್ಹತೆಯನ್ನೇ ತಿರಸ್ಕರಿಸುತ್ತದೆ. ನೀವು ರಾಮಕೃಷ್ಣ ಮಿಶನ್‌ನ ರೀತಿ ನಿಯಮಗಳನ್ನೂ ಧ್ಯೇಯ ದೋರಣೆಗಳನ್ನೂ ತಿಳಿದುಕೊಂಡು ಆ ರೀತಿ ವರ್ತಿಸಿ. ಇಡೀ ಶೂದ್ರ ಸಮುದಾಯವನ್ನು ಬದಲಾಯಿಸುವ ಆಧ್ಯಾತ್ಮಿಕ ಮತ್ತು ಸಾಮಾಜಿಕ ಪರಿವರ್ತನೆಯ ಹರಿಕಾರರಾಗಿ". ಆದರೆ ಅವರು ಇಂದು ಎಲ್ಲ ವೈದಿಕ ಮಠಗಳ ಗುರುಗಳನ್ನು ಮೀರಿಸುವಂತೆ ವೈದಿಕಾಚರಣೆಗಳಲ್ಲಿ ಹಾಗೂ ಶ್ರೀಮಂತಿಕೆಯಲ್ಲಿ ಮುಳುಗಿದ್ದಾರೆ. ರಾಜಕೀಯ, ಸಾಮಾಜಿಕ, ಧಾರ್ಮಿಕ ಬೇರೆ ಬೇರೆ ಕಾರಣಗಳಿಗೆ ಶೂದ್ರ ಸಮುದಾಯ ಕೂಡ ಇಂಥವರನ್ನೇ ಆದರ್ಶವೆಂದು ಸ್ವೀಕರಿಸಿದೆ.

ಹಾಗಾದರೆ ಮಂತ್ರ ಮಾಂಗಲ್ಯದಲ್ಲಿಯೇ ಸೋಲಿದೆಯಾ? ಎಂದರೆ ಖಂಡಿತಾ ಇಲ್ಲ. ಅದು ಸಮಾಜದ, ಅನುಸರಿಸಲು ಇಷ್ಟವಿಲ್ಲದವರ ಸೋಲಾಗಿದೆ. ಅದಕ್ಕೆ ಅನೇಕ ಕಾರಣಗಳನ್ನು ಕೊಡಬಹುದು. ಮೊದಲನೆಯದಾಗಿ ಈ ವಿಧಾನ ರೂಢಿಗತವಾಗಿರುವ, ಕೆಲವರ ಆದಾಯದ ಮೂಲವಾಗಿರುವ, ಪ್ರತಿಷ್ಠೆಯ ಸಂಕೇತವಾಗಿರುವ ಒಂದು ಸಾಂಸ್ಥಿಕ ವ್ಯವಸ್ಥೆಯನ್ನೇ ಧಿಕ್ಕರಿಸುತ್ತದೆ. ಅದ್ದೂರಿ, ಪ್ರತಿಷ್ಠೆಯ ಜಾಗದಲ್ಲಿ ಸರಳತೆ ಬರುತ್ತದೆ. ವಿಶೇಷವಾಗಿ ಪುರೋಹಿತಶಾಹಿಯ 'ಪೌರೋಹಿತ್ಯ'ವನ್ನು ತಿರಸ್ಕರಿಸುವುದರ ಮೂಲಕ ಬ್ರಾಹ್ಮಣ್ಯದ ಅಸ್ತಿತ್ವವನ್ನೇ ಅಲ್ಲಗಳೆಯುತ್ತದೆ. ಬಹುಸಂಖ್ಯಾತರಿರುವ ಸಮಾಜ, ಮದುವೆಯನ್ನು ಒಂದು ಪ್ರತಿಷ್ಠೆಯ ಸಂದರ್ಭವನ್ನಾಗಿ ಮಾಡಿಕೊಂಡಿರುವುದೇ ಸಮಸ್ಯೆಯ ಮೂಲ.

ಜೊತೆಗೆ ವರ್ತಮಾನದ ಬದುಕು ವೈಭೋಗದ, ವಿಲಾಸಿಯ ಬದುಕಾಗಿದೆ. ಸಂತೋಷದ, ವಿಲಾಸದ ಕಾರಣಕ್ಕೆ ಮದುವೆಯ ಸಂದರ್ಭ ಎಂದು ಅದು ಭಾವಿಸುತ್ತದೆ. ನಮ್ಮ ಅನೇಕ ಮಠಗಳು ಹಾಗೂ ಮಾಧ್ಯಮಗಳೂ ಸಹಿತ ಅದ್ದೂರಿ ಮದುವೆಗಳನ್ನೇ ನಿಜವಾದ ಮದುವೆಗಳೆಂದು ಬಿಂಬಿಸುತ್ತಿವೆ. ಮಠ ಹಾಗೂ ಗುರುಗಳು ಮನಸ್ಸು ಮಾಡಿದರೆ ಮಂತ್ರ ಮಾಂಗಲ್ಯ ಕಷ್ಟವೇನಲ್ಲ. ಶೂದ್ರ ಕವಿಯೊಬ್ಬನ ಈ ವಿಧಾನವನ್ನು ವೈದಿಕ ಶಾಹಿಯ ಪರಂಪರೆಯಲ್ಲಿರುವ, ಬ್ರಾಹ್ಮಣವನ್ನೇ ಸಾಕುತ್ತಿರುವ ಮಠಗಳು ಅನುಸರಿಸುವ ವಿಶಾಲತೆಯನ್ನು ತೋರಿಸಿಯಾವೇ? ಖಂಡಿತಾ ಇಲ್ಲ. ಕೆಲವು ಶೂದ್ರ ಮಠಗಳಂತೂ ವೈದಿಕಾಚರಣೆಗಳನ್ನೇ ತಮ್ಮ ಉಸಿರಾಗಿಸಿಕೊಂಡಿವೆ. ಉನ್ನತ ವರ್ಗದವರಿಗೆ ಅಂತಸ್ತು, ಮಧ್ಯಮ ವರ್ಗದವರಿಗೆ ಪ್ರತಿಷ್ಠೆ ಹಾಗೂ ದುಡಿವ ಶ್ರಮಿಕ ವರ್ಗದವರಿಗೆ ಇದರ ಬಗ್ಗೆ ತಿಳಿಯದೇ ಇರುವುದು ಕಾರಣವಾಗಿ ಈ ತತ್ವ ವರ್ತಮಾನದ ಬದುಕಿನಲ್ಲಿ ಸೇರಿಕೊಳ್ಳುತ್ತಿಲ್ಲ.

ಇದೆಲ್ಲದರ ಜೊತೆಗೆ ಪುರೋಹಿತಶಾಹಿಯ ಕಪಿಮುಷ್ಠಿಯ ಹಿಡಿತ. ತಮ್ಮ ಆದಾಯದ ಮೂಲವಾಗಿರುವ, ತಮ್ಮ ಅಸ್ತಿತ್ವದ ಪ್ರಶ್ನೆಗಳೇ ಆಗಿರುವ ಹುಟ್ಟು ಮದುವೆ, ತಿಥಿ, ಗೃಹಪ್ರವೇಶದ ಶಾಸ್ತ್ರಗಳು ಹಾಗೂ ಸತ್ಯನಾರಾಯಣ ಪೂಜೆ, ನವಗ್ರಹ ಪೂಜೆ ಇತ್ಯಾದಿಗಳನ್ನು ಮಾಡಲೇಬೇಕೆಂಬ ಅನಿವಾರ್ಯದ ಒತ್ತಡವನ್ನು ಸಮಾಜದಲ್ಲಿ ಅವರು ತರುತ್ತಾರೆ. ಶಿಕ್ಷಣವಿಲ್ಲದ, ಮುಗ್ಧ ಜನಗಳು ಸಹಾಯ ಅಥವಾ ಪರಿಹಾರಕ್ಕಾಗಿ ಅವರಲ್ಲಿ ಹೋದಾಗ ಕಂದಾಚಾರದ ಶಾಸ್ತ್ರಗಳನ್ನು ಮಾಡಲೇಬೇಕೆಂದು ಹೇಳುತ್ತಾರೆ. ಅಂಥದ್ದರಲ್ಲಿ ಮದುವೆಯೆಂಬ ಬಹು ಆದಾಯ ತರುವ ವ್ಯವಸ್ಥೆಯನ್ನು ಸರಳವಾಗಿ, ಪೌರೋಹಿತ್ಯ ಇಲ್ಲದೆ ಮಾಡಲು, ಮಾಡಿಸಲು ಪುರೋಹಿತರಾಗಿ ಮುಂದಾಗುವುದು ಅಸಾಧ್ಯ.

ದೇವಾಲಯ ಮತ್ತು ಪೂಜಾ ಸಂಸ್ಕೃತಿಯ ನಿರಾಕರಣೆ

ಪ್ರಕೃತಿಯಲ್ಲಿ ಹಾಗೂ ಪ್ರತಿಯೊಂದರಲ್ಲಿ ದೇವರನ್ನು ಕಾಣುವ ಕುವೆಂಪು, ಅದೇ ದೇವರ ಹೆಸರಿನಲ್ಲಿ ನಡೆಯುವ ಪುರೋಹಿತಶಾಹಿ ಅಥವಾ ಬ್ರಾಹ್ಮಣ್ಯದ ಹುನ್ನಾರ, ಧಾಂಬಿಕ ಪೂಜೆ, ಬಲಿ, ಮೌಢ್ಯ, ಯಜ್ಞ, ಯಾಗ ಇತ್ಯಾದಿ ಕಂದಾಚಾರ ಮತ್ತು ಶೋಷಣೆಗಳನ್ನು ತಿರಸ್ಕರಿಸುತ್ತಾರೆ. ಗುಡಿ, ಪೂಜಾರಿ ಹಾಗೂ ಶಾಸ್ತ್ರ ಪುರಾಣಗಳನ್ನು ನಿರಾಕರಿಸಿ ಅವುಗಳ ಜಾಗಗಳಲ್ಲಿ ಕ್ರಮವಾಗಿ ಪ್ರಕೃತಿ, ಕವಿ ಹಾಗೂ ಕಾವ್ಯಗಳನ್ನಿಟ್ಟು ನೋಡಲು ಬಯಸುತ್ತಾರೆ. ಅವರಿಗೆ ಸೂರ್ಯೋದಯ, ಚಂದ್ರೋದಯ ಪ್ರತಿಯೊಂದು ದೇವರ ದಯೆಯಾದರೂ ಇದೇ ದೇವರ ಹೆಸರಿನಲ್ಲಿ ನಡೆಯುವ ಶೋಷಣೆ ಮಾತ್ರ ಸಹಿಸಲಾರರು. ವಿ. ಚಂದ್ರಶೇಖರ ನಂಗಲಿ ಹೇಳುವಂತೆ ಅವರದು ಪ್ರತಿಲೋಮ ಚಿಂತನೆಯಾಗಿದೆ.

ಯಥಾಸ್ಥಿತಿ ವರ್ಣವ್ಯವಸ್ಥೆ, ಸಾಂಸ್ಥಿಕ ಧರ್ಮ ಮತ್ತು ಪುರೋಹಿತ ಶಾಹಿಯ ಪ್ರತಿಪಾದನೆ, ಊಳಿಗಮಾನ್ಯ ಪದ್ಧತಿ, ಪ್ರಭುತ್ವ ರಕ್ಷಿಸುವ ಹಿತಾಸಕ್ತಿ ಮೊದಲಾದವುಗಳು ಅನುಲೋಮ ಚಿಂತನೆಗಳಾದರೆ, ಇವುಗಳಿಗೆ ವ್ಯತಿರಿಕ್ತವಾದ ಪರಿವರ್ತನೆ, ವರ್ಣವ್ಯವಸ್ಥೆಯ ಉಲ್ಲಂಘನೆ, ಸಾಂಸ್ಥಿಕ ಧರ್ಮ ಮತ್ತು ಪುರೋಹಿತ ಶಾಹಿಯ ನಿರಾಕರಣೆ, ಭೂಸ್ವಾಮ್ಯ ನೀತಿಯ ಧಿಕ್ಕಾರ, ಪ್ರಭುತ್ವಕ್ಕೆ ತಲೆಬಾಗದ ದಿಟ್ಟತನ ಮೊದಲಾದವುಗಳು ಪ್ರತಿಲೋಮ ಚಿಂತನೆಗಳಾಗಿವೆ. ಕುವೆಂಪು ಪ್ರತಿಲೋಮ ಚಿಂತನೆಯ ಪ್ರತಿಪಾದಕರಾಗಿರುವ ಕಾರಣ ಗುಡಿ ಹಾಗೂ ಧಾಂಬಿಕ ಪೂಜಾ ಸಂಸ್ಕೃತಿಯನ್ನು ನಿರಾಕರಿಸುತ್ತಾರೆ. ಅವರದು ಆಧ್ಯಾತ್ಮದ ನೆಲೆಯಾದ್ದರಿಂದ ಗುಡಿ ಪೂಜೆ ಇತ್ಯಾದಿಗಳು ತೀರಾ ಖಾಸಗಿ ವಿಷಯಗಳಾಗುತ್ತವೆ. ಆದರೆ ಪುರೋಹಿತಶಾಹಿ ದೇವರು, ಧರ್ಮಗಳನ್ನು ಮುಂದು ಮಾಡಿ ಶೋಷಿಸುತ್ತಿರುವುದನ್ನು ಅವರು ಸಹಿಸರು. ದೇವಾಲಯದ ನಿರಾಕರಣೆಯನ್ನು ಬುದ್ಧ, ಬಸವಣ್ಣನವರೂ ಮಾಡಿದ್ದಾರೆ. ಬಸವಣ್ಣನ ಕಾಲಕ್ಕೆ ದೇವಾಲಯದ ಜಾಗದಲ್ಲಿ ಕಾಯ ಬರುವುದನ್ನು ನಾವು ಕಾಣಬಹುದಾಗಿದೆ.

ಅವರ ಕಾವ್ಯ, ನಾಟಕ, ಕಾದಂಬರಿ ಮತ್ತಿತರ ಕೃತಿಗಳಲ್ಲಿಯೂ ದೇವರು ಹಾಗೂ ದೇವಾಲಯದ ನಿರಾಕರಣೆ ಭಿನ್ನ ಭಿನ್ನ ನೆಲೆಗಳಲ್ಲಿ ಮೂಡಿ ಬಂದಿದೆ. ದೇವರು ಸೆರೆಯಾಳ್, ದೇಗುಲ ಸೆರೆಮನೆ, ಕಾವಲು ಪೂಜಾರಿ (ದೇವರು ಸೆರೆಯಾಳ್) ನೂರು ದೇವರನ್ನೆಲ್ಲಾ ನೂಕಾಚೆ ದೂರ ಭಾರತಾಂಬೆಯೇ ದೇವಿ... (ಇಂದಿನ ದೇವರು) ಗುಡಿ, ಚರ್ಚು, ಮಸಜೀದಿಗಳ ಬಿಟ್ಟು ಹೊರ ಬನ್ನಿ... (ಓ ಬನ್ನಿ ಸೋದರರೇ ಬೇಗ ಬನ್ನಿ) ಇತ್ಯಾದಿಗಳನ್ನು ನೋಡಬಹುದು. ಈ ದೃಷ್ಟಿಯಿಂದ ಅವರ ಇಡೀ ಸಾಹಿತ್ಯ ಒಂದು ರೀತಿಯಲ್ಲಿ 'ಕರೆ' ಕೊಡುವ 'ಧೋರಣ ಪ್ರಧಾನ ಸಾಹಿತ್ಯ'ವಾಗಿದೆ. ಹೊರಬನ್ನಿ, ಹಾಗು, ನಿರಂಕುಶ ಮತಿಗಳಾಗಿ, ಹಿಡಿಯಬನ್ನಿ, ವಿಚಾರ ಕ್ರಾಂತಿಗೆ ಆಹ್ವಾನ, ತೊಡೆಯಬೇಕು, ಆಗಬೇಕು... ಹೀಗೆ ಕಾವ್ಯ ಕರೆಯೂ ಆಗಿ ವಿಚಾರ ಪ್ರಚೋದಕವಾಗುತ್ತದೆ. ಜಲಗಾರ ನಾಟಕದಲ್ಲಿಯೂ 'ಗುಡಿಗಳಿವು ಪಾಪಿಗಳ ಭೋಗಿಗಳ ಗೂಡುಗಳು' ಎನ್ನುವುದರ ಮೂಲಕ ಗುಡಿ ಸಂಸ್ಕೃತಿಯ ನಿರಾಕರಣೆ ಬರುತ್ತದೆ. ಕಾನೂನು ಹೆಗ್ಗಡತಿ ಕಾದಂಬರಿಯಲ್ಲೂ ಗುಡಿ ಸಂಸ್ಕೃತಿಯ ಪ್ರತಿಪಾದಕನಾಗಿರುವ ಪುರೋಹಿತ ಶಾಹಿ ವೆಂಕಪ್ಪಯ್ಯ ಜ್ಯೋತಿಷಿಗೂ ಹಾಗೂ ಕುವೆಂಪು ಪ್ರತಿರೂಪದಂತಿರುವ ಹೂವಯ್ಯನಿಗೂ ದೇವರು ಧರ್ಮದ ವಿಚಾರದಲ್ಲಿ ಸಂಘರ್ಷವೇ ನಡೆಯುತ್ತದೆ.

ವಾಸ್ತವದಲ್ಲಿ ಸಮಾಜದ ಉನ್ನತ, ಮಧ್ಯಮ ಹಾಗೂ ಶ್ರಮಿಕ ವರ್ಗಗಳಾವುವೂ 'ಗುಡಿ ಹಾಗೂ ಪೂಜಾ' ಸಂಸ್ಕೃತಿಯನ್ನು ನಿರಾಕರಿಸಿಲ್ಲ. ತೀರ ಈಚೆಗೆ ಆಧುನಿಕ ಶಿಕ್ಷಣ ಪಡೆದ ಮಧ್ಯಮ ವರ್ಗದ ವಿದ್ಯಾವಂತ ಯುವಕರು ಮಾತ್ರ ನಿರಾಕರಿಸಿದ್ದಾರೆ. ಸಾಮಾನ್ಯರಾದ ಬಹುಸಂಖ್ಯಾತರಿಗೆ ಗುಡಿ, ಪೂಜೆ, ಧರ್ಮ, ದೇವರು ಜೀವನದ ಭಾಗವಾಗಿದ್ದರೆ. ಜನಪದರಿಗಂತೂ ಮಣ್ಣು, ಮರ, ಕಲ್ಲು, ನದಿ, ಬೆಟ್ಟಗಳೆಲ್ಲ ದೇವರು. ಇವರಿಗೆ 'ಆಧ್ಯಾತ್ಮ' ಪರಿಕಲ್ಪನೆ ಎಟುಕದ್ದು. ಮಧ್ಯಮ ವರ್ಗದ್ದು ಇದಕ್ಕಿಂತ ತೀರಾ ಭಿನ್ನ ನಿಲುವೇನಲ್ಲ. ಉನ್ನತ ವರ್ಗಕ್ಕೆ ದೇವರು, ಧರ್ಮಗಳೂ ಪ್ರತಿಷ್ಠೆಯ ವಿಷಯಗಳು. ರಾಜಕಾರಣಿಗಳಿಗಂತೂ ಮಠ ಮಂದಿರಗಳು ಕಪ್ಪು ಹಣ ಇಡುವ ಅವ್ಯವಹಾರದ ತಾಣಗಳಾಗಿವೆ. ಮಠಾಧೀಶರಿಗೋ ಜನರ ಮೌಢ್ಯವೇ ಬಂಡವಾಳ. ಅಡ್ಡಪಲ್ಲಕ್ಕಿ ಉತ್ಸವ, ಬೆಳ್ಳಿ ಕಿರೀಟ, ಪಾದಪೂಜೆಗಳಲ್ಲಿ ಅವರು ಮುಳುಗಿದ್ದಾರೆ. ಇದುವರೆಗೆ ಊರು ಕೇರಿಗಳಲ್ಲಿ ಗುಡಿಗಳಿದ್ದರೆ, ಈಗಂತೂ ವಿಧಾನ ಸೌಧಗಳೇ ಗುಡಿಗಳಾಗುತ್ತಿವೆ. ಸರ್ಕಾರದ ಯಾವುದೇ ಕಚೇರಿಗಳಿಗೆ ಹೋದರೂ ಅಲ್ಲಿ ಕಚೇರಿ ಕೆಲಸಗಳಿಗಿಂತ ಪೂಜೆಯೇ ಮುಖ್ಯವಾಗಿರುತ್ತದೆ. ಸರ್ಕಾರಗಳೂ ಕೂಡಾ ರಾಜಕೀಯ ಲಾಭಕ್ಕಾಗಿ ಗುಡಿ ಸಂಸ್ಕೃತಿಯ ಪೋಷಣೆಯನ್ನೇ ಮಾಡುತ್ತಿವೆ.

ಭಾರತದೇಶ ಹೆಚ್ಚಾಗಿ ವೈದಿಕ ಧರ್ಮದ ವರ್ಣ ವ್ಯವಸ್ಥೆಯ ತಳಹದಿಯ ಮೇಲೆ ನಿಂತಿದೆ. ಕರ್ಮ ಸಿದ್ಧಾಂತದ ಮೇಲೆ ನಿಂತಿರುವ ವೈದಿಕ ಧರ್ಮ ಯಜ್ಞ, ಯಾಗ, ಹೋಮ, ಹವನ ಇತ್ಯಾದಿ 'ಸುಡುವ' ಸಂಸ್ಕೃತಿಯನ್ನು ಮುಖ್ಯ ನೆಲೆಯಾಗಿಸಿ ಕೊಂಡಿದೆ. ವೈದಿಕ ಸಂಸ್ಕೃತಿಯ ಇನ್ನೊಂದು ಮುಖ ಬ್ರಾಹ್ಮಣ್ಯ. ಉಪನಿಷತ್ ಆಧಾರಿತ ಹಿಂದೂ ಧರ್ಮ ಒಂದು ಜೀವನ ಪದ್ಧತಿಯೇ ಆಗಿದೆ. ವೈದಿಕ ಧರ್ಮದ ವರ್ಣ ವ್ಯವಸ್ಥೆಯನ್ನೇ ಹಿಂದೂ ಧರ್ಮವೆಂದು ಪುರೋಹಿತಶಾಹಿ ಬಿಂಬಿಸುತ್ತಿರುವುದು ದುರಂತ. ಈ ಹಿಂದೂ ಧರ್ಮದ ನೆಲೆಗಟ್ಟು ವೇದಾಂತ. ವೇದಾಂತಕ್ಕೆ ಮೂಲವಾದುವು ಉಪನಿಷತ್ತುಗಳು. ಇವುಗಳನ್ನು ರಚಿಸಿದವರು ಕ್ಷತ್ರಿಯರು. ಬುದ್ಧ, ಬಸವಣ್ಣನಂಥವರು ಇದೇ ಉಪನಿಷತ್ತುಗಳಿಂದ ಪ್ರಭಾವಿತರಾಗಿದ್ದಾರೆ. ವೈದಿಕ ಧರ್ಮದ ಈ ಹೀನಾಯ ವರ್ಣ ವ್ಯವಸ್ಥೆ ಹಾಗೂ ಜಾತಿ ವ್ಯವಸ್ಥೆಯನ್ನು ತೊಡೆಯಲೆಂದೇ ಜೈನ ಮತ್ತು ಬೌದ್ಧ ಧರ್ಮದ ಉದಯವಾಗುತ್ತದೆ.

ಮನುಷ್ಯ ಜಾತಿ ತಾನೊಂದೆ ವಲಂ

ವರ್ಣಾಶ್ರಮ ತೊಲಗಿಸಬೇಕು

ಜಾತಿ ಪದ್ಧತಿ ತೊಡೆಯಬೇಕು

ಕುವೆಂಪುರವರ ಸಪ್ತ ಸೂತ್ರಗಳ ಆರಂಭದಲ್ಲಿ ಇವು ಬರುತ್ತವೆ. ಭಾರತ ದೇಶ ಹೆಚ್ಚಾಗಿ ವೈದಿಕ ಧರ್ಮದ ವರ್ಣ ವ್ಯವಸ್ಥೆಯ ತಳಹದಿಯ ಮೇಲೆ ನಿಂತಿದೆ. ಕರ್ಮ ಸಿದ್ಧಾಂತದ ಮೇಲೆ ನಿಂತಿರುವ ವೈದಿಕ ಧರ್ಮ ಯಜ್ಞ, ಯಾಗ, ಹೋಮ, ಹವನ ಇತ್ಯಾದಿ 'ಸುಡುವ' ಸಂಸ್ಕೃತಿಯನ್ನು ಮುಖ್ಯ ನೆಲೆಯಾಗಿಸಿಕೊಂಡಿದೆ. ವೈದಿಕ ಸಂಸ್ಕೃತಿಯ ಇನ್ನೊಂದು ಮುಖ ಬ್ರಾಹ್ಮಣ್ಯ.

ಉಪನಿಷತ್ ಆಧಾರಿತ ಹಿಂದೂ ಧರ್ಮ ಒಂದು ಜೀವನ ಪದ್ಧತಿಯೇ ಆಗಿದೆ. ವೈದಿಕ ಧರ್ಮದ ವರ್ಣ ವ್ಯವಸ್ಥೆಯನ್ನೇ ಹಿಂದೂ ಧರ್ಮವೆಂದು ಪುರೋಹಿತ ಶಾಹಿ ಬಿಂಬಿಸುತ್ತಿರುವುದು ದುರಂತ. ಈ ಹಿಂದೂ ಧರ್ಮದ ನೆಲೆಗಟ್ಟು ವೇದಾಂತ. ವೇದಾಂತಕ್ಕೆ ಮೂಲವಾದುವು ಉಪನಿಷತ್ತುಗಳು. ಇವುಗಳನ್ನು ರಚಿಸಿದವರು ಕ್ಷತ್ರಿಯರು. ಬುದ್ಧ, ಬಸವಣ್ಣನಂಥವರು ಇದೇ ಉಪನಿಷತ್ತುಗಳಿಂದ ಪ್ರಭಾವಿತರಾಗಿದ್ದಾರೆ. ವೈದಿಕ ಧರ್ಮದ ಈ ಹೀನಾಯ ವರ್ಣ ವ್ಯವಸ್ಥೆ ಹಾಗೂ ಜಾತಿ ವ್ಯವಸ್ಥೆಯನ್ನು ತೊಡೆಯಲೆಂದೇ ಜೈನ ಮತ್ತು ಬೌದ್ಧ ಧರ್ಮದ ಉದಯವಾಗುತ್ತದೆ. ಬಸವಣ್ಣನವರು ಕೂಡ ವೈದಿಕ ಸಂಸ್ಕೃತಿಯ ಅನಿಷ್ಟ ಅಸಮಾನತೆಯನ್ನು ತಿರಸ್ಕರಿಸಿ ಸಮಾನತೆಯನ್ನು ಎತ್ತಿ ಹಿಡಿದರು. ಕ್ರಿಸ್ತ ಪೂರ್ವದಿಂದಲೂ ವೈದಿಕಶಾಹಿ (ವರ್ಣಾಶ್ರಮ) ಹಾಗೂ ಪುರೋಹಿತಶಾಹಿ (ಬ್ರಾಹ್ಮಣ್ಯ) ಗಳನ್ನು ವಿರೋಧಿಸುತ್ತಾ ಬಂದವರೆಲ್ಲ ಅವೈದಿಕರೇ ಆಗಿದ್ದಾರೆ.

ಬುದ್ಧ, ಬಸವ, ವಚನಕಾರರು, ಸರ್ವಜ್ಞ, ಕನಕ, ತತ್ವಪದಕಾರರು, ಪೆರಿಯಾರ್, ನಾರಾಯಣಗುರು ಮೊದಲಾದವರು ಈ ಪರಂಪರೆಯಲ್ಲಿ ಬರುತ್ತಾರೆ. ಅಷ್ಟೇ ಅಲ್ಲ, ನಮ್ಮಲ್ಲಿ ನಾಥ, ಭೈರವ, ದತ್ತ, ಸೂಫಿ, ಮೊದಲಾದ ಅವೈದಿಕ ಪಂಥಗಳೇ ಇವೆ. ಅವೈದಿಕರದು ಮುಖ್ಯವಾಗಿ ಅವೈದಿಕವಾದ, ವಿಚಾರವಾದ ಹಾಗೂ ಭೌತಿಕವಾದ. ಕುವೆಂಪು ಇಂತಹ ಪರಂಪರೆಯಲ್ಲಿ ಬರುವುದರಿಂದ ವರ್ಣಾಶ್ರಮದ ಜಾತಿ ಪದ್ಧತಿಯ ನಿರ್ಮೂಲನೆಗಾಗಿ ಸಪ್ತ ಸೂತ್ರಗಳನ್ನೇ ಹೇಳುತ್ತಾರೆ. ಅಷ್ಟೇ ಅಲ್ಲ ಸ್ಥಾವರವಾದ, ಪ್ರಧಾನ ಸಂಸ್ಕೃತಿಯ ನಿರಾಕರಣೆಗಾಗಿ ತಮ್ಮ ಸೃಜನಶೀಲ ಹಾಗೂ ಸೃಜನೇತರ ಕೃತಿಗಳಲ್ಲಿ ಸೂಚ್ಯವಾಗಿ ಹಾಗೂ ಸೃಜನೇತರ ಕೃತಿಗಳಲ್ಲಿ ವಾಚ್ಯವಾಗಿ ಬಂದಿದೆ. ವಿಶೇಷ ವೆಂದರೆ ಅವರ ವೈಯಕ್ತಿಕ, ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಬದುಕಿನ ವೈಚಾರಿಕತೆ ಮತ್ತು ಸಾಹಿತ್ಯ ವೈಚಾರಿಕತೆ ಬೇರೆ ಬೇರೆಯಾಗದಿರುವುದು.

'ಜಲಗಾರ', ಶೂದ್ರತಪಸ್ವಿ' ನಾಟಕಗಳಲ್ಲಿ ನೇರವಾಗಿ ಈ ಮೂರು ತತ್ವಗಳ ಪ್ರಸ್ತಾಪವಿದ್ದರೆ ಅವರ ಕಾದಂಬರಿ, ಮಹಾಕಾವ್ಯ ಹಾಗೂ ಕಾವ್ಯಗಳಲ್ಲಿ ಅಂಶಿಕವಾಗಿ ಪ್ರಸ್ತಾಪವಿದೆ. 'ಶೂದ್ರತಪಸ್ವಿ'ಯಂತೂ ಜಾತಿ ಸಮಸ್ಯೆಗೆ ಹೊಸ ವ್ಯಾಖ್ಯಾನವನ್ನೇ ನೀಡಿದೆ. 'ಆರಾದರೇನ್ ಆರಾಧ್ಯರ್ ತಪೋಶನರ್!' ಎಂದು ಹೇಳುವ ಮೂಲಕ ಜ್ಞಾನ, ತಪಸ್ಸು ಮೊದಲಾದವುಗಳನ್ನು ಪಡೆಯಲು ಜಾತಿ ಕಾರಣವಾಗಬಹುದೆಂದು ವರ್ಣವ್ಯವಸ್ಥೆಯನ್ನೇ ತಿರಸ್ಕರಿಸುತ್ತಾರೆ. 'ಜಲಗಾರ' ನಾಟಕದಲ್ಲಿಯೂ ಜಾಡಮಾಲಿಯ ಕೆಲಸಕ್ಕಿಂತ ಕಾಣದ ಶಿವನ ಪೂಜೆ ಶ್ರೇಷ್ಠವೇನಲ್ಲ ಎನ್ನುವ ನಿಲುವಿಗೆ ಬರುತ್ತಾರೆ. 'ಕಾನೂರುಹೆಗ್ಗಡತಿ'ಯ ಹೂವಯ್ಯ

ಪುರೋಹಿತಶಾಹಿ ವೆಂಕಪ್ಪಯ್ಯ ಜ್ಯೋತಿಷಿಯಿಂದ ಕೊನೆಯವರೆಗೂ ಬಿಡುಗಡೆಗೊಯ್ಯಿಸುತ್ತಾನೆ. ಅವರ ಕೃತಿಗಳ ಹೂವಯ್ಯ, ಶಂಭೂಕ, ಜಲಗಾರ, ಏಕಲವ್ಯ ಮೊದಲಾದವರೆಲ್ಲ ಶೂದ್ರರೇ ಆಗಿದ್ದಾರೆ. ಶ್ರೀ ರಾಮಾಯಣ ದರ್ಶನವಂತೂ ಒಂದು ಸೆಕ್ಯುಲರ್ ಮಹಾಕಾವ್ಯವಾಗಿದೆ.

ಬದುಕಿನಲ್ಲಿ ಈ ಎಲ್ಲ ತತ್ವಗಳು ಅನುಸರಿಸಲಿಕ್ಕೆ ಸಾಧ್ಯವಾಗಬಹುದಾದವುಗಳಾದರೂ ವರ್ತಮಾನದ ವ್ಯವಸ್ಥೆ ಅನುಸರಿಸದ ಸ್ಥಿತಿಯಲ್ಲಿದೆ. ಸಾವಿರಾರು 'ಜಾತಿ'ಗಳಿರುವ ನಮ್ಮ ಸಾಮಾಜಿಕ ವ್ಯವಸ್ಥೆ, ಓಟ್ ಬ್ಯಾಂಕ್ ರಾಜಕಾರಣದ ರಾಜಕೀಯ ಸಿದ್ಧಾಂತಗಳು, ಧಾರ್ಮಿಕವಾದ ಮತ, ಮೌಢ್ಯದ ಆಚರಣೆಗಳು, ಪುರೋಹಿತಶಾಹಿಯ ಹುನ್ನಾರ ಮೊದಲಾದವುಗಳ ಹಿಡಿತದಲ್ಲಿರುವ ಸಮುದಾಯಗಳು 'ಜಾತ್ಯಾತೀತ' ನಿಲುವಿಗೆ ಬರಲು ಆಗುತ್ತಿಲ್ಲ. ಅಲ್ಲದೆ ಬಹುಭಾಷೆ, ಬಹುಸಂಸ್ಕೃತಿಗಳ ಇಲ್ಲಿ 'ಜಾತಿ' ರಹಿತ ಸಮಾಜವನ್ನು ಕಲ್ಪಿಸಿಕೊಳ್ಳಲೂ ಆಗುತ್ತಿಲ್ಲ. ಉನ್ನತ ವರ್ಗವೆ ಅಧಿಕವಿರುವ ನಗರ ಪ್ರದೇಶಗಳಲ್ಲಿ ಇದು ಮೇಲ್ನೋಟದಲ್ಲಿ ಕಾಣದೆ ಹೋದರೂ ಸಾಮಾಜಿಕ ಆಚರಣೆಯಲ್ಲಿ ವಿವಾಹದಂತಹ ಸಂಸ್ಥೆಗಳಲ್ಲಿ, ಧಾರ್ಮಿಕ ಆಚರಣೆಗಳಲ್ಲಿ, ಮೀಸಲಾತಿಯಂಥ ಆರ್ಥಿಕ ವಿಷಯ ಇತ್ಯಾದಿಗಳಲ್ಲಿ ಕಾಣುತ್ತಿದೆ. ಮಧ್ಯಮ ಹಾಗೂ ಕೆಳವರ್ಗಗಳಿಗಂತೂ ಜಾತಿ ವ್ಯವಸ್ಥೆ ಹೊರಬರಲಾರದ ಗೋಡೆಯಂತಿದೆ. ತುಂಬಾ ಕಡಿಮೆ ಪ್ರಮಾಣದಲ್ಲಿ ಈ ಮೂರು ವರ್ಗಗಳಲ್ಲಿ ಜ್ಯಾತ್ಯತೀತ ನಿಲುವಿಗೆ ಬದ್ಧರಾಗಿದ್ದು ಬದುಕುತ್ತಿದ್ದಾರೆ.

ಸರ್ವೋದಯ

ಪಂಚಮಂತ್ರಗಳಲ್ಲಿ ಒಂದಾದ ಈ ತತ್ವದ ಹಿನ್ನಲೆಗಿರುವುದು ಸರ್ವರ ಉದಯ. ವಿವೇಕಾನಂದರ 'ದರಿದ್ರ ನಾರಾಯಣ' ಹಾಗೂ ಗಾಂಧೀಜಿಯವರ 'ಆದರ್ಶ ಸಾಮಾಜಿಕ ವ್ಯವಸ್ಥೆ'ಯ ಪರಿಕಲ್ಪನೆಗಳು ಈ ತತ್ವಕ್ಕೆ ಪ್ರೇರಣೆಯಾಗಿವೆ. ಸರ್ವರಲ್ಲಿ ವ್ಯಾಪಕವಾದ ಪ್ರೀತಿ ಯಿರುವ ಕಾರಣ ಇಂತಹ ತತ್ವ ಮೂಡುತ್ತದೆ. ಸರ್ವರಿಗೆ ಸಮಪಾಲು, ಸಮಬಾಳು ಎಂಬುದು ಈ ತತ್ವದ ಕ್ರಿಯಾರೂಪ. ಕುವೆಂಪುರವರಿಗಿರುವ ಸಾಮಾಜಿಕ ಕಳಕಳಿ ವಿಶ್ವದ ಲೇಖಕರಲ್ಲಿಯೇ ಅಪರೂಪವಾದದ್ದು. ತಮ್ಮ ಇಡೀ ಬದುಕು ಬರಹದ ತುಂಬ ಅವರು ಸಾಮಾಜಿಕ ಅಸಮಾನತೆಯ ವಿರುದ್ಧ ಹೋರಾಡಿದ್ದಾರೆ. ಸರ್ವರ ಉದಯವನ್ನು ತಮ್ಮ ತತ್ವಗಳಲ್ಲಿ ಕಂಡರಿಸಿದ್ದರಿಂದಲೆ ಅವರು ವಿಶ್ವ ಮಾನವ ಕವಿಯಾಗಲು ಸಾಧ್ಯವಾದದ್ದು.

ವಾಸ್ತವದಲ್ಲಿ ವೈದಿಕಶಾಹಿಯ ವರ್ಣಾಶ್ರಮ ಹಾಗೂ ಪುರೋಹಿತಶಾಹಿ ಹಾಗೂ ಬಂಡವಾಳಶಾಹಿ ಹಿತಾಸಕ್ತಿಗಳು ನಮ್ಮಲ್ಲಿರುವಾಗ ಈ ತತ್ವ ವರ್ತಮಾನದಲ್ಲಿ ಸಾಧಿತವಾಗುವುದು ಕಷ್ಟ. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಸಾವಿರಾರು ಎಕರೆಗಳ ಗೌಡರು, ದೇಸಾಯಿಯಂಥವರು ಇರುವಲ್ಲಿಯೆ ಭೂಮಿಯೇ ಇರದಿರುವ ಚೋಮನಂತವರೂ ಇದ್ದಾರೆ. ತಿಂಗಳಿಗೆ ಇಪ್ಪತ್ತು ಸಾವಿರದಿಂದ ಎರಡು ಲಕ್ಷ ಸಂಬಳ ಪಡೆಯುವವರು ಇರುವಲ್ಲಿಯೇ ತುತ್ತಿನ ಚೀಲ ತುಂಬಲು ಇಪ್ಪತ್ತು ರೂಪಾಯಿಗಳ ಕೂಲಿಗಾಗಿ ಕಾಯುವವರೂ ಇದ್ದಾರೆ. ಜಾಗತೀಕರಣದ ಬಿಸಿಯಲ್ಲಿ ಗ್ರಾಮ ಭಾರತ ನಲುಗುತ್ತಿದೆ.

ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಸರ್ಕಾರಗಳ ನೀತಿಗಳೋ ಬಂಡವಾಳಶಾಹಿಗಳ, ಭೂಮಾಲಿಕರ, ಹೊಟ್ಟೆ ತುಂಬಿದವರ ಪರವಾಗಿಯೇ ಇರುತ್ತವೆ. ರಾಜಕೀಯದಲ್ಲಿರುವವರು ಆರ್ಥಿಕ ಹಾಗೂ ಜಾತಿಬಲ ಇದ್ದವರು. ನಮ್ಮದು ಪ್ರಜಾಪ್ರಭುತ್ವ ಪದ್ಧತಿಯಾದ್ದರಿಂದ ಯಾರು ಎಷ್ಟು ಬೇಕಾದರು ಆಸ್ತಿ, ಹಣ ಹೊಂದಬಹುದಾಗಿದೆ. ಸಮಾಜ ಉನ್ನತ ಮಧ್ಯಮ ಹಾಗೂ ಶ್ರಮಿಕ ವರ್ಗಗಳಲ್ಲಿ ಹಂಚಿಹೋಗಿದೆ. ಇಂತಹ ಸಂದರ್ಭದಲ್ಲಿ ಸರ್ವೋದಯ, ಸಮಾನತೆ, ಸಮಬಾಳು ಎಂಬುವೆಲ್ಲ ಆದರ್ಶದ, ಆಶಯದ ಮಟ್ಟದಲ್ಲೆ ಉಳಿಯುತ್ತವೆ.

ನಿರಂಕುಶಮತಿ

'ಸಂಯಮ ಪೂರ್ಣವಾದ ಬುದ್ಧಿ ಸ್ವಾತಂತ್ರ್ಯವೇ ನಿರಂಕುಶಮತಿ' ಎನ್ನುತ್ತಾರೆ ಕುವೆಂಪು. ಬೌದ್ಧಿಕ ಸ್ವಾತಂತ್ರ್ಯಕ್ಕೆ ಯಾರ ಅಡ್ಡಿಯೂ ಇರಬಾರದು ಹಾಗೂ ಅದು ಸ್ವೇಚ್ಛೆಯಾಗದೆ ಸಂಯಮ ಪೂರ್ಣವಾಗಿರಬೇಕು. ನಿರಂಕುಶಮತಿಗಳಾಗುವುದೂ ಸಹಿತ ಆತ್ಮಶ್ರೀಗಾಗಿ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎಂಬ ಕೃತಿಯೇ ಬಂದಿದೆ. ಈ ಕೃತಿಯಲ್ಲಿ ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆ ನಾಡಿನ ಯುವಕರಿಗೆ ಕರೆ, ವಿದ್ಯಾರ್ಥಿಗಳಲ್ಲಿ ಮತಿಗೌರವ ಹಾಗೂ ವಿದ್ಯಾರ್ಥಿಗಳಿಗೆ ಆತ್ಮಶ್ರೀ-ಎಂಬ ನಾಲ್ಕು ಲೇಖನ ಗಳಿದ್ದು ಇವುಗಳೆಲ್ಲವೂ ನಿರಂಕುಶಮತಿ ತತ್ವವನ್ನೇ ಹೇಳುತ್ತವೆ.

ಸಂಪ್ರದಾಯದ ಸಂಕೋಲೆಗಳಲ್ಲಿ ಸಿಲುಕಬಾರದು, ಮತಭ್ರಾಂತಿ ಮತ್ತು ಮೌಢ್ಯಗಳು ವೈಜ್ಞಾನಿಕ ಪ್ರಗತಿಗೆ ಕಂಟಕಗಳು, ಓದು ಕೇವಲ ನೌಕರಿಗಾಗಿ ಅಷ್ಟೇ ಆಗದೆ ಸಂಸ್ಕೃತಿಗಾಗಿಯೂ ಓದಬೇಕೆಂಬುದು, ಪ್ರತಿ ವಿದ್ಯಾರ್ಥಿಗೆ ದೇಹಶ್ರೀ, ಭಾವಶ್ರೀ, ಬುದ್ಧಿಶ್ರೀ ಜೊತೆಗೆ ಆತ್ಮಶ್ರೀಯು ಮುಖ್ಯ-ಇತ್ಯಾದಿ ವಿಚಾರಗಳು ಕೇವಲ ವಿದ್ಯಾರ್ಥಿ ಸಮೂಹಕ್ಕಷ್ಟೇ ಅಲ್ಲ, ಎಲ್ಲ ಯುವಕರಿಗೂ ಹೇಳಿದಂತಿದೆ. ಅವರ ಈ ನಿರಂಕುಶಮತಿ ತತ್ವ ಪ್ರಾಯೋಗಿಕವಾಗಿಯೂ ಸಾಕಷ್ಟು ಪ್ರಚಾರದಲ್ಲಿದೆ. ಎಲ್ಲ ವರ್ಗದ ಜನರೂ ಅನುಸರಿಸಲು ಸುಲಭವಾದ ಮತ್ತು ಅಷ್ಟೆ ದೃಢನಿರ್ಧಾರದ ಅಗತ್ಯವನ್ನು ಬೇಡುವ ತತ್ವವಿದು. ಕುವೆಂಪುರವರ ಬದುಕು ಬರಹ ಓದಿದ, ಕೇಳಿದ, ಎಲ್ಲ ವಯಸ್ಸಿನವರು, ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿ ಇದನ್ನು ಒಪ್ಪುತ್ತಾರೆ. ಬಹುಶಃ ಉಳಿದೆಲ್ಲ ಅವರ ತತ್ವಗಳಿಗಿಂತ ಇಂತಹ ತತ್ವಗಳು ಜನತೆಯಲ್ಲಿ ಬೇಗನೆ ನೆಲೆ ಕಂಡುಕೊಳ್ಳುತ್ತವೆ.

ಕುವೆಂಪುರವರ ಉಳಿದ ತತ್ವಗಳನ್ನೂ ಹೀಗೆ ನೋಡಬಹುದು. ಒಂದು ಮುಖ್ಯ ವಿಚಾರವೆಂದರೆ ಅವರ ಈ ತತ್ವಗಳನ್ನು ಪ್ರಚಾರ ಮಾಡಲು ಸರಿಯಾದ ಒಂದು ವ್ಯವಸ್ಥೆ ಇರದಿರುವುದು. ಶಿಕ್ಷಣ ಪಡೆದ, ಅದೂ ಕೃತಿಗಳನ್ನು ಓದುವ ಅಭ್ಯಾಸವಿದ್ದು ಅವರ ಕೃತಿಗಳನ್ನು ಅಭ್ಯಾಸ ಮಾಡಿದವರು ಬದಲಾಗುವುದರಲ್ಲಿ ಖಂಡಿತಾ ಸಂಶಯವಿಲ್ಲ. ಬಂಗಾಳದ ರವೀಂದ್ರರ ಸಾಹಿತ್ಯವನ್ನು ಮನೆಮನೆಗಳಲ್ಲಿ ಪಠಿಸುವಂತೆ ರಾಷ್ಟ್ರಕವಿ ಕುವೆಂಪುರವರ ಎಲ್ಲಾ ಕಾವ್ಯ, ನಾಟಕ, ಕಾದಂಬರಿಗಳ ಓದು, ಚರ್ಚೆ, ಸಂವಾದ ಮೊದಲಾದ ಚಿಂತನೆಗಳು ನಡೆಯಬೇಕು. ಅವರ ಎಲ್ಲಾ ಕೃತಿಗಳು ಕಡಿಮೆ ಬೆಲೆಗೆ ಸಿಗುವಂತಾಗ ಬೇಕು, ಜೊತೆಗೆ ವರ್ತಮಾನದ ನಮ್ಮ ಬದುಕು ಕೂಡಾ ಎಲ್ಲ ಒತ್ತಡಗಳಿಂದ ಸ್ವಲ್ಪ ಹಗುರಾಗಬೇಕಾಗಿದೆ. ಮನುಷ್ಯ ಮತ್ತು ಮಾನವೀಯ ಸಂಬಂಧಗಳು ಮುಖ್ಯವಾದಾಗ ಕುವೆಂಪುರವರ ತತ್ವಗಳು ನಿತ್ಯ ಜೀವನದಲ್ಲಿ ಬರುವುದು ಕಷ್ಟವೇನಲ್ಲ ಈ ನಿಟ್ಟಿನಲ್ಲಿ ಸರ್ಕಾರ, ಸಂಘ ಸಂಸ್ಥೆ ಹಾಗೂ ಪ್ರಗತಿಪರರ ಜವಾಬ್ದಾರಿ ಅಧಿಕವಾಗಿದೆ. ಮುಖ್ಯವಾಗಿ ಯುವ ಜನಾಂಗ ಕುವೆಂಪುರವರನ್ನು ಅಧ್ಯಯನ ಮಾಡುವಂತೆ ನೋಡಿಕೊಳ್ಳಬೇಕಾಗಿದೆ. ಏಕೆಂದರೆ ಭವಿಷ್ಯದ ಭಾರತದ ನಿರ್ಮಾಪಕರು ಅವರೇ ತಾನೆ? □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಕನ್ನಡ ಬದುಕಿನಲ್ಲಿ ರೈತ ಚಳುವಳಿ : ಕೆಲವು ಟಿಪ್ಪಣಿಗಳು



ಕಾಲಮಾನ- ೧೪

ಡಾ. ಮುಜಾಫ್ಫರ್ ಅಸ್ಸಾದಿ

ಕರ್ನಾಟಕದಲ್ಲಿ "ನವ ರೈತ ಚಳುವಳಿ" ಹುಟ್ಟಿ ಬೆಳೆದು ಹೆಚ್ಚು ಕಡಿಮೆ ಮೂವತ್ತು ವರುಷಗಳು ಸಂದಿವೆ. ಈ ದಶಕ ಚಳುವಳಿಗಳಿಲ್ಲದ ಕಾಲಘಟ್ಟ, ಮೂವತ್ತು ವರುಷಗಳ ಕಾಲ ನಿರಂತರವಾಗಿ ಒಂದು ಚಳುವಳಿ ತನ್ನ ತೀವ್ರತೆಯನ್ನು ಉಳಿಸುವುದು ಅಷ್ಟೇನು ಸುಲಭವಲ್ಲ. ಚಳುವಳಿಗಳಿಗೂ ಒಂದು ನಿರ್ದಿಷ್ಟ ಅವಧಿಗಳೇನಾದರೂ ಇದೇಯಾ? ಅಥವಾ ಚಳುವಳಿಗಳಿಗೂ ಬದುಕು ಮತ್ತು ಸಾವುಗಳೆಂಬುದು ಇದೇಯಾ? ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ.

ಸಾಮಾಜಿಕ ಚಳುವಳಿಗಳು ಹುಟ್ಟಿಕೊಳ್ಳುವುದು ಒಂದು ನಿರ್ದಿಷ್ಟ ಸಂದರ್ಭದಲ್ಲಿ. ಆದರೆ ಎಲ್ಲಾ ಚಳುವಳಿಗಳನ್ನು ಸಾಮಾಜಿಕ ಚಳುವಳಿಗಳೆಂದು ಕರೆಯಲು ಸಾಧ್ಯವಿಲ್ಲ. ಅವುಗಳಲ್ಲಿ ಕೆಲವು ರಾಜಕೀಯವಾಗಿರುತ್ತವೆ. ಈಜಿಪ್ಟ್ ಹಾಗೂ ಮಧ್ಯಪೂರ್ವದಲ್ಲಿ ನಡೆಯುತ್ತಿರುವ ಚಳುವಳಿಗಳನ್ನು ರಾಜಕೀಯ ಚಳುವಳಿಗಳೆಂದು ಕರೆಯುವುದು ಸೂಕ್ತ. ಯಾಕೆಂದರೆ ಅವುಗಳಿಗೆ ಬಹು ಮುಖ್ಯವಾಗಿ ರಾಜಕೀಯ ಅಜೆಂಡಾವಿದೆ– ಸರ್ವಾಧಿಕಾರಿ ಸರಕಾರಗಳನ್ನು ಬದಲಾಯಿಸಿ ಪಾರ್ಲಿಮೆಂಟರಿ ಸರಕಾರವನ್ನು ರಚಿಸುವುದೇ ಅವುಗಳ ಮುಖ್ಯ ಗುರಿ. ವಾಸ್ತವವಾಗಿ ಇಂತಹ ವಿಶ್ಲೇಷಣೇಯಲ್ಲಿ ಕೆಲವು ಅಪಾಯಗಳಿರುತ್ತವೆ.. ಯಾಕೆಂದರೆ ಕೆಲವೊಮ್ಮೆ ಇಂತಹ ಚಳುವಳಿಗಳು ಮೇಲ್ನೋಟಕ್ಕೆ ಪ್ರಗತಿಪರವೆಂದು ಕಂಡು ಬಂದರೂ ಅವುಗಳ ಹಿಂದೆ ಧಾರ್ಮಿಕತೆಯ ಅಥವಾ ಬಲ ಪಂಥೀಯತೆಯ ದಟ್ಟ ಪ್ರಭಾವ ಇಡೀ ಚಳುವಳಿಯನ್ನು ಪ್ರಗತಿ ವಿರೋಧಿಯನ್ನಾಗಿ ಬದಲಾಯಿಸಬಲ್ಲುದು.

ಕರ್ನಾಟಕದಲ್ಲಿ ಹುಟ್ಟಿದ ಚಳುವಳಿಗಳ ಸಂಖ್ಯೆ ಕಡಿಮೆಯಾದರೂ ಅವುಗಳ ಪ್ರಭಾವ ಮಾತ್ರ ಗಾಢ. 1920ರ ದಶಕದಲ್ಲಿ ಹುಟ್ಟಿದ ಬ್ರಾಹ್ಮಣೇತರ ಚಳುವಳಿ ಇಡೀ ಹಿಂದುಳಿದ ಸಮುದಾಯವನ್ನು ರಾಜಕೀಯದ ಕೇಂದ್ರದ ಚೌಕಟ್ಟಿನೊಳಗೆ ನಿಲ್ಲಿಸಿದ್ದು ಒಂದು ಇತಿಹಾಸದ ಸಂಗತಿ. ಆದಕಾರಣ ಕರ್ನಾಟಕದಲ್ಲಿ ವಾಸಾಹತು ಸಂದರ್ಭದಲ್ಲಿಯೇ ರಾಜಕೀಯದೊಳಗೆ ಜಾತಿಗಳ ಧ್ರುವೀಕರಣವಾಗಲು ಸಾಧ್ಯವಾಯಿತು. ಉತ್ತರ ಭಾರತದಲ್ಲಿ ಈ ರೀತಿಯ ಚಳುವಳಿಗಳು ಹುಟ್ಟಿಕೊಳ್ಳಲು ಹತ್ತು ಹಲವು ದಶಕಗಳು ಬೇಕಾಯಿತು. ವಿಚಿತ್ರವೆಂದರೆ ಉತ್ತರಭಾರತದಲ್ಲಿ ಸಾಮಾಜಿಕ ಬದಲಾಣೆಯ ಹರಿಕಾರರು ಇದ್ದರೂ ಅವರ ರಾಜಕಾರಣದಲ್ಲಿ ಹಿಂದುಳಿದ ವರ್ಗಗಳನ್ನು ರಾಜಕೀಯ ಶಕ್ತಿ ಸಮುದಾಯಗಳಾನ್ನಾಗಿ ಪರಿವರ್ತಿಸುವ ಅಜೆಂಡಾಗಳಿರಲಿಲ್ಲ. ಅವರ ಚಳುವಳಿಗಳು ಅಂತಿಮವಾಗಿ ಸಾಮಾಜಿಕ ಚಳುವಳಿಗಳಾಗಿ ಅಂತ್ಯಗೊಂಡಿತ್ತೇ ಹೊರತು ರಾಜಕೀಯ ಚಳುವಳಿಗಳಾಗಿಯಲ್ಲ.

ಇದಕ್ಕೆ ಅಪವಾದ ವೆಂದರೆ ಬಹುಜನ ಪಕ್ಷದ ರಾಜಕಾರಣ. ಅದು ಕೂಡ 1980ರ ನಂತರವೆಂದೇ ಹೇಳಬಹುದು. ಅದರರ್ಥ ಉತ್ತರ ಭಾರತದಲ್ಲಿ ಜಾತೀಯ ಧ್ರುವೀಕರಣ ಒಂದು ಮುಗಿದ ಅಧ್ಯಾಯವೆಂದರೆ ತಪ್ಪಾಗುತ್ತದೆ. ಅಂಸಪೂರ್ಣಗೊಂಡ ಜಾತೀಯ ಧ್ರುವೀಕರಣ ರಾಜಕಾರಣದ ಪ್ರಭಾವವನ್ನು ಮಂಡಲ್-II ಎಂದೇ ಬಿಂಬಿಸಲ್ಪಟ್ಟ ಮೀಸಲಾತಿ ಚಳುವಳಿ ಸಂದರ್ಭದಲ್ಲಿ ನೋಡಬಹುದು. ಕೆಲವು ವರುಷದ ಹಿಂದೆ ಮೀಸಲಾತಿ ವಿರೋಧಿ ಚಳುವಳಿವಳು ಉತ್ತರ ಭಾರತದಲ್ಲಿ ತೀವ್ರವಾಗಿದ್ದ ಸಂದರ್ಭದಲ್ಲಿ ಕರ್ನಾಟಕ ಸಂಪೂರ್ಣವಾಗಿ ಶಾಂತವಾಗಿತ್ತು. ಯಾಕೆಂದರೆ ಕರ್ನಾಟಕದಲ್ಲಿ ಮೀಸಲಾತಿ ರಾಜಕೀಯ ಹೊಸತಾಗಿರಲಿಲ್ಲ, ಅಲ್ಲದೇ ಸಮುದಾಯಗಳು ರಾಜಕೀಯ ಸಮುದಾಯಗಳಾಗಿ ಎಷ್ಟೋ ವರುಷಗಳು ಸಂದಿದ್ದವು.

ಕರ್ನಾಟಕದ ಸಂದರ್ಭದಲ್ಲಿ ಬ್ರಾಹ್ಮಣೇತರ ಚಳುವಳಿ ನಂತರ ಹುಟ್ಟಿ ಬೆಳೆದ ವಿವಿಧ ಸಾಮಾಜಿಕ ಚಳುವಳಿಗಳು ರಾಜಕೀಯ ಚಳುವಳಿಗಳಾಗಿ ಪರಿವರ್ತಿತವಾಗಲೇ ಇಲ್ಲ. ಇದರರ್ಥ ಸಾಮಾಜಿಕ ಚಳುವಳಿಗಳು ರಾಜಕೀಯ ರಹಿತವಾಗಿದ್ದವು ಎಂದರ್ಥವಲ್ಲ. ಕರ್ನಾಟಕದ ನೆಲದಲ್ಲಿ ಹುಟ್ಟಿದ ಸಾಮಾಜಿಕ ಚಳುವಳಿಗಳು ಯಾವತ್ತೂ ರಾಜಕೀಯ ರಹಿತವಾಗಿರಲಿಲ್ಲ. ಅದಕ್ಕೆ ದಲಿತ ಚಳುವಳಿಯಾಗಲೀ, ಗೋಕಾಕ್ ಚಳುವಳಿಯಾಗಲೀ, ಅಥವಾ ರೈತ ಚಳುವಳಿಯಾಗಲೀ ಹೊರತಾಗಿರಲಿಲ್ಲ. ಶುದ್ಧ ಸಾಮಾಜಿಕ ಚಳುವಳಿಗಳೆಂದು ಗುರುತಿಸಲ್ಪಡುವ ಪರಿಸರ ಚಳುವಳಿಯನ್ನೇ ಗಮನಿಸಿದರೆ ಇದು ಸ್ಪಷ್ಟವಾಗಿ ಕಂಡು ಬರುತ್ತದೆ. ಯಾಕೆಂದರೆ ಎಲ್ಲಾ ಚಳುವಳಿಗಳು ರಾಜಕೀಯ ಚೌಕಟ್ಟಿನೊಂದಿಗೆ ಅನುಸಂಧಾನ ಮಾಡುತ್ತಿದ್ದನ್ನು ನಾವು ಅಲ್ಲಗಳೆಯಲು ಸಾಧ್ಯವಿಲ್ಲ.

1980ರ ದಶಕದ ಆದಿಯಲ್ಲಿ ಕರ್ನಾಟಕದಲ್ಲಿ ಒಂದು ವಾದ ಚಾಲ್ತಿಯಲ್ಲಿತ್ತು: ಅದರ ಪ್ರಕಾರ ಕನ್ನಡ ಬದುಕಿಗೆ ರೈತರ ಪರಿಭಾಷೆಯನ್ನು ಆಧುನಿಕ ಸ್ವರೂಪದಲ್ಲಿ ಅಭಿವ್ಯಕ್ತಗೊಳಿಸುವುದು ಹಾಗೂ ನೆಲೆಗೊಳಿಸುವುದು ಅಷ್ಟು ಸುಲಭದ ಕೆಲಸವಲ್ಲ. ಯಾಕೆಂದರೆ ಚಳುವಳಿಯ ಆರಂಭದ ದಿನಗಳ ತನಕ ಕನ್ನಡದ ಬದುಕು ರೈತರನ್ನು ಹಾಗೂ ರೈತ ಚಳುವಳಿಯನ್ನು ಗಮನಿಸಿದ ರೂಪ ಆಧುನಿಕ ವಾಗಿರಲಿಲ್ಲ. ಅದರಲ್ಲಿ ತಾತ್ಸಾರಗಳಿದ್ದವು, ರೈತರ ನಿಷ್ಕ್ರಿಯತೆ ಹಾಗೂ ಸಾಂಪ್ರದಾಯಿಕ ಬದುಕಿನ ಕುರಿತು ಆಳವಾದ ಪೂರ್ವಾಗ್ರಹಗಳಿದ್ದವು, ರೈತರು ಕನ್ನಡ ಬದುಕಿನ ಭಾಗವಾದರೂ ಅವರು 'ನಮ್ಮವರಾಗಿರಲಿಲ್ಲ". ಆದಕಾರಣ ರೈತ ಚಳುವಳಿಗೆ 1980ರ ದಶಕದಲ್ಲಿ ಹೊಸ ಪರಿಭಾಷೆಯನ್ನು ನಿರ್ಮಿಸುವುದು, ಹುಡುಕುವುದು, ಸೃಷ್ಟಿಸುವುದು ಅನಿವಾರ್ಯವಾಗಿತ್ತು. 'ಹಾಲು ಕರೆಯುವವರು ಯಾರೋ? ಆದರೆ ಕುಡಿಯುವವರು ಯಾರೋ? ಕೋಳಿ ನಮ್ಮದು ಮೊಟ್ಟೆ ತಿನ್ನುವವರು ಯಾರೊ?" ಇತ್ಯಾದಿಗಳು ರೈತರ ಆಧುನಿಕ ಸ್ವರೂಪತೆಯ ಪರಿಭಾಷೆಗಳಾದವು. ಇದು ರೈತರನ್ನು ಕನ್ನಡ ಬದುಕಿನಲ್ಲಿ ಹೊಸ ಅಸ್ಮಿತೆಯನ್ನು ನಿರ್ಮಿಸಲು ಸಾಧ್ಯವಾಯಿತು.

ರೈತರು ಆಧುನಿಕ ಸಮುದಾಯವಾಗಿ, "ಕ್ರಿಟಿಕಲ್ ಮಾಸ್" ಆಗಿ ಗುರುತಿಸಲ್ಪಟ್ಟದ್ದು ಈ ಸಂದರ್ಭದಲ್ಲಿ. ಇದರ ಫಲಶುತಿಯಾಗಿ ಚಳುವಳಿ ಬೆಳೆದಂತೆಲ್ಲ ಹೊಸ ಸಂಕಥನ, ಹೊಸ ಬೇಡಿಕೆಗಳು, ವಿವಿಧ ರಾಜಕಾರಣ ಚಳುವಳಿಯ ಭಾಗವಾಯಿತು. ಇದರ ಒಂದು ಸಂಕಥನವನ್ನು ಗಮನಿಸಿ, "ನಾವು ಸಾಲಗಾರರಲ್ಲ ರೈತರ ಸಾಲ ಕೃತಕ ಸಾಲಗಳು, ಅದನ್ನು ಮನ್ನಾ ಮಾಡಲೇಬೇಕು", ಇಂತಹ ಸಂಕಥನ ಕನ್ನಡ ಬದುಕಿಗೆ ಹೊಸತು. ಅಲ್ಲದೇ ರಾಜಕಾರಣವೂ ಹೊಸತು. ರೈತರಿಗೆ ಸರಕಾರಿ ಕಚೇರಿಗಳಲ್ಲಿ, ಇಲಾಖೆಗಳಲ್ಲಿ, ಸರಕಾರಿ ನೀತಿ ನಿರೂಪಣೆಗಳಲ್ಲಿ ಮರ್ಯಾದೆಯನ್ನು ತಂದು ಕೊಟ್ಟ ಕಾಲವದು.

1980ರ ದಶಕದಲ್ಲಿ ಚುನಾವಣಾ ರಾಜಕೀಯಕ್ಕೆ

ಕರ್ನಾಟಕದಲ್ಲಿ ಹುಟ್ಟಿದ ಚಳುವಳಿಗಳ ಸಂಖ್ಯೆ ಕಡಿಮೆಯಾದರೂ ಅವುಗಳ ಪ್ರಭಾವ ಮಾತ್ರ ಗಾಢ. ೧೯೨೦ರ ದಶಕದಲ್ಲಿ ಹುಟ್ಟಿದ ಬ್ರಾಹ್ಮಣೇತರ ಚಳುವಳಿ ಇಡೀ ಹಿಂದುಳಿದ ಸಮುದಾಯವನ್ನು ರಾಜಕೀಯದ ಕೇಂದ್ರದ ಚೌಕಟ್ಟಿನೊಳಗೆ ನಿಲ್ಲಿಸಿದ್ದು ಒಂದು ಇತಿಹಾಸದ ಸಂಗತಿ. ಆದಕಾರಣ ಕರ್ನಾಟಕದಲ್ಲಿ ವಾಸಾಹತು ಸಂದರ್ಭದಲ್ಲಿಯೇ ರಾಜಕೀಯದೊಳಗೆ ಜಾತಿಗಳ ಧ್ರುವೀಕರಣವಾಗಲು ಸಾಧ್ಯವಾಯಿತು. ಉತ್ತರ ಭಾರತದಲ್ಲಿ ಈ ರೀತಿಯ ಚಳುವಳಿಗಳು ಹುಟ್ಟಿಕೊಳ್ಳಲು ಹತ್ತು ಹಲವು ದಶಕಗಳು ಬೇಕಾಯಿತು.

ಧುಮುಕುವ ನಿರ್ಧಾರ ರೈತ ಚಳುವಳಿ ತೆಗೆದುಕೊಂಡಾಗಲೇ ಚಳುವಳಿಯ ರಾಜಕಾರಣಕ್ಕೆ ಹೊಸ ಸ್ವರೂಪ ಬಂತು. 1984ರ ಲೋಕಸಭಾ ಚುನಾವಣೆಯಲ್ಲಿ ರೈತ ಚಳುವಳಿ ಅಳವಡಿಸಿದ ಮತದಾರರ ವೇದಿಕೆ ಪ್ರಯೋಗ ಒಂದು ವಿಶಿಷ್ಟ ಪ್ರಯೋಗ. ಅದು ಸಫಲವಾಗಲಿಲ್ಲ. ಕನ್ನಡ ನಾಡು ಪಕ್ಷದ ಮೂಲಕ ಅಸೆಂಬ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದು ಕೂಡ ಇನ್ನೊಂದು ಪ್ರಯೋಗ. ವಿವಿಧ ಸಾಮಾಜಿಕ ಚಳುವಳಿಗಳ ಸಂಯೋಜನೆಯಿಂದ ಹುಟ್ಟಿಕೊಂಡ ಸರ್ವೋದಯ ಪಕ್ಷ ಕರ್ನಾಟಕಕ್ಕೆ ಅದು ನೀಡಿದ ಮತ್ತೊಂದು ವಿಶಿಷ್ಟ ಕೊಡುಗೆ.

ವಿಚಿತ್ರವೆಂದರೆ ಈ ಎಲ್ಲಾ ಪ್ರಯೋಗಗಳು ಕರ್ನಾಟಕದ ರಾಜಕೀಯದಲ್ಲಿ ರೈತ ಚಳುವಳಿಯನ್ನು ರಾಜಕೀಯ ಶಕ್ತಿಯಾಗಿ ಬೆಳೆಸಲಿಲ್ಲ. ಅದು ಪಡೆದ ಶೇಕಡಾ ಮತಗಳು ಪ್ರತೀ ಚುನಾವಣೆಯಲ್ಲಿ ಒಂದಂಕಿಯಿಂದ ಮುಂದಕ್ಕೆ ಹೋಗಲೇ ಇಲ್ಲ. ಅದರರ್ಥ ಚಳುವಳಿಗಳು ಚಳುವಳಿಗಳಾಗಿ ಇರಬೇಕೆ? ಪಕ್ಷವಾಗಿ ಮಾರ್ಪಟ್ಟರೆ ಅದನ್ನು ಜನ ಮಾನ್ಯ ಮಾಡಲಾರರು ಎಂಬರ್ಥವೇ?.ಈ ವಾದ ಕರ್ನಾಟಕಕ್ಕೆ ಮಾತ್ರ ಸೀಮಿತಗೊಳಿಸಬಾರದು. ಇಂತಹ ಪ್ರಯೋಗಗಳು ಭಾರತದ ವಿವಿದೆಡೆ ಸಾಮಾಜಿಕ ಚಳುವಳಿಗಳು ಹಾಗೂ ರೈತ ಚಳುವಳಿಗಳು ಮಾಡಿವೆ ಹಾಗೇನೆ ಸೋತಿವೆ. ಮಹಾರಾಷ್ಟ್ರದ ರೈತ ಚಳುವಳಿಯ ಶೇತ್ಕಾರಿ ಸಂಘಟನ, ತಮಿಳು ನಾಡಿನ ವ್ಯವಸಾಯ್‌ಗಳ್ ಸಂಘಂನ ಇಂಡಿಯನ್ ಫಾರ್ಮರ್ಸ್ ಆಂಡ್ ಟಾಯ್ಲರ್ಸ್ ಪಾರ್ಟಿ ಅಥವಾ ಮೇಧಾ ಪಾಟ್ಕರ್‌ರವರ ಪೀಪಲ್ಸ್ ಪೊಲಿಟಿಕಲ್ ಫ್ರಂಟ್ ಇತ್ಯಾದಿ. ಇವೆಲ್ಲಾ ತಂತ್ರಗಾರಿಕೆಗಳು ರಾಜಕೀಯಕ್ಕೆ ಪರ್ಯಾಯ ಅಥವಾ ರೈತ ಸರಕಾರವನ್ನು ಕಟ್ಟುವ ಕನಸು ನನಸಾಗಿಯೇ ಉಳಿಸಿತು.

ಕರ್ನಾಟಕದ ರೈತ ಅಥವಾ ಕೆಳಸ್ತರದ ಸಮುದಾಯಗಳು ರಾಜಕೀಯದಿಂದ ದೂರ ಸರಿದಿಲ್ಲವೆಂದು ಚುನಾವಣೆಗಳು, ಹೋರಾಟಗಳು, ಸಂಘರ್ಷಗಳು ಹೇಳುತ್ತವೆ. ಆದರೆ ಅವರ ರಾಜಕೀಯವು ಚಳುವಳಿಗಳಿಂದ ಹುಟ್ಟಿದ ಪಕ್ಷಗಳಿಗೆ ಮತದಾನದ ರೂಪವಾಗಿ ಪರಿವರ್ತಿವಾಗದಿರುವುದು ಅಷ್ಟೇ ಸತ್ಯ. ಸಾಮಾಜಿಕ ಅಸ್ಮಿತೆಯನ್ನು ನೀಡುವ ರೈತ ಚಳುವಳಿಯನ್ನು ರಾಜಕೀಯ ಶಕ್ತಿಯಾಗಿ ರೈತ ಸಮುದಾಯ ತಮ್ಮ ಬದುಕಿನಲ್ಲಿ ಯಾಕೆ ಗುರುತಿಸುವುದಿಲ್ಲ? ಈ ಪ್ರಶ್ನೆ ಸಹಜವಾಗಿ ಮೂಡುತ್ತದೆ.

ರೈತ ಚಳುವಳಿ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಲು ಪ್ರಯತ್ನಿಸುತ್ತಿದ್ದ ಕಾಲಘಟ್ಟದಲ್ಲಿ ಅದರ ಸಾಮಾಜಿಕ ತಳಹದಿಗಳು ಸಾಕಷ್ಟು ನಷ್ಟವಾಗಿದ್ದವು ಅಥವಾ ಶಿಥಿಲವಾಗಿತ್ತು ಎಂಬುದು ಸತ್ಯ. 1983ರಲ್ಲಿ ಕಾಂಗ್ರೆಸ್ ವಿರೋಧಿ ಅಲೆಯ ಉತ್ತುಂಗದ ಸಂದರ್ಭದಲ್ಲಿ ಚುನಾವಣಾ ರಾಜಕೀಯಕ್ಕೆ ರಾಜಕೀಯ ಪಕ್ಷವಾಗಿ ಧುಮುಕುತ್ತಿದ್ದರೆ ಕರ್ನಾಟಕದ ರಾಜಕೀಯದ ಸ್ವರೂಪ ಬದಲಾಗುತ್ತಿತ್ತೋ ಏನೋ? ಆ ಕಾಲದಲ್ಲಿ ರೈತ ಚಳುವಳಿಯ ಸಾಮಾಜಿಕ ತಳಹದಿಗಳು ಗಟ್ಟಿಯಾಗಿದ್ದವು. ರೈತ ಚಳುವಳಿಯ ತೀವ್ರತೆ ಅಷ್ಟೇ ಇತ್ತು. ದೈತ್ಯ ಕಾಂಗ್ರೆಸ್ ಪಕ್ಷವನ್ನು ಎದುರು ಹಾಕುವಷ್ಟು ಶಕ್ತಿಶಾಲಿಯಾಗಿತ್ತು. ಆದರೆ 1984ರ ಲೋಕಸಭೆಯ ಸಂದರ್ಭದಲ್ಲಿ ಇಂದಿರಾ ಸಾವಿನ ಅನುಕಂಪದ ಅಲೆಯ ಎದುರು ರೈತ ಚಳುವಳಿಯಲ್ಲದೇ ಎಲ್ಲಾ ವಿರೋಧ ಪಕ್ಷಗಳು ನೆಲ ಕಚ್ಚಿದ್ದು ಇತಿಹಾಸದ ಸಂಗತಿ.

ರೈತ ಚಳುವಳಿ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಲು ಪ್ರಯತ್ನಿಸುತ್ತಿದ್ದ ಕಾಲ ಘಟ್ಟದಲ್ಲಿ ಅದರ ಸಾಮಾಜಿಕ ತಳಹದಿಗಳು ಸಾಕಷ್ಟು ನಷ್ಟವಾಗಿದ್ದವು ಅಥವಾ ಶಿಥಿಲವಾಗಿತ್ತು ಎಂಬುದು ಸತ್ಯ. 1983ರಲ್ಲಿ ಕಾಂಗ್ರೆಸ್ ವಿರೋಧಿ ಅಲೆಯ ಉತ್ತುಂಗದ ಸಂದರ್ಭದಲ್ಲಿ ಚುನಾವಣಾ ರಾಜಕೀಯಕ್ಕೆ ರಾಜಕೀಯ ಪಕ್ಷವಾಗಿ ಧುಮುಕುತ್ತಿದ್ದರೆ ಕರ್ನಾಟಕದ ರಾಜಕೀಯದ ಸ್ವರೂಪ ಬದಲಾಗುತ್ತಿತ್ತೋ ಏನೋ? ಆ ಕಾಲದಲ್ಲಿ ರೈತ ಚಳುವಳಿಯ ಸಾಮಾಜಿಕ ತಳಹದಿಗಳು ಗಟ್ಟಿಯಾಗಿದ್ದವು. ರೈತ ಚಳುವಳಿಯ ತೀವ್ರತೆ ಅಷ್ಟೇ ಇತ್ತು. ದೈತ್ಯ ಕಾಂಗ್ರೆಸ್ ಪಕ್ಷವನ್ನು ಎದುರು ಹಾಕುವಷ್ಟು ಶಕ್ತಿಶಾಲಿಯಾಗಿತ್ತು. ಆದರೆ 1984ರ ಲೋಕಸಭೆಯ ಸಂದರ್ಭದಲ್ಲಿ ಇಂದಿರಾ ಸಾವಿನ ಅನುಕಂಪದ ಅಲೆಯ ಎದುರು ರೈತ ಚಳುವಳಿಯಲ್ಲದೇ ಎಲ್ಲಾ ವಿರೋಧ ಪಕ್ಷಗಳು ನೆಲ ಕಚ್ಚಿದ್ದು ಇತಿಹಾಸದ ಸಂಗತಿ.

ಇತಿಹಾಸದ ಈ ಘಟ್ಟವನ್ನು ಇಲ್ಲಿ ಮರೆಯಬಾರದು ಇವತ್ತೀನ ಸಂದರ್ಭದಲ್ಲಿ ರೈತ ಚಳುವಳಿಯ ಶಕ್ತಿ ಬಹಳಷ್ಟು ಕುಂದಿದೆ. ಅದು ಚುನಾವಣೆಗೆ ನಿಂತರೆ ಅದನ್ನು ರಾಷ್ಟ್ರೀಯ ಪಕ್ಷಗಳು ಗಂಭೀರವಾಗಿ ಪರಿಗಣಿಸುವುದೇ ಇಲ್ಲ. ಅಲ್ಲದೇ ರಾಜ್ಯ ಮಟ್ಟದ ಪಕ್ಷಗಳು ಕೂಡ ಗಣನೆಗೆ ತೆಗೆದು ಕೊಳ್ಳುವುದಿಲ್ಲ. ಯಾಕೆಂದರೆ ರೈತ ಚಳುವಳಿ ಕರ್ನಾಟಕದ ರಾಜಕೀಯದ ಬದುಕನ್ನು ಆಥವಾ ಭೂಪಟವನ್ನು ಬದಲಾಯಿಸಲಾರದು ಎಂಬ ಗಟ್ಟಿಯಾದ ನಂಬಿಕೆ ಇಲ್ಲಿ ಅಡಕವಾಗಿದೆ. ಅದೇನೆ ಇದ್ದರೂ ಕನ್ನಡದ ರಾಜಕೀಯ ಬದುಕಿಗೆ ಹೊಸತನವನ್ನು, ಹೊಸ ದೃಷ್ಟಿಕೋನವನ್ನು, ಆಯಾಮವನ್ನು ನೀಡಿದ್ದನ್ನು ಮರೆಯಬಾರದು. 1983ರಲ್ಲಿ ಕಾಂಗ್ರೆಸ್‌ನ ಸೋಲಿಗೆ, ಆ ಮೂಲಕ ಪ್ರಥಮ ಬಾರಿಗೆ ಕಾಂಗ್ರೇಸೇತರ ಸರಕಾರದ ರಚನೆಗೆ ರೈತ ಚಳುವಳಿ ಕಾರಣವಾದದ್ದನ್ನು ಇಲ್ಲಿ ದಾಖಲಿಸಬೇಕು

ರೈತ ಚಳುವಳಿಯಲ್ಲಿ ಏಳು ಬೀಳುಗಳು ಸಹಜ, ಅದು ಎಲ್ಲಾ ಸಾಮಾಜಿಕ ಚಳುವಳಿಗಳಿಗೂ ಅನ್ವಯಿಸುತ್ತದೆ. ಕರ್ನಾಟಕದಲ್ಲಿ ಹುಟ್ಟಿದ ದಲಿತ ಚಳುವಳಿ, ಭಾಷಾ ಚಳುವಳಿಗಳಿಗೂ ಅನ್ವಯಿಸುತ್ತದೆ. ಪರಿಸರ ಚಳುವಳಿ ಸ್ವಲ್ಪ ಮಟ್ಟಿಗೆ ಇದಕ್ಕೆ ವಿಭಿನ್ನ. ವಿಚಿತ್ರವೆಂದರೆ ಪರಿಸರ ಚಳುವಳಿ ಕರ್ನಾಟಕದಲ್ಲಿ ಸಮಗ್ರವಾದ ಸಂಘಟನೆಯನ್ನು ಕಟ್ಟಲೇ ಇಲ್ಲ. ಅದರ ಹೋರಾಟಗಳು ಅಲ್ಲಲ್ಲಿ ಚದುರಿ ಹೋದವು ಹಾಗೂ ಸೀಮಿತಗೊಂಡವು. ರೈತ ಚಳುವಳಿ ಸಮಗ್ರವಾದ ಸಂಘಟನೆಯನ್ನು ಕಟ್ಟಿದರೂ ಅದು ಎಲ್ಲಾ ಕನ್ನಡಿಗರ ಬದುಕನ್ನು ಪ್ರತಿನಿಧಿಸಲು ಸಾಧ್ಯವಾಗಲೇ ಇಲ್ಲ. ಇದಕ್ಕೆ ಅದಕ್ಕಿದ್ದ ಸಾಮಾಜಿಕ ತಳಹದಿ ಒಂದು ಕಾರಣವಾದರೆ, ಅದರೊಳಗಿದ್ದ ಆಂತರಿಕ ವೈರುದ್ಧಗಳೂ ಕೂಡ ಕಾರಣವಾಗಿದ್ದವು. ಅದರ ಸಾಮಾಜಿಕ ತಳಹದಿಗಳು "ಮಾರುಕಟ್ಟೆ ಆಧಾರಿತ ಸ್ವಾಯತ್ತ ರೈತನಲ್ಲಿತ್ತು". ಅದರ ಸಾಮಾಜಿಕ ತಳಹದಿಯಲ್ಲಿ ಕೃಷಿ ಕಾರ್ಮಿಕರಿಲ್ಲ.

ದಲಿತರೂ ಇರಲಿಲ್ಲ. ನಗರದ ಸಮುದಾಯಗಳೂ ಇರಲಿಲ್ಲ, "ಪ್ಯಾಂಟ್ ಧರಿಸುವ ಬೌದ್ಧಿಕ ಸಮುದಾಯವೂ" ಇರಲಿಲ್ಲ, ಒಣ ಬೇಸಾಯ ಮಾಡುವ ರೈತರೂ ಇರಲಿಲ್ಲ.

1980ರ ಆರಂಭದ ಕಾವು ವರುಷ ಕಳೆದಂತೆಲ್ಲಾ ಕಡಿವೆಯಾಗುತ್ತಾ ಬಂತು. ಬೇಡಿಕೆಯ ಪಟ್ಟಿಗಳು ಬೆಳೆಯುತ್ತಾ ಹೊದಂತೆಲ್ಲಾ ಆತಂರಿಕ ವೈರುಧ್ಯಗಳು ಬೆಳೆಯುತ್ತಾ ವಿಸ್ತಾರವಾಗುತ್ತಾ ಹೋಯಿತು. ರೈತ ಚಳುವಳಿಯ ವಿಭಜನೆ ಅನಿವಾರ್ಯವಾಯಿತು. ರೈತ ಚಳುವಳಿ 1983ರಲ್ಲಿಯೇ ಪ್ರಥಮ ಬಾರಿಗೆ ವಿಭಜನೆಯನ್ನು ನೊಡಬೇಕಾಯಿತು. ಬಹು:ಷ 1990ರ ಒಳಗಾಗಿ ಹೆಚ್ಚು ಕಡಿಮೆ ನಾಲ್ಕು ಬಾರಿ ರೈತ ಚಳುವಳಿ ಹೋಳಾಯಿತು. ಈ ರಾಜಕಾರಣಕ್ಕೆ ಅಂದಿನ ರಾಜಕೀಯವೂ ಒಂದು ಕಾರಣ. ರಾಮಕೃಷ್ಣ ಹೆಗ್ಡೆಯ ರಾಜಕೀಯ ಪಾತ್ರವನ್ನು ಇಲ್ಲಿ ನೆನೆಪಿಸಬೇಕು. ರೈತ ಸಂಘಕ್ಕೆ ಪರ್ಯಾಯವಾಗಿ "ಲೆಟೆರ್‌ಹೆಡ್". ರೈತ ಸಂಘಟನೆಯನ್ನು ಸ್ಥಾಪಿಸಿದ ಕೀರ್ತಿ ಹೆಗ್ಡೆಯವರಿಗೆ ಸಲ್ಲಬೇಕು. ಇಷ್ಟೆಲ್ಲಾ ಆದರೂ ರೈತ ಚಳುವಳಿಯ ವಾರಿಸುದಾರನಾಗಿ ಹೊರಹೊಮ್ಮಿದ್ದು ರೈತ ಸಂಘವೇ ಹೊರತು ಉಳಿದ ಸಂಘಟನೆಗಳಲ್ಲ.

ರೈತ ಚಳುವಳಿ ಕನ್ನಡ ಬದುಕಿಗೆ ಹೊಸ ಹೊಸ ಸಂಕೇತಗಳನ್ನು, ಅಸಹಕಾರದ ಹೊಸ ಹೊಸ ತಂತ್ರಗಳನ್ನು ನೀಡಿದ್ದನ್ನು ಮರೆಯಬಾರದು. "ಹಸಿರು" ಟವೆಲ್ ರೈತ ಬದುಕಿನ ಅಸ್ಮಿತೆಯ ಅಥವಾ ಐಡೆಂಟಿಯ ಸಂಕೇತವಾಯಿತು, ಈ ಸಂಕೇತ ರೈತ ಚಳುವಳಿಗೆ ಬಳುವಳಿಯಾಗಿ ಬಂದದ್ದು ತಮಿಳುನಾಡಿನ ನಾರಾಯಣ ಸ್ವಾಮಿಯ ಮುಖಾಂತರವೆಂದು ಬಹಳ ಜನರಿಗೆ ತಿಳಿದಿಲ್ಲ. ಹಸಿರು ಟವೆಲ್‌ಗಳ ಬಳಕೆಯ ಪೂರ್ವದಲ್ಲಿ ರೈತರೆಂದರೆ "ಹಳ್ಳಿ ಮುಗ್ದರು", "ಚಡ್ಡಿ ಧರಿಸುವ ಹಳ್ಳಿಗರು" ಎಂದೆಲ್ಲಾ ಚಿತ್ರಿಸಿಲಾಗುತ್ತಿತ್ತು. ಈ ಸಂಕಥನವನ್ನು ರೈತ ಚಳುವಳಿ ಬದಲಾಯಿಸಿತು.

ರೈತ ಚಳುವಳಿ ನೀಡಿದ ಹೊಸ ತಂತ್ರಗಳಲ್ಲಿ ಅತ್ಯಂತ ಪ್ರಮುಖವಾದುವುದೆಂದರೆ: ವಿಧಾನ ಸೌಧದೆದುರು ನಕ್ಕಿ ಬಿಡುವ ತಂತ್ರಗಾರಿಕೆ, ಅಧಿಕಾರಿಗಳಿಗೆ ಹಳ್ಳಿಗಳೊಳಗೆ ನಿರ್ಧಿಷ್ಟ ಸಮಯದಲ್ಲಿ ಮಾತ್ರ ಹಾಗೂ ಸೀಮಿತ ಪ್ರವೇಶ, ವಿಧಾನ ಸೌಧಕ್ಕೆ ಬಂಡಿ ಜಾತ್ರೆ, ಇತ್ಯಾದಿ. ಇವುಗಳು ಗಾಂಧಿಯೋತ್ತರ ನವ ಗಾಂಧಿ ತಂತ್ರಗಾರಿಕೆ ಎಂದರೂ ತಪ್ಪಾಗಲಾರದು.

ಅದರೊಂದಿಗೆ ರೈತ ಚಳುವಳಿ ನೀಡಿದ ಸಂಕಥನ ಹೊಸತನದಿಂದ ಕೂಡಿತ್ತು. ಅದು ಉಪಯೋಗಿಸಿದ ಪಾರಿಬಾಷೆಗಳನ್ನು ಇಷ್ಟರ ತನಕ ಯಾವುದೇ ಚಳುವಳಿಗಳು ಮಾಡಿರಲಿಲ್ಲ. ಅದರಲ್ಲಿ "ಬಡಕಲು ಬಂಡವಾಳಶಾಯಿ"ಯ ವಿಶ್ಲೇಷಣೆ ಅತೀ ಮುಖ್ಯ. ಇಲ್ಲಿ ತಾತ್ವಿಕತೆಯ ತಾಕಲಾಟಗಳು ಸೂಕ್ಷವಾಗಿ ಕಂಡು ಬರುತ್ತದೆ. ಒಂದೆಡೆ ಚಳುವಳಿ ಗಾಂಧಿ ವಾದವನ್ನು ತನ್ನ ತಾತ್ವಿಕ ತಳಹದಿಯನ್ನಾಗಿಸಿದರೂ, ಮತ್ತೊಂದೆಡೆ ಅದು ಸೂಕ್ಷವಾಗಿ ನವ- ಮಾರ್ಕ್ಸ್‌ವಾದದೊಂದಿಗೆ ಅನುಸಂಧಾನ ಮಾಡುತ್ತಿತ್ತೋ ಏನೋ ಎಂದು ಭಾಸವಾಗುತ್ತದೆ. ಉದಾಹರಣೆಗೆ ಅದು "ಬಡಕಲು ಬಂಡವಾಳಶಾಹಿಯನ್ನು" ನವ-ಮಾರ್ಕ್ಸ್‌ವಾದದ ಅವಲಂಭನಾ ಸಿದ್ಧಾಂತದ ಮೂಲಕ ವಿಶ್ಲೇಷಿಸಿದ ಕಾರಣ ಈ ರೀತಿಯ ಸಂಶಯ ಬರುವುದು ಸಹಜ. ಕನ್ನಡ ಬದುಕಿಗೆ ಈ ರೀತಿಯ ಪ್ರಯೋಗ ಹೊಸತು.

ಜಾಗತೀಕರಣದ ಸಂಕಥನವನ್ನು ಕನ್ನಡದ ಬದುಕಿನಲ್ಲಿ ಗಟ್ಟಿಗೊಳಿಸಿದ ಕೀರ್ತಿ ರೈತ ಚಳುವಳಿಗೆ ಸಲ್ಲುತ್ತದೆ. ಜಾಗತೀಕರಣವನ್ನು ಆರಂಭದಲ್ಲಿ ನೆನಪಿಸಿದ್ದು ಡಂಕಲ್ ಪ್ರಸ್ತಾವನೆಯ ವಿಶ್ಲೇಷಣೆಯ ಮೂಲಕ. ಜಾಗತೀಕರಣದ ಹಿಂದಿರುವ ಅಜೆಂಡಾಗಳನ್ನು, ಯಜಮಾನಿಕೆಯ ಯತ್ನಗಳನ್ನು, ತಾತ್ವಿಕತೆಯ ಬುನಾದಿಗಳನ್ನು ವಿವಿಧ ರೂಪಗಳಲ್ಲಿ ಹಾಗೂ ರೂಪಕಗಳಲ್ಲಿ ರೈತ ಚಳುವಳಿ ಅನಾವರಣಗೊಳಿಸಿತ್ತು. ಬೆಂಗಳೂರಿನ ಎಂ.ಜಿ ರಸ್ತೆಯಲ್ಲಿದ್ದ ಬಹುರಾಷ್ಟ್ರೀಯ ಕಂಪೆನಿ ಕೆಂಟಕಿ ಫ್ರೈಡ್ ಚಿಕನ್ ಮೇಲೆ ರೈತರು ಆಕ್ರಮಣ ಮಾಡಿದಾಗ ಅದು ಜಾಗತೀಕರಣವನ್ನು ದೇಸಿಯ ನೆಲೆಗಟ್ಟಿನಲ್ಲಿ ವಿರೋಧಿಸುವ ಸಂಕೇತವಾಯಿತು. ಬಳ್ಳಾರಿಯಲ್ಲಿದ್ದ ಕಾರ್ಗಿಲ್ ಕಂಪನಿಯ ಗೋಡಾನ್‌ನ ಧ್ವಂಸ ಜಾಗತೀಕರಣದ ಸಂದರ್ಭದಲ್ಲಿ ರೈತರ ಬೀಜ ಸಂಸ್ಕೃತಿಯನ್ನು "ಜೈವಿಕ ಅಪಹರಣ"ದಿಂದ ಉಳಿಸುವ ರೂಪಕವಾಯಿತು.

ಕಳೆದ ನವೆಂಬರ್‌ನಲ್ಲಿ ಬೆಂಗಳೂರು ಪಕ್ಕ ಡ್ಯೂಪಾಂಟ್‌ನ ಬಿ.ಟಿ ಭತ್ತ ತಳಿಯನ್ನು ಕನ್ನಡ ಬದುಕಿನಲ್ಲಿ ರೈತ ಚಳುವಳಿ: ಕೆಲವು ಟಿಪ್ಪಣಿಗಳು ನಾಶಮಾಡುವುದರಲ್ಲೂ ಇದೇ ಸಂಕೇತ ಅಡಕವಾಗಿತ್ತು. ಜಾಗತೀಕರಣದ ಸಂದರ್ಭದಲ್ಲಿ ರೈತರ ಅಸ್ಮಿತೆಯನ್ನು ಎತ್ತಿ ಹಿಡಿಯುವ, ಉಳಿಸುವ ಯತ್ನ ಕೂಡ ಇದರೊಂದಿಗೆ ಸೇರಿದೆ ಎನ್ನಬಹುದು.

ಕನ್ನಡ ಬದುಕನ್ನು ರೈತರ ಮೂಲಕ ಕರ್ನಾಟಕದಾಚೆ ತಿಳಿ ಹೇಳುವ ಅನಿವಾರ್ಯತೆ ಹಾಗೂ ಜವಾಬ್ದಾರಿ ಚಳುವಳಿಗೆ ಇದ್ದದ್ದನ್ನು ಜಾಗತೀಕರಣದ ಸಂದರ್ಭದಲ್ಲಿ ನೋಡಬಹುದು. ಯಾಕೆಂದರೆ ಕನ್ನಡ ಬದುಕಿಗೂ ರೈತರಿಗೂ ಅನೋನ್ಯತೆ ಇಲ್ಲಿ ಪ್ರಮುಖವಾಗಿತ್ತು. ರೈತರು ಅನುಭವಿಸುತ್ತಿದ್ದ ಅಸ್ಮಿತೆ ಸಮಸ್ಯೆ, ಸ್ಥಳಾಂತರದ ನೋವು, ಸಾಂಸ್ಕೃತಿಕ ಪಲ್ಲಟ, ಜೀವನ ಮೌಲ್ಯಗಳ ನಷ್ಟ ಇತ್ಯಾದಿ ಕನ್ನಡ ಬದುಕಿನಿಂದ ಹೊರತಾಗಿರಲಿಲ್ಲ. ಆದರೆ ಅದನ್ನು ಕರ್ನಾಟಕದಿಂದಾಚೆ ಜಾಗತೀಕರಣದ ವಿರೋಧಿಯಾಗಿ ಹೇಗೆ ಪರಿವರ್ತಿಸಲು ಸಾಧ್ಯ? ಎಂಬ ತಾಕಲಾಟ ಸೂಕ್ಷವಾಗಿ ಅಡಕವಾಗಿತ್ತು. ಈ ತಾಕಲಾಟಗಳಿಂದಾಗಿ ಒಂದೆರೆಡು ತಪ್ಪು ಹೆಜ್ಜೆಗಳನ್ನು ರೈತ ಚಳುವಳಿ ಹಾಕಿತ್ತು ಎಂದರೂ ತಪ್ಪಾಗಲಾರದು.

ಈ ತಪ್ಪುಗಳು ಆರಂಭಗೊಳ್ಳುವುದು ಸಮಾನ ಮನಸ್ಕ ಜಾಗತೀಕರಣ ವಿರೋಧಿ ಹೋರಾಟಗಳನ್ನು ಆಯ್ಕೆ ಮಾಡುವಲ್ಲಿ ಕಂಡು ಬರುತ್ತದೆ. ಅದು ರೈತ ಚಳುವಳಿಯ ಮೂಲಭೂತ ತತ್ವಗಳಿಗೆ ವಿಭಿನ್ನವಾಗಿರುವ"ಬಾಂಬೆ ರೆಸಿಸ್ಟೆಂಟ್", ತದನಂತರ "ಲಾ ವಿಯಾ ಕಂಪೆಸಿನಾ"ವನ್ನು ಹಾಗೂ ಪೀಪಲ್ಸ್ ಗ್ಲೋಬಲ್ ಆಕ್ಶನ್ ಅನ್ನು ಆಯ್ಕೆ ಮಾಡುವುದರಲ್ಲಿ ಎದ್ದು ಕಂಡು ಬರುತ್ತದೆ. ಇದನ್ನು ರೈತ ಚಳುವಳಿಯ ತಪ್ಪೇ ಅಥವಾ ಅದರ ತಾತ್ವಿಕ ನೇತಾರರಾಗಿದ್ದ ಪ್ರೊ. ನಂಜುಂಡಸ್ವಾಮಿಯವರು ಇಟ್ಟ ಹೆಜ್ಜೆಯ ತಪ್ಪೇ ಎಂಬ ಜಿಜ್ಞಾಸೆ ಇದೆ. ಬಾಂಬೆ ರೆಸಿಸ್ಟೆಂಟ್ ಮೂಲ:ತವಾಗಿ ಜಾಗತೀಕ ಸಾಮಾಜಿಕ ವೇದಿಕೆಗೆ ಪರ್ಯಾಯವಾಗಿ ಒಂದು ಸಂದರ್ಭದಲ್ಲಿ ಹುಟ್ಟಿಕೊಂಡ ವೇದಿಕೆ. ರೈತ ಚಳುವಳಿಗೆ ಜಾಗತೀಕ ಸಾಮಾಜಿಕ ವೇದಿಕೆಯಿಂದ ಭ್ರಮ ನಿರಸನಗೊಳ್ಳಲು ಒಂದು ಕಾರಣ ಪ್ರಭಲವಾಗಿತ್ತು.

ರೈತ ಚಳುವಳಿಯ ಪ್ರಕಾರ ಆ ವೇದಿಕೆಯ ಪ್ರಾಯೋಜಕರು ಮೂಲಭೂತವಾಗಿ ಬಹುರಾಷ್ಟ್ರೀಯ ಕಂಪೆನಿಗಳು ಆದ ಕಾರಣ, ಜಾಗತೀಕರಣವನ್ನು ವಿರೋಧಿಸಲು ಸಾಮಾಜಿಕ ವೇದಿಕೆಗೆ ಯಾವುದೇ ನೈತಿಕ ಹಕ್ಕು ಇರಲಿಲ್ಲ. ಈ ನೈತಿಕ ಹಕ್ಕಿನ ವಾರಸುದಾರರು ಬಾಂಬೆ ರೆಸಿಸ್ಟೆಂಟ್ ಮಾತ್ರವೇ ಹೊರತು ಜಾಗತೀಕ ಸಾಮಾಜಿಕ ವೇದಿಕೆಯಲ್ಲ ಎಂದೆಲ್ಲಾ ವಾದಿಸುತ್ತಾ ಹೋಯಿತು. ವಿಪರ್ಯಾಸವೆಂದರೆ ಬಾಂಬೆ ರೆಸಿಸ್ಟೆಂಟ್‌ನ ಸಂದರ್ಭದಲ್ಲಿ ರೈತ ಸಂಘ ವಿಭಿನ್ನವಾದ ತಾತ್ವಿಕ ಸಾಮಾಜಿಕ ಸಂಘಟನೆಗಳೊಂದಿಗೆ ಅನುಸಂಧಾನ ಮಾಡಿಕೊಳ್ಳಲೇ ಬೇಕಾಯಿತು. ಇದು ಅದರ ಅನಿವಾರ್ಯತೆಯೇ ಅಥವಾ ಅದರ ತಪ್ಪು ಹೆಜ್ಜೇಯೇ? ಎಂಬ ಸಹಜವಾದ ಪ್ರಶ್ನೆ ಮೂಡುತ್ತದೆ. ಅದು ರ್‍ಯಾಡಿಕಲ್‌ಗಳೊಂದಿಗೆ ಅನುಸಂಧಾನವನ್ನು ಮಾಡುತ್ತಾ ಅದರ ಪರಿಭಾಷೆಯಲ್ಲಿಯೇ ಜಾಗತೀಕರಣವನ್ನು ವಿರೋದಿಸುತ್ತಾ ಹೋಯಿತು.

ಅಲ್ಲದೇ ಸಂಕಥನವನ್ನು ನಿರ್ಮಿಸುತ್ತಾ ಹೋಯಿತು. ಇಷ್ಟೇಲ್ಲಾ ತಪ್ಪು ಹೆಜ್ಜೆಗಳ ನಡುವೆಯು ಅದರ ಜಾಗತೀಕರಣ ವಿರೋಧಿ ಪ್ರಜ್ಞೆ ಹಾಗೂ ಕಾಳಜಿ ಪ್ರಶ್ನಾತೀತ. ಈ ಕಾಳಜಿಗಳಿಂದಲೇ ರೈತಚಳುವಳಿ ಕನ್ನಡ ರೈತ ಬದುಕನ್ನು ಕ್ಯಾರವಾನ್ ಮುಖಾಂತರ ಯುರೋಪ್ ಖಂಡದ ವಿವಿಧ ದೇಶಗಳಲ್ಲಿ ಪ್ರದರ್ಶಿಸಲು ಸಾಧ್ಯವಾಯಿತು. ಅಮೇರಿಕಾ, ಆಫ್ರಿಕಾ, ಲ್ಯಾಟೀನ್ ಅಮೇರಿಕಾದ ವಿವಿಧ ಜಾಗತೀಕರಣ ವಿರೋಧಿ ಹೋರಾಟಗಳಲ್ಲಿ ಕನ್ನಡ ಬದುಕನ್ನು ಪ್ರತಿ ಬಿಂಬಿಸಲು ಸಾಧ್ಯವಾಯಿತು. ಈ ಹೋರಾಟಗಳ ಸಂದರ್ಭದಲ್ಲಿ ಕೆಲವು ಮೂಲ ಭೂತ ಪ್ರಶ್ನೆಗಳನ್ನು ಎತ್ತುತ್ತಾ ಜಾಗತೀಕರಣಕ್ಕೆ ಪರ್ಯಾಯಗಳನ್ನು ನಿರ್ಮಿಸಲು ಯತ್ನಿಸಿತ್ತು. ವಾಸ್ತವವಾಗಿ ಈ ನಿರ್ಮಿತಿಗಳು ಅಪರಿಪೂರ್ಣ ಪರ್ಯಾಯಗಳು. ಅದು "ಖಾದಿ ಖರ್ಟನ್" ಎಂಬ ವಾದದಲ್ಲಿ ನಿಚ್ಚಳವಾಗಿ ಕಂಡು ಬರುತ್ತದೆ.

ಇದರಿಂದಾಗಿ ರೈತ ಚಳುವಳಿಯ ಪರ್ಯಾಯಗಳು ಜಾಗತೀ ಕರಣಕ್ಕೆ ಮುಖಾಮುಖಿಯಾದ, ಗಟ್ಟಿಯಾದ, ದೃಢವಾದ ಪರ್ಯಾಯಗಳಾಗುವುದೇ ಇಲ್ಲ. ಅವು ಸೀಮಿತಗೊಂಡ ಪರ್ಯಾಯಗಳಾಗುತ್ತವೆ. ಈ ಕಾರಣದಿಂದಾಗಿ ರೈತ ಹೋರಾಟದ ಪರ್ಯಾಯಗಳು ಸೋತು ಹೋಗುತ್ತವೆ. ಈ ಸೋಲು ಬರೇ ರೈತ ಚಳುವಳಿಯ ಸೋಲು ಎಂದರೆ ತಪ್ಪಾಗುತ್ತದೆ. ಇದರಲ್ಲಿ ಕನ್ನಡ ಬದುಕಿನ ಹಾಗೂ ಇನ್ನಿತರ ಎಲ್ಲಾ ಸಾಮಾಜಿಕ ಹೋರಾಟಗಳ ಸೋಲು ಅಡಗಿದೆ. ಜಾಗತೀಕರಣ ಇಂದಿನ ಸಂದರ್ಭದಲ್ಲಿ ಬಂಡವಾಳದ ಯಜಮಾನಿಕೆ ಮೂಲಕ, ತಾತ್ವಿಕತೆ ಮೂಲಕ, ಸಂಕೇತಗಳ ಮೂಲಕ, ಸಾಂಸ್ಕೃತಿಕ ರೂಪಕಗಳ ಮೂಲಕ- ಮಾಲ್, ಕೋಕಾಕೋಲಾ, ಮೊಬೈಲ್‌ಗಳ ಮೂಲಕ ಕನ್ನಡ ಬದುಕಿನ ಪ್ರಜ್ಞೆಯನ್ನು ಮೆಲ್ಲ ಮೆಲ್ಲನೆ ಆವರಿಸುತ್ತಿದೆ.

ಜಾಗತೀಕರಣವನ್ನು ತಿರಸ್ಕರಿಸುವುದು ಅಷ್ಟು ಸುಲಭವಲ್ಲ. ವಾಸ್ತವವಾಗಿ ಜಾಗತೀಕರಣದ ತಿರಸ್ಕರಣೆಯಲ್ಲಿ ಪಾಶ್ಚಿಮಾತ್ಯದ ಯಜಮಾನಿಕೆಯ ತಿರಸ್ಕರಣೆ ಅಡಗಿದೆ. ಈ ಸಂದರ್ಭದಲ್ಲಿ ರೈತ ಚಳುವಳಿ ಕನ್ನಡ ಬದುಕಿನಲ್ಲಿ ಫೀನಿಕ್ಸ್‌ನಂತೆ ಮರು ಹುಟ್ಟಬೇಕಾಗಿದೆ. ಜಾಗತೀಕರಣಕ್ಕೆ ಪರ್ಯಾಯವಾಗಿ, ಕನ್ನಡ ಬದುಕಿನಲ್ಲಿ ಹೊಸ ದೇಶಿಯ ಸಮುದಾಯವನ್ನು ನಿರ್ಮಿಸಲೇ ಬೇಕಾದ ಅನಿವಾರ್ಯತೆ ಇದೆ. □

ರೈತರ ಸಮಗ್ರ ಕಲ್ಯಾಣಕ್ಕಾಗಿ ದೃಢ ಸಂಕಲ್ಪ ತೊಟ್ಟ

ದಿಟ್ಟ ರೈತಪರ ಸರ್ಕಾರ



ಶ್ರೀ ಬಿ. ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ರೈತರ ಹಿತದೃಷ್ಟಿಯನ್ನು ಕಾಪಾಡುವ ಅವರ ಏಳಿಗೆಯನ್ನು ಬಯಸುವ ಪರಮ ಧ್ಯೇಯವುಳ್ಳ ಸರ್ಕಾರವು ಈ ಒಂದು ವರ್ಷದಲ್ಲಿ ಘೋಷಿಸಿ ಅನುಷ್ಠಾನಕ್ಕೆ ತಂದಿರುವ ಯೋಜನೆ, ಕಾರ್ಯಕ್ರಮ ಮತ್ತು ರಿಯಾಯಿತಿಗಳು ಹಲವಾರು. ಇವು ಕೃಷಿ ಕ್ಷೇತ್ರದಲ್ಲಿ ಭರವಸೆಗಳ ಬಿತ್ತನೆಗೆ ಸಂತೃಪ್ತಿಯ ಫಸಲಿಗೆ ಕಾರಣವಾಗಿವೆ.

ಶ್ರೀ ಎಸ್ ಎ. ರವೀಂದ್ರನಾಥ್
ಮಾನ್ಯ ಕೃಷಿ ಸಚಿವರು

ಕೃಷಿ ಕ್ಷೇತ್ರದಲ್ಲಿ ಸಾಧನೆಯ ಪರ್ವ

* ಖುಷ್ಕಿ ಬೇಸಾಯದಲ್ಲಿ ತಾಂತ್ರಿಕತೆ ಅಳವಡಿಕೆ ಹಾಗೂ ಉತ್ಪಾದನೆ ವರ್ಧಿಸುವ ಯೋಜನೆಯನ್ನು ICRISAT ಸಹಯೋಗದಲ್ಲಿ ಭೂಚೇತನ ಕಾರ್ಯಕ್ರಮ ಅನುಷ್ಠಾನ
* ರೈತರ ಸಮಸ್ಯೆಗಳ ಚಿಂತನೆ ಹಾಗೂ ಪರಿಹಾರ ಮಾರ್ಗೋಪಾಯ ರೂಪಿಸಲು ಕೃಷಿ ಮಿಷನ್ ಸ್ಥಾಪನೆ
* ಕೃಷಿಯಲ್ಲಿ ನವೀನ ತಾಂತ್ರಿಕತೆ ಬಗ್ಗೆ ಅರಿವು ಮೂಡಿಸಲು ರಾಜ್ಯದ ರೈತರಿಗೆ ವಿದೇಶಗಳಿಗೆ ಅಧ್ಯಯನ ಪ್ರವಾಸ
* ಶೇಕಡ 3 ಬಡ್ಡಿದರದಲ್ಲಿ ಸಾಲಕ್ಕೆ ಸಹಾಯಧನ
* ರಾಜ್ಯದಲ್ಲಿ ಸಾವಯವ ಕೃಷಿಗೆ ದೊಡ್ಡ ಪ್ರಮಾಣದಲ್ಲಿ ಒತ್ತು ನೀಡಲು ಸಾವಯವ ಕೃಷಿ ಮಿಷನ್ ಸ್ಥಾಪನೆ
* ಮಣ್ಣಿನ ಫಲವತ್ತತೆ ಕಾಪಾಡಲು ಶೇಕಡ 50ರ ರಿಯಾಯಿತಿ ದರದಲ್ಲಿ ಜೈವಿಕ ಗೊಬ್ಬರ, ಲಘು ಪೋಷಕಾಂಶಗಳ ವಿತರಣೆ
* ನೀರಿನ ಸದ್ಬಳಕೆಯನ್ನು ಉತ್ತೇಜಿಸಲು ಶೇಕಡ 75ರ ಸಹಾಯ ಧನದಲ್ಲಿ ಹನಿ/ತುಂತುರು ನೀರಾವರಿ ಉಪಕರಣಗಳ ವಿತರಣೆ
* ಕೃಷಿ ವಿಸ್ತರಣಾ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸಲು ರೈತ ಸಂಪರ್ಕ ಕೇಂದ್ರ / ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳ ಬಲವರ್ಧನೆ
* ಕೃಷಿ ಉತ್ಪಾದನೆ ಹೆಚ್ಚಿಸಲು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಶೇಕಡ 50ರ ರಿಯಾಯಿತಿ ದರದಲ್ಲಿ ಗುಣಮಟ್ಟದ ಬಿತ್ತನೆ ಬೀಜ ವಿತರಣೆ
* ಕೃಷಿ ಕಾರ್ಮಿಕರ ಕೊರತೆ ನೀಗಿಸಲು ಹಾಗೂ ಉತ್ಪಾದನಾವೆಚ್ಚ ಕಡಿತಗೊಳಿಸಲು ರಿಯಾಯಿತಿ ದರದಲ್ಲಿ ಟ್ರ್ಯಾಕ್ಟರ್, ಪವರ್ ಟಿಲ್ಲರ್ ಮತ್ತು ಆಧುನಿಕ ಕೃಷಿ ಉಪಕರಣಗಳ ವಿತರಣೆ

ನಳ ನಳಿಸುತ್ತಲಿದೆ ಕರ್ನಾಟಕದ ಕೃಷಿ ಭೂಮಿ

ಕರ್ನಾಟಕ ವಾರ್ತೆ

ವಚನಗಳ ಸಮಾನತನೆಯ ಆಶಯಗಳು ಹಾಗೂ ಭೌತಿಕ ಸನ್ನಿವೇಶದ ಸಂಬಂಧ



ವಚನಕಾರರ ಚಳವಳಿಯನ್ನು ಕೇವಲ ಉತ್ಪಾದಕ ಶ್ರಮ ಜೀವಿಗಳ ಒಂದು 'ವರ್ಗ ಸಂಘಟನೆ'ಯಾಗಿ ಮಾತ್ರ ನಾವು ಭಾವಿಸಬೇಕಾಗಿಲ್ಲ. ಅದಕ್ಕೊಂದು ವರ್ಗ ತಳಹದಿ ಇರುವುದೇನೋ ನಿಜ. ಈ ವರ್ಗ ಹಿತಾಸಕ್ತಿಯ ಅಭಿವ್ಯಕ್ತಿಗೆ ಬೇಕಾದ ತಾತ್ವಿಕತೆಯನ್ನು ಅವು ಸ್ವೀಕರಿಸಿದ್ದು ವೈದಿಕ ವಿರೋಧಿ ತತ್ವ ಪಂಥಗಳಿಂದ. ಈ ಹಿಂದೆ ಕರ್ನಾಟಕದ ಸಮಾಜದಲ್ಲಿ ಬೌದ್ಧ, ಸಿದ್ಧ, ನಾಥ ಹಾಗೂ ಶಾಕ್ತ್ಯ ಪಂಥಗಳು ಈ ಬಗೆಯಲ್ಲಿ ವೈದಿಕ ವಿರೋಧಿ ನೆಲೆಗಟ್ಟಿನಿಂದ ಪ್ರವರ್ತಿಸುತ್ತಿದ್ದವು. ಅವುಗಳಿಗೆ ವೈದಿಕ ಸಾಮಾಜಿಕ ಶ್ರೇಣೀಕರಣದ ವಿರುದ್ಧವಾದ ತತ್ವಶಾಸ್ತ್ರೀಯ ನೆಲೆಗಟ್ಟು ಇತ್ತು. ಯಾವುದೇ ತತ್ವಶಾಸ್ತ್ರೀಯ ವೈರುಧ್ಯಗಳು ಒಂದು ಸಾಮಾಜಿಕ ವೈರುಧ್ಯದ ನೆಲೆಗಟ್ಟಿನಿಂದ ಪ್ರೇರಣೆ ಪಡೆದಿರುತ್ತವೆ ಎಂಬುದನ್ನು ಗಮನದಲ್ಲಿಟ್ಟುಕೊಂಡರೆ ಶಾಕ್ತ, ಶೈವ, ನಾಥ ಸಿದ್ಧ ಮುಂತಾದ ಪಂಥಗಳಿಗೂ, ವೈದಿಕ ವರ್ಣಾಶ್ರಮ ಚಿಂತನೆಗೂ ಇದ್ದ ತಿಕ್ಕಾಟವನ್ನು ಗ್ರಹಿಸಬಹುದು.

ಶ್ರಮ ವಿಭಜನೆಯನ್ನು ಆಧರಿಸಿದ ಊಳಿಗಮಾನ್ಯ ಕೃಷಿಗೆ ವರ್ಣಾಶ್ರಮ ಚಿಂತನೆ ಆಧರಿಸಿದ ಜಾತಿ ಪದ್ಧತಿ ಸೂಕ್ತವಾಗಿ ಕಂಡರೆ ಊಳಿಗಮಾನ್ಯ ಕೃಷಿ ಉತ್ಪಾದನಾ ಪ್ರಕ್ರಿಯೆಯೊಳಗೆ ಪೂರ್ಣವಾಗಿ ಮಿಳಿತಗೊಳ್ಳುವ ಅಗತ್ಯವಿಲ್ಲದ ಅಲೆಮಾರಿ, ಅರೆ ಅಲೆಮಾರಿ, ಪಶುಪಾಲಕ ಸಮುದಾಯಗಳು, ಕುಶಲಕರ್ಮಿ ಪಂಗಡಗಳು ಹಾಗೂ ಆಹಾರ ಸಂಗ್ರಾಹಕ ಮತ್ತು ಬೇಟೆಗಾರ ಹಂತದಲ್ಲಿದ್ದ ಸಮುದಾಯಗಳು ಈ ಬಗೆಯಲ್ಲಿ ಶಾಕ್ತ್ಯ, ಶೈವ, ನಾಥ ಮುಂತಾದ ಪಂಥಗಳ ತಾತ್ವಿಕತೆಯನ್ನು ಬೆಂಬಲಿಸಿದ್ದು ಕಂಡುಬರುತ್ತದೆ. ಇದನ್ನು ಜೀವನ ಪದ್ಧತಿಗಳು ಬೆಂಬಲಿಸುತ್ತವಾದ್ದರಿಂದ ತಮ್ಮ ಪ್ರತ್ಯೇಕತೆಯನ್ನು ಸಾಧಿಸಿಕೊಳ್ಳಲು ಪಂಥೀಯ ಭೇದಗಳು ಒಂದು ಆಚರಣಾತ್ಮಕ, ಆಲೋಚನಾತ್ಮಕ ಅವಕಾಶವನ್ನು ಒದಗಿಸಿಕೊಡುತ್ತವೆ.

ಆದರೆ ಶರಣರು ಎಂದು ಕರೆಸಿಕೊಳ್ಳುವ ವಚನಕಾರರು ಮೇಲೆ ಹೇಳಿದ ಪಂಗಡಗಳ ರೀತಿಯಲ್ಲಿ ಊಳಿಗಮಾನ್ಯ ವ್ಯವಸಾಯ ಸಮಾಜದಿಂದ ಪ್ರತ್ಯೇಕಿತರಾದ ಅಥವಾ ಅಂತರ ಉಳಿಸಿಕೊಂಡ ಜನ ವಿಭಾಗಗಳಾಗಿರಲಿಲ್ಲ. ಅವರು ತಮ್ಮ ಉತ್ಪಾದನೆಗೆ ಬಳಸುವ ವಸ್ತುಗಳು ವ್ಯವಸಾಯ ಸಮಾಜದಿಂದ ಬರಬೇಕಾಗಿತ್ತು. ಹಾಗೆಯೇ ಅವರ ಸರಕುಗಳನ್ನು ಕೊಳ್ಳಬೇಕಾದವರು ವ್ಯವಸಾಯಿಕ ಸಮಾಜದ ನಡುವೆ ಇದ್ದವರೇ ಆಗಿದ್ದರು. ಆದುದರಿಂದ ಇವರು ಊಳಿಗಮಾನ್ಯ ಸಮಾಜದ ಸಾಮಾಜಿಕ ಸಂರಚನೆಯೊಳಗೇ ಒಂದು ಭಿನ್ನವಾದ ಸಾಮಾಜಿಕ ಶ್ರೇಣಿಯಾಗಿ ಸಂಘಟಿತರಾಗಿ ಮಾನ್ಯಗೊಳ್ಳುವುದು ಅಗತ್ಯವಿತ್ತು. ಅಂದರೆ ಅಧಿಕಾರ ಸಂರಚನೆಯೊಳಗೆ ಹೊಸದೊಂದು ಅಂತಸ್ತನ್ನು ಇವರು ನಿರ್ಮಿಸಿಕೊಳ್ಳಬೇಕಾಗಿತ್ತು. ಅದನ್ನು ಊಳಿಗಮಾನ್ಯ ವ್ಯವಸಾಯ ಸಮಾಜದ ಜಾತಿ ಶ್ರೇಣಿಯಾಧಾರಿತ ತಾತ್ವಿಕತೆ ಒಪ್ಪುತ್ತಿರಲಿಲ್ಲವಾದ್ದರಿಂದ ಇವರೊಂದು ಅನುಭಾವಿ ಪಂಥವಾಗಿ ಹೊಸ ಬಗೆಯದೊಂದು ತಾತ್ವಿಕತೆ ರೂಪಿಸಿಕೊಂಡು ದೇವರು, ಧರ್ಮ, ಹುಟ್ಟು, ಸ್ವರ್ಗ, ನರಕ, ವೇದ, ಶಾಸ್ತ್ರ ಹಾಗೂ ಕಾಯಕ ಇವುಗಳ ಬಗ್ಗೆ ಹೊಸ ನಿರ್ವಚನವನ್ನು ವಚನಗಳಲ್ಲಿ ಕಟ್ಟಿಕೊಟ್ಟರು.

ಈ ಶರಣ ಪಂಥದ ಹಿಂದೆ ನಾಥ, ಸಿದ್ಧ ಪಂಥಗಳ ಪ್ರಭಾವ ಕಾಣುತ್ತದೆಯಾದರೂ ಇದು ಈ ಹಿಂದಿನವುಗಳ ಮುಂದುವರಿಕೆಯಂತಲ್ಲ. ಯಾಕೆಂದರೆ ಶರಣ ಪಂಥದಲ್ಲಿ ತೊಡಗಿಸಿಕೊಂಡಿದ್ದು ಆಗ ಹೆಚ್ಚು ಪ್ರವರ್ಧಮಾನಕ್ಕೆ ಬಂದ ಕುಶಲಕರ್ಮಿ ಉತ್ಪಾದಕ ಪಂಗಡಗಳು. ಅಂದಿನ ಮಟ್ಟಿಗೆ ಈ ವರ್ಗಗಳ ಆವಿರ್ಭಾವ ಮತ್ತು ಮುನ್ನಡೆ ಸಾಮಾಜಿಕವಾಗಿ ಹೊಸ ಬೆಳವಣಿಗೆಯಾಗಿತ್ತು. ಆದ್ದರಿಂದಲೇ ಹೊಸ ಅಗತ್ಯಗಳಿಗೆ ಅನುಗುಣವಾಗಿ, ಈ ಹಿಂದಿನ ವೈದಿಕ ವಿರೋಧಿ ಪಂಥಗಳ ಪ್ರೇರಣೆಯ ಸಮೇತ ಹೊಸ ತಾತ್ವಿಕತೆ ಯನ್ನು ಬೆಳೆಸಿಕೊಳ್ಳಲಾಯಿತು.

ನಾಥ, ಸಿದ್ಧರು ಅಧ್ಯಾತ್ಮಿಕ ಪ್ರಧಾನ ಆಚರಣಾ ಪಂಥವಾದರೆ ಶರಣರು ಇಹಜೀವನ ಪ್ರಧಾನ ಸಾಮಾಜಿಕ ತಾತ್ವಿಕತೆಯನ್ನು ರೂಪಿಸಿದರು. ಇವರಲ್ಲಿ ಬರುವ ಆಧ್ಯಾತ್ಮಿಕ ಚಿಂತನೆ ಬದುಕಿನಲ್ಲಿ ಅಳವಡಬೇಕಾದ ಮೌಲ್ಯ ಪ್ರಜ್ಞೆಯಾಗಿ ನೆಲೆ ಕಂಡುಕೊಂಡಿದ್ದೇ ಹೆಚ್ಚು. ಆದ್ದರಿಂದಲೇ ವಚನಗಳಲ್ಲಿ ಅಧ್ಯಾತ್ಮಿಕ ಸಿದ್ಧಿಗಾಗಿ ನಿರ್ದಿಷ್ಟ ವಿಧಿಯಾಚರಣೆಗಳ ಪ್ರತಿಪಾದನೆ ಮಾಡದೆ ಭಕ್ತಿಯನ್ನು ಸರಳಗೊಳಿಸಲಾಯಿತು. ಕಾಯಕದಲ್ಲಿ ತೊಡಗುವುದೇ ಪೂಜೆ, ದೇಹವೇ ದೇವಾಲಯ ಮುಂತಾದ ಜೀವನ್ಮುಖಿ ಚಿಂತನೆಯೇ ವಚನಗಳ ಪ್ರಣಾಳಿಕೆಯಾಯಿತು. ಇದರಲ್ಲಿ ತಮ್ಮ ಅಸ್ಮಿತೆಯನ್ನು ಕಂಡುಕೊಂಡ ಜನವಿಭಾಗಗಳ ಆಗಿನ ಆರ್ಥಿಕ ಸಾಮಾಜಿಕ ಪರಿಸ್ಥಿತಿ ಲೆಕ್ಕಕ್ಕೆ ಹಿಡಿದರೆ ದೇವರನ್ನು ಕಾಣಲು ಈ ಬಗೆಯದೊಂದು ಸುಲಭಸಾಧ್ಯ ಮಾರ್ಗ ಪ್ರತಿಪಾದಿಸುವುದು ಸಹಜವಾಗಿ ಕಾಣುತ್ತದೆ.

ದೇವರು ಹಾಗೂ ಧರ್ಮವೆಂಬವು ಕಾಯಕವನ್ನು ಹೊರತು ಪಡಿಸಿದ ಯಾವುದೇ ಕ್ರಿಯಾಚರಣೆಗಳಲ್ಲಿ ಇಲ್ಲ ಎಂದು ಅವು ಏಕಕಂಠದಿಂದ ನುಡಿಯುತ್ತವೆ. ಹುಟ್ಟಿನಿಂದ ಯಾವುದೇ ಜಾತಿಯಾಗಿದ್ದರೂ ಶೀಲ ಹಾಗೂ ನಿಷ್ಠೆಗಳಿಂದ ಶರಣರಾದ ಬಳಿಕ ಜಾತಿ ಕುಲಗಳ ಸೋಂಕಿಲ್ಲ ಎಂದು ವಚನಗಳು ಹೊಸ ಸಾಮಾಜಿಕ ಶ್ರೇಣಿಯನ್ನು ಪ್ರತಿಪಾದಿಸುತ್ತವೆ. ಇವು ಆಗ ಹೊಸದಾಗಿ ಪ್ರವರ್ಧಮಾನಕ್ಕೆ ಬರುತ್ತಿದ್ದ ಕುಶಲಕರ್ಮಿ ಉತ್ಪಾದಕ ವರ್ಗಗಳ ನಡುವಿನ ಹೊಸ ಕುಲ ಪ್ರಜ್ಞೆಯನ್ನು ಅಥವಾ ಸಮಾನ ಶ್ರೇಣಿ (ಗಿಲ್ಡ್) ಪ್ರಜ್ಞೆಯನ್ನು ನಿದರ್ಶಿಸುತ್ತಿವೆ. ಈ ಬಗೆಯ ಸಮಾನ ವೇದಿಕೆಯ ಮುಖಾಂತರ, ಶರಣತ್ವ ಎಂಬುದನ್ನು ಜಾತಿಗಳಾಚೆಯ ಸಹೋದರ ಪ್ರಜ್ಞೆಯನ್ನಾಗಿ ಘೋಷಿಸುವ ಅಭಿವ್ಯಕ್ತಿಯೇ ವಚನಗಳಾಗಿವೆ. ಆದ್ದರಿಂದ ವಚನಗಳನ್ನು ಹೊಸ ಐಕ್ಯಪ್ರಜ್ಞೆಯ ಮತ್ತು ಸ್ವಾತಂತ್ರಾಕಾಂಕ್ಷೆಯ ಪ್ರಕಟಣೆಗಳೆಂದು ಭಾವಿಸುವುದು ಹೆಚ್ಚು ಅರ್ಥಪೂರ್ಣವಾಗುತ್ತದೆ. ಈ ಬಗೆಯ ಪ್ರಕಟಣೆಗಳಲ್ಲಿ ಪರಲೋಕ ಚಿಂತನೆ ಮತ್ತು ಸಮಾನ ದೈವದ ಕಲ್ಪನೆ ಮತ್ತು ಪರದೈವಗಳ ದೂಷಣೆ ಕೂಡ ಆ ಕಾಲಮಾನದ ಅವರ ಅಗತ್ಯಗಳ ಅಭಿವ್ಯಕ್ತಿ ಎನ್ನಬೇಕು.

ಶರಣರಲ್ಲಿ ಕಂಡುಬರುವ ಈ ಬಗೆಯ ಹೊಸ ಮನೋಭಾವಕ್ಕೆ ಅವರ ಸಾಮಾಜಿಕ ನೆಲೆಗಟ್ಟಿನಂತೆಯೇ ಕೆಲವು ಭೌತಿಕ ಪರಿಸ್ಥಿತಿಗಳೂ ಕೂಡ ಪ್ರೇರಣೆ ನೀಡಿ

ಹುಟ್ಟಿನಿಂದ ಯಾವುದೇ ಜಾತಿಯಾಗಿದ್ದರೂ ಶೀಲ ಹಾಗೂ ನಿಷ್ಠೆಗಳಿಂದ ಶರಣರಾದ ಬಳಿಕ ಜಾತಿ ಕುಲಗಳ ಸೋಂಕಿಲ್ಲ ಎಂದು ವಚನಗಳು ಹೊಸ ಸಾಮಾಜಿಕ ಶ್ರೇಣಿಯನ್ನು ಪ್ರತಿಪಾದಿಸುತ್ತವೆ. ಇವು ಆಗ ಹೊಸದಾಗಿ ಪ್ರವರ್ಧಮಾನಕ್ಕೆ ಬರುತ್ತಿದ್ದ ಕುಶಲ ಕರ್ಮಿ ಉತ್ಪಾದಕ ವರ್ಗಗಳ ನಡುವಿನ ಹೊಸ ಕುಲ ಪ್ರಜ್ಞೆಯನ್ನು ಅಥವಾ ಸಮಾನ ಶ್ರೇಣಿ (ಗಿಲ್ಡ್) ಪ್ರಜ್ಞೆಯನ್ನು ನಿದರ್ಶಿಸುತ್ತಿವೆ. ಈ ಬಗೆಯ ಸಮಾನ ವೇದಿಕೆಯ ಮುಖಾಂತರ, ಶರಣತ್ವ ಎಂಬುದನ್ನು ಜಾತಿಗಳಾಚೆಯ ಸಹೋದರ ಪ್ರಜ್ಞೆಯನ್ನಾಗಿ ಘೋಷಿಸುವ ಅಭಿವ್ಯಕ್ತಿಯೇ ವಚನಗಳಾಗಿವೆ.

ರುವುದನ್ನು ನಾವು ಊಹಿಸಬಹುದಾಗಿದೆ. ಕೃಷಿ ಉತ್ಪಾದನಾ ಪ್ರಕ್ರಿಯೆಗೂ ಕುಶಲಕರ್ಮಿಗಳ ಉತ್ಪಾದನಾ ಪ್ರಕ್ರಿಯೆಗೂ ಅದರ ಸ್ವರೂಪ ಹಾಗೂ ಸ್ವಭಾವದಲ್ಲಿ ಕೆಲವು ಭಿನ್ನತೆಗಳಿವೆ. ತಿಥಿ, ನಕ್ಷತ್ರಗಳ ಆಧಾರದಲ್ಲಿ ಋತುಮಾನಾಧಾರಿತ ಉತ್ಪಾದನೆ ನಡೆಸಬೇಕಾದ ಊಳಿಗಮಾನ್ಯ ಕೃಷಿಕ ಸಮುದಾಯ ತನ್ನ ಉತ್ಪನ್ನದ ಹೊಣೆಯನ್ನು ಅಗೋಚರ ವಿಧಿಯ ಮೇಲೆ ಹಾಕಿ ಪ್ರತೀಕ್ಷೆಯಲ್ಲಿರಬೇಕಾದ ಮನಃಸ್ಥಿತಿಯಲ್ಲಿರುತ್ತದೆ. ಆ ಪ್ರಮಾಣದಲ್ಲಿ ಋತುಮಾನಾಧಾರಿತ ಕ್ರಿಯಾ ಸರಣಿಯನ್ನು ಅವಲಂಬಿಸಬೇಕಾದ ಅಗತ್ಯವಿಲ್ಲದ ಹಾಗೂ ತನ್ನ ವ್ಯಕ್ತಿಗತ ಸೃಜನಶೀಲತೆಯ ನೆಲೆಯನ್ನೇ ಪ್ರಧಾನವಾಗಿ ಆಧರಿಸಬೇಕಾದ ಕುಶಲಕರ್ಮಿ ಸಮುದಾಯ ವಿಧಿ ನಂಬಿಕೆಯ ಮನಃಸ್ಥಿತಿಯಿಂದ ಒಂದು ಮಟ್ಟಿಗೆ ಬಿಡುಗಡೆ ಪಡೆದಿರುತ್ತದೆ. ಕುಶಲಕರ್ಮಿಗಳಿಗೆ ಐಂದ್ರಿಯಕ ಅನುಭವ ಹಾಗೂ ಲೌಕಿಕ ಪ್ರಮಾಣಗಳಲ್ಲಿ ಹೆಚ್ಚು ಸ್ಥಿರವಾದ ಜೀವಸಾಧಾರಗಳಿರುತ್ತವೆ.

ರೈತರು ನಿಸರ್ಗದಿಂದ ದೊರೆತ ಬೀಜಗಳನ್ನೇ ಬಿತ್ತಿ ಭೂಮಿಯು ತನ್ನೊಳಗಿನ ಶಕ್ತಿಯಿಂದ ಆ ಬಿತ್ತನೆಯನ್ನು ನೂರ್ಮಡಿಗೊಳಿಸುವ ಇವರ ಕೈಯಾಚೆಗಿನ ಪವಾಡವನ್ನು ಅವಲಂಬಿಸಿರುವವರಾದ್ದರಿಂದ, ಅಂತಹ ಉತ್ಪಾದಕ ಕ್ರಿಯಾ ಸರಣಿಯಲ್ಲಿ ತೊಡಗಿರುವವರಿಗೆ 'ಸ್ವಯಂ ಬ್ರಹ್ಮ' ಕಲ್ಪನೆ ಮೂಡುವುದು ಸುಲಭವಲ್ಲ. ಆದರೆ ನಿಸರ್ಗದಲ್ಲಿ ದೊರೆತ ವಸ್ತುಗಳನ್ನು ಅನುಭವಾನುಸಾರ ಆಯ್ಕೆ ಮಾಡಿಕೊಂಡು, ಸಂಸ್ಕರಣೆಗೊಳಿಸಿ, ಅವುಗಳ ರೂಪ ಮಾರ್ಪಾಡು ಮಾಡಿ, ಹೊಸ ಉತ್ಪನ್ನ ತಯಾರು ಮಾಡುವ ಪ್ರಕ್ರಿಯೆಯಲ್ಲಿರುವ ಕುಶಲಕರ್ಮಿ ಸಮುದಾಯಗಳು 'ಸ್ವಯಂ ಬ್ರಹ್ಮ' ಪರಿಕಲ್ಪನೆಯನ್ನು ಬೆಳೆಸಿಕೊಳ್ಳುವುದು ಭೌತಿಕ ಪರಿಸ್ಥಿತಿಗಳಿಂದಾಗಿ ಸುಲಭ. ಹಾಗಾಗಿಯೇ ದೇವರು ಮತ್ತು ಭಕ್ತಿ ಎಂಬುದು ವಚನಕಾರರಲ್ಲಿ ಕಾಯಕಕ್ಕೆ ಪೂರಕವೇ ಹೊರತು ಅದೇ ಸರ್ವಸ್ವವಲ್ಲ. ಕಾಯಕದಲ್ಲಿ ತೊಡಗಿರುವಾಗ ಗುರುವು ಬಂದರೂ, ದೇವರೇ ಬಂದರೂ ಮರೆಯಬೇಕು ಎಂಬ ನೆಲೆಗಟ್ಟಿನ ಹಲವಾರು ಕಥೆಗಳು ಈ ಕಾರಣದಿಂದಾಗಿಯೇ ಶರಣರ ಜೀವನದಲ್ಲಿ ಹಲವು ಸಲ ರೂಪಕಾರ್ಥದಲ್ಲಿ ಬಂದಿವೆ.

ವಚನಗಳಲ್ಲಿ ವ್ಯಕ್ತಗೊಳ್ಳುವ ಲಿಂಗ ಸಮಾನತೆಯ ಪರಿಕಲ್ಪನೆ ಕೂಡ ಇಂತಹದೇ ಉತ್ಪಾದನಾ ಪ್ರಕ್ರಿಯೆಯ ನೆಲೆಗಟ್ಟನ್ನು ಹೊಂದಿರಬಹುದೆಂದು ಊಹಿಸಲು ಅವಕಾಶವಿದೆ. ಭಿನ್ನ ಕಾಯಕಗಳಲ್ಲಿ ತೊಡಗಿರುವ ವ್ಯಕ್ತಿಗಳು ಬೇರೆ ಬೇರೆ ಜಾತಿಯಿಂದ ಬಂದಿರಬಹುದು ಅಥವಾ ಭಿನ್ನ ಲಿಂಗಿಗಳಾಗಿರಬಹುದು, ಅದು ಮುಖ್ಯವಲ್ಲ. ಅವರವರ ಕಾಯಕ ನಿಷ್ಠೆ ಅವರವರ ಅನ್ನವನ್ನು ಸಂಪಾದಿಸಿಕೊಡುತ್ತಿರುವುದರಿಂದ, ಕುಶಲಕರ್ಮಿಗಳು ತಮ್ಮ ಅವಶ್ಯಕತೆಗಳಿಗಾಗಿ ಬೇರೆ ಒಡೆಯರನ್ನು ಅವಲಂಬಿಸಿಲ್ಲವಾದ್ದರಿಂದ ಅವರ ನಡುವೆ ಪರಸ್ಪರ ಸಮಾನತೆಯ ಧೋರಣೆ ಹುಟ್ಟಿಕೊಳ್ಳಲು ಅವಕಾಶವಿದೆ. ಊಳಿಗಮಾನ್ಯ ಕೃಷಿಯಲ್ಲಿ ಮಹಿಳೆ ಬೇಸಾಯದ 'ಪೂರಕ ಚಟುವಟಿಕೆಗಳಲ್ಲಿ ಹಾಗೂ ಸಹಾಯಕ ಕ್ರಿಯೆಗಳಲ್ಲಿ ತೊಡಗುತ್ತಾಳೆ. ಅಲ್ಲಿನ ಶ್ರಮ ವಿಭಜನೆಯು ಮುಖ್ಯ ಚಟುವಟಿಕೆ ಹಾಗೂ ಅಮುಖ್ಯ ಚಟುವಟಿಕೆ ಎಂಬ ನೆಲೆಗಟ್ಟಿನಲ್ಲಿ ಉಂಟಾಗಿದೆ. ಉಳುವುದು, ಹರಗುವುದು, ಕಣ ಒಕ್ಕಣೆ ಮಾಡುವುದು ಮುಂತಾದವು ಗಂಡಸರ ಕೆಲಸವಾದರೆ, ಕಳೆ ಕೀಳುವುದು ಕುಯ್ಲು ಮಾಡುವುದು, ಧಾನ್ಯ ರಾಶಿ ಮಾಡುವುದು ಮುಂತಾದವುಗಳಿಗೆ ಮಹಿಳೆಯರನ್ನು ಸೀಮಿತಗೊಳಿಸಲಾಗಿರುತ್ತದೆ. ಶ್ರೇಣೀಕರಣದ ತಾತ್ವಿಕತೆ ಇವುಗಳನ್ನು ಮುಖ್ಯ, ಅಮುಖ್ಯ ಎಂದು ವಿಂಗಡಿಸುವುದು ಮಾತ್ರವಲ್ಲದೆ, ಇಂತಹವುಗಳನ್ನು ಇಂತಹ ಲಿಂಗ ಸಮುದಾಯವೇ ಮಾಡಬೇಕೆಂದು ನಿರ್ಬಂಧಿಸುತ್ತಿದೆ. ಕೆಲಸ ಕಾರ್ಯಗಳಲ್ಲಿ ಕಂಡುಬರುವ ಈ ವಿಂಗಡಣೆ ಸಮಾಜದಲ್ಲೂ ಪ್ರತಿಫಲಿಸುತ್ತದೆ.

ರೈತರು ನಿಸರ್ಗದಿಂದ ದೊರೆತ ಬೀಜಗಳನ್ನೇ ಬಿತ್ತಿ ಭೂಮಿಯು ತನ್ನೊಳಗಿನ ಶಕ್ತಿಯಿಂದ ಆ ಬಿತ್ತನೆಯನ್ನು ನೂರ್ಮಡಿಗೊಳಿಸುವ ಇವರ ಕೈಯಾಚೆಗಿನ ಪವಾಡವನ್ನು ಅವಲಂಬಿಸಿರುವವರಾದ್ದರಿಂದ, ಅಂತಹ ಉತ್ಪಾದಕ ಕ್ರಿಯಾ ಸರಣಿಯಲ್ಲಿ ತೊಡಗಿರುವವರಿಗೆ 'ಸ್ವಯಂ ಬ್ರಹ್ಮ' ಕಲ್ಪನೆ ಮೂಡುವುದು ಸುಲಭವಲ್ಲ. ಆದರೆ ನಿಸರ್ಗದಲ್ಲಿ ದೊರೆತ ವಸ್ತುಗಳನ್ನು ಅನುಭವಾನುಸಾರ ಆಯ್ಕೆ ಮಾಡಿಕೊಂಡು, ಸಂಸ್ಕರಣೆಗೊಳಿಸಿ, ಅವುಗಳ ರೂಪ ಮಾರ್ಪಾಡು ಮಾಡಿ, ಹೊಸ ಉತ್ಪನ್ನ ತಯಾರು ಮಾಡುವ ಪ್ರಕ್ರಿಯೆಯಲ್ಲಿರುವ ಕುಶಲಕರ್ಮಿ ಸಮುದಾಯಗಳು 'ಸ್ವಯಂ ಬ್ರಹ್ಮ' ಪರಿಕಲ್ಪನೆಯನ್ನು ಬೆಳೆಸಿಕೊಳ್ಳುವುದು ಭೌತಿಕ ಪರಿಸ್ಥಿತಿಗಳಿಂದಾಗಿ ಸುಲಭ. ಹಾಗಾಗಿಯೇ ದೇವರು ಮತ್ತು ಭಕ್ತಿ ಎಂಬುದು ವಚನಕಾರರಲ್ಲಿ ಕಾಯಕಕ್ಕೆ ಪೂರಕವೇ ಹೊರತು ಅದೇ ಸರ್ವಸ್ವವಲ್ಲ. ಕಾಯಕದಲ್ಲಿ ತೊಡಗಿರುವಾಗ ಗುರುವು ಬಂದರೂ, ದೇವರೇ ಬಂದರೂ ಮರೆಯಬೇಕು ಎಂಬ ನೆಲೆಗಟ್ಟಿನ ಹಲವಾರು ಕಥೆಗಳು ಈ ಕಾರಣದಿಂದಾಗಿಯೇ ಶರಣರ ಜೀವನದಲ್ಲಿ ಹಲವು ಸಲ ರೂಪಕಾರ್ಥದಲ್ಲಿ ಬಂದಿವೆ. ವಚನಗಳಲ್ಲಿ ವ್ಯಕ್ತಗೊಳ್ಳುವ ಲಿಂಗ ಸಮಾನತೆಯ ಪರಿಕಲ್ಪನೆ ಕೂಡ ಇಂತಹದೇ ಉತ್ಪಾದನಾ ಪ್ರಕ್ರಿಯೆಯ ನೆಲೆಗಟ್ಟನ್ನು ಹೊಂದಿರಬಹುದೆಂದು ಊಹಿಸಲು ಅವಕಾಶವಿದೆ. ಭಿನ್ನ ಕಾಯಕಗಳಲ್ಲಿ ತೊಡಗಿರುವ ವ್ಯಕ್ತಿಗಳು ಬೇರೆ ಬೇರೆ ಜಾತಿಯಿಂದ ಬಂದಿರಬಹುದು ಅಥವಾ ಭಿನ್ನ ಲಿಂಗಿಗಳಾಗಿರಬಹುದು, ಅದು ಮುಖ್ಯವಲ್ಲ.

ಆದರೆ ಆರಂಭಿಕ ಕುಶಲಕರ್ಮಿ ಕುಟುಂಬಗಳಲ್ಲಿ ಒಂದು ಹಂತದ ಶ್ರಮ ವಿಭಜನೆ ಇರುವುದು ಹೌದಾದರೂ ಅದು ಲಿಂಗ ನಿರ್ಬಂಧಕವಾಗಿರುವುದಿಲ್ಲ. ಉದಾಹರಣೆಗೆ ನೇಕಾರಿಕೆ. ನೂಲನ್ನು ಹಾಸುವುದು, ನೇಯುವುದು ಮತ್ತು ಬಟ್ಟೆಗೆ ಬಣ್ಣ ಹಾಕುವುದು ಎಂಬ ಪ್ರಕ್ರಿಯೆಯಲ್ಲಿ ಹೆಣ್ಣು/ಗಂಡು ಯಾರಾದರೂ ಪಾಲ್ಗೊಳ್ಳಬಹುದು. ಬುಟ್ಟಿ ಹೆಣೆಯುವುದು, ಕುಂಬಾರಿಕೆ ಮಾಡುವುದು ಇವುಗಳಲ್ಲೂ ಆರಂಭಿಕ ದೆಸೆಯಲ್ಲಿ ಹೆಣ್ಣು, ಗಂಡಿನ ಲಿಂಗಾಧಾರಿತ ನಿರ್ಬಂಧಗಳಿಲ್ಲ. ಚಮ್ಮಾರಿಕೆ ಮತ್ತು ಕ್ಷೌರಿಕ ವೃತ್ತಿಗಳಲ್ಲಿ ಈ ಬಗೆಯ ವಿಂಗಡಣೆ ಕಂಡುಬರುತ್ತದಾದರೂ ಚರ್ಮದ ವಿವಿಧ ಉತ್ಪನ್ನಗಳನ್ನು ತಯಾರಿಸುವುದರಲ್ಲಿ ಮಹಿಳೆಯರೂ ಕೂಡ ಸಮಭಾಗಿಗಳಾಗಿರುವುದನ್ನು ಗಮನಿಸಬಹುದು. ಜೊತೆಗೆ ಕೃಷಿ ಕೆಲಸಗಳಲ್ಲಿ ಸಹಾಯಕ ಚಟುವಟಿಕೆಗಳಲ್ಲಿ ಯಾರಾದರೊಬ್ಬ ವ್ಯಕ್ತಿ ತೊಡಗುವ ಸಾಧ್ಯತೆ ಇದೆ. ಅದು ವ್ಯಕ್ತಿ ನಿರ್ದಿಷ್ಟವಲ್ಲ. ಆದರೆ ಅಲ್ಪ ಪ್ರಮಾಣದ ತರಬೇತಿ ಮಾತ್ರದಿಂದ ವ್ಯಕ್ತಿ ನಿರ್ದಿಷ್ಟತೆಯಿಲ್ಲದೆ ಪಾಲ್ಗೊಳ್ಳಬಹುದಾದ ಕ್ರಿಯಾ ಸರಣಿ ಕುಶಲಕರ್ಮಿಗಳ ಉತ್ಪಾದನಾ ಪ್ರಕ್ರಿಯೆಯಲ್ಲಿ ಕಡಿಮೆ ಪ್ರಮಾಣದಲ್ಲಿದೆ.

ಯಾಕೆಂದರೆ ಪ್ರತೀ ಉತ್ಪನ್ನದ ತಯಾರಿಕೆಯೂ ಕೌಶಲವನ್ನು ಆಧರಿಸುತ್ತದೆ. ಈ ಕೌಶಲವನ್ನು ಪಡೆದುಕೊಳ್ಳುವ ವ್ಯಕ್ತಿ ಹೆಣ್ಣಿರಲಿ/ ಗಂಡಿರಲಿ ತನ್ನ ಭಾಗದ ಪ್ರಕ್ರಿಯೆಯಲ್ಲಿ ತಕ್ಕಷ್ಟು ನುರಿತಿರಬೇಕಾಗುತ್ತದೆ. ಅದು ನಿಪುಣತೆಯನ್ನು ಒದಗಿಸುತ್ತದಲ್ಲದೆ, ವ್ಯಕ್ತಿತ್ವಕ್ಕೆ ವಿಶೇಷತೆಯನ್ನೂ ಒದಗಿಸುತ್ತದೆ. ಈ ಹಿನ್ನೆಲೆಯಲ್ಲಿ ಉತ್ಪಾದನಾ ಪ್ರಕ್ರಿಯೆಯ ನಿರ್ದಿಷ್ಟ ಹಂತಗಳಲ್ಲಿ ತೊಡಗಿರುವ ಹೆಣ್ಣನ್ನಾಗಲೀ/ ಗಂಡನ್ನಾಗಲೀ ಬದಲಿ ಮಾಡುವುದು ಕಷ್ಟಸಾಧ್ಯ. ಇಂತಹ ಒಂದು ವಿದ್ಯಮಾನವೇ ಲಿಂಗಭೇದವನ್ನು ನಿರಾಕರಿಸುವ ತಾತ್ವಿಕತೆಯನ್ನು ಸ್ವೀಕರಿಸುವುದಕ್ಕೆ ಅಗತ್ಯವಾದ ಮನೋಭೂಮಿಕೆಯನ್ನು ಉಂಟುಮಾಡಿರುತ್ತದೆ. ಉತ್ಪಾದಕ ಸಂಸ್ಕೃತಿಯೇ ಜೀವನ ದರ್ಶನದ ಅಭಿವ್ಯಕ್ತಿಯಾಗಿ ವಚನಗಳಲ್ಲಿ ಬಂದಿರುವುದರಿಂದಲೇ ಲಿಂಗ ತಾರತಮ್ಯದ ನಿರಾಕರಣೆಯೂ ಬೇಕಾದಷ್ಟು ಕಡೆ ಬಂದಿದೆ.

ದೇವಸ್ಥಾನ ಮತ್ತು ದೇವರು ದೇಹವೇ ಆಗಿಬಿಡುವ ಅಗತ್ಯ ಕೂಡ ಉತ್ಪಾದಕ ಸಮುದಾಯದಲ್ಲಿದೆ. ತನ್ನೊಳಗೆ ಒಂದು ಉತ್ಪನ್ನವನ್ನು ಉಪಯುಕ್ತವಾಗಿ, ಸುಂದರವಾಗಿ ಸೃಷ್ಟಿ ಮಾಡುವ ಶಕ್ತಿಯನ್ನು ತುಂಬಿರುವುದು ಆ ದೇವರೇ ಆಗಿದ್ದರೆ ತಾನು ದೇವರ ಕಾರ್ಯನಿಯೋಜಿತ ಪ್ರತಿನಿಧಿ. ಅಂದರೆ ತಾನೇ ದೇವರು ಎಂದೂ ಕೂಡ ಆಗುತ್ತದೆ. ತಾಂತ್ರಿಕರಿಗೆ ಸೃಷ್ಟಿಯು ಆದಿಶಕ್ತಿಯಿಂದ ಉಂಟಾದ ವಿದ್ಯಮಾನವಾಗಿ ಕಂಡಿದ್ದರಿಂದ ಸೃಷ್ಟಿ ಶಕ್ತಿಯುಳ್ಳ ಪ್ರತೀ ಹೆಣ್ಣು ದೇವಿ ಸ್ವರೂಪಳೇ ಆಗಿರುವಂತೆ ಪರಿಗಣನೆಯಾಗುವುದು ಸಾಧ್ಯವಾದ ಹಾಗೆಯೇ ಇದೂ ಕೂಡ. ಪ್ರಕೃತಿ ಮತ್ತು ಪುರುಷ ಎಂಬ ಧಾತುಗಳು ಇಡೀ ಸೃಷ್ಟಿ ಶಕ್ತಿಯ ನಿರ್ಮಾಣ ಧಾತುಗಳು. ಆದುದರಿಂದ ಆ ಸೃಷ್ಟಿಯಲ್ಲಿ ತೊಡಗುವ ಹೆಣ್ಣು, ಗಂಡೇ ಅದರ ಪ್ರತೀಕಗಳು ಎಂದು ಇತರೆ ಅವೈದಿಕ ಪಂಥಗಳು, ನಾಥ, ಸಿದ್ಧರು ಭಾವಿಸುವುದು ಸಾಧ್ಯವಿರುವ ಹಾಗೆಯೇ ಇದೂ ಕೂಡ. ಎಲ್ಲೆಲ್ಲಿ ಅಸ್ತಿತ್ವದ ಆಧಾರದಲ್ಲಿ, ಬದುಕಿನ ಅನುಭವದ ಮೂಸೆಯಲ್ಲಿ ತಾತ್ವಿಕತೆ ಅರಳಿಕೊಳ್ಳುತ್ತದೋ ಅಲ್ಲಿ ನೆಲಮುಖೀ ಚಿಂತನೆ ಯೆಂಬುದು ಬಹುಮುಖ್ಯ ಲಕ್ಷಣವಾಗಿ ನೆಲೆಗೊಂಡಿರುತ್ತದೆ. □

ಮಹಿಳಾ ಶೋಷಣೆಗೆ ಶಿಕ್ಷಣವೇ ಮದ್ದು

–ಲ–

ಜ್ಯೋತಿ ಗುರುಪ್ರಸಾದ್

'ಪುರುಷರ ದಿನಾಚರಣೆ' ಎಂಬ ಯಾವ ದಿನಾಚರಣೆಯೂ ಇಲ್ಲ! ಅಂದರೆ ಬಹು ಸಂಖ್ಯಾತರಾಗಿ ಪುರುಷರು ಸುಭದ್ರರು. ಅಲ್ಪಸಂಖ್ಯಾತಳಾಗಿ 'ಮಹಿಳೆ' ಇನ್ನೂ ತಳಕ್ಕೆ ತುಳಿಯಲ್ಪಡುತ್ತಿರುವುದರಿಂದಲೇ ಈ 'ಆಚರಣೆ'ಯು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಜಾಪ್ರಭುತ್ವವನ್ನು ಗೌರವಿಸುವ ಮನಸ್ಸುಗಳಿಂದ ಜಾರಿಗೆ ಬಂತು. 'ಪ್ರಜೆ' ಅಂದ ಮೇಲೆ 'ವ್ಯಕ್ತಿ' ತಾನೇ? ಪುರುಷನೇನು-ಮಹಿಳೆಯೇನು? ಎಷ್ಟೋ ಆಚರಣೆಗಳಿವೆ-ಹಬ್ಬದಂತೆ! ರಾಷ್ಟ್ರೀಯ ಹಬ್ಬಗಳು-ನಾಡ ಹಬ್ಬಗಳು ಮುಂತಾದುವು. ಅವೆಲ್ಲಾ ನಾವು ಗಳಿಸಿಕೊಂಡ ಹೊಸ ತನದ ಸಾಂಸ್ಕೃತಿಕ ಚಿನ್ಹೆಗಳಾಗಿ ಬೆಳೆದುಕೊಂಡು ಬಂದಿದ್ದರೆ 'ಮಹಿಳಾ ದಿನಾಚರಣೆ' ಮಾತ್ರ ಇನ್ನೂ ಮಹಿಳೆಗೆ ಸಮಾನತೆ ಕಲ್ಪಿಸಬೇಕಾದ ಹೋರಾಟದತ್ತಲೇ ಸಾಗುತ್ತಿದೆ.

ಪ್ರತಿ ವರ್ಷ ಮಾರ್ಚ್ 8ರಂದು 'ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ'ಯನ್ನು ಮಹಿಳೆಗೆ ಸಲ್ಲಿಸುವ ಗೌರವವಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಆ ದಿನ ಮಹಿಳೆಯ ಹಕ್ಕು, ಮಹಿಳೆಗಾಗುತ್ತಿರುವ ಅನ್ಯಾಯ ಎಲ್ಲದರ ಬಗ್ಗೆ ಚಿಂತಿಸುವ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು; ಸಮಸ್ಸೆಗಳಿಗೆ ಪರಿಹಾರ ಕಂಡು ಹಿಡಿಯುವ ಪ್ರಯತ್ನ ನಡೆಯುತ್ತಲೇ ಇರುತ್ತದೆ. ಆದರೂ ಪೂರ್ಣ ಪ್ರಮಾಣದಲ್ಲಿ ಇನ್ನೂ ಆ ಪ್ರಯತ್ನಗಳು 'ಅನುಷ್ಠಾನ'ದ ಮಟ್ಟಕ್ಕೆ ಏರದೆ 'ಅವಳ ಸಮಸ್ಸೆ'ಗಳು ಹಾಗೆ ಹಾಗೇ ಬೆಳೆಯುತ್ತಿವೆ ಎನ್ನುವುದೇ ಈಗ ಸಮಗ್ರ ಚಿಂತನೆಗೆ ಒಡ್ಡಿಕೊಳ್ಳಲೇ ಬೇಕಾಗಿರುವ ವಿಚಾರ. ಅಂದರೆ ಎರಡು ಸುಳಿವುಗಳನ್ನು ಕೊಟ್ಟು ನನ್ನ ಈ ಆರೋಪವನ್ನು ಸಾಬೀತುಪಡಿಸಲು ಇಚ್ಛಿಸುತ್ತೇನೆ.

1. 'ಪುರುಷರ ದಿನಾಚರಣೆ' ಎಂಬ ಯಾವ ದಿನಾಚರಣೆಯೂ ಇಲ್ಲ! ಅಂದರೆ ಬಹು ಸಂಖ್ಯಾತರಾಗಿ ಪುರುಷರು ಸುಭದ್ರರು. ಅಲ್ಪಸಂಖ್ಯಾತಳಾಗಿ 'ಮಹಿಳೆ' ಇನ್ನೂ ತಳಕ್ಕೆ ತುಳಿಯಲ್ಪಡುತ್ತಿರುವುದರಿಂದಲೇ ಈ 'ಆಚರಣೆ'ಯು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಜಾಪ್ರಭುತ್ವವನ್ನು ಗೌರವಿಸುವ ಮನಸ್ಸುಗಳಿಂದ ಜಾರಿಗೆ ಬಂತು. 'ಪ್ರಜೆ' ಅಂದ ಮೇಲೆ 'ವ್ಯಕ್ತಿ' ತಾನೇ?. ಪುರುಷನೇನು-ಮಹಿಳೆಯೇನು? ಎಷ್ಟೋ ಆಚರಣೆಗಳಿವೆ-ಹಬ್ಬದಂತೆ! ರಾಷ್ಟ್ರೀಯ ಹಬ್ಬಗಳು-ನಾಡ ಹಬ್ಬಗಳು ಮುಂತಾದುವು. ಅವೆಲ್ಲಾ ನಾವು ಗಳಿಸಿಕೊಂಡ ಹೊಸತನದ ಸಾಂಸ್ಕೃತಿಕ ಚಿನ್ಹೆಗಳಾಗಿ ಬೆಳೆದುಕೊಂಡು ಬಂದಿದ್ದರೆ 'ಮಹಿಳಾ ದಿನಾಚರಣೆ' ಮಾತ್ರ ಇನ್ನೂ ಮಹಿಳೆಗೆ ಸಮಾನತೆ ಕಲ್ಪಿಸಬೇಕಾದ ಹೋರಾಟದತ್ತಲೇ ಸಾಗುತ್ತಿದೆ.

2. 'ಸಮಸ್ಯೆ' ಪರಿಹಾರ ಮಾಡುವುದೆಂದರೆ ಅದರ ಮೂಲೋತ್ಪಾಟನೆ ಆಗಬೇಕೆಂಬುದು ನನ್ನ ಅಭಿಮತ. ಅದು ಯಾವುದೇ ಸಮಸ್ಸೆಯಾಗಲಿ. ಮೈಕ್ರೋ ಲೆವೆಲ್‌ನಿಂದಲೇ ಪರಿಹರಿಸುವ ಯತ್ನ ಸಮಗ್ರವಾಗಿ ನಡೆಯಬೇಕೆಂಬ ಆಶಯದತ್ತ ಒತ್ತು ಕೊಡುತ್ತ 'ಪ್ಲೇಗ್', 'ಸಿಡುಬು' ಮುಂತಾದ ರೋಗಗಳಿಗೆ ಶಾಶ್ವತವಾದ 'ವ್ಯಾಕ್ಸಿನ್' ಕಂಡು ಹಿಡಿದು ಈ ರೋಗಗಳು ಪ್ರಪಂಚದ ಇನ್ಯಾವ ಮೂಲೆಯಲ್ಲೂ ತಲೆಯೆತ್ತದಂತೆ ಮಾಡಿರುವ ಜೀವ ವಿಜ್ಞಾನದ ಅಪ್ರತಿಮ ಸಾಹಸಗಳನ್ನು ನೆನೆಯುತ್ತ ನನ್ನ ಅಭಿಮತಕ್ಕೆ ಒತ್ತು ಕೊಡುತ್ತಿದ್ದೇನೆ. ಜೀವ ವೈವಿಧ್ಯಗಳ ಉಳಿವಿಗೆ ಒತ್ತು ಕೊಡುವ ಏಕಾಗ್ರತೆ 'ಜೀವಂತಿಕೆ'ಯ ಪ್ರತಿರೂಪದ ಹೆಣ್ಣಿನತ್ತ-ಅವಳ ವ್ಯಕ್ತಿತ್ವದತ್ತ ಗಮನ ಹರಿಸಲು ಸಾಧ್ಯವಾಗಿಲ್ಲವೆಂದರೆ ಇದು ಮಾನವನ ಅಧಃಪತನದ ಶೋಚನೀಯ ಸ್ಥಿತಿ ಎನ್ನದೆ ಬೇರೆ ವಿಧಿಯೇ ಇಲ್ಲ.

ನಾನಿಲ್ಲಿ ಮಹಿಳೆಯರನ್ನು ಕಾಡುತ್ತಿರುವ ಜ್ವಲಂತ ಸಮಸ್ಯೆಗಳನ್ನು ನಿಜವಾಗಿಯೂ ಕಾಳಜಿಯಿಂದ ವಿಶ್ಲೇಷಿಸ ಬಯಸುತ್ತೇನೆ. ನಿಜಕ್ಕೂ ಬಗೆಹರಿಸಬಹುದಾದ ಸಮಸ್ಯೆಗಳ ಹೊಳಹುಗಳ ಪ್ರಾಥಮಿಕ ಹಂತವನ್ನು ಮಾತ್ರ ಎಳೆ ಎಳೆಯಾಗಿ ಬಿಡಿಸಿಡಲು ಬಯಸುತ್ತೇನೆ. ಯಾವ ಸಂಖ್ಯಾಶಾಸ್ತ್ರಗಳ ಮಾಹಿತಿಗಳನ್ನಾಗಲೀ ಅಥವಾ ಈಗಾಗಲೇ ಈ ಬಗ್ಗೆ ನಡೆದಿರುವ ಸಂಶೋದನಾತ್ಮಕವಾದ ದೊಡ್ಡ ದೊಡ್ಡ ಪ್ರಬಂಧಗಳ ಅಂಶಗಳ ಪಾಂಡಿತ್ಯವನ್ನು ನನಗೆ ಉಲ್ಲೇಖಿಸಲು ಸಾಧ್ಯವಿಲ್ಲ. ಯಾಕೆಂದರೆ ಅಷ್ಟೆಲ್ಲಾ ನಡೆದರೂ ಹೆಣ್ಣಿಗೆ ಸಂಬಂಧಿಸಿದ ಸಮಸ್ಸೆಗಳು ಮಾತ್ರ ಇನ್ನೂ ಹಾಗೇ ಇರುವುದನ್ನು ನೋಡಿದರೆ ಈ ಗ್ರಂಥಾಲಯದಲ್ಲಿ ಶೇಖರವಾಗಿ ಧೂಳು ಹಿಡಿಯುವ ಗ್ರಂಥಗಳಿಂದ – ಬೃಹತ್ ಪಾಂಡಿತ್ಯದಲ್ಲಿ 'ಮಹಿಳಾ ಸಮಸ್ಸೆ'ಗಳನ್ನು ಪದಗಳಲ್ಲಿ ಹಿಡಿದಿಟ್ಟು ಸುಮ್ಮನಿರುವುದರಿಂದ ಯಾವ ಪುರುಷಾರ್ಥವೂ ಸಾಧನೆಯಾದಂತಿಲ್ಲ. ಕೆಲವೊಮ್ಮೆ ಬೃಹತ್ ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡಿಸಿ ಡಾಕ್ಟರೇಟ್ ತೆಗೆದುಕೊಂಡಿರುವ ಸಂಶೋಧಕರೂ ಕೂಡ ನಿಜ ಜೀವನದಲ್ಲಿ ತಮ್ಮ ಭಾಷಣಗಳನ್ನು ಜಾರಿಗೆ ತರದೆ ಆ ವೇದಿಕೆಯ 'ಮೈಕ್ ಮಾತು'ಗಳೆಲ್ಲಾ ಆ ಕ್ಷಣದ 'ವೇದಿಕೆಯ ಸತ್ಯ' ವಾಗಿಬಿಡುವ ಜೀವನದ ಬಗೆಗಿನ ಅಪಹಾಸ್ಯವೂ ಸಮಸ್ಯೆಗಳನ್ನು ಸಮಸ್ಯೆಗಳಾಗಿಯೇ ಸುರಕ್ಷಿತವಾಗಿಡುತ್ತವೆ.

ಈಗ ಅದೆಲ್ಲಾ ಯೋಚಿಸದೆ ಮಹಿಳೆಯನ್ನು ವ್ಯಕ್ತಿಯಾಗಿ ಗೌರವಿಸಬೇಕಾದ–ಗೌರವಿಸಲೇಬೇಕಾದ ಹಾಗೂ ಈ ದೃಷ್ಟಿಕೋನದ ಸಾಧ್ಯತೆಯ ಕ್ಷ–ಕಿರಣದ ಒಂದು ಕಾಲುದಾರಿಯ ಬಗ್ಗೆ ಮಾತ್ರ ನಾನು ಚಿಂತಿಸುತ್ತಿದ್ದೇನೆ.

ಮೊದಲು ಯಥಾಪ್ರಕಾರ 'ನಿಸರ್ಗತತ್ವ' ವೇ ಕಣ್ಮುಂದೆ ಇಳಿಯುತ್ತದೆ. ಇದೇ ಆಕಾಶ ಮತ್ತು ಭೂಮಿ ತತ್ವ, ಮಳೆ ಸುರಿಸುವ ಆಕಾಶ–ಫಲ ಧರಿಸುವ ಭೂಮಿ, ಯಾವುದು ಹೆಚ್ಚು? ಯಾವುದು ಕಡಿಮೆ?! ಸರಿಯಾಗಿ ನೋಡಿದರೆ ಸಮಗ್ರ ದೃಷ್ಟಿ ನಮ್ಮಲ್ಲಿ ಸ್ಫುರಿಸುವುದೇ ಸತ್ಯವಾದರೆ ಆಕಾಶ ಮತ್ತು ಭೂಮಿ ಬೇರೆ ಬೇರೆ ಎಂದು ಹೇಳಲು ಸಾಧ್ಯವೇ? ಭೂಮಿಯ ಮೇಲ್ಭಾವಣಿಯೇ ಆಕಾಶ, ಅಥವಾ ಆಕಾಶದ ಭಾಗವೇ ಭೂಮಿ. ಅಂಥ SPACEನಲ್ಲಿ ಎಲ್ಲಾ ಸೇರಿಹೋಗಿದೆ. ಇದು ಅಖಂಡತೆಯ ತತ್ವ ಪುರಾಣದ ನೀತಿಯ ಒಂದೇ ಒಂದು ಉದಾಹರಣೆ ಸಾಕು. ಅದು ಸಾಂಕೇತಿಕವಾಗಿ ಹೇಳುವ ಅರ್ಧನಾರೀಶ್ವರ ತತ್ವ ಅರ್ಧಭಾಗ ನಾರಿಯನ್ನು ಹೊಂದಿರುವ ಪುರುಷನನ್ನು ಶಿವ–ಈಶ್ವರ ಎಂದು ನಮಸ್ಕರಿಸುವ ವ್ಯಕ್ತಿ ಸಿದ್ಧಾಂತದ ತತ್ವ ಈ ಸಮಾನತೆಯ ತತ್ವದಲ್ಲಿ ಹೆಣ್ಣು ಆದಿಶಕ್ತಿ ಗಂಡು ಅವಳ ಚೈತನ್ಯ. ಇಬ್ಬರೂ ಪರಸ್ಪರ ಎಂದಿಗೂ ಪೂರಕ. ಬೀಜ–ಭೂಮಿ ಇವೆರಡರಲ್ಲಿ ಯಾವುದರಿಂದ ಯಾವುದನ್ನು ಬೇರ್ಪಡಿಸುವುದು.?

ಪರಿಸರವನ್ನು ಪ್ರೀತಿಸುವ ಒಂದು ಸರಳ ಪ್ರಾಥಮಿಕ ಅರಿವು ನಮ್ಮೊಳಗೆ ಮೂಡಿದ್ದೇ ಆದರೆ ನಾವು ಗಂಡು–ಹೆಣ್ಣು ಎಂದು ವ್ಯಕ್ತಿತ್ವದ ವಿಷಯದಲ್ಲಿ ಕನಸಿನಲ್ಲಿ ಕೂಡ ಭೇದ ಮಾಡಲು ಸಾಧ್ಯವೇ ಇಲ್ಲ. ಈ ಸರಳ ನೈಸರ್ಗಿಕ ನೆಲೆಯನ್ನೇ ನಮ್ಮ ವರಕವಿ ಬೇಂದ್ರೆ 'ಸ್ತ್ರೀಯಾತ್ಮಕ ನೆಲೆಗಟ್ಟು' ಎಂದು ಚೆಂದದಲ್ಲಿ ಹೆಸರಿಸುತ್ತಾರೆ. ಅಂದರೆ ಇಡೀ ಜಗತ್ತೇ ನಿಸರ್ಗವಾಗಿ 'ಸ್ತ್ರೀ' ರೂಪದಲ್ಲಿದೆ. ಹಸಿರು ಧರಿಸುವ ಶಕ್ತಿ, ತಾಳ್ಮೆ, ಸಹನೆ, ಮಮತೆ, ಪ್ರೀತಿ ಯೆಲ್ಲಾ ಸ್ತ್ರೀ ಗುಣಗಳ ಮೊತ್ತ ಈ ಸ್ತ್ರೀಯೊಳಗೇ ಪುರುಷನ ಗುಣವೂ ಶಕ್ತಿ ಸಂಚಯದ ರೂಪ. ಒಟ್ಟಿನಲ್ಲಿ ವ್ಯಕ್ತಿಯೋರ್ವನಲ್ಲಿ ಇರಬೇಕಾದ ಮನೋಧರ್ಮದ ಗುಣ, ಸ್ತ್ರೀಗುಣ ಅಂದರೆ ಮಾನವ ಹೃದಯದ ಗುಣ. ಮನುಷ್ಯರಾಗಿ ಹುಟ್ಟಿದ ಮೇಲೆ ಪ್ರತಿಯೊಬ್ಬರಲ್ಲೂ ಇರಲೇಬೇಕಾದ

ಗುಣ. ನೈಸರ್ಗಿಕವಾಗಿ ಅಂಗರ್ಚನೆ ಬೇರೆಯಾಗಿರುವ ಸಹಜ ಗುಣವನ್ನು ಒಪ್ಪಿಕೊಂಡು/ ಅದರಂತೆ ಇತಿ-ಮಿತಿಗಳನ್ನು ಅರಿಯುತ್ತ ನಡೆಯುತ್ತಲೇ: ಆ ನಂತರ ಮನುಷ್ಯತ್ವದ ಸಮಾನತೆಯ ಅರ್ಹತೆಯಲ್ಲಿ ಜೊತೆಯಾಗಿ ಬೆಳೆಯಬಹುದಾದ ಸಾಧ್ಯತೆಯತ್ತ ಮಾತ್ರ ನಾನು ಗಮನ ಸೆಳೆಯ ಬಯಸುತ್ತೇನೆ. ಯಾಕೆ ಸಾಧ್ಯವಿಲ್ಲ?

ಯಾಕೆಂದರೆ ಮಾತೃಗುಣ ಪ್ರಾಧಾನ್ಯತೆ ಮರೆತು ಹೋಗಿ ಕೇವಲ ಪೌರುಷದ ಪ್ರದರ್ಶನದ 'ಪುರುಷ ಪ್ರಧಾನ ಕುಟುಂಬ' ರಾರಾಜಿಸುವುದರಿಂದ ಮಾನವೀಯತೆಯಲ್ಲಿ ಅಂಗವೈಕಲ್ಯತೆ ಸಂಭವಿಸುತ್ತಿದೆ. ಈ ಅಂಗ ವೈಕಲ್ಯತೆಯಿರುವ ಮನುಷ್ಯರನ್ನು 'ಪುರುಷ' ಎಂದು ಗೌರವಿಸುವುದಾದರೆ ಅಲ್ಲಿ ಸ್ತ್ರೀಗೆ ಅವಮಾನ ಕಟ್ಟಿಟ್ಟ ಬುತ್ತಿ. ಇಂಥ ದೃಷ್ಟಿಕೋನದಲ್ಲಿ ಮಾತ್ರ ಸ್ತ್ರೀ ಎನ್ನುವವಳು ಅಡಿಗೆ ಮನೆಗೆ ಸೀಮಿತವಾಗಿ ಹೆರುವ ಯಂತ್ರವಾಗಿ, ಗಂಡ ಹಾಕಿದ ಗೆರೆ ದಾಟದೆ: ಅಂದರೆ ಅವನು ಹೊಡೆದರೆ ಹೊಡಿಸಿಕೊಂಡು ಬೈದರೆ ಬೈಸಿಕೊಂಡು, ಅವನ ಕೆಟ್ಟ ಗುಣಗಳನ್ನೆಲ್ಲಾ ಸಹಿಸಿಕೊಂಡು ತಾನು ಹೆಣ್ಣಾಗಿ ಹುಟ್ಟಿದ್ದೇ ತಪ್ಪೆಂದು ತನ್ನನ್ನು ತಾನೇ ಹೆಣ್ಣಾಗಿ ಹುಟ್ಟಿದ ನೈಸರ್ಗಿಕ ಕಾರಣಕ್ಕಾಗಿ ಹಳಿದುಕೊಂಡು ಹೀಗೆ ನೋವಿನಲ್ಲಿ ಹುಟ್ಟಿದ ಜಾನಪದ ಸಾಲುಗಳಿವು:-

ಹೆಣ್ಣಾಗಿ ಹುಟ್ಟೋಕ್ಕಿಂತ
ಮಣ್ಣಾಗಿ ಹುಟ್ಟಿ
ಮಣ್ಣಿನ ಮೇಲೆ ಮರವಾಗಿ ಹುಟ್ಟುವುದು ಲೇಸು....

ಅಕ್ಷರ ಬರೆಯಲು ಬರದ ಹೆಣ್ಣು ಮಗಳು ಸಹ ತನ್ನ ಹೆಣಭಾರದ 'ದುಸ್ಥಿತಿ'ಗೆ ಅತ್ತು ಅತ್ತು ನೋವಿನಲ್ಲಿ ಕರಗುವಾಗ ಅವಳ ಹೃದಯದಾಳದಿಂದ ತಂತಾನೇ ಹುಟ್ಟಿಕೊಂಡ ಸಾಲುಗಳು ಇವು ಅನ್ನಿಸುವುದಿಲ್ಲವೇ? ಹೀಗೆ ನೋವಿನಲ್ಲಿ ತನ್ನ ದನಿಯನ್ನು ಹೊಮ್ಮಿಸಿರುವ ಹೆಣ್ಣಿಗೆ ಇದನ್ನು ಎಲ್ಲಿಯೂ 'ಅಕ್ಷರ'ವಾಗಿ ದಾಖಲಿಸಬೇಕೆಂಬ ಹಂಬಲವಿಲ್ಲ. ಆದರೆ ಅವಳು ನೊಂದ ಆ ಶೋಷಣೆಯ ನೋವು-ಸತ್ಯ ಇನ್ನು ಬಚ್ಚಿಡಲಾಗದಂತೆ ಹೊಸಲಾಗಿ ಹಬ್ಬಿ ಗಾಳಿಯಲ್ಲಿ ಹರಡಿದ ಅವಳ ದನಿಯಾಗಿ ಜಾನಪದ ಸಾಹಿತ್ಯವಾಗಿ ಹೋಯಿತು. ಇಲ್ಲಿಂದಲೇ ಶೋಷಣೆಯ ಅಂಶ ಆರಂಭವಾದಂತೆನ್ನಿಸುತ್ತದೆ.

ಅಂದರೆ ಹೆಣ್ಣಾಗಿ ಹುಟ್ಟಿದ್ದಕ್ಕೆ. 'ಲೈಂಗಿಕ ಕಾರಣ' ಅವಳಿಗೆ ವರವಾಗದೆ ಶಾಪವಾಯಿತು. ಆದರೆ ಗಂಡಿಗೆ ಮಾತ್ರ ವರವಾಯಿತು. ಯಾಕೆ ಹೀಗಾಯಿತು? ಮುಖ್ಯವಾಗಿ ಗಂಡು-ಹೆಣ್ಣನ್ನು ಬೆಳೆಸುವ ಮಾನಸಿಕ ಸಿದ್ಧತೆಯಿಲ್ಲದ ತಾರತಮ್ಯ ನೀತಿಯೇ ಇದಕ್ಕೆ ಕಾರಣ. ಗಂಡು ವಂಶೋದ್ಧಾರಕ ಎಂಬ ಒಂದು ವಂಶ ಮೋಹದ ಮೌಢ್ಯ. ಗಂಡಿನ ವೀರ್ಯಾಣು ಹೆಣ್ಣಿನ ಅಂಡಾಣು ಎರಡೂ ಮಿಲನವಾಗಿ XX-XY ಅಥವಾ XX-XX ಇಂದ ಹುಟ್ಟುವ ಮಗು ಗಂಡಾಗಿಯೋ ಅಥವಾ ಹೆಣ್ಣಾಗಿಯೋ ಜನಿಸುತ್ತದೆ ಎಂಬ ಸಾರ್ವಕಾಲಿಕ ವೈಜ್ಞಾನಿಕ ಸತ್ಯವನ್ನು ಮರೆಯುವುದು, ಅಥವಾ ಆ ತಿಳಿವಳಿಕೆಯೇ ಇಲ್ಲದೆ ಅಜ್ಞಾನದಿಂದ ಗಂಡಿನಿಂದಲೇ ಅಲ್ಲವೇ ಹೆಣ್ಣು ಗರ್ಭಿಣಿಯಾಗುವುದು ಆದ್ದರಿಂದ ಗಂಡೇ ಹೆಚ್ಚು, ಅವನ ವಂಶದ ಕುಡಿಯೇ ಅಲ್ಲವೇ ಅವಳ ಗರ್ಭದಲ್ಲಿ ಬೆಳೆಯುವುದು ಎಂಬಂಥ 'ಪೌರುಷ ಪ್ರಧಾನ' ಅಥವಾ ದುರಹಂಕಾರ ಪ್ರಧಾನವಾದ ಕ್ರೌರ್ಯದ ಆಕ್ರಮಣಕಾರಿ ನಡವಳಿಕೆ ಯಿಂದಲೇ ಈ ರೀತಿಯ ದಮನಕಾರಿ ಸಮಾಜದ ಬೀಜ ಹುಟ್ಟುವುದೆಂಬುದು ಅಕ್ಷರಶಃ ಸತ್ಯ. ಹೆರಲು ಮಾತ್ರ ಹೆಣ್ಣು ಬೇಕು. ಹೆತ್ತಾದ ನಂತರ ಗಂಡು ಹೆರದೆ ಹೆಣ್ಣು ಹೆತ್ತರೆ ಮಾತ್ರ ಅದನ್ನು ಶುಭ ಶಕುನವೆಂದು ಬಗೆಯದೆ ಅದಕ್ಕೆ ಅವಳೇ ಸಂಪೂರ್ಣ ಕಾರಣವೆಂದು ಅವಳನ್ನು ಕಡೆಗಣಿಸುವ ಹಿಂಸಿಸುವ ಕ್ರೌರ್ಯ.

ಹೆಣ್ಣನ್ನು ಕೇವಲ 'ಲೈಂಗಿಕ ವಸ್ತು'ವನ್ನಾಗಿ ನೋಡುವಂಥ ಅನಾಥ ಪ್ರಜ್ಞೆಯಲ್ಲಿ ಒಂದು ಗಂಡು ಮಗುವನ್ನು ಬೆಳೆಯಲು ಬಿಡದಂತೆ ಪ್ರೀತಿಯಿಂದ ಸರಿಯಾಗಿ ಬೆಳೆಸುವ-ಅವನನೊಳಗೊಂದು ಮಾನವೀಯ ಹೃದಯ ಬೆಳೆಸುವ ತಂದೆ-ತಾಯಿಗಳು, ಅಕ್ಕ ತಂಗಿಯರು, ಅಣ್ಣ ತಮ್ಮಂದಿರು, ಗುರುಗಳು ಇಂದು ಬೇಕಾಗಿದ್ದಾರೆ. ತಾಯಿ, ತಂಗಿ, ಗೆಳತಿ, ಮನದನ್ನೆ ಎಲ್ಲಾ ಆಗಬಲ್ಲ ಹೆಣ್ಣಿನ ಅಗಾಧ ಶಕ್ತಿಯ ಅರಿವು ಗಂಡು ಮಗುವೊಂದು ಬೆಳೆಯುತ್ತ ಬೆಳೆಯುತ್ತ ಅರಿತುಕೊಳ್ಳುವಂತೆ ಆ 'ಮಗು'ವನ್ನು ಮಗುವಾಗಿ ಸಹಜ ಸ್ಪರ್ಶದಲ್ಲಿ ಬೆಳೆಸುವ ತುರ್ತು ಇಂದಿನ ಸಮಾಜಕ್ಕಿದೆ. ಹೆಣ್ಣು ಮಕ್ಕಳಿಂದ ಸಂಪೂರ್ಣ ಬೇರೆಮಾಡಿ ನೀತಿ-ಅನೀತಿಯ ಲೈಂಗಿಕತೆಯ ಬೋಧೆ ಮಾಡುತ್ತ ಹದಿ ಹರೆಯದ ಗಂಡು ಮಕ್ಕಳನ್ನು ಅಸಹಜವಾಗಿ ಬೆಳೆಸುವುದರಿಂದ ಮಾತ್ರ ಲೈಂಗಿಕ ಅಪರಾಧದ ಕ್ರೌರ್ಯಗಳು ಸಂಭವಿಸುವ ತಲ್ಲಣಗಳು ಹುಟ್ಟಿಕೊಳ್ಳುತ್ತಿವೆ ಎಂದೆನಿಸುತ್ತದೆ. ಮುಖ್ಯವಾಗಿ ವಾತ್ಸಲ್ಯದ ಸಮಾನ ಸ್ಪರ್ಶ ಮಕ್ಕಳಿಗೆ ಇಂದು ದೊರಕಬೇಕಿದೆ.

ಈ ಕ್ರೌರ್ಯದ-ಪೊಗರಿನ ಹಿಂದೆಯೇ 'ವರದಕ್ಷಿಣೆ' ಎಂಬ ಅಸಹ್ಯಕರ ಪಿಡುಗು ಹುಟ್ಟಿಕೊಂಡಿರುವುದು. ಇದರಿಂದ ಇನ್ನೂ ಹೆಣ್ಣುಮಕ್ಕಳ ಹತ್ಯೆಯಾಗುತ್ತಿರುವುದು. ಮುಖ್ಯವಾಗಿ 'ಶಿಕ್ಷಣದ ಕೊರತೆ' ಇನ್ನು ಹೆಚ್ಚಿನ, ಮೌಢ್ಯ ದೌರ್ಜನ್ಯಕ್ಕೆ ಈಡಾಗುವಂತಾಗಿದೆ. ಹುಟ್ಟಿದಾಗಲಿಂದ ಹೆಣ್ಣಿಗೆ ಇನ್ನೊಬ್ಬರ ಮನೆಗೆ ಸೇರಿ ತಗ್ಗಿ ಬಗ್ಗಿ ನಡೆಯಬೇಕಾದ ಅನಿವಾರ್ಯತೆಯನ್ನು ತಲೆಯಲ್ಲಿ ತುಂಬಿ ಗಂಡಿಗೆ ಹೊರಗೆ ದುಡಿಯಬಲ್ಲ ವಂಶೋದ್ಧಾರಕ ಪಟ್ಟ ಕೊಡುವ ಕುಟುಂಬಗಳ ಸಂಖ್ಯೆ ಹೆಚ್ಚಿರುವುದರಿಂದ ಮಾತ್ರ ಇಂದು ಮಹಿಳೆಯ ಶೋಷಣೆ ಸಂಭವಿಸುತ್ತಿದ್ದೆಯೇ ವಿನಃ ನಿಜವಾಗಿ ಶಿಕ್ಷಿತರಾಗಿರುವ ಚಿಂತನಶೀಲ ಮಹಿಳೆಯರು ಧೈರ್ಯವಾಗಿಯೇ ಹೋರಾಡುತ್ತ ತಮ್ಮ ಮನೋಬಲದ ಆಧಾರದಲ್ಲಿ ಸ್ವತಂತ್ರವಾಗಿ ಬದುಕುತ್ತಿದ್ದಾರೆ. ಇದನ್ನೇ ಪುರಾಣದಲ್ಲಿ ವೇದ ಕಾಲದಲ್ಲಿ ಗಾರ್ಗಿಯೂ ಪ್ರಶ್ನಿಸಿದ್ದಳು. ಹನ್ನೆರಡನೇ ಶತಮಾನದಲ್ಲೇ ನಮ್ಮ ಅಕ್ಕಮಹಾದೇವಿಯ ಸಮೇತ ಎಲ್ಲ ಶರಣರೂ ಪ್ರಶ್ನಿಸಿದ್ದರು.

ಚಿಂತನೆಯನ್ನು ಸಾಧ್ಯವಾಗಿಸಿಕೊಂಡ ಜೀವಗಳಿಗೆ ಮಾತ್ರ ಮನುಷ್ಯರಾಗಿ 'ವ್ಯಕ್ತಿ ಸಿದ್ಧಾಂತ'ವನ್ನು ಬದುಕಲು ಸಾಧ್ಯ ಎಂದು ನಾನು ಹೇಳಲು ಹೊರಟಿದ್ದು. ಅಂದರೆ ಹೆಣ್ಣನ್ನು ಕೇವಲ 'ಲೈಂಗಿಕ ವಸ್ತು'ವನ್ನಾಗಿ ನೋಡುವಂಥ ಅನಾಥ ಪ್ರಜ್ಞೆಯಲ್ಲಿ ಒಂದು ಗಂಡು ಮಗುವನ್ನು ಬೆಳೆಯಲು ಬಿಡದಂತೆ ಪ್ರೀತಿಯಿಂದ ಸರಿಯಾಗಿ ಬೆಳೆಸುವ-ಅವನನೊಳಗೊಂದು ಮಾನವೀಯ ಹೃದಯ ಬೆಳೆಸುವ ತಂದೆ-ತಾಯಿಗಳು, ಅಕ್ಕತಂಗಿಯರು, ಅಣ್ಣ ತಮ್ಮಂದಿರು, ಗುರುಗಳು ಇಂದು ಬೇಕಾಗಿದ್ದಾರೆ. ತಾಯಿ, ತಂಗಿ, ಗೆಳತಿ, ಮನದನ್ನೆ ಎಲ್ಲಾ ಆಗಬಲ್ಲ ಹೆಣ್ಣಿನ ಅಗಾಧ ಶಕ್ತಿಯ ಅರಿವು ಗಂಡು ಮಗುವೊಂದು ಬೆಳೆಯುತ್ತ ಬೆಳೆಯುತ್ತ ಅರಿತುಕೊಳ್ಳುವಂತೆ ಆ 'ಮಗು'ವನ್ನು ಮಗುವಾಗಿ ಸಹಜ ಸ್ಪರ್ಶದಲ್ಲಿ ಬೆಳೆಸುವ ತುರ್ತು ಇಂದಿನ ಸಮಾಜಕ್ಕಿದೆ. ಹೆಣ್ಣು ಮಕ್ಕಳಿಂದ ಸಂಪೂರ್ಣ ಬೇರೆ ಮಾಡಿ ನೀತಿ-ಅನೀತಿಯ ಲೈಂಗಿಕ ತೆಯ ಬೋಧೆ ಮಾಡುತ್ತ ಹದಿ ಹರೆಯದ ಗಂಡು ಮಕ್ಕ ಳನ್ನು ಅಸಹಜವಾಗಿ ಬೆಳೆಸುವುದರಿಂದ ಮಾತ್ರ ಲೈಂಗಿಕ ಅಪರಾಧದ ಕ್ರೌರ್ಯಗಳು ಸಂಭವಿಸುವ ತಲ್ಲಣಗಳು ಹುಟ್ಟಿಕೊಳ್ಳುತ್ತಿವೆ ಎಂದೆನಿಸುತ್ತದೆ. ಮುಖ್ಯವಾಗಿ ವಾತ್ಸಲ್ಯದ ಸಮಾನ ಸ್ಪರ್ಶ ಮಕ್ಕಳಿಗೆ ಇಂದು ದೊರಕಬೇಕಿದೆ ಎಂಬುದೇ. ನನ್ನ ಇಂದಿನ ಈ ದೃಷ್ಟಿ. ಇದನ್ನು ಬಿಂಬಿಸುವ ನನ್ನ ಇತ್ತೀಚಿನ ಕವಿತೆಯೊಂದು ಹೀಗಿದೆ:-

ಅವಳು – ಅವನು

ಇದು 'ಅವನು ಬಸವ – ಅವಳು ಕಮಲ'
ಎಂದು ಅಚ್ಚಾದ ಪ್ರೈಮರಿ ಶಾಲೆಯ ಕನ್ನಡ ಭಾಷೆಯ
ಪಠ್ಯ ಪುಸ್ತಕದ ಆ ಸಾಲುಗಳಲ್ಲಿ ಬಂದ 'ಅವನು' ಅಲ್ಲ.
ಆ ಸಾಲುಗಳಲ್ಲಿ ಬಂದ ಆ ಹುಡುಗ
ಕೈ ತೋಟದ ಕೆಲಸ ಮಾಡುವ ಆ ಚಿತ್ರವಿದ್ದರೆ
ಅದೇ ಆ ಹುಡುಗಿ ಕಮಲ ಅಮ್ಮನಿಗೆ ನೆರವಾಗುವ
ಅಡಿಗೆ ಮನೆಯ ಚಿತ್ರ
ಅವನಿಗೆ ತೋಟ-ಅವಳಿಗೆ ಅಡಿಗೆ ಮನೆ
ಇದಲ್ಲ ನಾನು ಹೇಳುವ 'ಅವನು' ಎಂಬ ನುಡಿಗಟ್ಟು,
"ಅವನು' ಎನಲ್ಲಿ ಕೊನೆಯ ಅಕ್ಷರ
'ನು' ತೆಗೆದು 'ಳು' ಸೇರಿಸಿದರೆ
ಅವನು ಅವಳಾಗುತ್ತದಲ್ಲವೇ?
ಹಾಗೆಯೇ ಅವನು ಅವಳಿಗೆ
ಜೀವ ಪ್ರೀತಿಯ ಸತ್ಯ

ಅವನಿಂದ ಅವಳೊಳಗೆ
ಒಂದು ಮಗು!
ಅದೇ ಕ್ಷಣ ಅವನೊಳಗೂ.
ಅವನು ಅವಳ ಇಡೀ ಅಸ್ತಿತ್ವ;
ಅವಳು ಅವನ ಪ್ರಾಣ ತತ್ವ
ಅವನಿಲ್ಲದೆ ಅವಳಿಲ್ಲ; ಅವಳಿಲ್ಲದೆ ಅವನಿಲ್ಲ
ಅವಳೇ ಅವನು; ಅವನೇ ಅವಳು
ಇದೇ ಮಗು ಕಲಿಯಬೇಕಾಗಿರುವ
ಈಗಿನ ಪಾಠ; ಹೊಸ ಪಠ. □

ದಲಿತ ಬಂಡವಾಳಶಾಹಿಗಳ ಹೊಸ ಶಕೆ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಸತ್ಯಪ್ರಕಾಶ್ ಎಂ ಆರ್

ಜಾತಿ ಎಂಬುದು ಪಾರಂಪರಿಕವಾಗಿ ಮತ್ತು ಸೈದ್ಧಾಂತಿಕವಾಗಿ ಉದ್ಯೋಗ ಕೇಂದ್ರಿತವಾದುದು. ಸಾಂಪ್ರದಾಯಿಕವಾಗಿ ಜಾತಿ ವ್ಯವಸ್ಥೆಯಲ್ಲಿ ವ್ಯಾಪಾರ ಮತ್ತು ವಾಣಿಜ್ಯ ವಹಿವಾಟು ವೈಶ್ಯ (ಬನಿಯಾ) ವರ್ಣಕ್ಕೆ ಮೀಸಲು. ಜಾತಿ ಶ್ರೇಣೀಕರಣ ವ್ಯವಸ್ಥೆಯಲ್ಲಿ ಮೇಲ್ಮಟ್ಟದಲ್ಲಿದ್ದರೂ ಬ್ರಾಹ್ಮಣರು ಎಂದೂ ಬಂಡವಾಳಶಾಹಿಗಳಾಗಿರಲಿಲ್ಲ.

ಅದೃಷ್ಟವಶಾತ್ ಭಾರತದಲ್ಲಿ ಆರ್ಥಿಕ ಸುಧಾರಣಾ ನೀತಿಯ ಅನುಷ್ಠಾನ ಮತ್ತು ಕೈಗಾರಿಕೀರಣದ ಫಲವಾಗಿ ಉದ್ಯಮ, ವಾಣಿಜ್ಯ ಮತ್ತು ಉತ್ಪಾದನಾ ಸಂಸ್ಥೆಗಳ ಅವಶ್ಯಕತೆ ಹೆಚ್ಚಾಗಿದೆ. ಹೀಗಾಗಿ ಈ ಹೊಸ ವಾತಾವರಣದಲ್ಲಿ ವೈಶ್ಯರಷ್ಟೇ ಅಲ್ಲದೆ ಇತರ ಜಾತಿಗಳೂ ಕೂಡ ಉದ್ಯಮ ವ್ಯವಹಾರಕ್ಕಿಳಿಯಲು ವಿಪುಲ ಅವಕಾಶಗಳು ಸೃಷ್ಟಿಯಾಗಿವೆ. ಹೀಗಾಗಿ ಬ್ರಾಹ್ಮಣರೂ ಈಗ ಗಣನೀಯ ಪ್ರಮಾಣದಲ್ಲಿ ಬಂಡವಾಳಶಾಹಿಗಳಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ದಲಿತರೂ ಕೂಡ ಬಂಡವಾಳಶಾಹಿಗಳ ಗುಂಪಿಗೆ ಸೇರ್ಪಡೆಯಾಗುತ್ತಿರುವುದು ವಿಶೇಷ.

ನಾಗರೀಕತೆಗಳ ಅಧ್ಯಯನದಿಂದ ತಿಳಿದುಬರುವ ಪ್ರಮುಖ ಅಂಶವೇನೆಂದರೆ, ಮನುಷ್ಯ ಕೃಷಿಯಾಧಾರಿತ ನಾಗರೀಕತೆಯನ್ನು ಕಂಡುಕೊಳ್ಳುವ ಮುಂಚೆ ಮೂಲತಃ ಮಾಂಸಾಹಾರಿಯಾಗಿದ್ದ. ಹಾಗೆಯೇ ಹತ್ತಿಯ ಬಟ್ಟೆಯನ್ನು ತೊಡುವುದಕ್ಕೆ ಮುಂಚೆ, ಚರ್ಮದ ವಸ್ತ್ರಗಳನ್ನು ಬಳಸುತ್ತಿದ್ದ.

ಈ ತರ್ಕವನ್ನು ಸ್ವಲ್ಪ ವಿಸ್ತರಿಸಿ ಮಾತನಾಡುವುದಾದರೆ, ಚರ್ಮದ ಕೆಲಸ ಮಾಡುವ ದಲಿತರದೇ ನಿಜವಾಗಿಯೂ ಮೊಟ್ಟ ಮೊದಲ ಉತ್ಪಾದನಾ ವರ್ಗವಾಗಿತ್ತು ಎಂಬ ಅಂಶವನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಇದರರ್ಥ, ದಲಿತರೆಲ್ಲರೂ ಚರ್ಮದ ಕಸುಬಿನಲ್ಲಿ ತೊಡಗಿದ್ದರು ಎಂದೇನಲ್ಲ, ಆದರೆ ಚಮ್ಮಾರರಂತೂ ಖಂಡಿತ ಚರ್ಮದ ಕಸುಬನ್ನೇ ಅವಲಂಬಿಸಿದ್ದರು.

ನಂತರದ ವರ್ಷಗಳಲ್ಲಿ ಚರ್ಮದ ಕಸುಬು ಕೀಳೆಂದು ಪರಿಗಣಿಸಲ್ಪಟ್ಟಿತು. ಮತ್ತೆ ಚರ್ಮದ ಕಸುಬು ಔದ್ಯಮಿಕ ಸ್ವರೂಪ ಪಡೆದುಕೊಳ್ಳಲಾರಂಭಿಸಿದಾಗ, ದಲಿತೇತರರು ಚರ್ಮೋದ್ಯಮಕ್ಕೆ ಕಾಲಿಟ್ಟು ಪ್ರಾಬಲ್ಯ ಸಾಧಿಸಿದರು. ಈಗಲೂ ಕೂಡ ಚರ್ಮದ ಎಲ್ಲ ರೀತಿಯ ಕೆಲಸ ಮಾಡುವುದು ದಲಿತರೇ ಆಗಿದ್ದರೂ, ವ್ಯಾಪಾರ ವಹಿವಾಟು ನಡೆಸುವವರು ಬೇರೆ ಜಾತಿಯವರು.

ಆರ್ಥಿಕ ಸುಧಾರಣೆಯ ಅನುಷ್ಠಾನದ ನಂತರ, ಸರ್ಕಾರಿ ವಲಯದಲ್ಲಿ ಉದ್ಯೋಗಾವಕಾಶಗಳು ಕಡಿಮೆಯಾದವು. ಖಾಸಗಿ ಕ್ಷೇತ್ರ ಪ್ರಗತಿ ಸಾಧಿಸಿತು. ಖಾಸಗಿ ಕ್ಷೇತ್ರದಲ್ಲಿ ದಲಿತರು ಉದ್ಯೋಗ ಮಾಡಲು ಮತ್ತು ಸೃಷ್ಟಿಸಲೂ ಕೂಡ ಅವಕಾಶವಿದೆ. ಬಹಳಷ್ಟು ಮಂದಿ ದಲಿತರು ಎರಡೂ ಅವಕಾಶಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ಜಾಗತೀಕರಣದ ಪರಿಣಾಮ ಜಗತ್ತಿನಾದ್ಯಂತ ಉದ್ಯಮ ಸಂಸ್ಥೆಗಳು ಉತ್ಪನ್ನದ ಗುಣಮಟ್ಟದಲ್ಲಷ್ಟೇ ಅಲ್ಲದೆ, ಬೆಲೆ ನಿಗದಿಗೊಳಿಸುವಲ್ಲಿ ಕೂಡ ಸ್ಪರ್ಧೆ ಎದುರಿಸಬೇಕಾಗಿ ಬಂದಿದೆ. ಜಗತ್ತಿನಾದ್ಯಂತ ಜನ ಸ್ವದೇಶಿ ಎಂಬ ಪಾರಂಪರಿಕ ಪರಿಕಲ್ಪನೆಯನ್ನು ಮೀರಿ, ಉತ್ತಮ ಗುಣಮಟ್ಟದ ಹಾಗೂ ಕಡಿಮೆ ಬೆಲೆಯ ಉತ್ಪನ್ನಗಳನ್ನು ಖರೀದಿ ಮಾಡಲಾರಂಭಿಸಿದ್ದಾರೆ. ಉದಾಹರಣೆಗೆ, ಟೊಯೋಟಾ ಕಾರು ಕಡಿಮೆ ಬೆಲೆಯ ಉತ್ತಮ ಗುಣಮಟ್ಟದ ವಾಹನ ಎಂದು ಗೊತ್ತಾದರೆ, ಅಮೆರಿಕನ್ನರು ಟೊಯೋಟಾವನ್ನೇ ಕೊಳ್ಳುತ್ತಾರೆ. ಇದರಿಂದ ಅಮೆರಿಕಾ ಮೂಲದ ಫೋರ್ಡ್ ಮತ್ತು ಜನರಲ್ ಮೋಟರ್ಸ್‌ಗೆ ನಷ್ಟವಾಗುತ್ತದೆ ಎಂದು ಅವರು ಯೋಚಿಸುವುದಿಲ್ಲ.

ಭಾರತದಲ್ಲಿ ಕೂಡ ಈಗ 'ಭಾರತೀಯರಾಗಿ–ಭಾರತೀಯ ಉತ್ಪನ್ನಗಳನ್ನೇ ಖರೀದಿಸಿ' ಎಂಬ ಘೋಷವಾಕ್ಯಗಳು ಹಾಸ್ಯಾಸ್ಪದವಾಗಿ ಕಾಣುತ್ತವೆ. ಯಾಕೆಂದರೆ ಬಹಳಷ್ಟು ಮಂದಿ ಈಗ ಹಿಂದೂಸ್ಥಾನ್ ಮೋಟರ್ಸ್‌ನ ಅಂಬಾಸಡರ್ ಕಾರಿನ ಬದಲಿಗೆ ಹ್ಯೂಂಡಾಯ್, ಸ್ಯಾಂಟ್ರೋ ಕಾರುಗಳನ್ನು ಖರೀದಿಸುತ್ತಿದ್ದಾರೆ. ಜಾಗತೀಕರಣ ಸೃಷ್ಟಿಸಿರುವ ಸ್ಪರ್ಧಾತ್ಮಕ ವಾತಾವರಣದಲ್ಲಿ ಒಂದು ಉತ್ಪನ್ನ ಒಂದೇ ಸ್ಥಳದಲ್ಲಿ ನಿರ್ಮಾಣಗೊಳ್ಳುವ ಹಳೆಯ ಕ್ರಮ ಈಗ ಜಾರಿಯಲ್ಲಿಲ್ಲ. ಈಗ ಒಂದು ಉತ್ಪನ್ನದ ಬಿಡಿ ಭಾಗಗಳು ಬೇರೆ ಬೇರೆ ಪ್ರದೇಶಗಳಲ್ಲಿ ನಿರ್ಮಾಣಗೊಂಡು ಒಂದೆಡೆ ಜೋಡಣೆಗೊಳ್ಳುವುದು ಸಾಮಾನ್ಯ. ಟಾಟಾದ ಟ್ರಕ್‌ಗಳನ್ನು ದಲಿತರೂ ಸೇರಿದಂತೆ ಹಲವಾರು ಉತ್ಪಾದಕರು ಸೇರಿ ನಿರ್ಮಿಸುತ್ತಾರೆ ಎಂಬ ಅಂಶ ಇತ್ತೀಚೆಗೆ ನಾನು ಪುಣೆಯಲ್ಲಿರುವ ಟಾಟಾ ಮೋಟರ್ಸ್‌ಗೆ ಭೇಟಿ ನೀಡಿದಾಗ ಗೊತ್ತಾಯಿತು.

ಜಾಗತೀಕರಣ ಪೂರ್ವ ಆರ್ಥಿಕ ವ್ಯವಸ್ಥೆಯಲ್ಲಿ ದಲಿತರು ಟ್ರಕ್ ಅಥವಾ ಕಾರುಗಳ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದನ್ನು ಕಲ್ಪಿಸಿಕೊಳ್ಳುವುದಕ್ಕೂ ಸಾಧ್ಯವಿರಲಿಲ್ಲ. ಆದರೆ ಇಂದು, ಉತ್ತರ ಖಂಡದ ದಲಿತ ಉದ್ಯಮಿಯೊಬ್ಬರು ಟಾಟಾ ನ್ಯಾನೋ ಕಾರಿಗೆ ಸೈಲೆನ್ಸರ್‌ಗಳನ್ನು ಹಾಗೂ ಹೀರೋ ಹೋಂಡಾ ಬೈಕ್‌ನ ಕೆಲವು ಬಿಡಿಭಾಗಗಳನ್ನು ಉತ್ಪಾದಿಸುತ್ತಿದ್ದಾರೆ. ಪುಣೆ ಮೂಲದ ಮತ್ತೋರ್ವ ದಲಿತ ಉದ್ಯಮಿಯೊಬ್ಬರು ಟಾಟಾ ಇಂಡಿಗೋ ಕಾರ್ ಎಂಜಿನ್‌ನ ಕೆಲವು ಬಿಡಿಭಾಗಗಳನ್ನು ಉತ್ಪಾದಿಸುತ್ತಿದ್ದಾರೆ.

ಇದು ಹೊಸ ಪ್ರಜಾತಂತ್ರ ವ್ಯವಸ್ಥೆ– ಆರ್ಥಿಕ ಪ್ರಜಾತಂತ್ರ ವ್ಯವಸ್ಥೆ. ಈಗ ಯಾವುದೇ ಒಂದು ಸಂಸ್ಥೆ ಒಂದು ಉತ್ಪನ್ನವನ್ನು ಸಂಪೂರ್ಣವಾಗಿ ನಿರ್ಮಿಸುವುದಾಗಿ ಹೇಳಿಕೊಳ್ಳುವಂತಿಲ್ಲ. ಒಂದು ಉತ್ಪನ್ನಕ್ಕೆ ಬೇಕಾದ ಎಲ್ಲಾ ಬಿಡಿಭಾಗಗಳನ್ನು ಉತ್ಪಾದಿಸಲು ಹೆಚ್ಚಿನ ಕಾರ್ಮಿಕರ ಅವಶ್ಯಕತೆ ಇರುತ್ತದೆ. ಜೊತೆಗೆ, ಒಂದು ಸಂಸ್ಥೆ ಎಲ್ಲಾ ವಿಭಾಗಗಳಲ್ಲಿಯೂ ಪರಿಣತಿ ಹೊಂದಿದೆ ಎಂಬ ಪರಿಸ್ಥಿತಿ ಈಗಂತೂ ಇಲ್ಲ. ಉದಾಹರಣೆಗೆ ಒಂದು ಬೈಸಿಕಲ್‌ನಲ್ಲಿ ಸುಮಾರು 200 ಬಿಡಿಭಾಗಗಳಿರುತ್ತವೆ. ಬೈಸಿಕಲ್ ಉತ್ಪಾದಿಸುವವರು ಪ್ರಮುಖ ಭಾಗಗಳನ್ನು ಮಾತ್ರ ತಮ್ಮ ಕಾರ್ಖಾನೆಯಲ್ಲಿ ನಿರ್ಮಿಸಿ, ಉಳಿದ ಬಿಡಿಭಾಗಗಳನ್ನು ಹೊರಗಿನ ಸಣ್ಣ ಉತ್ಪಾದಕರಿಗೆ ಗುತ್ತಿಗೆ ನೀಡಿರುತ್ತಾರೆ. ಯಾವುದಾದರೂ ದೊಡ್ಡ ಉತ್ಪಾದನಾ ಸಂಸ್ಥೆಗೆ ಭೇಟಿ ನೀಡಿದರೆ, ಹಲವಾರು ಸಣ್ಣ ಉತ್ಪಾದನಾ ಕೇಂದ್ರಗಳು ಟ್ರಕ್, ಕಾರು ಮತ್ತು ಬೈಸಿಕಲ್‌ಗಳಿಗೆ ಬಿಡಿಭಾಗಗಳನ್ನು ನಿರ್ಮಿಸುತ್ತಿರುವುದನ್ನು ನೋಡಬಹುದು. ಇದು ನಿಜವಾದ ಅರ್ಥದಲ್ಲಿ ಆರ್ಥಿಕ ಪ್ರಜಾತಂತ್ರ ವ್ಯವಸ್ಥೆ.

ದಲಿತರು ಎಂದಾದರೂ ಒಂದು ದಿನ ಟ್ರಕ್ ಮತ್ತು ಕಾರುಗಳನ್ನು ಉತ್ಪಾದಿಸಬಹು

ಜಾಗತೀಕರಣ ಪೂರ್ವ ಆರ್ಥಿಕ ವ್ಯವಸ್ಥೆಯಲ್ಲಿ ದಲಿತರು ಟ್ರಕ್ ಅಥವಾ ಕಾರುಗಳ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದನ್ನು ಕಲ್ಪಿಸಿಕೊಳ್ಳುವುದಕ್ಕೂ ಸಾಧ್ಯವಿರಲಿಲ್ಲ. ಆದರೆ ಇಂದು, ಉತ್ತರ ಖಂಡದ ದಲಿತ ಉದ್ಯಮಿಯೊಬ್ಬರು ಟಾಟಾ ನ್ಯಾನೋ ಕಾರಿಗೆ ಸೈಲೆನ್ಸರ್‌ಗಳನ್ನು ಹಾಗೂ ಹೀರೋ ಹೋಂಡಾ ಬೈಕ್‌ನ ಕೆಲವು ಬಿಡಿಭಾಗಗಳನ್ನು ಉತ್ಪಾದಿಸುತ್ತಿದ್ದಾರೆ. ಪುಣೆ ಮೂಲದ ಮತ್ತೋರ್ವ ದಲಿತ ಉದ್ಯಮಿಯೊಬ್ಬರು ಟಾಟಾ ಇಂಡಿಗೋ ಕಾರ್ ಎಂಜಿನ್‌ನ ಕೆಲವು ಬಿಡಿಭಾಗಗಳನ್ನು ಉತ್ಪಾದಿಸುತ್ತಿದ್ದಾರೆ. ಇದು ಹೊಸ ಪ್ರಜಾತಂತ್ರ ವ್ಯವಸ್ಥೆ- ಆರ್ಥಿಕ ಪ್ರಜಾತಂತ್ರ ವ್ಯವಸ್ಥೆ. ಈಗ ಯಾವುದೇ ಒಂದು ಸಂಸ್ಥೆ ಒಂದು ಉತ್ಪನ್ನವನ್ನು ಸಂಪೂರ್ಣವಾಗಿ ನಿರ್ಮಿಸುವುದಾಗಿ ಹೇಳಿಕೊಳ್ಳುವಂತಿಲ್ಲ.

ಬದಲಾಗುತ್ತಿರುವ ಸಂಸ್ಕೃತಿ

ದೆಂದು ನಾನು ಕನಸಿನಲ್ಲಿಯೂ ಎಣಿಸಿರಲಿಲ್ಲ. ಆದರೆ ಈಗ ಕೆಲವು ದಲಿತರು ಟಾಟಾ ಇಂಡಿಗೋದಂತಹ ಕಾರು, ಹೀರೋಹೋಂಡಾ ದಂತಹ ಬೈಕ್‌ನ ಬಿಡಿಭಾಗ ವನ್ನು ನಿರ್ಮಿಸಿದ್ದೇವೆಂದು ಹೆಮ್ಮೆ ಪಡುವಂತಹ ಕಾಲ ಬಂದಿದೆ. ಬಹುಶಃ ಮುಂದಿನ ಪೀಳಿಗೆಯವರು, ದಲಿತರೇ ಸಂಪೂರ್ಣವಾಗಿ ಉತ್ಪಾದಿಸಿದ ಕಾರು ಅಥವಾ ಬೈಕ್‌ಗಳನ್ನು ನೋಡಬಹುದೇನೋ.

ಔರಂಗಾಬಾದ್‌ನಲ್ಲಿ ದಲಿತ ಉದ್ಯಮಿಯೊಬ್ಬರು ಸಂಪೂರ್ಣವಾಗಿ ತಮ್ಮ ಕಾರ್ಖಾನೆಯಲ್ಲಿಯೇ ಮಿನರಲ್ ವಾಟರ್ ಉತ್ಪಾದಿಸುವುದನ್ನು ನೋಡಿ ನಾನು ಈ ಭರವಸೆಯ ಮಾತುಗಳನ್ನಾಡುತ್ತಿದ್ದೇನೆ. ಲಕ್ನೌ ಮತ್ತು ನಾಗಪುರದಲ್ಲಿ ಕೂಡ ದಲಿತ ಉದ್ಯಮಿಗಳು ಮಿನರಲ್ ವಾಟರ್ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಜಗತ್ತಿನಲ್ಲಿ ಯಾವುದೇ ಒಂದು ಬೃಹತ್ ಸಂಸ್ಥೆಯ ಪ್ರಾಬಲ್ಯವನ್ನು ನಾಶಪಡಿಸುವ ಮೂಲಕ ಜಾಗತಿಕ ಮಟ್ಟದಲ್ಲಿ ಬಂಡವಾಳ ಸಮನಾಗಿ ಹಂಚಿಕೆಯಾಗುವಂತಹ ಮಹತ್ತರವಾದ ಕೊಡುಗೆಯನ್ನು ಜಾಗತೀಕರಣ ನೀಡಿದೆ. ಜಾಗತೀಕರಣ ಸೃಷ್ಟಿಸಿರುವ ಆರ್ಥಿಕ ಪ್ರಜಾತಂತ್ರ ವ್ಯವಸ್ಥೆಯಲ್ಲಿ ದಲಿತ ಬಂಡವಾಳಶಾಹಿಗಳ ಬೆಳವಣಿಗೆಯನ್ನು ಖಂಡಿತ ಯಾರಿಂದಲೂ ತಡೆಯಲು ಸಾಧ್ಯವಿಲ್ಲ.

* * * * * * *

ಇತ್ತೀಚೆಗೆ ಎರಡು ಪ್ರಮುಖ ಸುದ್ದಿ ನಮ್ಮ ಗಮನ ಸೆಳೆದವು. ಮ್ಯಾಗಜಿನ್ ಒಂದಕ್ಕೆ ಮಂದಿರಾ ಬೇಡಿ 'ಟಾಪ್‌ಲೆಸ್' ಆಗಿ ಛಾಯಾಚಿತ್ರ ತೆಗೆಸಿಕೊಂಡಿದ್ದು ಮೊದಲನೆಯ ಸುದ್ದಿ. ಇನ್ನೊಂದು ಸುದ್ದಿ, ಉತ್ತರ ಪ್ರದೇಶ ಮೂಲದ ಖಾಪ್ ಪಂಚಾಯಿತಿ (ಜಾತಿ ಪರಿಷತ್ತು) ಯೊಂದು ಹೆಣ್ಣುಮಕ್ಕಳು ಜೀನ್ಸ್ ತೊಡುವುದನ್ನು ನಿಷೇಧಿಸಿದ್ದು.

38 ವರ್ಷದ ನಟಿ-ಮಾಡೆಲ್-ಟಿವಿ ನಿರೂಪಕಿ ಮಂದಿರಾ ಬೇಡಿಗೆ ಮದುವೆಯಾಗಿ ಎರಡು ಮಕ್ಕಳಿವೆ. 1994ರಲ್ಲಿ 'ಶಾಂತಿ' ಧಾರಾವಾಹಿಯ ಮೂಲಕ ಕಿರುತೆರೆಯನ್ನು ಪ್ರವೇಶಿಸಿದ ಮಂದಿರಾ, ನಂತರ ಯಶಸ್ವಿ 'ದಿಲ್‌ವಾಲೆ ದುಲ್ಹನಿಯಾ ಲೇ ಜಾಯೇಂಗೆ' ಚಿತ್ರದಲ್ಲಿ ಪೋಷಕ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಅಲ್ಲಿಂದ ಮಂದಿರಾ ಹಿಂದುರಿಗಿ ನೋಡಿದ್ದೇ ಇಲ್ಲ.

2003ರ ಕ್ರಿಕೆಟ್ ವರ್ಲ್ಡ್‌ಕಪ್‌ನ ನಿರೂಪಕಿಯಾಗಿ ಬಂದ ಮಂದಿರಾ ತೊಡುತ್ತಿದ್ದ ವಿಶಿಷ್ಟವಾದ ಸೀರೆ ಮತ್ತು ಬ್ಲೌಸ್‌ಗಳ ಮೂಲಕ ದೇಹ ಸೌಂದರ್ಯ ಪ್ರದರ್ಶಿಸುತ್ತಿದ್ದುದು ವಿಶೇಷವಾಗಿ ನಗರಗಳಲ್ಲಿ ಮನೆಮಾತಾಗಿದ್ದುಸುಳ್ಳಲ್ಲ. ಎಂಟು ವರ್ಷದ ಹಿಂದೆ ಮೂವತ್ತರ ಆಸುಪಾಸಿನಲ್ಲಿದ್ದ ಮಂದಿರಾ ಆಗ ದೇಹ ಸೌಂದರ್ಯ ಪ್ರದರ್ಶಿಸಿದ್ದರು. ಆದರೆ ಈಗ ಬಹುತೇಕ ಒಂದು ದಶಕದ ನಂತರ ಮಂದಿರಾ 'ಟಾಪಲೆಸ್' ಆಗಿದ್ದಾರೆ.

1990ರಲ್ಲಿ ಜಾಗತೀಕರಣ ಭಾರತಕ್ಕೆ ಬಂದಾಗ ಅದರ ಸಾಂಸ್ಕೃತಿಕ ಪರಿಣಾಮ ಅಷ್ಟೇನೂ ಇರಲಿಲ್ಲ. ಆಗ

ಉತ್ತರ ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಜಾತಿಯ ಮೌಲ್ಯವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಗೌರವ ಹತ್ಯೆಗಳು ಬಳಕೆಯಾಗುತ್ತಿರುವುದು ನಿಜ. ಇದು ನಿಜಕ್ಕೂ ಆತಂಕಕಾರಿ ವಿಚಾರ. ಬಹುಶಃ ಪೋಷಕರು ಮತ್ತು ಮಕ್ಕಳ ನಡುವಿನ ಯುದ್ಧ ಆರಂಭವಾದಂತಿದೆ. ಈ ಯುದ್ಧ ಎರಡು ಪೀಳಿಗೆಗಳ ಯುದ್ಧವೂ ಹೌದು, ಸಾಂಪ್ರದಾಯಿಕತೆ ಮತ್ತು ಆಧುನಿಕತೆಗಳ ಯುದ್ಧವೂ ಹೌದು. ಹಾಗೆಯೇ ಇದು ಹಳೆಯ ಸಂಸ್ಕೃತಿ ಮತ್ತು ಹೊಸ ಸಂಸ್ಕೃತಿಗಳ ಯುದ್ಧ, ಜಾತಿ ಮೌಲ್ಯ ಮತ್ತು ಜಾತಿರಹಿತ ಸಾಮಾಜಿಕ ಮೌಲ್ಯಗಳ ಯುದ್ಧವೂ ಹೌದು.

ಭಾರತ ವ್ಯಾಲೆಂಟೈನ್ಸ್ ಡೇ ಎಂಬ ಸಾಂಸ್ಕೃತಿಕ ಕ್ಷಿಪಣಿಯನ್ನು ಎದುರಿಸುತ್ತಿದ್ದ ಕಾಲ. ಆದರೆ ಆರ್ಥಿಕ ಸುಧಾರಣೆ ಜಾರಿಗೆ ಬಂದ ಎರಡು ದಶಕಗಳ ಬಳಿಕ, ಜಾಗತೀಕರಣದ ಭಾರಕ್ಕೆ ಜಾತಿ ನಿಯಂತ್ರಿತ ಸಾಂಸ್ಕೃತಿಕ ಮೌಲ್ಯಗಳೆಲ್ಲವೂ ಸಪಾಟಾಗುತ್ತಿವೆ. ಮಿನೀಸ್ ಒಂದನ್ನು ಬಿಟ್ಟು ದೇಹದ ಮೇಲಿನ ಎಲ್ಲ ವಸ್ತ್ರಗಳನ್ನು ಕಳಚಿ ಕ್ಯಾಮೆರಾ ಮುಂದೆ ನಿಲ್ಲುವ ಛಾತಿ ಈಗ 38 ವರ್ಷದ ಮಂದಿರಾಗೆ ಇದೆ. ಈ ಛಾಯಾಚಿತ್ರ ಅಶ್ಲೀಲವಾಗಿ ಕಾಣಬಾರದೆಂಬ ದೃಷ್ಟಿಯಿಂದ ತಮ್ಮ ಎರಡು ಕೈಗಳಿಂದ ಎದೆಯನ್ನು ಮುಚ್ಚಿಕೊಂಡಿದ್ದಾರೆ ಮಂದಿರಾ.

ಸುಮಾರು ಎರಡು ದಶಕಗಳ ಹಿಂದೆ 'ಟಾಪ್‌ಲೆಸ್' ಪೋಸ್ ಕೊಡುವ ಧೈರ್ಯವಿದ್ದದ್ದು ಬಂಡವಾಳಶಾಹಿ ರಾಷ್ಟ್ರಗಳಲ್ಲಿನ ಜನರಿಗೆ ಮಾತ್ರ, ಆದರೆ ಈಗ ಡಿಶ್ ಆ್ಯಂಟೆನಾಗಳ ಮೂಲಕ, ಟಿವಿಗಳ ಮೂಲಕ ಹೊಸ ಸಂಸ್ಕೃತಿ ಭಾರತದ ಗ್ರಾಮೀಣ ಪ್ರದೇಶಗಳಿಗೂ ಕಾಲಿಡುತ್ತಿರುವುದರಿಂದ ಇದರ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಉತ್ತರ ಪ್ರದೇಶದ ಮುಜಾಫರ್‌ನಗರ ಮೂಲದ ಖಾಪ್ ಪಂಚಾಯತಿ ಹೆಣ್ಣುಮಕ್ಕಳು ಜೀನ್ಸ್ ತೊಡದಂತೆ ನಿಷೇಧ ಹೇರಿರುವುದು ಸಾಂಪ್ರದಾಯಿಕ ಗ್ರಾಮೀಣ ಸಂಸ್ಕೃತಿ ಒತ್ತಡದಲ್ಲಿರುವುದನ್ನು ಸೂಚಿಸುತ್ತದೆ.

ಸಣ್ಣಪುಟ್ಟ ಪಟ್ಟಣಗಳಲ್ಲಿ, ಹಳ್ಳಿಗಳಲ್ಲಿ ಯುವಕ ಯುವತಿಯರು ಹೊಸ ಜೀವನಶೈಲಿ ಮತ್ತು ಆಹಾರ ಪದ್ಧತಿಯನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಜೀನ್ಸ್ ನಿಷೇಧ ಹೇರಲು ಖಾಪ್ ಪಂಚಾಯಿತಿ ಎರಡು ಪ್ರಮುಖ ಕಾರಣಗಳನ್ನು ನೀಡಿದೆ: (1) ಜೀನ್ಸ್ ಪ್ರಚೋದನಾಕಾರಿ ಉಡುಗೆಯಾಗಿದ್ದು, ಇದರಿಂದಾಗಿ ಹೆಣ್ಣು ಮಕ್ಕಳನ್ನು ಚುಡಾಯಿಸಲಾಗುತ್ತದೆ. (2) ಯುವಕ ಯುವತಿಯರು ಸ್ವೇಚ್ಛಾಚಾರಿಗಳಾಗಿದ್ದಾರೆ.

ಉತ್ತರ ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಜಾತಿಯ ಮೌಲ್ಯವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಗೌರವ ಹತ್ಯೆಗಳು ಬಳಕೆಯಾಗುತ್ತಿರುವುದು ನಿಜ. ಇದು ನಿಜಕ್ಕೂ ಆತಂಕಕಾರಿ ವಿಚಾರ. ಬಹುಶಃ ಪೋಷಕರು ಮತ್ತು ಮಕ್ಕಳ ನಡುವಿನ ಯುದ್ಧ ಆರಂಭವಾದಂತಿದೆ. ಈ ಯುದ್ಧ ಎರಡು ಪೀಳಿಗೆಗಳ ಯುದ್ಧವೂ ಹೌದು, ಸಾಂಪ್ರದಾಯಿಕತೆ ಮತ್ತು ಆಧುನಿಕತೆಗಳ ಯುದ್ಧವೂ ಹೌದು. ಹಾಗೆಯೇ ಇದು ಹಳೆಯ ಸಂಸ್ಕೃತಿ ಮತ್ತು ಹೊಸ ಸಂಸ್ಕೃತಿಗಳ ಯುದ್ಧ, ಜಾತಿ ಮೌಲ್ಯ ಮತ್ತು ಜಾತಿರಹಿತ ಸಾಮಾಜಿಕ ಮೌಲ್ಯಗಳ ಯುದ್ಧವೂ ಹೌದು.

ಹೊಸ ಸಂಸ್ಕೃತಿಯ ಬಗ್ಗೆ ಅರ್ಥೈಸಿಕೊಳ್ಳಲು ಮಾರ್ಕ್ಸ್‌ವಾದದ ಪರಿಚಯ ಅಗತ್ಯ. ಮಾರ್ಕ್ಸ್ ಹೇಳುವಂತೆ ಆರ್ಥಿಕ ಬದಲಾವಣೆ ಸಾಂಸ್ಕೃತಿಕ ಬದಲಾವಣೆಯನ್ನು ಕೂಡ ಉಂಟುಮಾಡುತ್ತದೆ. 1990ರ ನಂತರ ಭಾರತದಲ್ಲಿ ಕೇವಲ ಆಂತರಿಕ ಸಮಗ್ರ ಉತ್ಪನ್ನ ಮಾತ್ರ ವೃದ್ಧಿಯಾಗುತ್ತಿಲ್ಲ, ಜೊತೆಗೆ ಇತರ ಹಲವಾರು ಬದಲಾವಣೆಗಳೂ ಘಟಿಸುತ್ತಿವೆ. ಉದಾಹರಣೆಗೆ ಜಾತಿರಹಿತ ಉದ್ಯೋಗಗಳ ಸೃಷ್ಟಿ. ಈ ಹೊಸ ಉದ್ಯೋಗಗಳಿಗೆ ಅದರದ್ದೇ ಆದ ಸಮವಸ್ತ್ರವಿದೆ. ಹಳ್ಳಿಗಳಲ್ಲಿ ಕಂಪ್ಯೂಟರ್ ಕಲಿಕೆಗೆ ಹೋಗಲು ಹೆಣ್ಣುಮಕ್ಕಳು ಸೈಕಲ್ ಚಲಾಯಿಸಿಕೊಂಡು ಹೋಗುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣುಮಕ್ಕಳು ಸೈಕಲ್ ತುಳಿಯುವುದೇ ಸಾಮಾಜಿಕ ಪ್ರತಿಭಟನೆಯ ಸಂಕೇತವಾಗುತ್ತದೆ. ಸೀರೆಯುಟ್ಟು ಬೈಸಿಕಲ್ ಮೇಲೆ ಹೋಗಲು ಸಾಧ್ಯವಿಲ್ಲ. ಆದರೆ ಜೀನ್ಸ್ ಧರಿಸಿ ಸೈಕಲ್ ತುಳಿಯಬಹುದು. ಒಮ್ಮೆ ಬೈಸಿಕಲ್ ತುಳಿಯಲು ಆರಂಭಿಸಿದರೆ, ಸ್ವಾಭಾವಿಕವಾಗಿ ಚಪ್ಪಲಿಗಳ ಬದಲಿಗೆ ಶೂಗಳು ಬರುತ್ತವೆ. ಜೀನ್ಸ್, ಬೈಸಿಕಲ್, ಮತ್ತು ಶೂ ಜೊತೆಗೆ ಒಂದು ಟೀ-ಷರ್ಟ್ ಯಾವಾಗಲೂ ಚೆಂದ. ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣುಮಕ್ಕಳು ಜೀನ್ಸ್, ಟೀ-ಷರ್ಟ್, ಶೂ ಧರಿಸಿ ಬೈಸಿಕಲ್ ಮೇಲೆ ಸವಾರಿ ಮಾಡುತ್ತಲೇ ಸಾಂಪ್ರದಾಯಿಕ ಜಾತಿಮೌಲ್ಯಗಳಿಗೆ ಕೊಡಲಿಪೆಟ್ಟು ಕೊಡುತ್ತಿರುತ್ತಾರೆ.

ಮಹಿಳೆಯರ ದೇಹದ ಕೆಲವು ಭಾಗಗಳನ್ನು ಅವರು ಸೀರೆಯುಟ್ಟರೆ ಮಾತ್ರ ನೋಡಲು ಸಾಧ್ಯ, ಜೀನ್ಸ್ ಧರಿಸಿದರೆ ಸಾಧ್ಯವಿಲ್ಲ ಎಂಬ ಅಂಶ ಬಹುಶಃ ಖಾಪ್ ಪಂಚಾಯಿತಿಗೆ ಚೆನ್ನಾಗಿಯೇ ಗೊತ್ತಿದೆ. ಸೈದ್ಧಾಂತಿಕವಾಗಿ ಜೀನ್ಸ್, ಜಾತಿಸಂಸ್ಕೃತಿಗೆ ಸವಾಲೆಸೆಯುತ್ತದೆ ಎಂಬ ವಿಚಾರ ಕೂಡ ಪಂಚಾಯಿತಿಗೆ ತಿಳಿದಿದೆ.

ಜೀನ್ಸ್ ಧರಿಸಿದ ಹೆಣ್ಣು ಮಕ್ಕಳು ತಮ್ಮ ಸ್ನೇಹಿತರನ್ನು, ಪರಿಚಯಸ್ಥರನ್ನು ಮಾತನಾಡಿಸುವಾಗ 'ನಮಸ್ತೆ' ಎನ್ನುವುದರ ಬದಲಿಗೆ 'ಹಲೋ,' 'ಹಾಯ್' ಬಳಸುವುದನ್ನು ಆರಂಭಿಸುತ್ತಾರೆ. ನಂತರ ಕೈ ಕುಲುಕುವ ಸಂಸ್ಕೃತಿ ಬರುತ್ತದೆ. ಪರಿಚಿತರನ್ನು ಬೆಚ್ಚಗೆ ಕೈ ಕುಲುಕುವ ಮೂಲಕ ಮಾತನಾಡಿಸುವುದರಿಂದ ಹೆಣ್ಣು-ಗಂಡಿನ ನಡುವೆ, ಮೇಲ್ಜಾತಿ-ಕೆಳಜಾತಿಯ ನಡುವೆ ಪ್ರೀತಿ, ಸಮಾನತೆ, ಸ್ವಾತಂತ್ರ್ಯದ ವಾತಾವರಣ ನಿರ್ಮಾಣವಾಗುತ್ತದೆ.

ದಲಿತರ 'ಇಮೇಜ್' ಸಮಸ್ಯೆ

ಪೋಷಕರ ಇಚ್ಛೆಯನ್ನು ಮೀರಿ ಸ್ವಜಾತಿ, ಸ್ವಗೋತ್ರ, ದಲಿತ-ದಲಿತೇತರ ಮದುವೆಗೆ ಸಾಮಾಜಿಕ ಸಮ್ಮತಿ ಅಪೇಕ್ಷಿಸುತ್ತಿರುವವರ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ. ಆದರೆ, ಇದು ದೊಡ್ಡ ಮಟ್ಟದಲ್ಲಿ ನಡೆಯುತ್ತಿಲ್ಲ ಎಂಬುದು ಕೂಡ ನಿಜ. ಇಲ್ಲಿ ಒಂದು ಮಾತನ್ನು ಸ್ಪಷ್ಟಪಡಿಸುತ್ತೇನೆ; ಹೆಂಗಸರು 'ಟಾಪ್‌ಲೆಸ್' ಆಗಲು ಅಥವಾ ಗಂಡಸರು ಸೂಟ್ ಧರಿಸಬೇಕೆಂದು ನಾನಿಲ್ಲಿ ವಾದಿಸುತ್ತಿಲ್ಲ. ಹೊಸ ಸಂಸ್ಕೃತಿಯು ಜಾತಿಯಾಧಾರಿತ ಮೌಲ್ಯಗಳಿಗೆ ಯಾವ ರೀತಿ ಸವಾಲೊಡ್ಡುತ್ತಿದೆ ಎಂಬುದರ ಬಗ್ಗೆ ಕೆಲವು ನಿದರ್ಶನ ನೀಡಿದ್ದೇನೆ ಅಷ್ಟೆ. ಕೆಲವೇ ಶತಮಾನಗಳ ಹಿಂದೆ ಭಾರತದ ಬಹುತೇಕ ಭಾಗಗಳಲ್ಲಿ ದಲಿತ ಹೆಂಗಸರು ತಮ್ಮ ದೇಹದ ಮೇಲ್ಭಾಗವನ್ನು ಮುಚ್ಚಿಕೊಳ್ಳಲು ವಸ್ತ್ರ ಧರಿಸುವಂತಿರಲಿಲ್ಲ. ಅಸ್ಪೃಶ್ಯ ಸಮಾಜ ಇಂತಹ ಹೀನ ಆಚರಣೆಯನ್ನು ಅನುಸರಿಸಬೇಕಿತ್ತು. ಇಂತಹ ವಸ್ತ್ರಪದ್ಧತಿಯನ್ನು ದಲಿತರ ಮೇಲೆ ಹೇರಲಾಗಿತ್ತು. ಆದರೆ ಇಂದಿನ ಮಂದಿರಾ ಬೇಡಿ ಅವರ 'ಟಾಪ್‌ಲೆಸ್' ಛಾಯಾಚಿತ್ರ, ಉತ್ತರ ಪ್ರದೇಶದ ಪಶ್ಚಿಮ ಭಾಗದ ಜೀನ್ಸ್ ತೊಟ್ಟ ಯುವತಿಯರು, ಹೊಸ ಸಂಸ್ಕೃತಿಯ ರೂಪಕಗಳು. ಜಾಗತೀಕರಣ ತಂದ ಹೊಸ ಸಂಸ್ಕೃತಿ ಜಾತಿ ಸಂಸ್ಕೃತಿಯನ್ನು ಮಂದಗತಿಯಲ್ಲಿ ನಾಶ ಮಾಡುತ್ತಿರುವುದಂತೂ ನಿಜ.

* * * * * * *

ದೆಹಲಿಯಂತಹ ಕಾಸ್ಮೋಪಾಲಿಟನ್ ನಗರಗಳಲ್ಲಿ ಕೂಡ ದಲಿತರು ಭಿನ್ನ ರೀತಿಯ ಸಮಸ್ಯೆಯನ್ನು ಎದುರಿಸುತ್ತಾರೆ. ನಾನಿಲ್ಲಿ ಸ್ಲಂಗಳಲ್ಲಿ ವಾಸಿಸುವ ಕೆಳವರ್ಗದ ದಲಿತರ ಬಗ್ಗೆ ಮಾತನಾಡುತ್ತಿಲ್ಲ; ಸಾಂಸ್ಕೃತಿಕವಾಗಿ ಪ್ರತ್ಯೇಕಗೊಳಿಸಲ್ಪಟ್ಟ ದಲಿತ ಮಧ್ಯಮ ವರ್ಗದ ಬಗ್ಗೆ ಮಾತನಾಡುತ್ತಿದ್ದೇನೆ. ಪ್ರತ್ಯೇಕತೆ ಬಹಳಷ್ಟು ಸಂದರ್ಭಗಳಲ್ಲಿ ಎಷ್ಟು ಸೂಕ್ಷ್ಮವಾಗಿರುವುದೆಂದರೆ ಪ್ರತ್ಯೇಕಗೊಳ್ಳಲ್ಪಟ್ಟವರಿಗೂ ಅದು ಅರಿವಿಗೆ ಬರುವುದಿಲ್ಲ.

ಓರ್ವ ದಲಿತ ಪ್ರೊಫೆಸರ್ ಮತ್ತೋರ್ವ ಮೇಲ್ಜಾತಿಯ ಪ್ರೊಫೆಸರ್‌ನ ಉದಾಹರಣೆ ನೋಡೋಣ. ಮೇಲ್ಜಾತಿಯ ಪ್ರೊಫೆಸರ್ ಪ್ರಗತಿಶೀಲ ಧೋರಣೆ ಹೊಂದಿದ್ದು, ಜಾತ್ಯತೀತರಾಗಿರಬಹುದು. ಆತ ದಲಿತ ಪ್ರೊಫೆಸರ್ ಜೊತೆಗೆ ಕ್ಯಾಂಟೀನ್‌ನಲ್ಲಿ ಕಾಫಿ ಕುಡಿಯಬಹುದು ಅಥವಾ ಊಟ ಮಾಡಲೂಬಹುದು. ದಲಿತ ಸಹುದ್ಯೋಗಿಯ ಜೊತೆಗೆ ಜಾತಿವಿರೋಧಿ ವಿಚಾರ ಸಂಕಿರಣಗಳಲ್ಲಿಯೂ ಭಾಗವಹಿಸಬಹುದು. ಇಬ್ಬರೂ ಜೊತೆಯಲಿ ಕುಡಿಯಬಹುದು. ಅಂತಹ ಸಂದರ್ಭಗಳಲ್ಲಿ ಮೇಲ್ಜಾತಿಯ ಪ್ರೊಫೆಸರ್ ಜಾತಿಯನ್ನು ತೀವ್ರವಾಗಿ ಖಂಡಿಸಬಹುದು. ಎಲ್ಲ ರೀತಿಯ ಔಪಚಾರಿಕ ಸಂದರ್ಭಗಳಲ್ಲಿ ದಲಿತೇತರ ಪ್ರೊಫೆಸರ್ ಜಾತಿಯ ವಿರುದ್ಧ ಮಾತನಾಡಬಹುದು, ದಲಿತರ ಪರವಾಗಿ ಪ್ರಶ್ನಾತೀತವಾಗಿ ನಿಲ್ಲಬಹುದು.

ಆದರೆ "ದಲಿತೇತರ ಪ್ರೊಫೆಸರ್‌ಗಳು ಅಥವಾ ಐಎಎಸ್ ಅಧಿಕಾರಿಗಳು ತಮ ಮನೆಗಳಲಿ ನಡೆಯುವ ಅನೌಪಚಾರಿಕ ಸಮಾರಂಭಗಳಿಗೆ ನಿಮ್ಮನ್ನು (ದಲಿತರನ್ನು) ಆಹ್ವಾನಿಸುತ್ತಾರೆಯೇ?" ಎಂದು ನನ್ನ ದಲಿತ ಸ್ನೇಹಿತರನ್ನು ಯಾವಾಗಲೂ ಕೇಳುತ್ತಿರುತ್ತೇನೆ. ನನ್ನ ಪ್ರಶ್ನೆಗೆ ಬಹುತೇಕ ಇಲ್ಲ ಎಂಬ ಉತ್ತರವೇ ಸಿಕ್ಕಿದೆ.

ಭಾರತದ ನಗರಗಳ ಎಲೈಟ್ ಅಥವಾ ಮಧ್ಯಮ ವರ್ಗಗಳಲ್ಲಿ ಕಂಡುಬರುವ ಜಾತಿಯ ಸಮಸ್ಯೆ ಮಾನಸಿಕವಾದುದು ಎಂಬುದು ನನ್ನ ಅಭಿಪ್ರಾಯ. ಗ್ರಾಮೀಣ ಪ್ರದೇಶಗಳು ಮತ್ತು ಸಣ್ಣ ಪಟ್ಟಣಗಳಲ್ಲಿ ಜಾತಿಯ ಸಮಸ್ಯೆ ಸಾಮಾಜಿಕ ಆಯಾಮವನ್ನು ಹೊಂದಿದೆ. ಅನೌಪಚಾರಿಕ ಸಂದರ್ಭಗಳಲ್ಲಿ ಸಾಮಾಜಿಕವಾಗಿ ಸಮಾನರಾಗಿರುವ ಮೇಲ್ಜಾತಿಯ ಇಬ್ಬರು ಪ್ರೊಫೆಸರ್‌ಗಳು, ಸೈದ್ಧಾಂತಿಕವಾಗಿ ಭಿನ್ನವಾಗಿದ್ದರೂ ಜೊತೆಯಲ್ಲಿ ಕೂತು ಊಟ ಮಾಡುವ ಸಾಧ್ಯತೆಯೇ ಹೆಚ್ಚು.

"ಪ್ರಗತಿಶೀಲ ದಲಿತೇತರ ಪ್ರೊಫೆಸರ್‌ಗಳು ಅಥವಾ ಐಎಎಸ್ ಅಧಿಕಾರಿಗಳು ತಮ್ಮ ಮನೆಗಳಲ್ಲಿ ನಡೆಯುವ ಸಮಾರಂಭಗಳಿಗೆ ದಲಿತ ಸಹುದ್ಯೋಗಿಗಳನ್ನು ಆಹ್ವಾನಿಸದಿರುವ ವಿದ್ಯಮಾನವನ್ನು ಹೇಗೆ ವಿವರಿಸುತ್ತೀರಿ?" ಎಂಬ ಪ್ರಶ್ನೆಯನ್ನು ನಾನು ದಲಿತೇತರ ಸ್ನೇಹಿತರೊಬ್ಬರಿಗೆ ಕೇಳಿದೆ. "ದಲಿತ ಅತಿಥಿಗಳು ಸಮಾರಂಭಗಳಿಗೆ ಬಂದರೆ ಜೋರಾಗಿ ನಗುತ್ತಾರೆ, ರಮ್ ಕೇಳುತ್ತಾರೆ, ವೈನ್ ಜೊತೆ ಸೋಡಾ ಬೆರೆಸಿ ಕುಡಿಯುತ್ತಾರೆ, ನಮ್ಮ ಹೆಣ್ಣುಮಕ್ಕಳ ವೇಷಭೂಷಣ ನೋಡಿ ತಪ್ಪು ತಿಳಿಯುತ್ತಾರೆ" ಎಂದು ಅವರು ನನ್ನ ಪ್ರಶ್ನೆಗೆ ತಮಾಷೆಯಾಗಿ ಉತ್ತರಿಸಿದರು.

ದಲಿತರಲ್ಲಿ ಎಲೈಟ್‌ಗಳು, ದಲಿತೇತರರಷ್ಟೆ ಮೇಲ್ಮಟ್ಟದ ನಡವಳಿಕೆಯನ್ನು, ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಸಾಧಿಸಿದ್ದಾರೆ. ಆದರೆ ಈಗಲೂ ಕೂಡ ದಲಿತೇತರ ವರ್ಗಗಳಲ್ಲಿರುವ 'ದಲಿತರನ್ನು ಕುರಿತ ಸಾಂಪ್ರದಾಯಿಕ ಇಮೇಜ್' ಹಾಗೆಯೇ ಉಳಿದಿದೆ. ದಲಿತರ ಬಗ್ಗೆ ಇರುವ ಈ ಇಮೇಜ್‌ನ ಹಿಂದೆ ಮೂರು ಕಾರಣಗಳಿವೆ: (1) ದಲಿತರಲ್ಲಿ ಬಹುಸಂಖ್ಯಾತರು ಇನ್ನೂ ಕೆಳಮಟ್ಟದಲ್ಲಿದ್ದಾರೆ ಎಂಬ ಭಾವನೆ; (2) ದಲಿತರ ಬಗ್ಗೆ ಮಾಧ್ಯಮದವರ ವರದಿಗಾರಿಕೆ; (3) ದಲಿತರ ಬಗ್ಗೆ ಅವರೇ ಬರೆದುಕೊಂಡ ಆತ್ಮಚರಿತ್ರೆಗಳು, ಅಥವಾ ಅವರ ಬಗ್ಗೆ ಬಂದಿರುವ ಪುಸ್ತಕಗಳು, ಸರ್ಕಾರೇತರ ಸಂಘ-ಸಂಸ್ಥೆಗಳು ದಲಿತರನ್ನು ನೋಡುವ ಬಗೆ. ಇವು ಕೆಲವು ಉದಾಹರಣೆಗಳಷ್ಟೆ.

ಇದರರ್ಥ ಏನು? ಈಗಲೂ ಕೂಡ ದಲಿತರ ಇಮೇಜ್‌ನ ಬಗ್ಗೆ ತಪ್ಪು ಕಲ್ಪನೆ ಮನೆಮಾಡಿದೆ. ದಲಿತರಿಗೆ ಉತ್ತಮವಾದ ಮೇಲ್ವರ್ಗದ ನಡಾವಳಿ ಗೊತ್ತಿಲ್ಲ, ಹೀಗಾಗಿ ವಿಶೇಷವಾದ ಭೋಜನಗಳಿಗೆ ಇವರು ಆಹ್ವಾನಿತರಾಗುವುದಿಲ್ಲ. ಶತಮಾನಗಳ ಶೋಷಣೆ ಮತ್ತು ಪ್ರತ್ಯೇಕತೆಯ ಪರಿಣಾಮವಾಗಿ ಸಾಂಸ್ಕೃತಿಕವಾಗಿ ದಲಿತೇತರರಷ್ಟು 'ಶ್ರೇಷ್ಠ' ನಡವಳಿಕೆಯನ್ನು ದಲಿತರಿಂದ ಅಪೇಕ್ಷಿಸುವುದು ಸರಿಯಲ್ಲ. ಆದರೆ ಈ ಮಾತನ್ನು ಸಾಮಾನ್ಯೀಕರಣಗೊಳಿಸುವುದು ಕೂಡ ತಪ್ಪಾಗುತ್ತದೆ. ಉದಾಹರಣೆಗೆ ದಲಿತರಲ್ಲಿ ಎಲೈಟ್‌ಗಳು, ದಲಿತೇತರರಷ್ಟೆ ಮೇಲ್ಮಟ್ಟದ ನಡವಳಿಕೆಯನ್ನು, ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಸಾಧಿಸಿದ್ದಾರೆ. ಆದರೆ ಈಗಲೂ ಕೂಡ ದಲಿತೇತರ ವರ್ಗಗಳಲ್ಲಿರುವ 'ದಲಿತರನ್ನು ಕುರಿತ ಸಾಂಪ್ರದಾಯಿಕ ಇಮೇಜ್' ಹಾಗೆಯೇ ಉಳಿದಿದೆ.

ದಲಿತರ ಬಗ್ಗೆ ಇರುವ ಈ ಇಮೇಜ್‌ನ ಹಿಂದೆ ಮೂರು ಕಾರಣಗಳಿವೆ: (1) ದಲಿತರಲ್ಲಿ ಬಹುಸಂಖ್ಯಾತರು ಇನ್ನೂ ಕೆಳಮಟ್ಟದಲ್ಲಿದ್ದಾರೆ ಎಂಬ ಭಾವನೆ; (2) ದಲಿತರ ಬಗ್ಗೆ ಮಾಧ್ಯಮದವರ ವರದಿಗಾರಿಕೆ; (3) ದಲಿತರ ಬಗ್ಗೆ ಅವರೇ ಬರೆದುಕೊಂಡ ಆತ್ಮಚರಿತ್ರೆಗಳು, ಅಥವಾ ಅವರ ಬಗ್ಗೆ ಬಂದಿರುವ ಪುಸ್ತಕಗಳು, ಸರ್ಕಾರೇತರ ಸಂಘ-ಸಂಸ್ಥೆಗಳು ದಲಿತರನ್ನು ನೋಡುವ ಬಗೆ. ಇವು ಕೆಲವು ಉದಾಹರಣೆಗಳಷ್ಟೆ.

ನನ್ನ ಸ್ನೇಹಿತ ಮತ್ತು ಸಹುದ್ಯೋಗಿ ಡಿ. ಶ್ಯಾಂ ಬಾಬು ಇತ್ತೀಚೆಗೆ ವಿಚಾರ ಸಂಕಿರಣದಲ್ಲಿ ಭಾಗವಹಿಸಲು ಜರ್ಮನಿಗೆ ಹೋಗಿದ್ದಾಗ, ಸಂಕಿರಣದಲ್ಲಿ ಭಾಗವಹಿಸಿದ್ದವರೊಬ್ಬರು, "ದಲಿತರನ್ನು ಬೆಳಗಿನ ಹೊತ್ತು ಭಾರತದ ರಸ್ತೆಗಳಲ್ಲಿ ನೋಡಲು ಈಗ ಸಾಧ್ಯವಿದೆಯೇ?" ಎಂಬ ಪ್ರಶ್ನೆ ಕೇಳಿದರಂತೆ. ಶ್ಯಾಂ ಬಾಬು "ನಾನೂ ಕೂಡ ದಲಿತನೇ" ಎಂದು ಉತ್ತರಿಸಿದಾಗ ಅವರು ಅವಾಕ್ಕಾದರಂತೆ.

2001ರಲ್ಲಿ ವರ್ಣಭೇದನೀತಿಯ ಬಗ್ಗೆ ದಕ್ಷಿಣ ಆಫ್ರಿಕಾದ ಡರ್ಬನ್‌ನಲ್ಲಿ ನಡೆದ ವಿಶ್ವಸಂಸ್ಥೆ ಪ್ರಾಯೋಜಿತ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದಾಗ ಸಂಕಿರಣದಲ್ಲಿ ಭಾಗವಹಿಸಿದ್ದ ಬಹಳಷ್ಟು ಮಂದಿ ವಿದೇಶಿ ಪ್ರತಿನಿಧಿಗಳು ನಮ್ಮೊಡನೆ ನಿಂತು ಫೋಟೋ ತೆಗೆಸಿಕೊಳ್ಳುತ್ತಿದ್ದರು. ಅವರು ತಂತಮ್ಮ ದೇಶಗಳಿಗೆ ವಾಪಸ್ಸಾದಾಗ ಖಂಡಿತ ದಲಿತರ ಸೀಮಿತ ಇಮೇಜ್‌ನ ಬಗ್ಗೆ ನಮ್ಮನ್ನು ಉದಾಹರಣೆಯಾಗಿರಿಸಿಕೊಂಡು ಮಾತನಾಡಿರುತ್ತಾರೆ.

ಇತ್ತೀಚೆಗೆ ಜಗದ್ವಿಖ್ಯಾತ ಅಮೆರಿಕಾದ ಪತ್ರಿಕೆಯೊಂದು ನನ್ನ ಕೃತಿಗಳ ಬಗ್ಗೆ ಒಂದು ಲೇಖನವನ್ನು ಪ್ರಕಟಿಸಿತ್ತು. ಲೇಖನದ ಜೊತೆ ಪ್ರಕಟಿಸಲಾದ ನನ್ನ ಛಾಯಾಚಿತ್ರವನ್ನು ಖ್ಯಾತ ಚಿತ್ರನಟ-ನಟಿಯರು, ಗಾಡ್‌ಗಳ ಜೊತೆ ಫೋಟೋ ಗ್ಯಾಲರಿಯಲ್ಲಿ ಹಾಕಿದ್ದರು ಮತ್ತು ಮಾರಾಟಕ್ಕಿಟ್ಟಿದ್ದರು. ಇದರ ಸಂದೇಶ ಇಷ್ಟೆ: ನೀವೂ ಕೂಡ ದಲಿತರೊಬ್ಬರ ಫೋಟೋ ಖರೀದಿಸಿ ಹೆಮ್ಮೆ ಪಡಿ. ಇದರರ್ಥ ಏನು? ದಲಿತರೇನೋ ಮನುಷ್ಯರೋ ಅಥವಾ ಪ್ರಾಣಿಗಳೋ?

1999ರಲ್ಲಿ ಮಾನವ ಹಕ್ಕುಗಳ ಕಾವಲು ಸಮಿತಿ ದಲಿತರ ಬಗೆ 'ಬ್ರೋಕನ್ ಪೀಪಲ್: ಕಾಸ್ ವಯೋಲೆನ್

ದಲಿತರ ಜೊತೆಗಿನ ಗೆಳೆತನದ ಬಗ್ಗೆ

ಅಗೆನ್ಸ್ಟ್ ಇಂಡಿಯಾಸ್ ಅನಟಚಬಲ್ಸ್' (ಶೋಷಿತ ಜನ: ಭಾರತದ ಅಸ್ಪೃಶ್ಯರ ವಿರುದ್ಧ ಜಾತಿ ಹಿಂಸೆ) ಎಂಬ ವರದಿಯನ್ನು ಪ್ರಕಟಿಸಿತು. ದಲಿತರ ಬಗ್ಗೆ ಡರ್ಬನ್‌ನಲ್ಲಿ ವರದಿ ಮಂಡಿಸಿದ ವ್ಯಕ್ತಿಯೇ ಈ ವರದಿಯನ್ನೂ ಬರೆದಿದ್ದರು.

ದಲಿತರ ಸಮಸ್ಯೆಯನ್ನು ಜಾಗತಿಕ ಮಟ್ಟದಲ್ಲಿ ಗುರುತಿಸಿದ ಡರ್ಬನ್ ಸಮ್ಮೇಳನ ಐತಿಹಾಸಿಕವಾದುದಾದರೂ, ದಲಿತರ ಬಗ್ಗೆ ಸ್ಟಿರಿಯೋಟೈಪ್ ಇಮೇಜ್ ಹುಟ್ಟು ಹಾಕಲು ಕೂಡ ಇದು ಕಾರಣವಾಗಿದ್ದು ಸುಳ್ಳಲ್ಲ. ವರದಿಯಲ್ಲಿ ದಲಿತರನ್ನು 'ಜಾಡಮಾಲಿಗಳು, ಜಲಗಾರರು, ಚಮ್ಮಾರರು,' ಎಂದೆಲ್ಲಾ ವಿವರಿಸಲಾಗಿತ್ತು.

ಹೌದು, ಈ ಮೇಲಿನ ಜಾತಿಗಳೆಲ್ಲ ದಲಿತರನ್ನು ಪ್ರತಿನಿಧಿಸುತ್ತವೆ. ಆದರೆ ದೇಶದ ಎಲ್ಲ ದಲಿತರೂ ಇದೇ ರೀತಿಯ ಕೆಲಸಗಳನ್ನು ಮಾಡುತ್ತಿದ್ದಾರೆಯೇ?

ಕ್ರೈಸ್ತ ಧರ್ಮ, ಬೌದ್ಧ ಧರ್ಮ, ಮತ್ತು ಸಿಖ್ ಧರ್ಮಕ್ಕೆ ಮತಾಂತರ ಹೊಂದಿದವರೂ ಸೇರಿದಂತೆ ಭಾರತದಲ್ಲಿ ಸುಮಾರು 200 ದಶಲಕ್ಷ ದಲಿತರಿದ್ದಾರೆ. ಭಾರತವನ್ನು ಶುಚಿ ಮಾಡಲು 200 ದಶಲಕ್ಷ ಜನರ ಅವಶ್ಯಕತೆ ಇದೆಯೇ? ಭಾರತದ ಜನಗಣತಿಯ ಪ್ರಕಾರ ದೇಶದಲ್ಲಿರುವ ಸುಮಾರು ಶೇ. 90ರಷ್ಟು ಮಂದಿ ದಲಿತರು ಕೃಷಿ ಕಾರ್ಮಿಕರು, ಕೈಗಾರಿಕಾ ಉದ್ಯೋಗಿಗಳು, ಉದ್ಯಮಿಗಳು, ವ್ಯಾಪಾರಿಗಳು, ಸರ್ಕಾರಿ ಉದ್ಯೋಗಿಗಳು ಮತ್ತು ವೃತ್ತಿಪರರಾಗಿದ್ದಾರೆ.

ಪರಿಸ್ಥಿತಿ ಹೀಗಿರುವಾಗ ದೇಶದ ದಲಿತರನ್ನು ಬೀದಿ ಗುಡಿಸುವವರು, ಚಪ್ಪಲಿ ಹೊಲೆಯುವವರು ಮತ್ತು ಹೆಣ ಹೂಳುವವರು ಎಂದೆಲ್ಲಾ ಯಾಕೆ ಚಿತ್ರಿಸಲಾಗುತ್ತದೆ?

ದಲಿತರ ಬಗ್ಗೆ ಇರುವ ಇಂತಹ ಪರಿಕಲ್ಪನೆಗಳು ದಲಿತೇತರರಲ್ಲಿ ಅಚ್ಚಳಿಯದೆ ಉಳಿದುಬಿಟ್ಟಿದೆ. ಇದರಿಂದಾಗಿ ಸಾಮಾಜಿಕ ಸಹಭಾಗಿತ್ವ ಸಾಧ್ಯವಾಗುವುದಿಲ್ಲ. ತಮ್ಮ ದಲಿತ ಸಹುದ್ಯೋಗಿಗಳ ಜೊತೆ ಊಟಕ್ಕೆ ಕೂರದ ಮಂದಿ ಎಲ್ಲ ವಲಯಗಳಲ್ಲಿ ದಲಿತರ ಒಳಗೊಳ್ಳುವಿಕೆಯನ್ನು ಹೇಗೆ ಒಪ್ಪಿಕೊಳ್ಳಲು ಸಾಧ್ಯ?

* * * * * * * * *

ದಲಿತ ಮತ್ತು ದಲಿತೇತರರ ನಡುವಿನ ಗೆಳೆತನದ ವಿಚಾರವನ್ನು ಬಿಡಿ, ದಲಿತರ ನಡುವೆ, ಅಂದರೆ ಮಧ್ಯಮ ವರ್ಗದ ದಲಿತರು ಮತ್ತು ಕೆಳವರ್ಗದ ದಲಿತರ ಗೆಳೆತನದ ಬಗ್ಗೆ ಸ್ವಲ್ಪ ಯೋಚನೆ ಮಾಡಿ.

ದಲಿತ ಐಎಎಸ್ ಅಧಿಕಾರಿಗಳ ಮಕ್ಕಳು ಯಾವ ವರ್ಗದವರನ್ನು ಮದುವೆಯಾಗುತ್ತಾರೆ? ಆಟೋರಿಕ್ಷಾ ಓಡಿಸುವ ಅಥವಾ ಗ್ರೂಪ್ ಸಿ ಅಥವಾ ಡಿ ವರ್ಗಗಳಲ್ಲಿ ಕೆಲಸ ಮಾಡುವ ದಲಿತರನ್ನು ಮದುವೆಯಾಗುತ್ತಾರೆಯೇ? ಈ ಪ್ರಶ್ನೆಗೆ ಉತ್ತರಿಸಲು ಸಂಶೋಧನೆ ಮಾಡುವ ಅಗತ್ಯವೇನಿಲ್ಲ.

ಮೊದಲಿಗೆ ದಲಿತೇತರರ ವಿಚಾರಕ್ಕೆ ಬರೋಣ. ಒಂದು ಪ್ರತಿಷ್ಠಿತ ದೇವಸ್ಥಾನದಲ್ಲಿ ಅರ್ಚಕನಾಗಿರುವ ಬ್ರಾಹ್ಮಣ, ಸಾಮಾಜಿಕವಾಗಿ ಓರ್ವ ಬ್ರಾಹ್ಮಣ ಐಎಎಸ್ ಅಧಿಕಾರಿ ಅಥವಾ ಪತ್ರಿಕಾ ಸಂಪಾದಕನಿಗಿಂತ 'ಮೇಲು' ಎನಿಸಿಕೊಂಡಿರುತ್ತಾನೆ. ದೇವಸ್ಥಾನದ ಅರ್ಚಕ ಮುಕ್ಕೋಟಿ ದೇವ ದೇವತೆಗಳೊಡನೆ ನೇರ ಸಂಪರ್ಕದಲ್ಲಿದ್ದರೆ, ಬ್ರಾಹ್ಮಣ ಅಧಿಕಾರಿ ಅಥವಾ ಸುದ್ದಿ ಸಂಪಾದಕ ಅಷ್ಟು ಭಾಗ್ಯವಂತನಾಗಿರುವುದಿಲ್ಲ! ಯಾಕೆಂದರೆ ಇವರು ಹುಲುಮಾನವರೊಂದಿಗೆ ಸಂಪರ್ಕದಲ್ಲಿರುತ್ತಾರೆ. ಹೀಗಿರುವಾಗ, ಓರ್ವ ಬ್ರಾಹ್ಮಣ ಅರ್ಚಕನ ಮಗ ಓರ್ವ ಅಧಿಕಾರಿ ಅಥವಾ ಸುದ್ದಿ ಸಂಪಾದಕನ ಮಗಳೊಂದಿಗೆ ಮದುವೆಯಾಗುವ ನಿರೀಕ್ಷೆ ಇರಿಸಿಕೊಳ್ಳಬಹುದೇ? ಸಾಮಾಜಿಕವಾಗಿ ಒಂದು ಸಿದ್ಧ ಮಾದರಿಯೊಳಗೆ ಬಂಧಿಯಾಗಿರುವ ಬ್ರಾಹ್ಮಣ ಅರ್ಚಕರು, ಮೇಲ್ವರ್ಗದ ಬ್ರಾಹ್ಮಣರ ಸಾಂಸ್ಕೃತಿಕ ಜಗತ್ತಿನಲ್ಲಿ ಅನ್ಯರಾಗಿ ಉಳಿಯುತ್ತಾರೆ. ದಲಿತರೂ ಕೂಡ ಮನುಷ್ಯನ ಈ ಮೂಲಭೂತ ಗುಣವನ್ನು ಅರ್ಥ ಮಾಡಿಕೊಳ್ಳಬೇಕು; ಸಮಾಜದಲ್ಲಿ ಬಲಾಢ್ಯರಾಗಿರುವವರು ತಮಗಿಂತ ಮೇಲ್ಮಟ್ಟದ ಅಥವಾ ತಮಗೆ ಸರಿಸಮಾನರಾಗಿರುವವರೊಂದಿಗೆ ಗೆಳೆತನ ಮಾಡಲು ಬಯಸುವುದು ಸಹಜ. ತಮಗಿಂತ ಕೆಳಮಟ್ಟದಲ್ಲಿರುವವರೊಂದಿಗೆ ಗೆಳೆತನಮಾಡಲು ಯಾರೂ ಇಷ್ಟಪಡುವುದಿಲ್ಲ.

ಕಳೆದ ಆರು ದಶಕಗಳಿಂದ ಸರ್ಕಾರಿ ಆದೇಶಗಳು, ಮಾಧ್ಯಮದ ಪ್ರಚಾರಗಳು, ಸರ್ಕಾರೇತರ ಸಂಘ ಸಂಸ್ಥೆಗಳ 'ಸಮಾಜ ಸೇವೆ'ಗಳ ಫಲವಾಗಿ ದಲಿತರಿನ್ನೂ ಸಾರ್ವಜನಿಕವಾಗಿ 'ದುರ್ಬಲ'ರಾಗಿಯೇ ಉಳಿದಿದ್ದಾರೆ.

ದಲಿತರ ಬಗ್ಗೆ ಚಾಲ್ತಿಯಲ್ಲಿರುವ ಜನಪ್ರಿಯ ಸ್ಟಿರಿಯೋಟೈಪ್ ಏನೆಂದರೆ, ದಲಿತರಿಗೆ ಯಾವಾಗಲೂ ಇನ್ನೊಬ್ಬರ ಬೆಂಬಲ ಅಗತ್ಯ. ಸಹಾಯವಿಲ್ಲದೆ ದಲಿತರು ಏನನ್ನೂ ಮಾಡಲು ಶಕ್ತರಲ್ಲ. ದಲಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಬೇಕು, ಅವರ ಪೋಷಕರಿಗೆ ಬಿಪಿಎಲ್ ಕಾರ್ಡ್ ಬೇಕು, ಮತ್ತು ದಲಿತರಿಗೆ ಉದ್ಯೋಗ ದೊರಕಲು ಅರ್ಹತೆಯ ಮಾನದಂಡವನ್ನು ಸಡಿಲಗೊಳಿಸಬೇಕು, ಹೀಗೆ.

ಇದರ ಜೊತೆಗೆ ಮುಂಜಾನೆ ಪತ್ರಿಕೆಗಳಲ್ಲಿ ದಲಿತ ಮಹಿಳೆಯರ ಅತ್ಯಾಚಾರ, ದಲಿತರ ಅವಹೇಳನ, ಕೊಲೆ, ಹೀಗೆ ಅದೇ ಮಾದರಿಯ ಸುದ್ದಿ.

ನೀವು ಬಡತನದ ಸೂಚಕದಲ್ಲಿ ಬೇಕಾದರೆ ದಲಿತರನ್ನು ಹೆಚ್ಚುವರಿಯಾಗಿ ಸೇರ್ಪಡೆಗೊಳಿಸಬಹುದು! ದೌರ್ಜನ್ಯದ ಸೂಚಕದಲ್ಲಿ ಕೂಡ ದಲಿತರ ಪ್ರತಿನಿಧೀಕರಣ ಹೆಚ್ಚಿಸಬಹುದು! ದಲಿತೇತರ ಮಹಿಳೆಯರಿಗಿಂತ ದಲಿತ ಮಹಿಳೆಯರು ಅತ್ಯಾಚಾರಕ್ಕೊಳಗಾಗುವ ಸಾಧ್ಯತೆಯೇ ಹೆಚ್ಚು ಇರಬಹುದು! ದಲಿತೇತರ ನೌಕರರಿಗಿಂತ ದಲಿತ ನೌಕರರು ಯಾವಾಗಲೂ ಸಮರ್ಪಕವಾಗಿ ಕೆಲಸ ಮಾಡದಿರಬಹುದು! ಇಂತಹ ವಿವರಣೆಗಳನ್ನು ಯಾರೂ ಆಕ್ಷೇಪಿಸುವುದಿಲ್ಲ. ಯಾಕೆಂದರೆ ಇದು ನಮ್ಮ ಕಣ್ಣೆದುರಿಗೆ ರೂಢಿಗತಗೊಳಿಸಲ್ಪಟ್ಟ ದಲಿತರ ಇಮೇಜ್.

ದಲಿತರ ಬಗ್ಗೆ ಇಂತಹ ಇಮೇಜ್ ಚಾಲ್ತಿಯಲ್ಲಿರುವಾಗ ಯಾರು ತಾನೆ ಅವರ ಸ್ನೇಹ ಸಂಪಾದಿಸಬಯಸುತ್ತಾರೆ? ದಲಿತರಿಗೆ ವಿಶೇಷವಾದ ತರಬೇತಿ ಮತ್ತು ಆಯ್ಕೆಯ ಅರ್ಹತೆಯಲ್ಲಿ ಸಡಿಲಿಕೆ ಬೇಕು ಎಂದು ತಿಳಿದುಕೊಂಡಿರುವ ಖಾಸಗಿ ಉದ್ಯಮಿಗಳು ದಲಿತರಿಗೆ ಹೇಗೆ ಉದ್ಯೋಗ ನೀಡಲು ಸಾಧ್ಯ? ದಲಿತರು ಎಂತಹಾ ವರ್ಗಕ್ಕೆ ಸೇರಿದವರು ಎಂದು ಗೊತ್ತಾದ ಮೇಲೆ ವಿದೇಶಿ ಸಂಸ್ಥೆಗಳು ದಲಿತರಿಗೆ ವಿಶೇಷ ಮಾನ್ಯತೆ ಹೇಗೆ ನೀಡಲು ಸಾಧ್ಯ?

ದಲಿತರ ಬಗೆಗಿನ ಇಮೇಜ್ ಒಂದೇ ಮಾದರಿಯಲ್ಲಿರುವುದನ್ನು ನಾವು ಕಾಣಬಹುದು. ದಲಿತರ ಬೌದ್ಧಿಕ ಸಾಮರ್ಥ್ಯವನ್ನು ಕುರಿತ ನೂರಾರು ಕಥನಗಳು ಬೆಳಕಿಗೆ ಬಾರದೆ ದಲಿತರಿಗೆ ಶಾಪವಾಗಿ ಪರಿಣಮಿಸಿದೆ.

ಕೆಲವು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ದಲಿತ ವಿದ್ಯಾರ್ಥಿಗಳು ನೂರಕ್ಕೆ ನೂರರಷ್ಟು ಅಂಕ ಗಳಿಸುವ ವಿಷಯ ಎಂದಾದರೂ ನಮ್ಮ ಕಿವಿಗೆ ಬಿದ್ದಿದೆಯೇ? ತಮ್ಮ ಮಕ್ಕಳನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಜಾಗತಿಕ ಸ್ಪರ್ಧೆ ಇರುವ ಅಮೆರಿಕಾ ಮತ್ತು ಇಂಗ್ಲೆಂಡ್‌ಗಳಿಗೆ ಕಳುಹಿಸುವ ದಲಿತ ಐಎಎಸ್ ಅಧಿಕಾರಿಗಳ ವಿಷಯ ಎಂದಾದರೂ ನಮ್ಮ ಗಮನಕ್ಕೆ ಬಂದಿದೆಯೇ?

ಅಮೆರಿಕಾ ಮತ್ತು ಬ್ರಿಟನ್‌ನ ವಿಶ್ವವಿದ್ಯಾನಿಲಯಗಳ ವಿಜ್ಞಾನ ವಿಭಾಗಗಳಲ್ಲಿ ಪಾಠ ಮಾಡುತ್ತಿರುವ ದಲಿತ ಪ್ರೊಫೆಸರ್‌ಗಳ ಬಗ್ಗೆ ನಾವು ಕೇಳಿದ್ದೇವೆಯೇ? ಕೇವಲ ತಮ್ಮ ಪ್ರತಿಭೆಯಿಂದಲೇ ಜಗತ್ತಿನ ಪ್ರತಿಷ್ಠಿತ ಐಟಿ ಕಂಪನಿಗಳಲ್ಲಿ ಉದ್ಯೋಗ ಗಳಿಸುವ ದಲಿತರ ಬಗ್ಗೆ ನೀವು ಯಾವ ಪತ್ರಿಕೆಯಲ್ಲಾದರೂ ಓದಿದ್ದೀರಾ?

ಬ್ರಾಹ್ಮಣರು ಮತ್ತು ಠಾಕೂರ್‌ಗಳಿಗೆ ಉದ್ಯೋಗ ನೀಡಿರುವ ದಲಿತ ಬಂಡವಾಳಶಾಹಿಗಳ ಬಗ್ಗೆ ನಿಮಗೆ ಗೊತ್ತಿದೆಯೇ? ಮರ್ಸಿಡೀಸ್ ಬೆನ್ಜ್, ಬಿಎಂಡಬ್ಲ್ಯೂ ಮತ್ತು ರೋಲ್ಸ್ ರಾಯ್ಸ್ ಕಾರುಗಳನ್ನು ಚಲಾಯಿಸುವ ದಲಿತ ಉದ್ಯಮಿಗಳ ಬಗ್ಗೆ ವರದಿ ನೋಡಿದ್ದೀರಾ? ದಲಿತ ಪುರುಷರನ್ನು ಮದುವೆಯಾಗಲು ನೂರಾರು ದಲಿತೇತರ ಹೆಣ್ಣುಮಕ್ಕಳು ತಮ್ಮ ಜೀವದ ಹಂಗು ತೊರೆದು ಹೋರಾಡುವ ಕಥನ ನಿಮ್ಮ ಕಿವಿಗೆ ಬಿದ್ದಿದೆಯೇ?

ದಲಿತರ ಬಗ್ಗೆ ಚಾಲ್ತಿಯಲ್ಲಿರುವ ಸ್ಟಿರಿಯೋಟಿಪಿಕಲ್ ಇಮೇಜ್ ಸೃಷ್ಟಿಯಾಗಲು ಬ್ರಾಹ್ಮಣಶಾಹಿ ಮಾಧ್ಯಮ ಮತ್ತು ಬೌದ್ಧಿಕ ವಲಯ ಮಾತ್ರ ಕಾರಣವಲ್ಲ. ದಲಿತ ಬರಹಗಾರರು, ಹೋರಾಟಗಾರರು, ಕುಖ್ಯಾತ ದಲಿತ ಸರ್ಕಾರೇತರ ಸಂಘ ಸಂಸ್ಥೆಗಳು ಕೂಡ ಇಂತಹ ದಲಿತ ರೂಪಕದ ಸೃಷ್ಟಿಗೆ ಕಾರಣಕರ್ತರೇ.

ಆದಷ್ಟು ಬೇಗ ದಲಿತರು ತಮ್ಮ ಸಾಮಾಜಿಕ ನಡವಳಿಕೆಯನ್ನು ಉತ್ತಮ ರೀತಿಯಲ್ಲಿ ಬದಲಾಯಿಸಿಕೊಂಡಷ್ಟೂ ಒಳ್ಳೆಯದು. ನೆನಪಿಡಿ, ಬಲಾಢ್ಯರು ತಮ್ಮ ಸರಿಸಮಾನರೊಂದಿಗೆ ಮಾತ್ರ ಗೆಳೆತನ ಮಾಡುತ್ತಾರೆ. ಅಮೆರಿಕಾದ ಕಪ್ಪು ಜನಾಂಗ ಬಲಾಢ್ಯವಾದ ಮೇಲೆ ಅವರಿಗೆ ಸಾಮಾಜಿಕ ನ್ಯಾಯ ದೊರಕಿದ್ದು. ಭಾರತದಲ್ಲಿ ಓಬಿಸಿಗಳು ಬಲಾಢ್ಯರಾದ ಮೇಲೆ ಮಂಡಲ್ ಆಯೋಗದ ಪ್ರಯೋಜನ ಸಿಕ್ಕಿದ್ದು. ಅದೇ ರೀತಿ ದಲಿತರು ಕೂಡ ಸಮುದಾಯದ ಮಟ್ಟದಲ್ಲಿ ಒಪ್ಪಿತವಾದ ಅತ್ಯುತ್ತಮ ನಡವಳಿಕೆಯನ್ನು ಅಳವಡಿಸಿಕೊಂಡು ಮುಖ್ಯವಾಹಿನಿಯಲ್ಲಿ ಬಲಾಢ್ಯರಾದರೆ ಸಹಜವಾಗಿ ಇತರ ಜಾತಿಯ ಮಂದಿ ಗೆಳೆತನ ಮಾಡುವುದರಲ್ಲಿ ಸಂಶಯವಿಲ್ಲ. □

ಬುದ್ಧಾಯಣ

೬೬

ಹಿಮಾಲಯದ ದಟ್ಟ ಕಾಡಿನ ನಡುವೆ ಒಂದು ಆಶ್ರಮವನ್ನು ಮಾಡಿ ಕೊಂಡು ವಾಸಿಸ ತೊಡಗಿದರು. ಕಾಡಿನಲ್ಲಿ ಸಿಗುವ ಕಂದ ಮೂಲ ಫಲಗಳನ್ನು ತಿಂದು ಜೀವಿಸ ತೊಡಗಿದರು. ಮಿಕ್ಕ ಸಮಯವನ್ನು ಆಧ್ಯಾತ್ಮಿಕ ಸಾಧನೆ ಮತ್ತು ಜನಕಲ್ಯಾಣಕ್ಕೆ ವಿನಿಯೋಗಿಸುತ್ತಿದ್ದರು. ಹೀಗಿರಲು ವಾರಣಾಸಿ ರಾಷ್ಟ್ರದ ಗಡಿನಾಡಿನಲ್ಲಿ ದಂಗೆ ಉಂಟಾಯಿತು. ಆ ಯುದ್ಧದಲ್ಲಿ ಸೋತ ಬ್ರಹ್ಮ ದತ್ತ ರಾಜನು ಮೃತ್ಯು ಭಯದಿಂದ ತಲೆಮರೆಸಿ ಕೊಂಡು ತನ್ನ ಆನೆಯ ನ್ನೇರಿ ಹಿಮಾಲಯದ ದಟ್ಟ ಕಾಡನ್ನು ಪ್ರವೇಶಿಸಿದ. ಬಿರುಬಿಸಿಲಿನಿಂದ ಬಳಲಿದ ರಾಜನು ಹಸಿವು ಬಾಯಾ ರಿಕೆಯಿಂದ ಬಳಲುತ್ತಾ ತಿರೀಟವಚ್ಛನ ಆಶ್ರಮದತ್ತ ಬಂದನು.

ಸಿ. ಹೆಚ್. ರಾಜಶೇಖರ್

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಸಾವಸ್ಥಿಯ ಜೇತ ವನದಲ್ಲಿ ತಮ್ಮ ಅಪಾರ ಶಿಷ್ಯರೊಂದಿಗೆ ತಂಗಿದ್ದರು. ಅದಕ್ಕೂ ಪೂರ್ವ ಕಾಲದಲ್ಲಿ ವಾರಣಾಸಿ ರಾಜ್ಯವನ್ನು ಬ್ರಹ್ಮದತ್ತ ರಾಜನು ಆಳು ತ್ತಿದ್ದನು. ಅಂತಹ ಸಮಯದಲ್ಲಿ ಬೋಧಿಸತ್ವರು ಕಾಶಿರಾಷ್ಟ್ರದ ಒಂದು ಬ್ರಾಹ್ಮಣ ಕುಲದಲ್ಲಿ ಜನಿಸಿದರು. ಅವರ ತಂದೆ ತಾಯಿಗಳು ಆ ಮಗುವಿಗೆ "ತಿರೀಟವಚ್ಛ" ಎಂದು ನಾಮಕರಣ ಮಾಡಿದರು. ಆ ಮಗುವನ್ನು ಅತಿ ಮುದ್ದಾಗಿ ಸಾಕಿ ಸಲಹಿದರು. ಸಕಾಲದಲ್ಲಿ ಕೊಡಿ ಸಬೇಕಾದ ಎಲ್ಲ ವಿದ್ಯೆಯನ್ನು ಶ್ರೇಷ್ಠ ಗುರುವಿನ ಮೂಲಕ ಕೊಡಿ ಸಿದರು. ಬೋಧಿಸತ್ವ ಸ್ವರೂಪಿಯಾದ ತಿರೀಟವಚ್ಛರು ಕೂಡ ತಂದೆ ತಾಯಿಗಳನ್ನು ಅಪಾರವಾಗಿ ಪ್ರೀತಿಸುತ್ತಿದ್ದರು.

ಒಮ್ಮೆ ಅವರ ಮಾತಾಪಿತರು ಅಕಾಲಿಕ ಮರಣಕ್ಕೆ ತುತ್ತಾ ದರು. ಈ ಘಟನೆಯು ತಿರೀಟವಚ್ಛನ ಮೇಲೆ ಅಪಾರ ಪರಿಣಾಮ ಬೀರಿತು. ಅವರು ಹೀಗೆ ಯೋಚಿಸಿದರು, ನಾವು ಯಾರನ್ನು ಎಷ್ಟೇ ಪ್ರೀತಿಸಿದರೂ ಒಂದಲ್ಲ ಒಂದು ದಿನ ಮರಣಕ್ಕೆ ತುತ್ತಾಗುತ್ತಾರೆ. ಇಲ್ಲಿ ಅಗಲುವಿಕೆಯೇ ಶಾಶ್ವತ ಎಂಬುದನ್ನು ಕಂಡು ಕೊಂಡರು. ಇಂಥಹ ಅಶಾಶ್ವತತೆಗಾಗಿ ನಾನೇಕೆ ಬದುಕನ್ನು ವ್ಯರ್ಥಗೊಳಿಸಿಕೊಳ್ಳಬೇಕು ಎನ್ನಿಸಿತು. ಉಳಿದ ನನ್ನ ಆಯಸ್ಸನ್ನು ದುಃಖ ಮತ್ತು ಅಜ್ಞಾನದಲ್ಲಿ ಇರುವ ಮುಗ್ಧ ಜನರ ಕಲ್ಯಾಣಕ್ಕಾಗಿ ವಿನಿಯೋಗಿಸುವುದೇ ಸರಿ ಎನಿಸಿ ಸಂಸಾರವನ್ನು ತೊರೆದು ಭಿಕ್ಷು ದೀಕ್ಷೆಯನ್ನು ಸ್ವೀರಿಸಿದರು. ಹಿಮಾಲಯದ ದಟ್ಟ ಕಾಡಿನ ನಡುವೆ ಒಂದು ಆಶ್ರಮವನ್ನು ಮಾಡಿ ಕೊಂಡು ವಾಸಿಸತೊಡಗಿದರು. ಕಾಡಿನಲ್ಲಿ ಸಿಗುವ ಕಂದಮೂಲ ಫಲಗಳನ್ನು ತಿಂದು ಜೀವಿಸ ತೊಡಗಿದರು. ಮಿಕ್ಕ ಸಮಯವನ್ನು ಆಧ್ಯಾತ್ಮಿಕ ಸಾಧನೆ ಮತ್ತು ಜನಕಲ್ಯಾಣಕ್ಕೆ ವಿನಿಯೋಗಿಸುತ್ತಿದ್ದರು.

ಹೀಗಿರಲು ವಾರಣಾಸಿ ರಾಷ್ಟ್ರದ ಗಡಿನಾಡಿನಲ್ಲಿ ದಂಗೆ ಉಂಟಾಯಿತು. ಆ ಯುದ್ಧದಲ್ಲಿ ಸೋತ ಬ್ರಹ್ಮದತ್ತ ರಾಜನು ಮೃತ್ಯು ಭಯದಿಂದ ತಲೆಮರೆಸಿಕೊಂಡು ತನ್ನ ಆನೆಯನ್ನೇರಿ ಹಿಮಾಲಯದ ದಟ್ಟ ಕಾಡನ್ನು ಪ್ರವೇಶಿಸಿದ. ಬಿರುಬಿಸಿಲಿನಿಂದ ಬಳಲಿದ ರಾಜನು ಹಸಿವು ಬಾಯಾರಿಕೆಯಿಂದ ಬಳಲುತ್ತಾ ತಿರೀಟವಚ್ಛನ ಆಶ್ರಮದತ್ತ ಬಂದನು. ಅಲ್ಲಿ ಯಾರೂ ಇರಲಿಲ್ಲ. ಸಮೀಪವೆ ಇದ್ದ ಬಾವಿಯನ್ನು ಕಂಡ. ಮರಳುಗಾಡಿನಲ್ಲಿ ನೀರು ಸಿಕ್ಕಿದಷ್ಟು ಸಂತೋಷವಾಯಿತು. ಬಾವಿಯ ಬಳಿ ಬಂದು ಇಣುಕಿದ ನೀರು ಪಾತಾಳದಲ್ಲಿ ಇತ್ತು. ನೀರನ್ನು ಸೇದಿ ಕುಡಿಯಲು ಅಕ್ಕ ಪಕ್ಕ ಯಾವುದೆ ಹಗ್ಗ ಅಥವಾ ಆಸರೆ ಇರಲಿಲ್ಲ. ತನ್ನ ಆನೆಯ ಕೊರಳಿನಲ್ಲಿ ಸುತ್ತಿದ್ದ ಹಗ್ಗವನ್ನು ಕಂಡು ಹರ್ಷಿತನಾದ. ಆನೆಯ ಕೊರಳಿನಲ್ಲಿ ಇದ್ದ ಹಗ್ಗವನ್ನು ಬಿಚ್ಚಿದ. ನುರಿತು ತರಬೇತಿ ಹೊಂದಿದ ಆನೆಯನ್ನು ಬಾವಿಯ ದಡದ ಬಳಿ ನಿಲ್ಲಿಸಿ ಅದರ ಸೊಂಡಿಲಿಗೆ ಹಗ್ಗವನ್ನು ಕಟ್ಟಿ ಕೆಳಗೆ ಇಳಿದ. ಆದರೂ ಅದು ನೀರಿನ ಮಟ್ಟದತ್ತ ತಲುಪಲಿಲ್ಲ. ಮೇಲೆ ಬಂದ ಅವನು ತನ್ನ ಬಳಿ ಇದ್ದ ಹೊದಿಕೆಯನ್ನು ತೆಗೆದು ಹಗ್ಗದ ತುದಿಗೆ ಕಟ್ಟಿ ಮತ್ತೆ ಬಾವಿಗೆ ಇಳಿದ. ಆದರೆ ನೀರು ಕಾಲಿನ ತುದಿಯನ್ನು ಸ್ಪರ್ಶಿಸುತ್ತಿತ್ತೆ ಹೊರತು ಕೈಗೆ ನಿಲುಕುತ್ತಿರಲಿಲ್ಲ. ಬಾಯಾರಿಕೆಯ ದಾಹವನ್ನು ತಾಳಲಾರದ ರಾಜನು ಜೀವವನ್ನು ಉಳಿಸಿಕೊಳ್ಳುವ ಸಲುವಾಗಿ ನೀರಿಗೆ ಜಿಗಿದ. ಸಾಕಷ್ಟು ನೀರನ್ನು ಕುಡಿದು ದಣಿವನ್ನು ತೀರಿಸಿಕೊಂಡ.

ದಡದಲ್ಲಿ ಇದ್ದ ಆನೆಯು ರಾಜನು ಅಪಾಯಕ್ಕೆ ತುತ್ತಾದ ಎಂದು ಬಗೆದು ಸೊಂಡಿಲಿಗೆ ಕಟ್ಟಿದ್ದ ಹಗ್ಗವನ್ನು ಮೇಲಕ್ಕೆ ಎಳೆದು ಕೊಂಡು ಶೋಕಿಸುತ್ತಾ ಮಲಗಿತು. ಬಾಯಾರಿಕೆಯನ್ನು ತೀರಿಸಿ ಕೊಂಡ ಬಳಿಕ ರಾಜನು ಮೇಲೆ ಬರಲು ನೋಡಿದಾಗ ಹಗ್ಗವು ಮಾಯವಾಗಿತ್ತು. ಬೇರೆ ದಾರಿ ಕಾಣದ ರಾಜನು ದಿಕ್ಕೆಟ್ಟು ನೀರಿನ ಮಟ್ಟದಿಂದ ಸ್ವಲ್ಪ ಮೇಲ್ಬಾದಲ್ಲಿ ನೇತಾಡುತ್ತಿದ್ದ ಒಂದು ಬೇರಿನ ಬುಡ ವನ್ನು ಹಿಡಿದುಕೊಂಡು ಜೀವವನ್ನು ಉಳಿಸಿಕೊಂಡ.

ಅಂದು ಬೋಧಿಸತ್ವರು ಕಂದ ಮೂಲಗಳನ್ನು ಹುಡುಕಿ ತೆಗೆ ದುಕೊಂಡು ಆಶ್ರಮದ ಬಳಿ ಬರುವಷ್ಟರಲ್ಲಿ ಸಂಜೆಯಾಗಿತ್ತು. ಬಾವಿಯ ಬಳಿ ಮಲಗಿಕೊಂಡಿದ್ದ ಅಲಂಕೃತಗೊಂಡ ಆನೆಯನ್ನು ಕಂಡೊಡನೆ ಯಾರೋ ರಾಜ ನನ್ನನ್ನು ಹುಡುಕಿಕೊಂಡು ಬಂದಿರ ಬೇಕೆಂದು ಬಾವಿಸಿದ. ಒಡನೆಯೆ ಆಶ್ರಮದ ಒಳ ಹೊರಗೆಲ್ಲ ಹುಡು ಕಿದ ಯಾರ ಸುಳಿವು ಸಿಗಲಿಲ್ಲ. ಅಷ್ಟರೊಳಗೆ ಎದ್ದು ನಿಂತ ಆನೆಯು ಬೋಧಿಸತ್ವರಿಗೆ ಸೊಂಡಿಲನ್ನು ಎತ್ತಿ ಘರ್ಜಿಸುತ್ತಾ ವಂದಿಸಿತು. ಬಳಿಕ ಅಪಾಯದಲ್ಲಿ ಇರುವ ತನ್ನ ರಾಜನಿಗಾಗಿ ಬಾವಿಯತ್ತ ಸೊಂಡಿಲನ್ನು ತೂರಿ ಸಂಜ್ಞೆ ಮಾಡಿತು. ಮುಂದಿನದು ಅರ್ಥ ಮಾಡಿಕೊಂಡ ಅವರು ಬಾವಿಯ ಬಳಿ ಬಗ್ಗಿ ನೋಡಲು ರಾಜನನ್ನು ಕಂಡರು. ತಕ್ಷ ಣವೇ ದಿನವೂ ತಾವು ನೀರು ಸೇದಲು ಬಳಸುತ್ತಿದ್ದ ಹಗ್ಗವನ್ನು





ಋಣ ತೀರಿಸದ ಬಾಳು ವ್ಯರ್ಥವೆಂದನಾ ರಾಜ!!

ತಂದು ಬಾವಿಗೆ ಬಿಟ್ಟು;

"ಮಹಾರಾಜ ಹೆದರದಿರು. ಈ ಹಗ್ಗವನ್ನು ಗಟ್ಟಿಯಾಗಿ ಹಿಡಿದುಕೋ" ಎಂದ. ಅವನು ಹಾಗೆಯೇ ಮಾಡಲು ರಾಜನನ್ನು ಸುರಕ್ಷಿತವಾಗಿ ಎಳೆದುಕೊಂಡು ದಡ ಸೇರಿಸಿದ. ಬಳಿಕ ಆತನನ್ನು ಆಶ್ರಮದ ಒಳಗೆ ಕರೆ ತಂದು ನೀರಿನಿಂದ ನೆನೆದ ಮೈ ಮತ್ತು ತಲೆಯನ್ನು ಒರೆಸಿದ. ಸ್ನಾನ ಮಾಡಿಸಿದ. ರಾಜನ ಮೈಯನ್ನು ಒತ್ತಿ ನೋವನ್ನು ನಿವಾರಿಸಿದ. ತರಚಿ ಗಾಯವಾಗಿದ್ದ ಕಡೆ ಎಣ್ಣೆಯನ್ನು ಸವರಿದ. ತೊಡಲು ಬೇರೆ ಉಡುಪನ್ನು ನೀಡಿದ. ಹಸಿದ ಅವನಿಗೆ ಅನ್ನ ಆಹಾರ ಮತ್ತು ಹಾಲು ಹಣ್ಣುಗಳನ್ನು ನೀಡಿದ. ಇದೇ ರೀತಿ ಒಂದು ವಾರ ಉಪಚರಿಸಲು ರಾಜನು ಗುಣಮುಖನಾದನು. ಬಳಿಕ ತನ್ನ ಅರಮನೆಗೆ ತೆರಳುವ ಮುನ್ನ ಬೋಧಿಸತ್ವರಿಗೆ ಕೃತಜ್ಞತೆಯನ್ನು ಅರ್ಪಿಸುತ್ತಾ;

"ಮುಂದೊಂದು ದಿನ ನಮ್ಮ ಅರಮನೆಗೆ ಬಂದು ನಮ್ಮ ಆತಿಥ್ಯವನ್ನು ಸ್ವೀಕರಿಸಬೇಕೆಂದು" ವಿನಂತಿಸಿ ಹೊರಟು ಹೋದ. ಮುಂದೆ ಹಲವು ವರ್ಷಗಳೇ ಕಳೆದು ಹೋದವು. ಊರೂರು ಅಲೆಯುತ್ತಿದ್ದ ಬೋಧಿಸತ್ವರು ಒಮ್ಮೆ ವಾರಣಾಸಿ ನಗರವನ್ನು ಪ್ರವೇಶಿಸಿದರು. ಊರ ಹೊರಗಿನ ಉದ್ಯಾನದಲ್ಲಿ ಅಂದು ರಾತ್ರಿಯನ್ನು ಕಳೆದ ಅವರು ಮರುದಿನ ಅರಮನೆಯ ಮುಖ್ಯದ್ವಾರಕ್ಕೆ ಬಂದು ತಾನು ಬಂದಿರುವ ವಿಷಯವನ್ನು ರಾಜನಿಗೆ ಹೇಳಿ ಕಳುಹಿಸಿದರು. ಒಡನೆಯೆ ರಾಜನು ಅಪಾರ ಸಂತೋಷದಿಂದ ದ್ವಾರದ ಬಳಿ ಬಂದು ಬೋಧಿಸತ್ವರಿಗೆ ವಂದಿಸಿದ. ಅವರ ಭಿಕ್ಷಾ ಪಾತ್ರೆಯನ್ನು ತಮ್ಮ ಕೈಗೆ ತೆಗೆದುಕೊಂಡು ಅರಮನೆಯ ಒಳಗೆ ಕರೆ ತಂದರು. ಎತ್ತರವಾದ ತನ್ನ ಸಿಂಹಾಸನದಲ್ಲಿ ಕೂರಿಸಿ ತನಗಾಗಿ ಮಾಡಿದ ಭಕ್ಷಭೋಜನಗಳನ್ನು ಕೈಯಾರೆ ಬಡಿಸಿದರು. ತಮ್ಮ ಮನಸ್ಸಿಗೆ ತೃಪ್ತಿಯಾಗುವ ತನಕ ನಮ್ಮಲ್ಲಿ ತಂಗ ಬೇಕೆಂದು ವಿನಂತಿಸಿಕೊಂಡರು. ಅವರಿಗಾಗಿ ಆಶ್ರಮವನ್ನು ನಿರ್ಮಿಸಿ ಕೊಟ್ಟರು. ದಿನವೂ ಅವರ ಉಪಚಾರಕ್ಕಾಗಿ ಸೇವಕರನ್ನು ನೇಮಿಸಿದ.

ಬೋಧಿಸತ್ವರು ಹೀಗೆ ರಾಜಾಶ್ರಯದಲ್ಲಿ ತಂಗಿದರು. ರಾಜನು ಆ ಸಂನ್ಯಾಸಿಗೆ ತೋರುತ್ತಿದ್ದ ಬಹಳ ಆದರ ಮತ್ತು ಸತ್ಕಾರಗಳನ್ನು ಕಂಡ ಮಂತ್ರಿಯೊಬ್ಬನಿಗೆ ಅಸೂಯೆ ಮೂಡಿತು. ಆತ ಯುವರಾಜನ ಬಳಿ ಬಂದು;

"ಪ್ರಭು, ನಮ್ಮ ಮಹಾರಾಜರು ಒಬ್ಬ ಸಂನ್ಯಾಸಿಗೆ ಅಧಿಕ ಮಹತ್ವವನ್ನು ತೋರುತ್ತಿದ್ದಾರೆ. ಅವರು ಅವನಲ್ಲಿ ಅಂಥಹ ಯಾವ ಶ್ರೇಷ್ಠ ಗುಣವನ್ನು ಕಂಡಿರುವರು?" ಎನ್ನಲು ಆತ ತಂದೆಯ ಬಳಿ ಬಂದು ಈ ವಿಷಯದ ಬಗ್ಗೆ ಪ್ರಸ್ತಾಪಿಸಲು;

"ಮಗು, ಹಲವು ವರ್ಷಗಳ ಹಿಂದೆ ಗಡಿನಾಡಿನಲ್ಲಿ ದಂಗೆ ಎದ್ದ ವಿಷಯ ನಿನಗೆ ನೆನಪಿದಿಯೇ?"

"ನೆನಪಿದೆ ತಂದೆ!"

"ಆ ಸಮಯದಲ್ಲಿ ನಾನು ಯುದ್ಧದಲ್ಲಿ ಪರಾಜಿತ ನಾಗಿ ಒಂದು ವಾರ ಅರಮನೆಗೆ ನಾನು ಬಾರದೆ ಇದ್ದುದ್ದು ನೆನಪಿದೆಯೇ?"

"ನೆನಪಿದೆ ತಂದೆ!"

"ಆಗ ಈ ಬೋಧಿಸತ್ವರಿಂದ ನನಗೆ ಮರುಜೀವ ಪ್ರಾಪ್ತವಾಯಿತು" ಎಂದ ಅವರು ಆ ಸಂದರ್ಭದಲ್ಲಿ ನೆಡೆದ ಘಟನೆಯನ್ನು ವಿವರಿಸಿ ಹೇಳಿದ ಬಳಿಕ;

"ಮಗು, ಎಲ್ಲ ಜೀವಿಗಳೂ ಕಡೆಗೊಮ್ಮೆ ಮರಣಕ್ಕೆ ತುತ್ತಾಗುವುದು ನಿಶ್ಚಿತ. ಇಲ್ಲಿ ಅಶಾಶ್ವತೆ ಮತ್ತು ಅಗಲುವಿಕೆಯೆ ಸತ್ಯ. ಆದರೆ ನಾವು ಇಲ್ಲಿಂದ ಹೋಗುವ ಮುನ್ನ ನಮ್ಮ ಋಣವನ್ನು ತೀರಿಸಿಯೇ ಹೋಗಬೇಕು. ಉಪಕರಿಸಿದವರಿಗೆ ಉಪಕರಿಸಬೇಕು. ಕೃತಜ್ಞತೆಯನ್ನು ಸಲ್ಲಿಸುವವರಿಗೆ ಸಲ್ಲಿಸಲೇಬೇಕು. ಆ ಧರ್ಮದ ಫಲವೇ ನಾನು ಅವರಿಗೆ ಅಪಾರ ಗೌರವ ಮತ್ತು ಆತಿಥ್ಯವನ್ನು ಸಲ್ಲಿಸುತ್ತಿರುವುದು. ಅವರ ಕೃಪೆಯಿಂದ ನಾನು ಇಂದು ಇಲ್ಲಿ ಇದ್ದೇನೆ. ಆದ್ದುದರಿಂದ ನೀನೂ ಕೂಡ ಅವರಿಗೆ ನನ್ನ ಪರವಾಗಿ ಕೃತಜ್ಞತೆಯನ್ನು ಸಲ್ಲಿಸುವುದು ಉಚಿತ" ಎಂದ ಆಗ ಯುವರಾಜನಿಗೆ ತನ್ನ ತಪ್ಪಿನ ಅರಿವಾಗಲು ಬೋಧಿಸತ್ವರ ಬಳಿ ಬಂದು ಅವರಿಗೆ ಶಿರಬಾಗಿ ವಂದಿಸುತ್ತಾ;

"ಗುರುದೇವಾ, ನನ್ನ ತಂದೆಯ ಪರವಾಗಿ ನಿಮ್ಮ ಸೇವೆಯನ್ನು ಮಾಡಲು ನನಗೂ ಅವಕಾಶವನ್ನು ನೀಡಿ ..!!" ಎಂದು ಕೋರಿದ. □

ನಾನು ಬದುಕ ಬಯಸಿದ್ದರೆ ನಿಮ್ಮ ಕಾಯುವವರ್ಯಾರು?!

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಸಾವಸ್ಥಿಯ ಜೇತವನದಲ್ಲಿ ತಮ್ಮ ಅಪಾರ ಶಿಷ್ಯರೊಂದಿಗೆ ತಂಗಿದ್ದರು. ಅದಕ್ಕೂ ಪೂರ್ವ ಕಾಲದಲ್ಲಿ ವಾರಣಾಸಿ ರಾಜ್ಯವನ್ನು ಬ್ರಹ್ಮದತ್ತ ರಾಜನು ಆಳುತ್ತಿದ್ದನು. ಅಂತಹ ಸಮಯದಲ್ಲಿ ಬೋಧಿಸತ್ವರು ಅರಣ್ಯಪಾಲಕರ ಕುಟುಂಬದಲ್ಲಿ ಜನಿಸಿದರು. ಬೆಳೆದು ದೊಡ್ಡವರಾದ ಮೇಲೆ ಯುದ್ಧ ಕಲೆಯಲ್ಲಿ ಪಾಂಡಿತ್ಯವನ್ನು ಗಳಿಸಿ ಪರಾಕ್ರಮಿ ಎಂದು ಖ್ಯಾತರಾದರು. ತನ್ನೊಂದಿಗೆ ಐನೂರು ಜನ ಯೋಧರ ಆಪ್ತ ಪಡೆಯೊಂದನ್ನು ರಚಿಸಿಕೊಂಡರು. ಅವರು ನೆಲೆಸಿದ್ದ ಗ್ರಾಮವು ದಟ್ಟ ಕಾಡಿನ ಅಂಚಿನಲ್ಲಿತ್ತು.

ಆ ಕಾಡಿನಲ್ಲಿ ಒಂದು ದೊಡ್ಡ ದರೋಡೆಕೋರರ ಗುಂಪಿತ್ತು. ಅದನ್ನು ಹಾದು ಆಚೆಯ ನಗರಕ್ಕೆ ಹೋಗುವವರನ್ನು ತಡೆದು ನಿರಂತರವಾಗಿ ಲೂಟಿ ಮಾಡುತ್ತಿದ್ದರು. ಹಾಗಾಗಿ ಆ ಮಾರ್ಗವಾಗಿ ಸಂಚರಿಸಲು ಜನರು ಹೆದರುತ್ತಿದ್ದರು. ದೊಡ್ಡ ವ್ಯಾಪಾರಸ್ಥರು ಕಾಡನ್ನು ದಾಟಲು ತಮ್ಮದೇ ಆದ ಯೋಧರ ತಂಡವನ್ನು ಬಾಡಿಗೆಗೆ ಕರೆದುಕೊಂಡು ಹೋಗುವ ಪದ್ಧತಿಯು ಅಂದಿನ ದಿನಗಳಲ್ಲಿ ರೂಢಿಯಲ್ಲಿತ್ತು. ಬೋಧಿಸತ್ವರ ತಂದೆ ಕೂಡ ಬಾಡಿಗೆ ಬಂಟರ ಕಾಯಕವನ್ನೆ ಮಾಡುತ್ತಿದ್ದರು. ತಂದೆಯ ಮರಣಾನಂತರ ಬೋಧಿಸತ್ವರು ಬಾಡಿಗೆ ಬಂಟನಾಗಿ ವೃತ್ತಿಯನ್ನು ಮುಂದುವರಿಸಿದರು.

ಅಂತಹ ಸಮಯದಲ್ಲಿ ವಾರಣಾಸಿಯ ಶ್ರೇಷ್ಠಿಯೊಬ್ಬ ಐನೂರು ಬಂಡಿಯಲ್ಲಿ ಸರಕುಗಳನ್ನು ತುಂಬಿಕೊಂಡು ಕಾಡಿನ ಅಂಚಿಗೆ ಬಂದ. ಅಲ್ಲಿ ಬಾಡಿಗೆ ಬಂಟನಾದ ಬೋಧಿಸತ್ವರನ್ನು ಸಂಧಿಸಿ ತನ್ನನ್ನು ಮತ್ತು ತನ್ನ ತಂಡವನ್ನು ಕಾಡಿನ ಆಚೆಯ ನಗರಕ್ಕೆ ಸುರಕ್ಷಿತವಾಗಿ ತಲುಪಿಸಲು ಕೋರಿದರು. ಅವರು ಒಂದು ಸಾವಿರ ನಾಣ್ಯವನ್ನು ಬಾಡಿಗೆಯಾಗಿ ಕೋರಿದ. ಶ್ರೇಷ್ಠಿಯು ಅವರಿಗೆ ಹಣ ತೆತ್ತು ಪಯಣವನ್ನು ಮುಂದುವರಿಸಿದ. ಸರಕು ತುಂಬಿದ ಬಂಡಿಗಳು ಕಾಡಿನ ನಡುವೆ ಬರಲು ಮೊದಲೇ ಹೊಂಚು ಹಾಕಿ ಕಾಯುತ್ತಿದ್ದ ದರೋಡೆಕೋರರ ದೊಡ್ಡ ತಂಡವು ದಿಢೀರನೆ ಮುತ್ತಿಗೆ ಹಾಕಿತು. ಅದನ್ನು ಕಂಡ ಐನೂರು ಬಂಡಿಯ ಚಾಲಕರು, ಸೇವಕರು ಮುಂತಾದವರು ಕಳ್ಳರಿಗೆ ಹೆದರಿ ಪ್ರಾಣಭಯದಿಂದ ತರತರನೆ ನಡುಗುತ್ತಾ ಹೊಟ್ಟೆಯನ್ನು ಕೆಳಕ್ಕೆ ಹಾಕಿ ನೆಲದ ಮೇಲೆ ಮಲಗಿದರು.

ಆ ದರೋಡೆಕೋರರ ನಾಯಕ ಶ್ರೇಷ್ಠಿಯನ್ನು ಬಂಧಿಸಲು ಮುಂದಾದಾಗ ಬೋಧಿಸತ್ವರು ಅವನಿಗೆ ಎದುರಾಗಿ ನಿಂತರು. ಅವರ ಮೇಲೆ ಬಾಣ ಪ್ರಯೋಗಿಸಲು ಮತ್ತು ದಾಳಿ ಮಾಡಲು ಮೊದಲಾದ. ಅದಕ್ಕೆ ಬೋಧಿಸತ್ವರು ಸ್ವಲ್ಪ ಕೂಡ ಹೆದರಲಿಲ್ಲ. ಇದುವರೆಗೆ ಯಾರು ತನ್ನನ್ನು ನೋಡಿ ಹೆದರಿ ಓಡಿ ಹೋಗುತ್ತಿದ್ದರೋ ಅವರಿಗಿಂತ ಈ ಯುವ ಯೋಧ ಮೊಂಡನೆಂದು ಬಗೆದ. ಕೈಯಲ್ಲಿದ್ದ ಕತ್ತಿಯನ್ನು ಝಳಪಿಸುತ್ತಾ ವಿಕಾರವಾಗಿ ಘರ್ಜಿಸಿದ. ಅದಕ್ಕೂ ಹೆದರದ ಯುವಕ ಅವನಿಗಿಂತ ಹತ್ತು ಪಟ್ಟು ಹೆಚ್ಚಿಗೆ ಘರ್ಜಿಸಿ ಅವನ ಮೇಲೆ ಮಿಂಚಿನ ದಾಳಿ ಮಾಡಿದ. ಬೋಧಿಸತ್ವರ ತಂಡದ ಪ್ರತಿ ದಾಳಿಯ ಭೀಕರತೆಯನ್ನು ಎದುರಿಸಲಾಗದ ದರೋಡೆಕೋರರು ತಲೆ ತಪ್ಪಿಸಿಕೊಂಡು ಕಾಡಿನಲ್ಲಿ ಕಣ್ಮರೆಯಾದರು. ಶ್ರೇಷ್ಠಿ ಮತ್ತು ಅವನ ತಂಡಕ್ಕೆ ಹೋದ ಜೀವ ಮರಳಿ ಬಂದಂತಾಯಿತು ಬಳಿಕ ಅವರ ಪ್ರಯಾಣವು ಮುಂದುವರೆಯಿತು. ಕಾಡನ್ನು ದಾಟಿದ ಅವರು ಸುರಕ್ಷಿತರಾಗಿ ನಾಡನ್ನು ತಲುಪಿದರು. ಬೀಳ್ಕೊಡುವ ಮುನ್ನ ಶ್ರೇಷ್ಠಿಯು ಬೋಧಿಸತ್ವರನ್ನು ಉದ್ದೇಶಿಸಿ;

"ಅಯ್ಯಾ, ನಾನು ಅದೆಷ್ಟೋ ಜನ ಬಾಡಿಗೆ ಬಂಟರನ್ನು ಈ ಹಿಂದೆ ಕಂಡಿದ್ದೇನೆ. ಅವರು ದರೋಡೆಕೋರರು ಎದುರಾದ ಬಳಿಕ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಮುಂದಾಗುತ್ತಾರೆ ಮೊದಲು. ಆದರೆ ನೀನೋ ನಮ್ಮನ್ನು ರಕ್ಷಿಸಲು ಮೊದಲಾದೆ. ಆ ದರೋಡೆಕೋರನ ದೃಷ್ಟಿಗಾಗಲೀ, ಅವನ ದಾಳಿಯ ವರಸೆಗಾಗಲೀ ತೃಣ ಕೂಡ ಪ್ರತಿಕ್ರಿಯೆ ನೀಡದೆ ಅವರನ್ನು ಕ್ಷಣಾರ್ಧದಲ್ಲಿ ಸದೆಬಡಿದು ನಮ್ಮಗಳ ಪ್ರಾಣವನ್ನು ಮತ್ತು ಅಪಾರ ಮೌಲ್ಯದ ಸರಕನ್ನು ಕಾಪಾಡಿದೆ. ನಿನ್ನ ಈ ಧೀರ ವರ್ತನೆಯ ರಹಸ್ಯವೇನು?" ಎನ್ನಲು ಬೋಧಿಸತ್ವರು;

"ಎಲೈ ಶ್ರೇಷ್ಠಿಯೇ, ಧರ್ಮ! ವೃತ್ತಿ ಧರ್ಮ. ಯಾವಾಗ ನಾನು ನಿನ್ನ ಬಳಿ ಕೂಲಿಗಾಗಿ ಹಣವನ್ನು ಪಡೆದೆನೋ, ಆಗಲೇ ನನ್ನನ್ನು ನಾನು ನಿನಗೆ ಮಾರಿಕೊಂಡೆ. ಆ ಗಳಿಗೆಯೇ ನನ್ನ ಜೀವದ ಹಂಗನ್ನು ತೊರೆದೆ. ನನ್ನ ಪ್ರಾಣಕ್ಕೆ ನಾನು ಹೆದರುವುದಾಗಿದ್ದರೆ, ನನ್ನನ್ನು ನಾನು ರಕ್ಷಿಸಿಕೊಳ್ಳಲು ಮೊದಲಾಗಿದ್ದರೆ ನಿಮ್ಮನ್ನು ಯಾರು ರಕ್ಷಿಸುತ್ತಿದ್ದರು?" ಎನ್ನಲು ಶ್ರೇಷ್ಠಿಯು;

"ಹೌದು, ನೀನು ನಿಜಕ್ಕೂ ಧೀರನೇ ಸರಿ. ಪರಾಕ್ರಮಿಯೇ ಸರಿ. ಏಕೆಂದರೆ, ಬದುಕಲು ಆಶಿಸುವ ಧೀರ ಎಂದಿಗೂ ಪರಾಕ್ರಮದ ಕೆಲಸವನ್ನು ಮಾಡುವುದಿಲ್ಲ!" ಎಂದು ಕೃತಜ್ಞತೆಯನ್ನು ಸಲ್ಲಿಸಿ ಮುನ್ನೆಡೆದ. □

'SAMVADA' Kannada Monthly, MARCH 2011 RNI-KAR KAN/2002/9246 CPMG/KA/BGW-706/2009-11
Office of Posting: Mail Business Center, Bangalore GPO, Date of Posting: 1st & 7th of Every Month